2. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಈ ಸರಕಾರದ ವಿರುದ್ಧ ನಮ್ಮ ಮತ್ತು ಕಾಂಗ್ರೆಸ್ ನಾಯಕರು ಮಂಡಿಸಿರತಕ್ಕಂಥ ನಿಲುವಳಿ ಸೂಚನೆಯ ಪರವಾಗಿ ಪಕ್ಷ ನಾನು ಮಾತನಾಡ ಬಯಸುತ್ತೇನೆ. ವಿಧಾನ ಸಭೆಯಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಬಹಳ ಉತ್ಸಾಹದಿಂದ ನಾವು ಇಲ್ಲಿಗೆ ಬಂದಿದ್ದೇವೆ. ಸುಮಾರು ಐದೂವರೆ ತಿಂಗಳುಗಳ ಕಾಲ ಶಾಸನ ಸಭೆಯನ್ನು ಕರೆಯದೇನೇ ಈಗ ಕರೆದಾಗ ಕರ್ನಾಟಕ ರಾಜ್ಯ ಜನತೆಯ ಅನೇಕ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಿ ಸರಕಾರದ ಗಮನಕ್ಕೆ ತರಬೇಕೆಂಬ ಅಪೇಕ್ಷೆಯು ನಮ್ಮಲ್ಲಿತ್ತು. ಆದರೆ ಕಳೆದ ಒಂದು ತಿಂಗಳಲ್ಲಿ ಆಡಳಿತ ಪಕ್ಷದವರ ಕಚ್ಚಾಟವು ಅತ್ಯಂತ ಹೀನ ಪರಿಸ್ಥಿತಿಗೆ ಬಂದಿರುವುದರಿಂದ ಈ ರಾಜ್ಯದ ಜನರು ರಾಜಕಾರಣಿಗಳ ಬಗೆಗೆ ಒಂದು ತೆರನಾದ ತುಚ್ಛೀಕರಣದ ಭಾವನೆಯನ್ನು ಮೂಡಿಸಿಟ್ಟುಕೊಂಡಿರತಕ್ಕಂಥ ಈ ಸಂದರ್ಭದಲ್ಲಿ ಶಾಸಕರುಗಳಾಗಿ ನಮ್ಮ ಗೌರವವನ್ನು ಎತ್ತಿಹಿಡಿಯತಕ್ಕಂಥಾದ್ದು ಮತ್ತು ನಮ್ಮ ಮೌಲ್ಯಗಳನ್ನು ಎತ್ತಿಹಿಡಿಯತಕ್ಕಂಥ ಅವಶ್ಯಕತೆಯ ದೃಷ್ಟಿಯಿಂದ ಈ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡತಕ್ಕಂಥ ಅನಿವಾರ್ಯ ಸ್ಥಿತಿಯು ನಿರ್ಮಾಣವಾಗಿದೆ. ಹೀಗಾಗಿ ಉಳಿದಿರತಕ್ಕಂಥ ಅನೇಕ ವಿಚಾರಗಳನ್ನು ಇಲ್ಲಿ ನಮಗೆ ಪ್ರಸ್ತಾಪ ಮಾಡಲು ಸಾಧ್ಯವಾಗುತ್ತಾ ಇಲ್ಲ. ನಾಡಿದ್ದು 13ನೇ ತಾರೀಖು ಶಾಸಕಾಂಗ ಪಕ್ಷದ ಸಭೆ ಇದೆ ಎಂಬುದನ್ನು ಪತ್ರಿಕೆಯಲ್ಲಿ ನೋಡಿ ತಿಳಿದಿದ್ದೇವೆ. ಅಲ್ಲಿ ಸಭೆಯನ್ನು ಕರೆದು ತೇಪೆ ಹಾಕತಕ್ಕಂಥ ಕೆಲಸವನ್ನು ಮಾಡಿ ಮತ್ತೆ ಉಳಿದಿರತಕ್ಕಂಥ ಅವಧಿಯಲ್ಲಿ ಇದೇ ಕಚ್ಚಾಟವನ್ನು ಮಾಡಿಕೊಂಡು ಮುಂದುವರಿಸಿಕೊಂಡು ಹೋಗಿ ಈ ರಾಜ್ಯದ ಅಭಿವೃದ್ಧಿಯನ್ನು ಹಾಳುಗೆಡಪಿ ತಮ್ಮ ಅಧಿಕಾರದ ಲಾಲಸೆಯನ್ನು ತೀರಿಸಿಕೊಳ್ಳುವ ಸಲುವಾಗಿ ನಡೆಯುತ್ತಿರತಕ್ಕಂಥ ಪ್ರಯತ್ನವನ್ನು ಆಡಳಿತಪಕ್ಷದ ಕಡೆಯಿಂದ ನಾವು ನೋಡುತ್ತಿದ್ದೇವೆ. ನಾವು ಮಂಡಿಸಿರತಕ್ಕಂಥ ಅವಿಶ್ವಾಸ ನಿರ್ಣಯವು ಬಿದ್ದು ಹೋದರೂ ಕೂಡ ಅದನ್ನು ಭೀಳಿಸಬೇಕು, ಉಳಿದಿರತಕ್ಕಂಥ ಅವಧಿಯಲ್ಲಿ ನಾವು ಇದೇ ರೀತಿಯಲ್ಲಿ ಕಚ್ಚಾಟ ಮಾಡಿಕೊಂಡು ಹೋಗೋಣ ಎಂಬ ಸನ್ನಾಹವನ್ನು ಮಾಡುತ್ತಿರುವುದು ನಮಗೆ ಅನ್ನಿಸುತ್ತಾ ಇದೆ. ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾದಾಗ ನಮಗೆ ಬಹಳ ಅನಿಸಿಕೆಗಳು ಮತ್ತು ಅಪೇಕ್ಷೆಗಳು ಇದ್ದುವು. ಅವರು ಬಹಳ ಧೈರ್ಯಸ್ಥರು, ಅವರು ಈ ರಾಜ್ಯದಲ್ಲಿ ಏನಾದರೂ ಒಂದಿಷ್ಟು ಪರಿವರ್ತನೆಗಳನ್ನು ಮಾಡುತ್ತಾರೆ ಎಂಬ ವಿಶ್ವಾಸವಿತ್ತು. ಅವರು ತಮ್ಮ ಧೈರ್ಯವನ್ನು ತೋರ್ಪಡಿಸಿದ್ದಾರೆ. ಅವರು ತಮ್ಮ ಮಂತ್ರಿಮಂಡಳಕ್ಕೆ 44ಜನರನ್ನು ಸೇರಿಸಿಕೊಂಡಾಗ ಬಹಳ ದೊಡ್ಡ ಟೀಕೆಗಳು ಬಂದವು. ಇಷ್ಟು ದೊಡ್ಡ ಮಂತ್ರಿಮಂಡಳದ ಅವಶ್ಯಕತೆಯು ಇಲ್ಲ, ರಾಜ್ಯದ ತೆರಿಗೆದಾರರ ಪಾಲಿಗೆ ಇದೊಂದು ಕೆಟ್ಟ ಹೊರೆಯಾಗುತ್ತದೆ, ಇದರಿಂದಾಗಿ ಖರ್ಚು ಬಹಳ ಬರುತ್ತದೆ ಎಂಬಿತ್ಯಾದಿಯಾಗಿ ಬಹಳಷ್ಟು ಕೂಗು ಬಂತು.

ಆದರೆ ಮಾನ್ಯ ಪಟೀಲ್‌ರವರು ಯಾವುದಕ್ಕೂ ಬಗ್ಗಲಿಲ್ಲ, ಹೆದರಲಿಲ್ಲ. ಆ 44 ಜನರನ್ನು ಕೂಡ ಮುಂದುವರೆಸಿಕೊಂಡು ಹೋದರು. ಹೆಚ್ಚು ಮಂತ್ರಿಗಳು ಇದ್ದಾಗಲೂ ಕೂಡ ರಾಜ್ಯ ಅಭಿವೃದ್ಧಿಪರ ಕೆಲಸಗಳ ವೇಗವು ಹೆಚ್ಚಾಗುತ್ತದೆ, ಆದಕಾರಣ ಹೆಚ್ಚು ಜನ ಮಂತ್ರಿಗಳು ಇದ್ದರೂ ಕೂಡ ಆ ಇಲಾಖೆಗಳನ್ನು ಬಂದೋಬಸ್ತು ಮಾಡಿ ಕಾರ್ಯವನ್ನು ನಿರ್ವಹಿಸುತ್ತಾರೆ, ಒಬ್ಬೊಬ್ಬ ಮಂತ್ರಿಯವರ ಹತ್ತಿರ ಐದಾರು ಇಲಾಖೆಗಳು ಇದ್ದರೆ ಸೂಕ್ತ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂಬ ವಿಚಾರದ ಬಗ್ಗೆ ಮತ್ತು ಈ ರಾಜ್ಯದ ಪ್ರಗತಿಯ ದೃಷ್ಟಿಯಿಂದ ಮಾಡಿದ್ದೆವು. ರಾಜ್ಯಕ್ಕೆ 44 ಜನ ಮಂತ್ರಿಗಳಿದ್ದಾರೆ. 27 ಜಿಲ್ಲೆಗಳು ಇದ್ದಾವೆ. ಪ್ರತಿಯೊಂದು ಜಿಲ್ಲೆಗೂ ಜಿಲ್ಲಾ ಉಸ್ತುವಾರಿ ಸಚಿವರು ಎಂದು ನೇಮಕ ಮಾಡಿದ್ದಾರೆ. ಇಂಥ ಎಲ್ಲಾ ಸೆಟ್ ಆಫ್ ಬಹಳ ಚೆನ್ನಾಗಿದೆ. ಆದರೆ ಇವರುಗಳು ಯಾವ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಕೇಳುವ ವ್ಯವಧಾನವು ಮುಖ್ಯಮಂತ್ರಿಗಳಿಗೂ ಇಲ್ಲವಾಗಿದೆ. ಮಂತ್ರಿಗಳಾದವರೂ ಕೂಡ ನನಗೆ ರಾಜ್ಯದ ಜನರ ಸೇವೆಯನ್ನು ಮಂತ್ರಿಯಾಗಿ ಮಾಡುವ ಸುಯೋಗ ದೊರಕಿದೆ ಅದನ್ನು ನಾನು ನಿಷ್ಠೆಯಿಂದ ಮಾಡುತ್ತೇನೆ ಎಂಬ ಕಳಕಳಿಯನ್ನು ಹೊಂದಿಲ್ಲ. ಇವೊತ್ತು ಬಹಳಷ್ಟು ಜನ ಮಂತ್ರಿಗಳು ಅವರವರ ಕ್ಷೇತ್ರದ ಮಂತ್ರಿಗಳಾಗಿದ್ದಾರೆ. ಯಾವ ಜಿಲ್ಲೆಗಳಿಗೂ ಭೇಟಿಕೊಡುವುದಿಲ್ಲ. ಎಲ್ಲರೂ ಹಾಗೆ ಇದ್ದಾರೆಂಬ ಅಭಿಪ್ರಾಯವು ನನ್ನದ್ದಲ್ಲ. ಮಾನ್ಯ ಹಿರಿಯರಾದ ಮಾನ್ಯ ಗೋವಿಂದೇಗೌಡರು ಎಲ್ಲಾ ಕಡೆಗಳಿಗೂ ಹೋಗಿ ಇಲಾಖೆಯ ಕೆಲಸವನ್ನು ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಇಂಥ ವಿರಳಾತಿವಿರಳವಷ್ಟು ಜನ ಸಚಿವರು ತಮ್ಮಲ್ಲಿ ಇರಬಹುದು. ಉಳಿದಿರತಕ್ಕಂಥ ಸಾಕಷ್ಟು ಜನ ಮಂತ್ರಿಗಳು ಬೇರೆ ಬೇರೆ ಜಿಲ್ಲೆಗಳಿಗೆ, ಕ್ಷೇತ್ರಗಳಿಗೆ ಹೋಗುವುದಿಲ್ಲ. ಆಯಾಯ ಇಲಾಖೆಗಳನ್ನು ಕರೆದು ಏನಾಗಿದೆ ಎಂದು ಕೇಳುವುದಿಲ್ಲ. ಅಲ್ಲಿಗೆ ಹೋಗಬಾರದೆಂದೇನೂ ಇಲ್ಲವಾದರೂ ಕೂಡ ಒಂದು ಭಯ ಅವರಲ್ಲಿದೆ. ಮಾನ್ಯ ಅಧ್ಯಕ್ಷರೇ, ನನಗೆ ಪುರಾಣದ ಒಂದು ಘಟನೆ ನೆನಪಿಗೆ ಬರುತ್ತಿದೆ. ಒಮ್ಮೆ ಶಿವ-ಪಾರ್ವತಿಯರಲ್ಲಿ ತಮ್ಮ ಜ್ಞಾನದ ಫಲವನ್ನು ಯಾವ ಪುತ್ರನಿಗೆ ಕೊಡಬೇಕೆಂಬ ಬಗ್ಗೆ ಜಿಜ್ಞಾಸೆಯು ಬಂತಂತೆ. ಅವರು ಕುಳಿತುಕೊಂಡು ಷಣ್ಮುಖನಿಗೆ ಕೊಡಬೇಕೆ ಗಣಪತಿಗೆ ಕೊಡಬೇಕೇ ಎಂಬ ಬಗ್ಗೆ ಯೋಜನೆ ಮಾಡುತ್ತಿದ್ದರು. ಆಗ ಮಕ್ಕಳಲ್ಲಿ ನನಗೆ ಕೊಡಿ, ನನಗೆ ಕೊಡಿ ಎಂದು ತರ್ಕ ಬರುತ್ತದೆ. ಮಕ್ಕಳಲ್ಲಿ ಭೇದ-ಭಾವವನ್ನು ಮಾಡಬಾರದು ಎಂದು ತೀರ್ಮಾನಕ್ಕೆ ಬಂದು ಒಂದು ಸ್ಪರ್ಧೆಯನ್ನು ಮಕ್ಕಳಿಗೆ ಇಡುತ್ತಾರೆ. ಇಡೀ ಬ್ರಹ್ಮಾಂಡವನ್ನು ಸುತ್ತಿ ಪುನಃ ನಮ್ಮ ಹತ್ತಿರ ಬೇಗ ಬಂದವರಿಗೆ ನಾವು ಜ್ಞಾನದ ಫಲವನ್ನು ಕೊಡುತ್ತೇವೆ ಎಂದು ಹೇಳಿದರು. ತಾಯಿ ಷಣ್ಮುಖನಿಗೆ ಬೇಗ ಓಡು ಎಂದು ಹೇಳುತ್ತಾಳೆ. ಷಣ್ಮುಖನಿಗೆ ಬಹಳ ಖುಷಿ. ನವಿಲು ತನ್ನ ಬಳಿ ಇರುವುದರಿಂದ ಬೇಗ ಬರಬಹುದೆಂಬ ಲೆಕ್ಕಾಚಾರ ಅವನದ್ದು. ಹೀಗೆ ಸ್ಪರ್ಧೆಯಲ್ಲಿ ಇಬ್ಬರು ಕೂಡ ಹೊರಡುತ್ತಾರೆ. ಷಣ್ಮುಖನು ಇಡೀ ಬ್ರಹ್ಮಾಂಡವನ್ನು ಸುತ್ತಿ ಬರುವುದರೊಳಗಾಗಿ ಗಣಪತಿಯು ತಂದೆ-ತಾಯಿಗಳಿಗೆ ಒಂದು

ಪ್ರದಕ್ಷಿಣೆಯನ್ನು ಹಾಕುತ್ತಾನೆ. ಸುತ್ತು ಹಾಕಿದ ನಂತರ ನನಗೆ ತಂದೆ-ತಾಯಿಯೇ ಬ್ರಹ್ಮಾಂಡ ನನಗೆ ಜ್ಞಾನದ ಫಲವನ್ನು ಕೊಡಬೇಕೆಂದು ಕೇಳುತ್ತಾನೆ. ಗಣಪತಿಯ ಧರ್ಮನಿಷ್ಠೆಯನ್ನು ಮೆಚ್ಚಿ ಆತನಿಗೆ ಫಲವನ್ನು ಶಿವ-ಪಾರ್ವತಿಯರು ನೀಡಿರುವ ಕಥೆಯನ್ನು ನಾವು ಕೇಳಿದ್ದೇವೆ. ಹಾಗೆಯೇ ನಮ್ಮ ಮಂತ್ರಿಗಳು ಕೂಡ ದಿನವೂ ಬೆಳಿಗ್ಗೆ ಎದ್ದು ಪಟೇಲರ ಮನೆಗೆ ಒಂದು ಸುತ್ತು ಹಾಕಿದರೆ, ದೇವೇಗೌಡರ ಮನೆಗೆ ಒಂದು ಸುತ್ತು ಹಾಕಿದರೆ ಇವರುಗಳಿಬ್ಬರೇ ತಮ್ಮ ಪಾಲಿಗೆ ಬ್ರಹ್ಮಾಂಡ ಎಂದು ತಿಳಿದುಕೊಳ್ಳುತ್ತಾರೆ. ರಾಜ್ಯದ ಸುತ್ತಲೂ ಸುತ್ತಿ ಎಂದು ಹೇಳಿದರೆ ನಮಗೆ ಇವರಿಬ್ಬರನ್ನು ಸುತ್ತು ಹಾಕಿದರೆ ಅದರಲ್ಲಿಯೇ ತೃಪ್ತಿ ಎಂದು ಅಂದುಕೊಂಡಿದ್ದಾರೆ. ಹಾಗಾಗಿ ಇವರಿಗೆ ಕೃಪಾಕಟಾಕ್ಷ ಗ್ಯಾರಂಟಿ, ಯಾಕೆಂದರೆ ನನ್ನ ಸುತ್ತ ಸುತ್ತಿದ್ದಾರೆ, ಇವರನ್ನು ಖಾಯಂ ಮಂತ್ರಿ ಮಾಡಿ ಹಾಗೇ ಇಡೋಣ ಎಂದು. ಅಧ್ಯಕ್ಷರೇ, ಬಹಳ ಹಿಂದೆ ಅಂಬಾಸಿಡರ್ ಕಾರ್‌ಗಳಿತ್ತು. ಮಂತ್ರಿಗಳಿಗೆಲ್ಲಾ. ಕರ್ನಾಟಕದ ಮೂಲೆಮೂಲೆ ಸುತ್ತುತ್ತಿದ್ದರು. ಇವತ್ತು ದುಬಾರಿ ಬೆಲೆಯ ಕಂಟೆಸಾ ಕಾರ್‌ಗಳನ್ನು ಕೊಡಿಸಿದ್ದೇವೆ: ಜನ ಕೇಳಿದರು, ಏನು ನೀವು ಶಾಸಕರು ನೀವು ಹೇಳುವುದಕ್ಕೆ ಆಗುವುದಿಲ್ಲವೇ: ತೆರಿಗೆ ಕೊಡುವ ಸಾಮಾನ್ಯ ಜನರಿಗೆ ಎತ್ತಿನಗಾಡಿ ಇಲ್ಲ ತಿರುಗಾಡುವುದಕ್ಕೆ, ಮಂತ್ರಿಗಳಿಗೆ ಹೇಳುವುದಕ್ಕೆ ಆಗುವುದಿಲ್ಲವೇ ಎಂದು. ನಾವು ಅವರಿಗೆ ಉತ್ತರ ಕೊಟ್ಟಿವು: ಅಪ್ಪಾ ಇಡೀ ರಾಜ್ಯದ ಮೂಲೆಮೂಲೆ ಸಾವಿರಾರು ಕಿಮೀ ಸುತ್ತಬೇಕಾಗುತ್ತದೆ. ಅವರ ಆರೋಗ್ಯದೃಷ್ಟಿಯನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ಮಂತ್ರಿ ಅಂದರೆ ಅವರೇನು ದೇವರಲ್ಲ, ಹಾರಿಹೋಗುವುದಕ್ಕೆ ಆಗುವುದಿಲ್ಲ, ತೆಗೆದುಕೊಳ್ಳಲಿ ಬಿಡಿ, ನಿಮ್ಮ ಕೆಲಸ ಆಗುತ್ತದೆ ಎಂದು. ಸಮಾಧಾನ ಮಾಡಿದೆವು. ಕಂಟೆಸ್ಸಾ ಕೊಟ್ಟರೂ ಇಷ್ಟೇನೇ. ರಾಜ್ಯದಲ್ಲಿ ಹೆಲಿಕ್ಯಾಪ್ಟರ್ ಇದೆ. ಎಲ್ಲಾ ಕಡೆ ತಿರುಗುವುದಕ್ಕೆ, ಆದರೂ ಇಷ್ಟೇನೇ ಜನ ದುಃಖಿತರಾದಾಗ ಸತ್ತಾಗ ಹೆಲಿಕ್ಯಾಪ್ಟರ್ ಉಪಯೋಗಕ್ಕೆ ಬರಲಿಲ್ಲ. ಕೋಟಿಗಟ್ಟಲೆ ಹಣ ಅದರ ಮೇಲೆ ಸುರಿಯುತ್ತಿದ್ದೇವೆ. ಮೇಂಟೇನ್ ಮಾಡುತ್ತಿದ್ದೇವೆ, ಏನಾಗಿದೆ? ಒಬ್ಬೊಬ್ಬ ಮಂತ್ರಿಗಳಿಗಾಗಿರುವ ಖರ್ಚಿಷ್ಟು ತೆಗೆದುನೋಡಿ. ಆತ್ಮಾವಲೋಕನ ಮಾಡಿಕೊಳ್ಳೋಣ. ಅವರ ಟಿಎಡಿಎ, ಕಾರು, ಸಿಬ್ಬಂದಿ ಖರ್ಚುವೆಚ್ಚಗಳಿಗೆ ಸರಿಯಾಗಿ ಅವರಿಂದ ಕೆಲಸ ಆಗುತ್ತಿದೆಯ? ಜನರ ಸೇವೆ ಮಾಡುತ್ತಿದ್ದಾರಾ? ಇಲಾಖೆ ಪ್ರಗತಿಯನ್ನು ಪರಿಶೀಲನೆ ಮಾಡುತ್ತಿದ್ದಾರಾ? ಇದನ್ನು ಕೇಳಿದರೆ ಏನೇನು ಇಲ್ಲ. ಅನಾವಶ್ಯಕ ಕಾಲಹರಣ ನಡೆದಿದೆ. ಮಂತ್ರಿಗಳು ಎಂದು ಬೋರ್ಡ್ ಹಾಕಿಕೊಳ್ಳುವುದು, ಜೀಹುಜೂರ್ ಎನ್ನುವ ಸಚಿವರ ಸಂಖ್ಯೆ ಬಹಳ ದೊಡ್ಡದಿದೆ. ಇದಕ್ಕಾಗಿ ಈ ಸರ್ಕಾರ ಹೋಗಬೇಕು ಎನ್ನುವುದು. ಮಂತ್ರಿಮಹೋದಯರ ಅನವಶ್ಯಕ ಖರ್ಚು ಜಾಸ್ತಿಯಾಗಿ ರಾಜ್ಯದ ಬೊಕ್ಕಸ ಲೂಟಿಯಾಗುತ್ತಿದೆ ಎಂಬ ಕಾರಣಕ್ಕಾಗಿ ಇವರು ಹೋಗಬೇಕು. ಇನ್ನು ಅತಿವೃಷ್ಟಿಯ ಬಗ್ಗೆ ಅನೇಕ ಹಿರಿಯರು ಮಾತನಾಡಿದ್ದಾರೆ. ನಾನು ಎಲ್ಲವನ್ನೂ ಚರ್ವಿತಚರ್ವಣ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಆಶ್ಚರ್ಯವಾಗಿದ್ದು ಅಂದರೆ, ಕಾಂಗ್ರೆಸ್

ನಾಯಕರು ಮಾತನಾಡುವಾಗ ಹೇಳಿದ್ದು: ಪ್ರಧಾನಿಗಳು ಹೈದರಬಾದಿಗೆ ಬಂದಾಗ ನಮ್ಮ ರಾಜ್ಯದ ಮಂತ್ರಿಗಳು ಹೋಗಿ ಅವರನ್ನು ನೋಡಿದ್ದೇ ತಪ್ಪು ಎಂದು. ಇವತ್ತು ಸಮಸ್ಯೆಗಳ ಸಮಾಧಿ ಮೇಲೆ ನಮ್ಮ ರಾಜಕಾರಣ ಮೆರೆಸುವ ಪ್ರಯತ್ನ ಮಾಡುತ್ತಿದ್ದೇವೆ. ಪ್ರಧಾನಿ ಯಾವುದಾದರೂ ಪಕ್ಷದವರು ಇರಬಹುದು, ಪ್ರಧಾನಿ ಪ್ರಧಾನಿಯೇ. ಆ ಗದ್ದುಗೆಗೆ ನಾವು ಗೌರವ ಕೊಡಬೇಕಾಗುತ್ತದೆ. ಹಿರಿಯರಾದ ಧರ್ಮಸಿಂಗರ ಬಾಯಲ್ಲಿ ಇಂತಹ ಮಾತು ಬಂತಲ್ಲಾ ಎಂಬ ನೋವು ನಮ್ಮಂತಹ ಕಿರಿಯ ಸದಸ್ಯರಿಗೆ ಆಗುತ್ತಿದೆ.

ಶ್ರೀ ಯು.ಆರ್.ಸಭಾಪತಿ: ಪ್ರಧಾನಿಗಳು ** ಎಂಬುದು ಅವರ ಆಕ್ಷೇಪಣೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ** ದಯಮಾಡಿ ಹೇಳಿ.

ಶ್ರೀ ಯು.ಆರ್.ಸಭಾಪತಿ: ನಮ್ಮ ರಾಜ್ಯದ ಹಿತಾಸಕ್ತಿ ನೀವು ಕಾಪಾಡುವುದಿದ್ದರೆ ಅವರಿಂದ ನಮ್ಮ ರಾಜ್ಯಕ್ಕೆ ಭೇಟಿ ಮಾಡಿಸಬೇಕಾಗಿತ್ತು.

ಅಧ್ಯಕ್ಷರು: ಭಾರತದ ಸಂವಿಧಾನಬದ್ಧವಾಗಿ ಪ್ರಮಾಣವಚನ ಸ್ವೀಕರಿಸಿದ ಪ್ರಧಾನಿಗಳು ಅವರನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಅವರ ಬಗ್ಗೆ ಆಧಾರವಿಲ್ಲದೆ ನಾವು ಹೇಗೆಂದರೆ ಹಾಗೆ ಮಾತನಾಡುವುದು ಈ ಸದನಕ್ಕೆ ಗೌರವ ತರುವುದು ಅಲ್ಲ. ನಿಮ್ಮ ಹತ್ತಿರ ಖಚಿತ ಆರೋಪಗಳಿದ್ದರೆ ಅದನ್ನು ಬೇರೆ ರೂಪದಲ್ಲಿ ನೀವು ತನ್ನಿ. (ಪ್ರಧಾನಿಗಳಾದವರು ಪಕ್ಷದ ನೇತಾರರಾಗಿ ವರ್ತಿಸಬಾರದು ಎಂದು ಜನರಲ್ಲಾಗಿ ಹೇಳಿಬಿಡುವುದು, ಇವತ್ತು ಅದು ಪ್ರಾರಂಭವಾದರೆ ಮುಂದೆ ಮುಂದುವರಿದುಕೊಂಡು ಹೋಗುತ್ತದೆ.) ಕೆಲವು ಸ್ಥಾನಗಳನ್ನು ಗೌರವದಿಂದ ಕಾಣುವ ಜವಾಬ್ದಾರಿ ಪ್ರವೃತ್ತಿಗಳನ್ನು ನಾವೆಲ್ಲರೂ ಬೆಳೆಸಿಕೊಳ್ಳುವುದು ಉತ್ತಮ. ಸಭಾಪತಿಗಳು ಹೇಳಿರುವ ವಾಕ್ಯವೇನಿದೆ ಅದು ನಡವಳಿಕೆಗಳಿಗೆ ಹೋಗಬಾರದು.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಧರ್ಮಸಿಂಗರ ಅಭಿಪ್ರಾಯ ಸ್ಪಷ್ಟ. ಪ್ರಧಾನಿಗಳು ಕರ್ನಾಟಕಕ್ಕೂ ಬರಬೇಕಾಗಿತ್ತು, ಇಲ್ಲೂ ಅನಾಹುತವಾಗಿತ್ತು, ಅವರು ಬರದಿದ್ದಾಗ ಮುಖ್ಯಮಂತ್ರಿಗಳು ಹೋಗಿದ್ದು ತಪ್ಪು ಎನ್ನುವ ಆಕ್ರೋಶದಲ್ಲಿ ಹೇಳಿದರೇ ವಿನಹಃ ಅದಕ್ಕೆ ಅಪಾರ್ಥ ಕಲ್ಪಿಸುವುದು ಬೇಡ. ಪ್ರಧಾನಿಗಳ ಸ್ಥಾನ ಮಾನ ಎಲ್ಲವನ್ನೂ ನಾವು ಗೌರವಿಸಬೇಕಾಗುತ್ತದೆ.

ಅಧ್ಯಕ್ಷರು: ನಾನು ಅತ್ಯಂತ ಜವಾಬ್ದಾರಿಯಿಂದ ಮಾನ್ಯ ಸಭಾಪತಿಗಳು ಹೇಳಿದ ಮಾತನ್ನು ನೆನಪಿನಲ್ಲಿಟ್ಟುಕೊಂಡಿದ್ದೇನೆ. ಪ್ರಧಾನಮಂತ್ರಿಗಳು ಪ್ರಧಾನಿಗಳಂತೆ ವರ್ತಿಸಲಿಲ್ಲ. ಪಕ್ಷದ ವಕ್ತಾರರಂತೆ ವರ್ತಿಸಿದರು ಎನ್ನುವ ಅರ್ಥ ಬರುವಂತೆ

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಹೇಳಿದರು. ಅವರಿಲ್ಲಿಲ್ಲ, ಡಿಫೆನ್ಡ್ ಮಾಡಿಕೊಳ್ಳುವುದಕ್ಕೆ. ಅವರ ಪಾರ್ಟಿಯವರು ಇವರು ಡಿಫೆನ್ಡ್ ಮಾಡಿಕೊಳ್ಳುವಾಗ ಎಲ್ಲೆಲ್ಲಿಗೋ ಹೋಗುತ್ತೇವೆ. ಮತ್ತೆ ಕೆಲವು ಸ್ಥಾನಗಳನ್ನು, ಅವರ್ಯಾವುದೋ ಪಕ್ಷದವರಿರಲಿ, ಅದನ್ನು ಗೌರವದಿಂದ ನೋಡುವ ಜವಾಬ್ದಾರಿ ಇಡೀ ಸದನದ ಮೇಲಿದೆ.

ಶ್ರೀ ಟಿ.ಬಿ.ಜಯಚಂದ್ರ: ಅವರು ಪ್ರಧಾನಿಗಳು ಇಲ್ಲಿಗೆ ಯಾಕೆ ಬರಲಿಲ್ಲ, ಅವರು ಬರುವಂತೆ ಅವರ ಮನಸನ್ನು ಯಾಕೆ ಒಲಿಸಲಿಲ್ಲ ಎಂದು ಹೇಳಿದರೆ ಆಗ ನಮಗೂ ಸಮಾಧಾನವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಪ್ರಧಾನಿಗಳು ಅತಿವೃಷ್ಟಿ ಸಮೀಕ್ಷೆಗಾಗಿ ಹೈದರಾಬಾದಿಗೆ ಬಂದರು. ಮುಖ್ಯಮಂತ್ರಿಗಳು ಹಿಂದಿನ ದಿವಸ ಪ್ರಧಾನಿಗಳ ಹತ್ತಿರ ಮಾತನಾಡಿದ್ದರು. ಈ ಸರ್ಕಾರದ ಪ್ರತಿನಿಧಿಗಳಾಗಿ ಎಂ.ಪಿ ಪ್ರಕಾಶ್ ಮತ್ತು ಕಂದಾಯ ಸಚಿವರು ಅಲ್ಲಿಗೆ ಬಂದಿದ್ದರು. ಕರ್ನಾಟಕದಲ್ಲೂ ಸಮೀಕ್ಷೆ ಮಾಡಿಕೊಂಡು ಹೋದರು. ಇವರ ಸಂಕಟ ಏನೆಂದರೆ, ನಿಮ್ಮವರು ಪ್ರಧಾನಿಯಾಗಿದ್ದಾಗ ಕೆಲಮಿಟಿ ಫಂಡ್ ಬಿಟ್ಟು ಬೇರೆ ಯಾವುದೂ ಒಂದು ಪೈ ಕೊಡಲಿಲ್ಲ. ಇವರು ಬಂದಾಗ, ಮೆಮೊರ್ಯಾಂಡಂ ಕೊಡುವ ಮುಂಚೆಯೇ 50 ಕೋಟಿ ಕೊಟ್ಟರಲ್ಲಾ, ಅದನ್ನು ಸಹಿಸಲಿಕ್ಕಾಗದೇ..

ಶ್ರೀ ಟಿ.ಬಿ.ಜಯಚಂದ್ರ: ನಮ್ಮ ರಾಜ್ಯಸರ್ಕಾರವ ಶೇರ್ ಇರುವುದರಿಂದ ಪ್ರಧಾನಿಗಳು 50 ಕೋಟಿ ಯಾವತ್ತಿದ್ದರೂ ಬಿಡುಗಡೆ ಮಾಡಬೇಕಾಗುತ್ತದೆ. ವಿಶೇಷವಾಗಿ ಪ್ರಧಾನಿಗಳು ಬಿಡುಗಡೆ ಮಾಡಬೇಕಾದರೆ 50 ಕೋಟಿಗಿಂತ ಜಾಸ್ತಿ ಕೊಟ್ಟಿದ್ದರೆ ಅವರ ಪಾತ್ರ ಇರುತ್ತಿತ್ತು. ಜೊತೆಗೆ 50 ಕೋಟಿಯೂ ಇವತ್ತು ಬಂದಿಲ್ಲವಲ್ಲಾ. ನೀವು ಹೆಚ್ಚು ಹಣ ಕೊಡಿಸುವುದಾದರೆ ನಮಗೆ ಸಂತೋಷವೇ. ಕೊಡಿಸಿ. 50 ಕೋಟಿಗಾಗಿ ಅವರ ಮುಂದೆ ಹೋಗಿ ಗೋಗರೆಯುವ ಪ್ರಶ್ನೆ ಮಾತ್ರ ಇಲ್ಲ. ನಮಗೆ ಕೊಡಬೇಕಾಗಿರುವುದನ್ನು ಯಾವತ್ತಿದ್ದರೂ ಕೊಡಬೇಕಾಗುತ್ತದೆ.

ಶ್ರೀ ಬಿ.ಬಿ.ಶಿವಪ್ಪ: ಅಧ್ಯಕ್ಷರೇ, ಪ್ರಧಾನಿಗಳೇ ಆಗಲಿ ಮುಖ್ಯಮಂತ್ರಿಗಳೇ ಆಗಲಿ ಯಾವುದೇ ಸಂದರ್ಭದಲ್ಲಿ ಹಣ ಕೊಡುತ್ತೇವೆಂದು ಪ್ರಕಟಿಸಿದರೆ ಆಗಲೇ ಕೊಡುವುದಕ್ಕೆ ಆಗುವುದಿಲ್ಲ, ಏಕೆಂದರೆ ಅವರ ಜೇಬಿನಲ್ಲಿ ಇರುವುದಿಲ್ಲ. ಅದಕ್ಕೆ ಕೆಲವು ಕ್ರಮಗಳಿವೆ. ಅದರ ಪ್ರಕಾರ ಹಣ ಬರಬೇಕು. ಹೇಳಿದ ತಕ್ಷಣ ಕೊಡುವುದಕ್ಕೆ ಜೇಬಲ್ಲಿಟ್ಟುಕೊಂಡಿರುವ ಹಣ ಅಲ್ಲ ಅದು. ಅಷ್ಟೂ ತಿಳಿದುಕೊಳ್ಳದಿದ್ದರೆ....

ಶ್ರೀ ಟಿ.ಬಿ.ಜಯಚಂದ್ರ: ಪ್ರೊಸೀಜರ್‌ಗಳ ತೊಡಕು ಇದ್ದಿದ್ದರೆ ಪ್ರಧಾನಿಗಳು ಆ ಮಾತು ಹೇಳುತ್ತಿರಲಿಲ್ಲ.

1.10 ಪಿಎಂ

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವೇನು ಪರಿಹಾರವನ್ನು ಕೊಟ್ಟದ್ದೀರಿ ಎಂದು ಹೇಳಿ. ನಿಮ್ಮ ಮನಬಂದಂತೆ ಮಾಡುತ್ತಿದ್ದಿರಿ.

ಶ್ರೀ ಟಿ.ಬಿ.ಜಯಚಂದ್ರ: ನಾವು ಆಳುವ ಪಕ್ಷ ವಿರೋಧಪಕ್ಷದಲ್ಲೂ ಕುಳಿತು ಅನುಭವವನ್ನು ಪಡೆದಿದ್ದೇವೆ. ನಿಮಗೆ ಅದರ ಅನುಭವವೂ ಇಲ್ಲ. ಮುಂದೆ ಬರುವುದಕ್ಕೂ ಆಗುವುದಿಲ್ಲ ಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಏನು ಮಾಡಿದಿರಿ ಎಂದು ಜಗತ್ತಿಗೆ ಗೊತ್ತಿದೆ.

ಶ್ರೀ ಬಿ.ಬಿ.ಶಿವಪ್ಪ: ನಾವು ಶಾಸಕರಾದವರು ಗ್ರಾಮಾಂತರ ಪ್ರದೇಶದಲ್ಲಿ ಹೋದಾಗ ಒಂದು ಬೋರ್‌ವೆಲ್ ಬೇಕೆಂದು ಕೇಳುತ್ತಾರೆ. ಇವರು ಬೋರ್‌ವೆಲ್‌ನ್ನು ಕೊಡಿಸುತ್ತಾರೆಯೇ? ಕೊಡಿಸುವುದಕ್ಕೆ ನಾವು ಯಾರಿಗೆ ಬರೆಯಬೇಕು?

ಶ್ರೀ ಟಿ.ಬಿ.ಜಯಚಂದ್ರ: ಪ್ರಧಾನಮಂತ್ರಿಗಳು he is the executive Head of the Country.

ಶ್ರೀ ವಾಟಾಳ್ ನಾಗರಾಜ್: ಎಲ್ಲದಕ್ಕೂ ಉತ್ತರ ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಕುಳಿತಿದ್ದಾರೆ, ಕೇಂದ್ರದಿಂದ ಎಷ್ಟು ಹಣ ಬಂದಿದೆ ಎಂದು ತಾವು ಇದರ ಬಗ್ಗೆ ಬೆಳಕು ಚೆಲ್ಲಿಬಿಟ್ಟರೆ ಒಳ್ಳೆಯದು.

ಶ್ರೀ ಜೆ.ಹೆಚ್.ಪಟೇಲ್: ವಿವರಗಳನ್ನು ನಾನು ಈ ಸದನಕ್ಕೆ ಸಬ್‌ಮಿಟ್ ಮಾಡುತ್ತೇನೆ. ಆದರೆ ಒಂದು, ಪ್ರಾಕ್ಟೀಸಸ್ ಆಫ್ ದಿ ಗೌರ್ನಮೆಂಟ್ ಯಾವುದೇ ಇರಲಿ, ಪ್ರಧಾನಮಂತ್ರಿಗಳು 50 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ ಎಂದರೆ ಮಾಡಿಯೇ ಮಾಡುತ್ತಾರೆ. 50 ಕೋಟಿ ಸ್ಯಾಂಕ್ಷನ್ ಮಾಡಿದ್ದೇನೆ, ಎಂದು ಹೇಳಿದ ಮೇಲೆ ನಾನು ಕೊಡುವುದಿಲ್ಲ ಎಂದು ಯಾರು ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ಘನತೆಯ ದೃಷ್ಟಿಯಲ್ಲಿ ಯಾರೂ ಆ ರೀತಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಗತಿ ಏನೆಂದರೆ ಮೊದಲಿನಿಂದ ಎಲ್ಲಾ ಪ್ರಧಾನಮಂತ್ರಿಗಳು ನಮಗೇನು ಅನುಕೂಲ ಮಾಡಿದ್ದಾರೆ ಎನ್ನುವುದು ಏನೂ ಇಲ್ಲ. ಈಗ 50 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿ ಹಿಂದೆ ಸರಿಯುತ್ತಾರೆ ಎಂದು ನಾವ್ಯಾರು ಹೇಳುವುದಕ್ಕೆ ಸಾಧ್ಯವಿಲ್ಲ. ಕೊಡುತ್ತಾರೆ ಎನ್ನುವುದು ನಮ್ಮದೂ ಭಾವನೆ ಇದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈ ರೀತಿ ನಮ್ಮ ರಾಜ್ಯದ ಬೇಡಿಕೆ ಇಲ್ಲದೇ ಹೋದರೂ ಕೂಡ ಇವತ್ತು ಮಾನ್ಯ ಪ್ರಧಾನಿಯವರು ಈ ರಾಜ್ಯದ

ವೀಕ್ಷಣೆಯನ್ನು ಮಾಡಿ ಅಲ್ಲಿಗೆ ಹೋಗಿರುವ ನಮ್ಮ ಕರ್ನಾಟಕ ರಾಜ್ಯದ ಮಂತ್ರಿಗಳನ್ನು ಗೌರವಿಸಿ ಅವರ ಅಹವಾಲನ್ನು ಕೂಡ ಕೇಳಿ ಇವತ್ತು ತಮ್ಮಷ್ಟಕ್ಕೇ ತಾವೇ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳಿ ನಮ್ಮಲ್ಲಿ ಧೈರ್ಯ ತುಂಬಿರುವ ಆ ಪ್ರಧಾನಮಂತ್ರಿಯವರನ್ನು ಇವತ್ತು ಸದನದಲ್ಲಿ ಅಭಿನಂದಿಸಬೇಕಾಗುತ್ತದೆ. ಇದರಲ್ಲಿ ರಾಜಕಾರಣವನ್ನು ಕಾಣುವ ಅವಶ್ಯಕತೆ ಇಲ್ಲ. ಈ ರೀತಿ ಸಣ್ಣದಾಗಿ ಆಲೋಚನೆ ಮಾಡುವ ರಾಜಕಾರಣವನ್ನು ಕೂಡ ನಾವು ಮಾಡಬಾರದು. ಇದು ಕರ್ನಾಟಕ ರಾಜ್ಯಕ್ಕೆ ಶೋಭೆ ತರುವ ಅಂಶವಲ್ಲ. ಇವತ್ತು ನಮ್ಮಲ್ಲಿ ಪರಿಹಾರದ ಹಣ ನಾನು ಬೇರೆ ಎಲ್ಲಾ ವಿಷದವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ವಿತರಣೆ ಮಾಡಲಿಕ್ಕೆ ಒಂದು ಕೋಟಿ ರೂಪಾಯಿಗಳನ್ನು ಶಿವಮೊಗ್ಗಕ್ಕೆ ಕೊಟ್ಟಿದ್ದೇನೆ, 2 ಕೋಟಿ ರೂಪಾಯಿಗಳನ್ನು ಗುಲ್ಬರ್ಗಾಕ್ಕೆ ಕೊಟ್ಟಿದ್ದೇನೆ, ಈ ರೀತಿ ಹೇಳಿಕೆಗಳು ಬಂದಿವೆ. ಆ ಕೋಟಿ ಏಲ್ಲಿಗೆ ಹೋಗಿ ಮುಟ್ಟಿದೆ? ಯಾರ ಕೋಟಿಗೆ ಹೋಗಿದೆ ಎನ್ನುವುದನ್ನು ನಾವು ನೋಡಬೇಕು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿದೆ. ಇದನ್ನು ಯುದ್ಧೋಪಾದಿಯಲ್ಲಿ ಈ ರೀತಿಯ ಸಂಕಷ್ಟ ಬಂದಾಗ ಮಾಡಬೇಕಾಗಿದೆ. ನನ್ನ ಕ್ಷೇತ್ರದ ಬಗ್ಗೆ ಹೇಳುತ್ತೇನೆ, ಮನೆ ಕುಸಿದುಹೋಗಿದೆ. ಮೊನ್ನೆ ದಿನ ಆ ಫಲಾನುಭವಿ ಬಂದು ಹೇಳುತ್ತಾರೆ. ತಹಶೀಲ್ದಾರ್‌ರವರು 500 ರೂಪಾಯಿ ಕೊಟ್ಟರು ಎಂದು. ನೀವು ಹೇಳುತ್ತೀರಿ ಪೂರ್ಣಮನೆ ಕುಸಿದು ಹೋದರೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇನೆ ಎಂದು. ಭಾಗಶಃ ಕುಸಿದುಹೋದರೆ 5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಅಥವಾ ಅದರ ಕಾಸ್ಟ್ ಎಷ್ಟು ಕಡಿಮೆಯಾಗುತ್ತದೋ ಅಷ್ಟನ್ನಾದರೂ ಕೊಡುತ್ತೇವೆ ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಆ ಜನರೂ ಕೂಡ ಇವತ್ತು ಪತ್ರಿಕೆಯನ್ನು ಓದುತ್ತಾರೆ. ನನ್ನ ಕ್ಷೇತ್ರದಲ್ಲಿ 500 ರೂಪಾಯಿ ಕೊಟ್ಟಿದ್ದಾರೆ. ಏನಾಗಿದೆ ಎಂದು ಕೇಳಿದರೆ ನನಗೆ ಕೊಡುವುದಕ್ಕೆ ಅಧಿಕಾರವಿರುವುದು ಇಷ್ಟೇನೇ. ನಾನು ಜಿಲ್ಲಾಧಿಕಾರಿಗಳಿಗೆ ಟೆಲಿಫೋನ್ ಮಾಡಿ ಕೇಳಿದೆ. ಹೌದು ತಹಶೀಲ್ದಾರ್‌ರವರಿಗೆ 500 ರೂಪಾಯಿಗಳನ್ನು ಕೊಡುವುದಕ್ಕೆ ಅಧಿಕಾರ ಇದೆ. ಆಮೇಲೆ ಅವರು ಅಸಿಸ್ಟೆಂಟ್ ಕಮಿಷನರ್‌ಗೆ ಅರ್ಜಿಯನ್ನು ಹಾಕಿಕೊಳ್ಳಲಿ. ಅವರು ಒಂದೂವರೆ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಅಧಿಕಾರ ಇದೆ. ಅದನ್ನು ತೆಗೆದುಕೊಂಡು ಮತ್ತೆ ಡಿ.ಸಿ.ಯವರಿಗೆ ಅರ್ಜಿ ಹಾಕಿಕೊಳ್ಳಲಿ. ಉಳಿದದ್ದನ್ನು ನಾನು ಕೊಡುತ್ತೇನೆ ಎಂದು ಹೇಳುತ್ತಾರೆ. ಹಾಗಾದರೆ ಒಬ್ಬರು ಮನೆ ಕಳೆದುಕೊಂಡಿರುವ ಒಬ್ಬ ಹಳ್ಳಿಯ ಮನುಷ್ಯನಿಗೆ ತಹಶೀಲ್ದಾರ್‌ರಿಗೆ ಅರ್ಜಿ ಹಾಕಿ ತೆಗೆದುಕೊಳ್ಳುವುದು, ಎ.ಸಿ. ಅವರಿಗೆ ಅರ್ಜಿ ಹಾಕುವುದು, ಆಮೇಲೆ ಡಿ.ಸಿ.ಯವರಿಗೆ ಅರ್ಜಿ ಹಾಕುವುದು ಈ ಅರ್ಜಿ ಹಾಕುವ ಸರ್ಕಸ್ ಮಾಡುವುದಕ್ಕೆ ಹೋದರೆ ಅವನ ಕೂಲಿ ಹಾಳಾಗುತ್ತಾ ಇದೆ. ಮನೆ ಕಳೆದುಕೊಂಡು ಬೀದಿಯಲ್ಲಿ ಅವನ ಹೆಂಡತಿ ಮಕ್ಕಳು ಇದ್ದಾರೆ. ನೀವು ಹೇಳಬೇಕಲ್ಲಾ ಅಧಿಕಾರಿಗಳಿಗೆ. ಅವನ ಮನೆ ಬಾಗಿಲಿಗೆ ತಗದುಕೊಂಡು ಹೋಗಿ ಚೆಕ್ ಕೊಡಿ ಇಷ್ಟನ್ನು ಎಂದು ಹೇಳಬಹುದಲ್ಲಾ, ಏಕೆ

ಹೇಳುವುದಿಲ್ಲ. ಏನಾಗಿದೆ ನಿಮಗೆ. ನಿಮ್ಮ ಮಂತ್ರಿಗಳು ಕುಳಿತುಕೊಂಡು ಇದನ್ನು ರೆವ್ಯೂ ಮಾಡಬೇಕಲ್ಲಾ. ಕಾನೂನಿನ ತೊಡಕು ಇರಬಹುದು. ಕೆಲಾಮಿಟಿ ಪ್ರಕಾರ ಇಷ್ಟಿಷ್ಟೇ ಎಂದು ಒಬ್ಬರಿಗೆ ಕೊಡುವುದಕ್ಕೆ ಅಧಿಕಾರ ಇದೆ. ಅದನ್ನು ಹಿಂದೆ ಕೊಟ್ಟಿರಬಹುದು. ಆದರೆ ಇದು ಯಾವ ಸ್ಥಿತಿ? ಪುರುಸೊತ್ತು ಇದೆಯೇ? ಮನೆ ಕಳೆದುಕೊಂಡಿರುವವರಿಗೆ, ಸತ್ತವರಿಗೆ ಜಮೀನು ಕಳೆದುಕೊಂಡು ನಿರ್ಗತಿಕರಾದವರಿಗೆ ಅವರು ಕಳೆದುಕೊಂಡಿರುವಷ್ಟನ್ನು ಕೊಡಲಿಕ್ಕೆ ನಿಮಗೆ ಬರುವುದಿಲ್ಲ. ತತ್‌ಕ್ಷಣದ ಸಾಂತ್ವನದ ಒಂದು ಪರಿಹಾರದ ಹಣವನ್ನು ಕೊಡಬೇಡವೇ? ಸರ್ಕಾರ ನಿನ್ನ ಪಾಲಿಗಿದೆ. ತೆಗೆದುಕೋ ನೀನು ಎಂದು ಹೇಳಿದ ಅದನ್ನು ಕೊಡಲಿಕ್ಕೆ ಏಕೆ ಬರುವುದಿಲ್ಲ? ನಿನ್ನೆ ದಿನ ತಮ್ಮ ಕ್ಷೇತ್ರದಲ್ಲೂ ಇದು ನಡೆದಿರಬಹುದು. ನಿನ್ನೆ ದಿನ ಒಂದು ಸುತ್ತೋಲೆ ಬಂದಿದೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆದ್ಯತೆ ಆಧಾರದ ಮೇಲೆ ಹತ್ತು ಲಕ್ಷ ರೂಪಾಯಿಗಳ ಪಟ್ಟಿಮಾಡಿ ಕಳುಹಿಸಿ ಎಂದು ಬಂದಿದೆ. ಎಷ್ಟು ದಿವಸವಾಯಿತು? ರೋಡ್ ಡ್ಯಾಮೇಜ್ ಆಗಿ ಎಷ್ಟು ದಿವಸವಾಯಿತು ರಸ್ತೆಗಳು ಕುಸಿದುಹೋಗಿ ಎಷ್ಟು ದಿವಸವಾಯಿತು? ಕಟ್ಟಡಗಳು ಬಿದ್ದುಹೋಗಿ ಎಷ್ಟು ದಿವಸವಾಯಿತು? ಕೆರೆಕಟ್ಟೆಗಳು ಒಡೆದುಹೋಗಿ ಎಷ್ಟು ದಿವಸವಾಯಿತು. ನಿನ್ನೆ ದಿನ ಜಿಲ್ಲಾಧಿಕಾರಿಗಳಿಂದ ನಮಗೆ ಸುತ್ತೋಲೆ ಬಂದಿದೆ. ಶಾಸಕರನ್ನು ಕೂರಿಸಿಕೊಂಡು ಮಾಡಿ ಕಳುಹಿಸಿ ಎಂದು. ಎಷ್ಟು ದಿನದ ನಂತರ. ಇನ್ನು ಪಟ್ಟಿ ಮಾಡಿ ಕಳುಹಿಸಿ ಅದು ಮಂಜೂರಾಗುತ್ತದೆಯೋ ಇಲ್ಲವೋ ಎನ್ನುವ ಗ್ಯಾರಂಟಿ ನಮಗಿಲ್ಲ. ಇಷ್ಟರೊಳಗಾಗಿ ಪ್ರಾರಂಭ ಮಾಡಬೇಕಾಗಿತ್ತು. ಒಡೆದು ಹೋಗಿರುವ ಕೆರೆಕಟ್ಟೆಗಳನ್ನು ಕಟ್ಟಬೇಕಾಗಿತ್ತು. ಅದರಲ್ಲಿ ನೀರನ್ನು ಸ್ಟೋರೇಜ್ ಮಾಡಬೇಕಾಗಿತ್ತು. ನೀವು ಮಾಡಲಿಲ್ಲ. ಇನ್ನೂ ಕೂಡ ಮಾನಮೇಷ ಎಣಿಸುತ್ತಿದ್ದೀರಿ. ನಿಮ್ಮ ಮೆಷಿನರಿಯನ್ನು ಚಾಲೂ ಮಾಡುವುದಿಲ್ಲ, ಗೇರ್ ಅಪ್ ಮಾಡುವುದಿಲ್ಲ ನೀವು. ನಿಮಗೆ ಆ ಒಂದು ಕಳಕಳಿ ಇಲ್ಲ. ಹೀಗಾಗಿಯೇ ನಿಮ್ಮ ಸರ್ಕಾರ ಹೋಗಬೇಕೆಂದು ನಾವು ಹೇಳುತ್ತಿರುವುದು. ನಿಮ್ಮ ಸರ್ಕಾರದಲ್ಲಿರುವ ಅನೇಕರಿಗೆ ಆ ಜನಸೇವೆಯನ್ನು ಮಾಡುವ, ಆ ಕಣ್ಣೀರು ಹಾಕುವ ಜನರ ಹತ್ತಿರ ಹೋಗಬೇಕೆನ್ನುವ ಇಚ್ಛಾಶಕ್ತಿ ಇಲ್ಲ. ಅಧ್ಯಕ್ಷರೇ, ಸರ್ವೆ ಯಾವ ರೀತಿ ಮಾಡಿದ್ದಾರೆ, ಯಾರಿಗೂ ಕೂಡ ಗೊತ್ತಿಲ್ಲ. ಎಲ್ಲಿ ಕ್ರಾಪ್ ಡ್ಯಾಮೇಜ್ ಆಗಿದೆ ಎಲ್ಲಿ ರಸ್ತೆ ಡ್ಯಾಮೇಜ್ ಆಗಿದೆ ಯಾರಿಗೂ ಕೂಡ ಗೊತ್ತಿಲ್ಲ. ಹರಿಬರಿಯಲ್ಲಿ ಪ್ರಧಾನಮಂತ್ರಿಯವರು ಬಂದು ಹೋದ ನಂತರ ಮುಖ್ಯಮಂತ್ರಿಗಳಿಗೆ ಜ್ಞಾನೋದಯವಾಗುತ್ತದೆ. ಮುಖ್ಯಮಂತ್ರಿಗಳಿಗೆ ಜ್ಞಾನೋದಯವಾದ ನಂತರ ಬೇರೆ ಮಂತ್ರಿಗಳಿಗೆ ಜ್ಞಾನೋದಯವಾಗುತ್ತದೆ. ಆಮೇಲೆ ಅಧಿಕಾರಿಗಳಿಗೆ ಜ್ಞಾನೋದಯವಾಗುತ್ತದೆ. ಸರ್ವೆಯನ್ನೇ ಮಾಡಲಿಲ್ಲ. ಇವತ್ತು ಕೊಟ್ಟಿರುವ ಬುಕ್‌ಲೆಟ್‌ನ್ನು ಕೇಂದ್ರಕ್ಕೆ ಅರ್ಪಣೆ ಮಾಡಿದ್ದೀರಿ, ಇದನ್ನು ನಾವು ಓದಿದ್ದೇವೆ. ಇದರಲ್ಲಿರುವ ಅಂಶ ಸಂಪೂರ್ಣವಾಗಿ ಸತ್ಯಾಂಶವಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು ಅನಾಹುತವಾಗಿದೆ. ಸರ್ವೆ ಮಾಡಲಿಲ್ಲ. ನಿಮಗೆ ಕೊಡಲಿಕ್ಕೆ ಹಣ ಇಲ್ಲದೇ ಇದ್ದರೂ ಕೂಡ ಅಣೆವಾರಿ ಡಿಕ್ಲೇರ್

ಮಾಡಿದ್ದರೆ ಬೆಳೆ ವಿಮೆಯನ್ನಾದರೂ ಕೂಡ ರೈತರು ಪಡೆದುಕೊಳ್ಳಬಹುದಾಗಿತ್ತು. ಅದನ್ನೂ ಕೂಡ ಮಾಡಲಿಲ್ಲ. ಆಂಧ್ರಪ್ರದೇಶದವರು ಅವರು ಏನೇನು ಮಾಡಿದ್ದಾರೆ ಎಂದು ಹೇಳಿ ಈ ಸಂದರ್ಭದಲ್ಲಿ ಯಾವ ರೀತಿ ಪರಿಹಾರವನ್ನು ರೈತರಿಗೆ ಕೊಟ್ಟಿದ್ದಾರೆಂಬುದನ್ನು ಹೇಳುತ್ತೇನೆ. ಇವತ್ತು ಬೆಳೆಗಳು ಇಳಿದುಹೋಗಿವೆ. ಸಂಪೂರ್ಣವಾಗಿ ನೀರುಳ್ಳಿಯನ್ನು ಬೆಳೆದಿರುವವರ ಬೆಳೆ ಕೊಳೆತುಹೋಗಿದೆ. ನಿನ್ನೆ ಕೂಡ ಮಳೆ ಸಿಕ್ಕಾಪಟ್ಟೆ ಬಂದು ನನ್ನ ಕ್ಷೇತ್ರದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಕನ್ನಂಗಿ ಎಂದು ಹೇಳಿ ಒಂದು ಪಂಚಾಯಿತಿ ವ್ಯಾಪ್ತಿ ಇದೆ. ಅಲ್ಲಿರುವ ಅಗಸರ ಕೊಪ್ಪ ಎಂಬ ಒಂದು ಹಳ್ಳಿಯಲ್ಲಿ ಮೂರು ಜನ ರೈತರು ಭತ್ತವನ್ನು ಮಾರಾಟ ಮಾಡಿ ಬರುತ್ತಿದ್ದರು. ಇದ್ದಕ್ಕಿದ್ದಹಾಗೆ ಭೋರ್ಗರೆಯುವಂಥ, ಒಂದು ಮಳೆಯ ಹಳ್ಳದ ದೆಸೆಯಿಂದಾಗಿ ಕೊಚ್ಚಿಕೊಂಡು ಹೋಗಿದ್ದಾರೆ. ಇವತ್ತು ಬೆಳಿಗ್ಗೆ ನನಗೆ ದೂರವಾಣಿ ಮೂಲಕ ಹೇಳುತ್ತಾರೆ. ಒಬ್ಬರು ಸ್ಪಾಟ್ ಡೆತ್ ಆಗಿದ್ದಾರೆಂದು 'ಆ ಹಳ್ಳದಲ್ಲಿ ಅವರ ಹೆಣ ಎಲ್ಲೋ ಪೊದೆಯಲ್ಲಿ ಹೋಗಿ ಸಿಕ್ಕಿಹಾಕಿಕೊಂಡಿತಂತೆ. ಇವತ್ತು ಹೋಗಿ ಅದನ್ನು ತೆಗೆದಿದ್ದಾರೆ' ಎರಡು ಮೂರು ಜನರು ಗಾಯಾಳುಗಳಾಗಿದ್ದಾರೆ. ಒಂದು ಎತ್ತು ಸತ್ತೇ ಹೋಗಿದೆ. ಇವತ್ತು ಈ ರೀತಿ ಪ್ರಕೃತಿವಿಕೋಪಕ್ಕೆ ನಾವು ತುತ್ತಾಗಿದ್ದೇವೆ. ಇವತ್ತು ಮಳೆ ಬರಿಸುವುದು, ನಿಲ್ಲಿಸುವುದು ನಿಮ್ಮ ಅಧಿಕಾರವ್ಯಾಪ್ತಿಗೆ ಬರುವುದಿಲ್ಲ. ಇದನ್ನು ನಾವು ಹೇಳುವುದಿಲ್ಲ. ಆದರೆ ಇದು ಬಂದಾಗ ಈ ರೀತಿ ಜನರು ಸತ್ತಾಗ, ಈ ರೀತಿ ಜನರಿಗೆ ತೊಂದರೆಯಾದಾಗ ನಿಮ್ಮ ಇಡೀ ಸರ್ಕಾರ ಯಾವ ರೀತಿ ವರ್ತನೆ ಮಾಡಬೇಕಾಗಿತ್ತೋ ಇವತ್ತು ಆ ರೀತಿ ಇಲ್ಲ. ಬೆಳೆ ವಿಮೆ ಕೊಡಬಹುದಾಗಿತ್ತು. ಹೋದಸಾರಿ ಎಲ್ಲಾ ಸತ್ತುಹೋದರು. ನಿಮ್ಮ ರಾಜ್ಯಭಾರದಲ್ಲಿ ರೈತರುಗಳು ಆತ್ಮಹತ್ಯೆಯನ್ನು ಮಾಡಿಕೊಂಡರು ನೀವು ಅವರ ನೆರವಿಗೆ ಹೋಗಲಿಲ್ಲ. ನಮ್ಮ ಅನೇಕ ಮುಖಂಡರು ಹೇಳಿದ್ದಾರೆ. ನಿಮ್ಮ 250 ರೂಪಾಯಿ ಚೆಕ್ಕುಗಳೂ ಕೂಡ ಇವತ್ತು ಬೌನ್ಸ್ ಆಗಿ ವಾಪಸ್ ಬಂದಿವೆ. 250 ರೂಪಾಯಿ ಓಕುಳಿವಾರಿ. ನಿಮ್ಮನ್ನು ನಂಬುವ ಸ್ಥಿತಿಯಲ್ಲಿ ಇಲ್ಲ. ಚೆಕ್‌ಗಳೆಲ್ಲಾ ವಾಪಸ್ ಬರುತ್ತಿವೆ. ಪತ್ರಿಕೆಯಲ್ಲಿ ಅದರ ಫೋಟೊಗಳು ಬಂದಿವೆ. ಇಂಥ ಸ್ಥಿತಿಯಲ್ಲಿ ನೀವು ಹಣವನ್ನೇ ಖರ್ಚು ಮಾಡದೇ ಮಾಡುವಂಥ ಅನೇಕ ಕಾರ್ಯಕ್ರಮಗಳಿದ್ದವು. ನೀವು ಮಾಡಲೇ ಇಲ್ಲ. ಮೊನ್ನೆ ದಿನ ಶಿರಾದ ಘಟನೆ ನಡೆಯಿತು. ಸ್ವತಃ ನಾನೂ ಕೂಡ ಹೋಗಿದ್ದೆ. ಯಾವ ಸ್ಥಿತಿ? ನಿಮ್ಮ ಮೂರು ಜನ ಮಂತ್ರಿಗಳು ಹೋಗಿ ಸಿಕ್ಕಿಹಾಕಿಕೊಂಡಿದ್ದಾರೆ. ಆಜನರ ಕಷ್ಟವನ್ನು ನೋಡಿದ್ದಾರೆ. ನಿಮ್ಮ ಮಂತ್ರಿಗಳು ಓಡಿಹೋಗುವುದು. ಇದು ಯಾವ ಸ್ಥಿತಿ.

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಯಾರೂ ಓಡಿಹೋಗಿಲ್ಲ. ಓಡಿಹೋದರು ಎಂದು ಏತಕ್ಕೆ ಹೇಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ: ಹೇಳಿ ತಾವು ಹಿರಿಯರು. ತಮ್ಮ ಬಗ್ಗೆ ಗೌರವ ಇದೆ. ನಮ್ಮ ಎಸ್.ಎಸ್.ಪಾಟೀಲರು ಮಾನ್ಯ ಸಹಕಾರ ಮಂತ್ರಿಗಳು ಹೇಳಿದರು, ಅವರಿಗೆ

ಜನರು ಜೈಕಾರ ಹಾಕಿದರಂತೆ. ಸತ್ಯನಾರಾಯಣಅವರು ಅತ್ತುಬಿಟ್ಟರು. ಅವರು ರಾಜೀನಾಮೆ ಕೊಟ್ಟಿದ್ದರು ಎಂದು ತಿಳಿದುಕೊಂಡೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇಂಥ ಮಹತ್ವವಾದ ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡನೆ ಮಾಡಿದಾಗಲೂ, ಶಿರಾ ಘಟನೆಯಂತಹದ್ದು ಇತ್ತೀಚಿನ ದಿವಸಗಳಲ್ಲಿ ನಡೆಯಲಿಲ್ಲ, ಈ ಘಟನೆಯಲ್ಲಿ ನೊಂದವರಿಗೆ ಪರಿಹಾರ ಸಿಗಬೇಕು ಎಂಬ ಕಾರಣದಿಂದ ಅವಿಶ್ವಾಸ ನಿರ್ಣಯವನ್ನು ಪಕ್ಕಕ್ಕೆ ಸರಿಸಿ ಶಿರಾ ಘಟನೆಯ ಬಗ್ಗೆ ಇಲ್ಲಿ ಚರ್ಚೆ ಮಾಡಿದೆವು. ಈ ಸದನ ಮುಗಿಯುವುದರೊಳಗೆ ಸದನದ ಸಮಿತಿಯನ್ನು ಮಾಡಿ, ಆ ಸಮಿತಿಯು ಶಿರಾಕ್ಕೆ ಭೇಟಿ ನೀಡಿ ನೊಂದವರ ಅಹವಾಲುಗಳನ್ನು ಕೇಳಿ ಅವರುಗಳಲ್ಲಿ ವಿಶ್ವಾಸವನ್ನು ಮೂಡಿಸಿ ಅನಂತರ ಸದನಕ್ಕೆ ವರದಿಯನ್ನು ಕೊಡಬೇಕೆಂದು ಅಧ್ಯಕ್ಷರ ಕೊಠಡಿಯಲ್ಲಿ ನಾವುಗಳೆಲ್ಲರೂ ಚರ್ಚೆ ಮಾಡಿದ್ದೆವು. ಆದರೆ ತಾವುಗಳು ತಮ್ಮ ಒಳಜಗಳದಿಂದಾಗಿ ಇದುವರೆಗೂ ಅಧ್ಯಕ್ಷರ ಕೊಠಡಿಗೆ ಹೋಗಿ ಯಾರ್ಯಾರು ಸದಸ್ಯರುಗಳು ಸಮಿತಿಯಲ್ಲಿರಬೇಕು ಅದಕ್ಕೆ ಅಧ್ಯಕ್ಷರು ಯಾರಿರಬೇಕು ಎಂಬ ಬಗ್ಗೆ ಚರ್ಚೆ ಮಾಡಿ ಸಮಿತಿಯ ಬಗ್ಗೆ ಇಲ್ಲಿ ಪ್ರಕಟಣೆ ಮಾಡಲು ಪ್ರಯತ್ನ ಮಾಡಿಲ್ಲ. ಇದು ಸರ್ಕಾರದ ಬೇಜವಾಬ್ದಾರಿಯ ಪರಿಮಾವಧಿಯಲ್ಲವೇ? ಈ ವಿಚಾರಕ್ಕಿಂತ ಕಳಕಳಿ, ಆದ್ಯತೆ ಇರುವ ವಿಚಾರ ಮತ್ಯಾವುದು ತಮಗಿದೆ? ಮುಖ್ಯಮಂತ್ರಿಗಳ ಸಮಕ್ಷಮ ಅಧ್ಯಕ್ಷರ ಕೊಠಡಿಯಲ್ಲಿ ತೀರ್ಮಾನವಾದಂತೆ ತಾವು ಕ್ರಮ ತೆಗೆದುಕೊಳ್ಳದಿದ್ದರೆ ನಾವೇನು ಹೇಳಬೇಕು? ಸಮಿತಿಯ ಸದಸ್ಯರು, ಅಧ್ಯಕ್ಷರು ಯಾರ್ಯಾರು ಇರಬೇಕೆಂಬುದು ಅವರಿಗೆ ಬಿಟ್ಟ ವಿಚಾರ. ತಾವು ಯಾವ ಪಟ್ಟಿಯನ್ನು ಕೊಡುತ್ತೀರೋ ಅದನ್ನು ಅವರು ಮಾಡುತ್ತಾರೆ. ಕಾಂಗ್ರೆಸ್, ಜನತಾದಳದ ಯಾವ್ಯಾವ ಸದಸ್ಯರುಗಳು ಸಮಿತಿಯಲ್ಲಿರಬೇಕು ಎಂಬ ಪಟ್ಟಿಯನ್ನು ಕೊಡಲು ತಮ್ಮಿಂದ ಆಗಲಿಲ್ಲ. ಒಂದು ಸಮಿತಿಯನ್ನು ಮಾಡಲು ಇಷ್ಟೊಂದು ಬೇಜವಾಬ್ದಾರಿತನವೆ? ಇದು ತಮಗೆ ಶೋಭೆತರುವಂಥದ್ದೇ?

ಶ್ರೀ ಡಿ.ಮಂಜುನಾಥ್: ಕಾನೂನು ಸಚಿವರು ಸದಸ್ಯರುಗಳ ಪಟ್ಟಿಯನ್ನು ಕೊಡುವುದಾಗಿ ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ಪಟ್ಟಿಯನ್ನು ಬೇಕಾದರೆ ಆಮೇಲೆ ಕೊಡಿ. ಘಟನೆಯಾದ ನಂತರ ಜನರ ಮನಸ್ಸಿಗಾಗಿರುವ ಗೊಂದಲವನ್ನು ನೋವನ್ನು ಪರಿಶೀಲಿಸಲು ಸಮಿತಿಯು ಸೋಮವಾರವೇ ಹೋಗಿ ಪರಿಶೀಲಿಸುವುದಾಗಿ ಸದನದಲ್ಲಿ ಹೇಳಿದ್ದಿರಿ. ತಮಗೆ ಸದಸ್ಯರುಗಳ ಪಟ್ಟಿ ಮಾಡಲು ತೊಂದರೆಯಾದರೂ ಏನು? ಮಾನ್ಯ ಅಧ್ಯಕ್ಷರೆ, ತಮ್ಮ ಅಧ್ಯಕ್ಷತೆಯಲ್ಲಿ ತಮ್ಮ ಕೊಠಡಿಯಲ್ಲಿ ಸುದೀರ್ಘವಾಗಿ ಚರ್ಚೆ ನಡೆದು, ಇದರ ಬಗ್ಗೆ ಎರಡೂ ಸದನದ ಸಮಿತಿಯನ್ನು ರಚನೆ ಮಾಡಬೇಕೆಂದು ತೀರ್ಮಾನವಾಗಿ ಆ ಸಮಿತಿಯನ್ನು ಮಾಡಿದಮೇಲೆ ಸೋಮವಾರ ಶಿರಾಕ್ಕೆ ಭೇಟಿ

ಮಾಡಿ ವರದಿ ಕೊಡಬೇಕೆಂದು ಚರ್ಚೆಯಾಗಿತ್ತು. ಅದರ ಸಲುವಾಗಿ ಇಲ್ಲಿ ಧರಣ, ಸಭಾತ್ಯಾಗ, ಸದನವನ್ನು ಮುಂದೂಡಿ ತಮ್ಮ ಕಾರ್ಯಾಲಯದಲ್ಲಿ ಚರ್ಚೆಯಾಗಿ ಸಮಿತಿಯನ್ನು ಪ್ರಕಟಣೆ ಮಾಡುತ್ತೇವೆಂದು ಹೇಳಿ ಇದುವರೆಗೆ ಸಮಿತಿಯನ್ನು ಪ್ರಕಟಣೆ ಮಾಡದಿರಲು ಕಾರಣವೇನು? ಸಮಿತಿಯನ್ನು ರಚನೆ ಮಾಡಿದರೆ ಮಾನ್ಯ ಯಡಿಯೂರಪ್ಪನವರು ಯಾರದ್ದೋ ಪಿತೂರಿ ಇದೆಯೆಂದೇನು ಹೇಳಿದ್ದಾರೆ ಅದು ಬಯಲಾಗುತ್ತದೆಂದು ಸುಮ್ಮನಿದ್ದೀರಾ? ಸಮಿತಿಯನ್ನು ಮಾಡದಿರುವ ಉದ್ದೇಶವೇನು? ಅಲ್ಲಿ ಎಂಟುಹತ್ತು ಜನರು ಗೋಲೀಬಾರ್‌ನಿಂದಾಗಿ ಮೃತಪಟ್ಟಿದ್ದಾರೆ. ಕರ್ನಾಟಕದಲ್ಲಿ ಇಷ್ಟೊಂದು ಭಯಾನಕವಾದ ಘಟನೆ ಎಂದೂ ಆಗಿರಲಿಲ್ಲ. ಈಗಾಗಲೇ ಘಟನೆಯಾಗಿ ಹತ್ತು ದಿವಸಗಳಾಗಿಬಿಟ್ಟಿದೆ. ಸಮಿತಿಯನ್ನು ಯಾವಾಗ ರಚನೆ ಮಾಡುತ್ತೀರಿ ಎಂಬುದನ್ನು ಹೇಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂಜುನಾಥ್‌ರವರು ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ ಇಂಥಹದ್ದೆ ಒಂದು ಪ್ರಕರಣ ಬಂದಿತ್ತು, ಅದು ಮಧುಗಿರಿ ಪ್ರಕರಣ. ಆಗ ವಿಚಾರ ಚರ್ಚೆಗೆ ಬಂದ ದಿನವೇ ಸಮಿತಿ ಮಧುಗಿರಿಗೆ ಹೋಯಿತು. ಆದರೆ ತಮಗೆ ಇದರಲ್ಲಿ ಅತ್ಯಂತ ಜರೂರು ಎಂದು ಅನ್ನಿಸುವುದಿಲ್ಲವೆ? 'ಕಾಲಾಯ ತಸ್ಮೈನಮಃ' ಹೇಗೋ ಕಾಲ ತಳ್ಳಿಕೊಂಡು ಹೋದರೆ ಎಲ್ಲಾ ಮರೆತು ಹೋಗುತ್ತದೆ ಎಂಬ ಭಾವನೆ ತಮ್ಮಲ್ಲಿದೆ. ಇಂಥ ವಿಚಾರಗಳ ಬಗ್ಗೆ ಇಷ್ಟೊಂದು ಕ್ಯಾಷ್ಯುಯಲ್ ಆಗಿ ತೆಗೆದುಕೊಂಡರೆ ಏನು ಮಾಡಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸದನದ ಸಮಿತಿಯನ್ನು ಇದಕ್ಕೆ ಸಂಬಂಧಿಸಿದಂತೆ ಮಾಡುವುದಾಗಿ ಭರವಸೆಯನ್ನು ಕೊಟ್ಟಿದ್ದಿರಿ. ಈಗಾಗಲೇ ಆ ಸಮಿತಿಯ ಸದಸ್ಯರುಗಳು ಯಾರು ಎಂಬ ಬಗ್ಗೆ ಪ್ರಕ್ರಿಯೆ ಸಹ ಮುಗಿದಿರಬಹುದೆಂದು ನಾನು ಭಾವಿಸುತ್ತೇನೆ. ಇದು ತಮ್ಮ ಪರಮಾಧಿಕಾರಕ್ಕೆ ಬಿಟ್ಟ ವಿಚಾರ. ಸಮಿತಿಯ ಪ್ರಕಟಣೆ ಮಾಡಲು ಏಕೆ ವಿಳಂಬವಾಯಿತು ಎಂಬ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬೇಗನೆ ಸಮಿತಿಯನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ಮಾಡಿಸುವ ಕೆಲಸವಾಗಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಅಲ್ಲಿ ಅಮಾಯಕರನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯುವ ಪ್ರಯತ್ನಗಳಾಗಿದೆ. ಇದರ ಬಗೆಗೆ ಜನರಿಗೆ ಯಾವುದೇ ರೀತಿಯಾದ ಪ್ರತಿಕ್ರಿಯೆಯನ್ನು ಕೊಡುವುದಕ್ಕಾಗುವುದಿಲ್ಲ. ಸದನದ ಸಮಿತಿ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಮೇಲುನೋಟಕ್ಕೆ ಅಲ್ಲಿ ಏನಾಗಿದೆ ಎಂಬ ಬಗ್ಗೆ ವರದಿ ಕೊಡಲಿ ಎಂಬುದೇ ನಮ್ಮೆಲ್ಲರ ಅಭಿಪ್ರಾಯ. ದಯಮಾಡಿ ಸಮಿತಿಯನ್ನು ಅಲ್ಲಿಗೆ ಬೇಗನೆ ಕಳುಹಿಸತಕ್ಕ ಕೆಲಸವನ್ನು ಮಾಡಬೇಕು.

ಅಧ್ಯಕ್ಷರು: ನಾನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಚರ್ಚೆಮಾಡಿ ಸಮಿತಿಯ ಸದಸ್ಯರುಗಳ ಪಟ್ಟಿ ತಯಾರು ಮಾಡಿಕೊಂಡು, ಮೇಲ್ಮನೆಯ ಸಭಾಪತಿಯರ ಜೊತೆ ಚರ್ಚೆಮಾಡಿ, ಅವರಿಂದ ಸಹ ಪಟ್ಟಿಯನ್ನು ತರಿಸಿಕೊಂಡು ಸಾಧ್ಯವಾದಮಟ್ಟಿಗೆ ಇವತ್ತು ಕಲಾಪ ಮುಗಿಯುವುದರೊಳಗಾಗಿ ಪ್ರಕಟಣೆ ಮಾಡುತ್ತೇನೆ. ದಯಮಾಡಿ ಸಹಕರಿಸಬೇಕು.

ಶ್ರೀ ಅರಗ ಜ್ಞಾನೇಂದ್ರ: ತಮ್ಮ ಸರ್ಕಾರ ಮತ್ತು ಕೆಲವು ಸಚಿವರುಗಳ ಬಗ್ಗೆ ರೈತರಲ್ಲಿರುವ ಅನಿಸಿಕೆಯ ಬಗ್ಗೆ ನಾನು ಹೋಗಿ ಕೇಳಿದೆ. ಒಂದೇ ದಿನ ಮೂವತ್ತು ಸಾವಿರ ಚೀಲ ಶೆಂಗಾವನ್ನು ರೈತರು ತಂದಿದ್ದಾರೆ. ವ್ಯಾಪಾರಸ್ಥರು ರೈತರ ತಲೆಬೋಳಿಸಿ ಕಳುಹಿಸೋಣವೆಂದು ಯೋಚನೆ ಮಾಡಿದ್ದಾರೆ, ಅದು ರೈತರಿಗೆ ಗೊತ್ತಾಗಿ ಅದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ಆ ಸಮಯದಲ್ಲಿ ತಮ್ಮ ಸಚಿವರು ಅಲ್ಲಿಗೆ ಹೋದಾಗ ನಾವು ಇದರ ಬಗ್ಗೆ ಸರ್ಕಾರದ ಜೊತೆ ಸಮಾಲೋಚನೆ ಮಾಡುತ್ತೇವೆ, ತಮ್ಮಗಳ ರಕ್ಷಣೆಗೆ ನಾವಿದ್ದೇವೆ ಎಂಬ ಒಂದು ಸಾಂತ್ವನದ ಮಾತುಗಳನ್ನಾಡಲಿಲ್ಲವೆಂದರೆ ನಾವೇನು ಹೇಳಬೇಕು? ಕೇಂದ್ರ ಸರ್ಕಾರ ಕ್ವಿಂಟಾಲ್‌ಗೆ 1040 ರೂ. ಬೆಲೆಯನ್ನು ಘೋಷಣೆ ಮಾಡಿದೆ. ತಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಹಣವನ್ನು ತರುತ್ತೇವೆ ಎಂದು ರೈತರ ಮಾಲನ್ನು ಇಟ್ಟುಕೊಂಡಿದ್ದರೆ ಸಾಕಾಗುತ್ತಿತ್ತು, ಮುಂದಿನ ದಿವಸಗಳಲ್ಲಿ ಬೆಲೆ ಹೆಚ್ಚಾಗುತ್ತಿತ್ತು. ಈ ಘಟನೆಯಾಗುತ್ತಿರಲಿಲ್ಲ. ಆದರೆ ತಾವುಗಳು ಆ ಕೆಲಸವನ್ನು ಮಾಡಲಿಲ್ಲ. ಅಲ್ಲಿಗೆ ಹೋದಂಥ ಸಚಿವರುಗಳು ಹೇಗೆ ವಾಪಸ್ ಬರುವುದು ಎಂಬ ಬಗ್ಗೆ ಯೋಚನೆ ಮಾಡಿದರು. ಪೋಲೀಸ್‌ನವರು ಸಚಿವರಿಗೆ ಒಳಗೆ ಹೋಗಲು ಆಗುವುದಿಲ್ಲವೆಂದು ಹೇಳಿದರೆಂದು ವಾಪಸ್ ಬರುತ್ತಾರೆ. ಏಕೆ ವಾಪಸ್ ಬರಬೇಕು? ನಾವೇನು ಜನರ ಪ್ರತಿನಿಧಿಗಳಲ್ಲವೇ? ನಮ್ಮ ನಮ್ಮ ಕ್ಷೇತ್ರದಲ್ಲಿ ಸಾವಿರಾರು ಜನರು ಸೇರಿರುವ ಗುಂಪಿನಲ್ಲಿ ನಾವು ಹೋಗಲು ಶಕ್ತಿ ಇಲ್ಲವೆನ್ನುವುದಾರೆ ನಾವು ಸಾರ್ವಜನಿಕ ಜೀವನದಲ್ಲಿ ಇರಬಾರದು. ನಮಗೆ ಮತವನ್ನು ಕೊಟ್ಟಂಥ ಜನರಿಗೆ ಮನವೊಲಿಸುವ ಶಕ್ತಿ ನಮಗೆ ಇಲ್ಲವೆನ್ನುವುದಾದರೆ, ಅದಕ್ಕೂ ನಮಗೆ ರಕ್ಷಣೆ ಬೇಕು ಎನ್ನುವುದಾದರೆ ಇದರ ಅರ್ಥವೇನು? ತಾವು ಸರ್ಕಾರದ ಜೊತೆ ಸಮಾಲೋಚನೆ ಮಾಡಲಿಲ್ಲ. ಇದು ತಮ್ಮ ಸರ್ಕಾರಕ್ಕೆ ಗೌರವ ಹೋಗತಕ್ಕ ಸ್ಥಿತಿಯೆಂದು ನಿಮ್ಮ ಸಚಿವರುಗಳು ಯೋಚನೆ ಮಾಡದಂಥ ಪರಿಸ್ಥಿತಿ ನಿರ್ಮಾಣವಾಗಿದೆಯೆನ್ನುವುದಾದರೆ ನೀವೇನು ಮಾಡುತ್ತೀರಿ? ತಮ್ಮ ಹೆಸರಿನಲ್ಲಿ ಜಯಕಾರ ಹಾಕಿಸಿಕೊಳ್ಳುವುದು, ಜನರ ಸಹಾನುಭೂತಿಯನ್ನು ಗಳಿಸಲು ಅಳುವುದು, ಮತ್ತೊಂದು ಸಲ ಚುನಾವಣೆಗೆ ಹೋಗುವುದು, ಇದು ತಮ್ಮ ರಾಜಕಾರಣವೆ? ಆದ್ದರಿಂದ ಇವತ್ತು ಜನರು ರಾಜಕಾರಣಿಗಳ ಬಗ್ಗೆ ಬಹಳ ತುಚ್ಛವಾಗಿ ಆಡುತ್ತಿದ್ದಾರೆ. ಸಮಸ್ಯೆಯನ್ನು ಪರಿಹಾರ ಮಾಡುವ ಶಕ್ತಿ ತಮಗಿಲ್ಲ. ಐದು ಜನರನ್ನು ಗುಂಡುಹಾರಿಸಿ ಕೊಂದಿದ್ದೀರಿ, ಐವತ್ತು ಜನರಿಗೆ ಗಾಯಗೊಳಿಸಿದ್ದೀರಿ,

ಗಾಯಗೊಂಡು ಆಸ್ಪತ್ರೆಯಲ್ಲಿ ಮಲಗಿರುವವರಿಗೆ, ಕೈಕಾಲು ಕಳೆದುಕೊಂಡು ಶಾಶ್ವತವಾಗಿ ಕುಳಿತು ತಿನ್ನಬೇಕಾದ ಪರಿಸ್ಥಿತಿ ಒದಗಿರುವವರಿಗೆ ಅಂಗವಿಕಲರಿಗೆ ನೀಡುವ 75 ರೂಪಾಯಿಗಳ ಮಾಶಾಸನವನ್ನು ಕೊಡಿ. ಇಷ್ಟು ವರ್ಷ ಅಲ್ಲಿ ಬರಪೀಡಿತವಾಗಿತ್ತು, ಈ ವರ್ಷ ಬೆಳೆ ಬಂದು ಶೆಂಗಾವನ್ನು ತಂದರೆ ಕೈಕಾಲುಗಳನ್ನು ಕಳೆದುಕೊಂಡರು, ಜೀವನಪೂರ್ತಿ ಕುಳಿತು ಊಟ ಮಾಡಬೇಕಾದಂಥ ಸ್ಥಿತಿಯಾಯಿತು. ಅವರುಗಳಿಗೆ ಅಂಗವಿಕಲರ ಸರ್ಟಿಫಿಕೇಟ್ ಕೊಟ್ಟು ಹಾರವನ್ನು ಹಾಕಿಸಿಕೊಂಡು ಬನ್ನಿ. ಆ ಜನರ ಹತ್ತಿರ ಜೈಕಾರವನ್ನು ಹಾಕಿಸಿಕೊಳ್ಳಿ. ಇದು ತಮಗೆ ಶೋಭೆ ತರುತ್ತದೆಂದರೆ ಅದನ್ನೂ ಮಾಡಿ. ಅಂಗವಿಕಲರಿಗೆ, ಗಾಯಗೊಂಡವರಿಗೆ ಪರಿಹಾರವನ್ನು ಕೊಡುವುದಾಗಿ ಹೇಳಿದ್ದೀರಿ, ಆದರೆ ಎಲ್ಲಿ ಕೊಟ್ಟಿದ್ದೀರಿ? ತತ್‌ಕ್ಷಣ ಪರಿಹಾರ ಕೊಡಬೇಕಾಗಿತ್ತಲ್ಲಾ. ಇದುವರೆಗೆ ಪರಿಹಾರವನ್ನು ಕೊಡಲಿಲ್ಲವೆಂದರೆ ಇದು ಅತ್ಯಂತ ನಾಚಿಕೆಗೇಡಿನ ವಿಚಾರವಾಗುತ್ತದೆ. ರೈತರ ಸರ್ಕಾರ, ಮಣ್ಣಿನ ಮಕ್ಕಳ ಸರ್ಕಾರವೆಂಬ ಘೋಷಣೆಯ ಆಧಾರದ ಮೇಲೆಯೇ ನಾಲ್ಕು ವರ್ಷ ಅಧಿಕಾರದಲ್ಲಿ ಕಳೆದಿರಿ. ತಾವು ಅಲ್ಲಿ ಕುಳಿತು ಮಾತನಾಡಬೇಕಿತ್ತು. ಶೆಂಗಾವನ್ನು ಎಲ್ಲೆಲ್ಲಿ ಇಟ್ಟಿದ್ದೀರೆಂದು ನಾನು ಶಿರಾಕ್ಕೆ ಹೋಗಿದ್ದಾಗ ರೈತರನ್ನು ಕೇಳಿದೆ. ಅದಕ್ಕೆ ಅವರು ಯಾರ್ಯಾರದೋ ಕಾಂಪೌಂಡ್‌ನಲ್ಲಿಟ್ಟಿದ್ದೇವೆಂದು ಹೇಳಿದರು. ಅಲ್ಲಿ ಉಗ್ರಾಣವೇಕಿಲ್ಲ? ಇದರ ಬಗ್ಗೆ ಮಾರುಕಟ್ಟೆ ಸಚಿವರು ಕುಳಿತು ಯೋಚನೆಯೇಕೆ ಮಾಡಲಿಲ್ಲ? ಆ ಏಪಿಎಂಸಿ ಕಾರ್ಯದರ್ಶಿ, ಅಧ್ಯಕ್ಷರುಗಳು ಏಕಿದ್ದಾರೆ? ತಮಗೆ ರೈತರ ಬಗ್ಗೆ ಕಳಕಳಿ ನಿಜವಾಗಿಯೂ ಇದ್ದರೆ ಇವರುಗಳ ಮೇಲೆ ಮೊದಲು ಕ್ರಿಮಿನಲ್ ಕೇಸನ್ನು ಹಾಕಬೇಕು. ಮಾರುಕಟ್ಟೆ ಸಮಿತಿಗಳು ಏನು ಮಾಡುತ್ತಿವೆ? ಇದು ಯಾರ ಸಲುವಾಗಿದೆ? ಕೇವಲ ಟಿ.ಏ, ಡಿ.ಏ., ಸಂಬಳ, ಮಾಮೂಲಿ ತೆಗೆದುಕೊಳ್ಳುವುದೇ ಇವರ ಕೆಲಸವೆ? ಏಪಿಎಂಸಿ ಇರುವುದೇ ರೈತರ ಸಲುವಾಗಿ, ಆದರೆ ಇದು ಮಾರುಕಟ್ಟೆಯನ್ನು ಸರಿಯಾಗಿ ವೀಕ್ಷಣೆ ಮಾಡುವುದಿಲ್ಲವೆಂದರೆ ಹೇಗೆ? ಇಂಥಹದ್ದೇ ಪ್ರಸಂಗದಲ್ಲಿ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ನೋಡಿ. ಅಲ್ಲಿ ಅಭಾವ ಬಂದಾಗ, ಅಲ್ಲಿ ಬರ ಬಂದು ಸಾಕಷ್ಟು ಜನರು ವಿಷವನ್ನು ತೆಗೆದುಕೊಂಡು ಸತ್ತಾಗ ಸಂಬಂಧಪಟ್ಟಂಥ ಸಂಘ ಸಂಸ್ಥೆಗಳನ್ನು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೆಲವು ಕಂಪನಿಗಳನ್ನು ಕರೆದು ನೀವು ಇಷ್ಟಿಷ್ಟು ಹಣಕ್ಕೆ ತೆಗೆದುಕೊಳ್ಳಬೇಕು, ಹೊಗೇಸೊಪ್ಪಿನ ಖರೀದಿ ಹೇಗೆ ನಡೆಯಬೇಕು, ಶೆಂಗಾ ಖರೀದಿಯನ್ನು ಹೇಗೆ ಮಾಡಬೇಕು, ಭತ್ತದ ಬೆಳೆಗೆ ಯಾವ ಬೆಲೆಯನ್ನು ಕೊಡಬೇಕು, ಕೊಂಡುಕೊಳ್ಳಿ, ಸರ್ಕಾರವಾದ ನಾವಿದ್ದೇವೆಂದು ಹೇಳಿದರು. ಸ್ವತಃ ಮುಖ್ಯಮಂತ್ರಿಯವರು ಆ ಪ್ರದೇಶಕ್ಕೆ ಭೇಟಿ ನೀಡುತ್ತಾರೆ. ಇಲ್ಲಿ ಏನು ಮಾಡಿದರು? ಯಾರೂ ಕೂಡ ಹೋಗಲಿಲ್ಲ. ಈರುಳ್ಳಿ ಬೆಲೆ ಮೂರು ರೂಪಾಯಿಗಳಾಗಿದೆಯೆಂದು ಕಣ್ಣೀರು ಹಾಕುತ್ತಾರೆ. ಆದರೆ, ಅಲ್ಲಿ ರೂ. 50, 60ಗಳಾಗಿದೆಯೆಂದು ರಾಜ್ಯದ ರಾಜಕಾರಣ ನಡೆಯುತ್ತಿದೆ. ನಾನು ಹೇಳುವುದೇನೆಂದರೆ, ರೈತರು ಬೆಳೆದಂಥ ಬೆಳೆಗೆ ಜಾಸ್ತಿ ಬೆಲೆ ಸಿಕ್ಕಿದರೆ ವೈಯಕ್ತಿಕವಾಗಿ

ನಾನು ಸಂತೋಷ ಪಡುತ್ತೇನೆ. ಏನಾದರಾಗಲಿ, ಈರುಳ್ಳಿ ಬೆಳೆದಿರುವ ರೈತ ಒಂದು ಸಾರಿ ಸಂತೋಷ ಪಡುವುದಾದರೆ, ಆತನ ಹೆಂಡತಿಗೆ ಒಂದು ಒಳ್ಳೆಯ ಸೀರೆ ತಂದು ಉಡಿಸುವುದಾದರೆ, ಆತ ಒಳ್ಳೆಯ ಊಟ ಮಾಡುವುದಾದರೆ, ಆತನ ಮನೆಗೊಂದು ಟಿ.ವಿ. ಬರುವುದಾದರೆ ನಾವು -ನೀವುಗಳೆಲ್ಲರೂ ಸೇರಿಕೊಂಡು ಸಂತೋಷ ಪಡೋಣ, ದುಃಖ ಪಡುವ ಅವಶ್ಯಕತೆಯಿಲ್ಲ. ಎಲ್ಲಿ ಬೆಲೆ ಕುಸಿದು ಹೋಗುತ್ತದೋ, ನಾವೇನೂ ಸೃಷ್ಟಿಸುವುದಕ್ಕಾಗುವುದಿಲ್ಲ. ಆದರೆ, ಬೆಲೆ ಎಲ್ಲಿ ಅತ್ಯಂತ ಅಧಿಕವಿರುತ್ತದೋ ಅಂತಹ ಕಡೆಗೆ ಸಾಗಣೆ ಮಾಡತಕ್ಕಂಥ ಪ್ರಯತ್ನ ಮಾಡಬೇಕಾಗುತ್ತದೆ. ಇದರ ಬಗ್ಗೆ ಒಬ್ಬ ಮಂತ್ರಿಯಾದರೂ ಕುಳಿತುಕೊಂಡು ಯೋಚಿಸಿದ್ದಾರೆಯೇ? ಇವೊತ್ತು ಗುಂಡು ಹೊಡೆದು ಸಾಯಿಸುತ್ತೀರಿ. 500-600 ಜನರನ್ನು ಬೆನ್ನಟ್ಟಿ ಹಿಡಿಯುತ್ತಿದ್ದಾರೆಂದು ಅವರು ಹೇಳಿದರು. ಐದು ಜನರನ್ನು ಸಾಯಿಸಿ ಸ್ವರ್ಗಕ್ಕೆ ಕಳುಹಿಸಿ, 500 ಜನರನ್ನು ಜೈಲಿಗೆ ಕಳುಹಿಸಿ ಅವರ ಮೇಲೆ ನೀವು ರಾಜಕಾರಣ ಮಾಡಿ! ಇದು ನಿಮಗೆ ಶೋಭೆ ತರುತ್ತದೆಯೇ? ಈ ಸ್ಥಿತಿಯಲ್ಲಿ ನೀವು ಆಡಳಿತ ನಡೆಸುವುದಕ್ಕಿಂತ ನಿಮಗೆ ಏನಾದರೂ ನೈತಿಕ ಮೌಲ್ಯಗಳಿದ್ದರೆ, ಏನಾದರೂ ಕಳಕಳಿ ಇದ್ದಿದ್ದರೆ ತತ್‌ಕ್ಷಣವೇ ನೀವು ರಾಜೀನಾಮೆ ಕೊಟ್ಟು ಕೆಳಗಿಳಿಯುತ್ತಿದ್ದಿರಿ. ಇವೊತ್ತು ಜನರು ತಾಳ್ಮೆ ಕಳೆದುಕೊಂಡರೆ ಬಹುಶಃ ವಿಧಾನಸೌಧವನ್ನು ಕೂಡ ಸುತ್ತುವರಿದು ಎಲ್ಲರನ್ನೂ ಅಡ್ಡಾಡಿಸಿ ಹೊಡೆಯುವ ಪರಿಸ್ಥಿತಿ ನಿರ್ಮಾಣವಾಗಬಹುದು. ಇದೇ ಪರಿಸ್ಥಿತಿ ನಿರ್ಮಾಣವಾಗುವುದಾದರೆ, ಹಿಂದೊಮ್ಮೆ ಟೊಮ್ಯಾಟೊ, ಆಲೂಗಡ್ಡೆ ಬೆಳೆದ ರೈತರುಗಳ ಬಗ್ಗೆ ಇದೇ ರೀತಿ ಕಳಕಳಿ ವ್ಯಕ್ತಪಡಿಸಿದಾಗ ಏನಾಯಿತೆಂದು ನೋಡಿದ್ದೇವೆ. ಇವೊತ್ತು ರೈತರುಗಳು ಬೆಳೆದಂಥ ಬೆಳೆಗಳ ಬಗ್ಗೆ, ರೈತರ ಬಗ್ಗೆ ಸರಿಯಾದ ರೀತಿಯಲ್ಲಿ ಆಲೋಚಿಸುತ್ತಿಲ್ಲ. ಅವರು ಬೆಳೆದಂಥ ಬೆಳೆಗೆ ಐವತ್ತು ಪೈಸೆ, ಒಂದು ರೂಪಾಯಿಯಷ್ಟು ಜಾಸ್ತಿ ಕೊಡಿಸುವ ವ್ಯವಸ್ಥೆ ಮಾಡದೆ ಹೋದರೆ ರಾಜ್ಯದಲ್ಲಿ ಸರ್ಕಾರ ಬದುಕಿದೆಯೇ? ಸತ್ತಿದೆಯೇ ಎಂಬುದು ಗೊತ್ತಿಲ್ಲ. ಇನ್ನೊಂದು ವಿಚಾರವೇನೆಂದರೆ, ಮುಖ್ಯಮಂತ್ರಿಯಾಗಿರುವ ಪಟೇಲ್‌ರವರ ಬಳಿ ವಿದ್ಯುಚ್ಛಕ್ತಿ ಖಾತೆ ಇದ್ದು, ಕಳೆದ ಮೂರು ವರ್ಷಗಳಿಂದಲೂ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಅದರ ವಿತರಣೆ ಬಗ್ಗೆ ಬಹಳ ಭಾಷಣಗಳನ್ನು ಕೇಳಿದ್ದೇವೆ. ಬೆಳಿಗ್ಗೆಯಿಂದ ಸಂಜೆಯವರೆವಿಗೂ ಈ ಕುರಿತು ಎಷ್ಟು ಬೇಕಾದರೂ ಟೀಕಿಸಿ, ಒಂದು ಗಂಟೆಯಲ್ಲಿ ಅತಿ ರಂಜನೀಯವಾದ ಮಾತುಗಳನ್ನು ಹೇಳಿ ಮುಗಿಸಿಬಿಡುತ್ತಾರೆ. ಇದೇ ತರಹ ಮಾತುಗಳನ್ನು ಕಳೆದ ಮೂರು ವರ್ಷಗಳಿಂದಲೂ ಆಡುತ್ತಲೇ ಬಂದಿದ್ದಾರೆ. ಆದರೆ, ಏನು ಮಾಡಿದ್ದಾರೆ? ನಮ್ಮ ರಾಜ್ಯದಲ್ಲಿ ಒಟ್ಟು ಮೂರೂವರೆ ಸಾವಿರ ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದರೆ, ಬೇಡಿಕೆ ಹನ್ನೆರಡು ಸಾವಿರ ಮೆಗಾವ್ಯಾಟ್‌ಗಳಷ್ಟಿದೆ. ಇದನ್ನು ಸರಿದೂಗಿಸುವುದು ಹೇಗೆ? ನನ್ನ ಕೈಯಲ್ಲಿ ಮಂತ್ರದಂಡವಿದೆಯೇ ಎಂದು ಕೇಳಿದ್ದಾರೆ. ನೀವು ದೇವತಾ ಪುರುಷರೂ ಅಲ್ಲ. ಆದರೂ ಕೂಡ ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಏನು ನಡೆದಿದೆ? ಇವೊತ್ತು ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡುವುದರ ಬಗ್ಗೆ

ಏನು ಮಾಡಿದ್ದೀರಿ? ಕದ್ರಾ ಯೋಜನೆಯಿಂದ 50 ಮೆಗಾವ್ಯಾಟ್, ಕೊಡಸಳ್ಳಿ ಯೋಜನೆಯಿಂದ 40 ಮೆಗಾವ್ಯಾಟ್ ಮತ್ತು ಭದ್ರಾ ಯೋಜನೆಯಲ್ಲಿ 6 ಮೆಗಾವ್ಯಾಟ್, ಒಟ್ಟಾರೆ ನಿಮ್ಮ ಆಡಳಿತಾವಧಿಯಲ್ಲಿ 96 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಯೆಂದು ನಿಮ್ಮ ಉತ್ತರದ ಅಂಕಿ-ಅಂಶಗಳು ತೋರಿಸುತ್ತವೆ. ಇವೊತ್ತು ಇಡೀ ರಾಜ್ಯವನ್ನು ಕತ್ತಲೆಯಲ್ಲಿಟ್ಟಿದ್ದೀರಿ, ಕರೆಂಟ್ ಅದೃಷ್ಟವಿದ್ದರೆ ಬರುತ್ತದೆ, ಇಲ್ಲದಿದ್ದರೆ ಇಲ್ಲ. ನಾನು ಮೊನ್ನೆ ದಿವಸ ವಿದ್ಯುತ್ ಖಾತೆ ಸಚಿವರ ಜೊತೆ ಈ ಬಗ್ಗೆ ಮಾತನಾಡುತ್ತಾ ಏನಾಗಿದೆ ನಿಮಗೆ ಎಂದು ಕೇಳಿದಾಗ, ಅವರು ಇಪ್ಪತ್ತನಾಲ್ಕು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಪತ್ರಿಕಾ ಹೇಳಿಕೆ ಕೊಡುತ್ತಾರೆ. ಆದರೆ, ನಮ್ಮ ಊರಿನಲ್ಲಿ ಜನರು ನನ್ನ ಬೆನ್ನು ಹತ್ತಿದರು. ಏಕೆಂದರೆ, ಇಡೀ ರಾಜ್ಯಕ್ಕೆ ವಿದ್ಯುತ್ ಕೊಟ್ಟಿದ್ದಾರೆ, ತೀರ್ಥಹಳ್ಳಿಗೆ ಮಾತ್ರ ವಿದ್ಯುತ್ ಸೌಲಭ್ಯ ಬರಲಿಲ್ಲವಲ್ಲ, ಮಂತ್ರಿಗಳು ಆ ರೀತಿ ಸುಳ್ಳು ಹೇಳುವುದಿಲ್ಲ, ಇದು ಶಾಸಕರಾದ ನಿಮ್ಮದೇ ಕರಾಮತ್ತು ಇದೆಯೆಂದು ಹೇಳುತ್ತಾರೆ. ಇದರ ಬಗ್ಗೆ ನಾನು ಮಂತ್ರಿಗಳನ್ನು ಕೇಳಿದಾಗ ಅವರು 'ಮೊದಲು ನಾನು ಹೇಳಿದ್ದು ತಪ್ಪಾಗಿದೆ, ನಾನು ಹೇಳಿಕೆ ನೀಡಿದ ತಕ್ಷಣ ಮಳೆ ಕಡಿಮೆಯಾಯಿತು, ಲೋಡ್ ಜಾಸ್ತಿಯಾಗುತ್ತಿರುವುದರಿಂದ ವಿದ್ಯುತ್ ಸೌಲಭ್ಯವನ್ನು ನಾವು ಕೊಡುವುದಕ್ಕಾಗುವುದಿಲ್ಲ' ಎಂದರು. ಏನಿದು ಅವಸ್ಥೆ? ಏತಕ್ಕಾಗಿ ನೀವು ಆ ರೀತಿ ಹೇಳಿಕೆ ಕೊಡುತ್ತೀರಿ? ಎಷ್ಟು ಗಂಟೆಗಳ ಕಾಲ ತಾವು ವಿದ್ಯುತ್ ನಿಲುಗಡೆ ಮಾಡುತ್ತೀರಿ? ಯಾವ್ಯಾವ ಗ್ರಿಡ್‌ಗಳಿಂದ ಎಷ್ಟೆಷ್ಟು ಪ್ರಮಾಣದಲ್ಲಿ ವಿದ್ಯುತ್ ತೆಗೆದುಕೊಳ್ಳಬೇಕೆಂದು ಚಿಂತನೆ ಮಾಡಿದ್ದೀರಿ? ಇದನ್ನು ಮಾಡಲಿಲ್ಲ. ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ವಿಶೇಷವಾದ ನಿಗಾ ವಹಿಸಲಿಲ್ಲ. ಇರುವ ವಿದ್ಯುಚ್ಛಕ್ತಿಯು ಕಳ್ಳತನವಾಗುತ್ತಿದೆ, ಸೋರಿಹೋಗುತ್ತಿದೆ, ಇದರ ಬಗ್ಗೆಯೂ ಗಮನ ಕೊಡಲಿಲ್ಲ. ಬೆಲೆ ಕಡಿಮೆ ಮಾಡಿದ್ದೇವೆಂದು ಹೇಳಿದಿರಿ, ಅದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ ತೆಗೆದುಕೊಂಡಿರಲ್ಲ, ಮೊನ್ನೆ ದಿವಸ ಅಧಿಕಾರಿಗಳು ನಮಗೆ ಎಂಡಾರ್ಸ್‌ಮೆಂಟ್ ಕೊಡುತ್ತಾರೆ, ಇನ್ನೂ ಕೂಡ ನಮ್ಮ ಕಮ್ಯುನಿಕೇಟ್ ಆಗಲಿಲ್ಲ. ಅಲ್ಲದೆ, ಐ.ಪಿ. ಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸುವುದಿಲ್ಲವೆಂದು ನೀವು ಹೇಳಿಕೆ ಕೊಟ್ಟಿದ್ದೀರಿ, ಇದಕ್ಕಾಗಿ ಒಂಭೈನೂರು ಚಿಲ್ಲರೆ ರೂಪಾಯಿಗಳಷ್ಟು ಹಣವನ್ನು ವಿದ್ಯುತ್ ಮೀಟರ್ ಅಳವಡಿಸುವುದಕ್ಕಾಗಿ ಸಂಗ್ರಹ ಮಾಡುತ್ತಿದ್ದೀರಿ. ಹಾಗಾದರೆ, ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳುವವರಿಗೆ ನೀವೇನು: ಹೇಳುತ್ತೀರಿ? ಇಲಾಖೆ ಏನು ಕೆಲಸ ಮಾಡುತ್ತಿದೆ? ಇನ್ನೂ ಕೂಡ ಈ ಕುರಿತು ಆದೇಶವನ್ನು ಇಶ್ಯೂ ಮಾಡದಿರುವುದಕ್ಕೆ ನಿಮಗೇನು ಕಷ್ಟ ಬಂದಿದೆ? ನಿಮ್ಮ ಬಳಿ ಅಧಿಕಾರಿಗಳಿಲ್ಲವೇ? ಸಿಬ್ಬಂದಿ ವರ್ಗದವರಿಲ್ಲವೇ? ಯಾವ ಕಾರಣಕ್ಕಾಗಿ ಈ ನಿಧಾನ ಗತಿ? ಅನಾವಶ್ಯಕವಾಗಿ ರೈತರಿಗೇಕೆ ಕಿರುಕುಳ ನೀಡುತ್ತಿದ್ದೀರಿ? ವೈರ್ ಕೊಡುವಂಥ ಕಂಪನಿಯವರು ಕೂಡ ವೈರ್ ಕೊಡುವುದಿಲ್ಲ. ರೈತರು ತಮ್ಮ ಐ.ಪಿ. ಸೆಟ್ಟುಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದಾರೆಂದು ಕಳೆದ ಸಾರಿಯ ಅಧಿವೇಶನದಲ್ಲಿ ಹೇಳಿದೆ.

ಏಕೆಂದರೆ, ಇವರು (ಸರ್ಕಾರ) ಸಕ್ರಮವಾಗಿ ಕೊಡುವುದಿಲ್ಲ. ರೈತ ಹೇಗಾದರೂ ಬೆಳೆ ಬೆಳೆಯಬೇಕಲ್ಲಾ, ಬದುಕಬೇಕಲ್ಲಾ, ಹಾಗಾಗಿ ಎಲ್ಲಾ ರೈತರು ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದಾರೆ. ಆದರೆ, ನನ್ನ ಕ್ಷೇತ್ರವಾದ ತೀರ್ಥಹಳ್ಳಿಯಲ್ಲಿ ಮಾತ್ರ ಐ.ಪಿ.ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ಅಕ್ರಮವಾಗಿ ತೆಗೆದುಕೊಂಡಿರುವ ಒಂದೇ ಒಂದು ಉದಾಹರಣೆ ಇಲ್ಲ. ಪರಿಸ್ಥಿತಿ ಏನಾಗಿದೆಯೆಂದರೆ, 1992ನೇ ಇಸವಿಯಿಂದ ಕಮಿಟ್‌ಮೆಂಟ್ ಆಗಿರುವ ಐ.ಆರ್.ಡಿ.ಪಿ. ಲೋನ್ ಹಾಗೂ ಬೇರೆ ಬೇರೆ ರೀತಿಯ ಸಾಲದ ಯೋಜನೆಗಳಲ್ಲಿ ಪಂಪ್‌ಸೆಟ್ ಮತ್ತು ಮೋಟಾರ್‌ಗಳನ್ನು ತೆಗೆದುಕೊಂಡಿದ್ದು, ಇವೊತ್ತು ಅವುಗಳೆಲ್ಲಾ ತುಕ್ಕು ಹಿಡಿದು ಹೋಗುತ್ತಿದ್ದರೂ ಇನ್ನೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಮನೆಯಲ್ಲಿ ಮೋಟಾರ್ ಇಟ್ಟುಕೊಂಡು ರೈತ ಬ್ಯಾಂಕಿಗೆ ಸಾಲದ ಬಡ್ಡಿ ಕಟ್ಟುತ್ತಿದ್ದಾನೆ, ಬಡ್ಡಿ ವಸೂಲು ಮಾಡುತ್ತಿದ್ದಾರೆ. ಇದು ನಿಮಗೆ ಶೋಭೆ ತರುತ್ತದೆಯೇ? ಇದು ನಿಮ್ಮ ಆಡಳಿತ ವೈಖರಿ! ಮಲೆನಾಡಿನ ಭಾಗದ ತೀರ್ಥಹಳ್ಳಿಯ ಜನರಾದ ನಾವು ಕಾನೂನಿಗೆ ತಲೆಬಾಗತಕ್ಕಂಥವರು. ಒಂದು ಐ.ಪಿ.ಸೆಟ್ಟಿಗೂ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳಲಿಲ್ಲ. ಇನ್ನು 'ಭಾಗ್ಯಜ್ಯೋತಿ' ಯೋಜನೆ ವಿಚಾರವಾಗಿ ಹೇಳುವುದಾದರೆ, ಸದರಿ ಯೋಜನೆಯಡಿ ಒಂದೇ ವಿದ್ಯುತ್ ದೀಪ ಉರಿಸಬೇಕೆಂದಿದೆ. ಆದರೆ, ಎರಡು ವಿದ್ಯುತ್ ದೀಪಗಳನ್ನು ಯಾರಾದರೂ ಆಕಸ್ಮಿಕವಾಗಿ ಹಾಕಿಕೊಂಡರೆ ನಿಮ್ಮ ಇಲಾಖೆಯವರು ಡಿಸ್-ಕನೆಕ್ಟ್ ಮಾಡುತ್ತಾರೆ. ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ದೀಪಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವುದಿಲ್ಲವೆಂದು ತಾವೇ ಹೇಳಿದ್ದರೂ ನನ್ನ ಕ್ಷೇತ್ರದಲ್ಲಿ ಹೆಚ್ಚು-ಕಡಿಮೆ ಸುಮಾರು 500 ವಿದ್ಯುತ್ ದೀಪಗಳಿಗೆ ವಿದ್ಯುತ್ ಅನ್ನು ಕಡಿತಗೊಳಿಸಲಾಗಿದೆ. ಬಡವರ ಬಗ್ಗೆ ನಿಮಗೇನಾದರೂ ಕಳಕಳಿ ಇದೆಯೇ? ನಿಮ್ಮ ಸರ್ಕಾರದ ಆಡಳಿತಾವಧಿಯ ಕಾಲದಲ್ಲಿ ನನ್ನ ಕ್ಷೇತ್ರದಲ್ಲಿ ಈ ರೀತಿ ಆಗಿದೆಯೆಲ್ಲಾ, ಇಡೀ ರಾಜ್ಯದಾದ್ಯಂತ ಈ ರೀತಿಯಾದರೆ ಏನು ಮಾಡುತ್ತೀರಿ? ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸುವಂತ ಕರ್ನಾಟಕ ಪವರ್ ಕಾರ್ಪೊರೇಷನ್ ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವಂಥ ತಜ್ಞ ಇಂಜಿನಿಯರುಗಳನ್ನೊಳಗೊಂಡಿರುವ ಭಾರಿ ದೊಡ್ಡ ಸಂಸ್ಥೆಯಾಗಿದೆ. ಪುಣ್ಯವಶಾತ್ ಅಂತಹ ಒಂದು ದೊಡ್ಡ ಸಂಸ್ಥೆಯನ್ನು ಇವೊತ್ತು ರಾಜ್ಯದಲ್ಲಿ ನಾವು ಕಟ್ಟಿ ಬೆಳೆಸಿದ್ದೇವೆ. ಇದು ಇಡೀ ದೇಶದಲ್ಲಿಯೇ ಹೆಸರು ಗಳಿಸಿರುವ ಅತ್ಯುನ್ನತ ಸಂಸ್ಥೆಯಾಗಿದ್ದು, ಬಹಳ ಸುಲಭವಾದ ರೀತಿಯಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ವಿದ್ಯುತ್ ಅನ್ನು ಉತ್ಪಾದಿಸುತ್ತಿದ್ದು, ಸದರಿ ಸಂಸ್ಥೆಗೆ ಕೊಟ್ಟಿರುವಂಥ ಕೆಲಸವನ್ನು ಕೂಡ ಕಸಿದುಕೊಂಡು ಖಾಸಗಿಯವರಿಗೆ ಕೊಡುತ್ತಿದ್ದೀರಿ. ಉದಾಹರಣೆಗೆ, ಆಲಮಟ್ಟಿ ಅಣೆಕಟ್ಟಿನಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಡಲಾಗಿದೆ. ಆಲಮಟ್ಟಿಯಲ್ಲಿ ಅಣೆಕಟ್ಟು ಕಟ್ಟುತ್ತಿದ್ದು, ವಿದ್ಯುತ್ ಉತ್ಪಾದಿಸುವ ಒಂದು ಜನರೇಟಿಂಗ್ ಸ್ಟೇಷನ್ ಕಟ್ಟಿದರಾಯಿತು, ಪವರ್ ಸ್ಟೇಷನ್ ಕಟ್ಟಿದರಾಯಿತು, ಪ್ರೊಡಕ್ಷನ್ ಮಾಡಿದರಾಯಿತು, ಅಕ್ವಿಜಿಷನ್ ಇಲ್ಲ, ಬೇರೆ ಹಣಕಾಸಿನ ಖರ್ಚೂ ಇಲ್ಲ.

ಅಂಥಾದ್ದನ್ನು ಕೆ.ಪಿ.ಸಿ.ಯವರಿಗೆ ಕೊಡುವ ಬದಲು ಅವರಿಂದ ಕಸಿದು ಖಾಸಗಿಯವರಾದ ಚಾಮುಂಡಿ ಪವರ್ ಕಾರ್ಪೊರೇಷನ್‌ರವರಿಗೆ ಕೊಟ್ಟಿರಿ. ಇದರಲ್ಲಿ ನಿಮ್ಮ ರಾಜಕಾರಣವೇನಿದೆ? ಏತಕ್ಕಾಗಿ ಅವರಿಗೆ ಕೊಟ್ಟಿರಿ? ಇಂತಹುದೇ ಹಲವಾರು ನಿದರ್ಶನಗಳಿವೆ. ಇವೊತ್ತು ಸರ್ಕಾರದ ಅಧೀನದಲ್ಲಿರುವ ನಮ್ಮ ಇಲಾಖೆಯವರು ಮಾಡುವಂಥ ಕೆಲಸವನ್ನು ಕಸಿದು ಖಾಸಗಿಯವರಿಗೆ ಕೊಡುತ್ತಿದ್ದೀರಿ. ಖಾಸಗಿಯವರಿಗೆ ವಿದ್ಯುತ್ ಉತ್ಪಾದಿಸುವ ಯಾವ ಕೆಲಸವನ್ನು ವಹಿಸಿಕೊಡಲಾಗಿದೆಯೋ ಅವರು ಇನ್ನೂ ಕೂಡ ತಯಾರಿಸುವುದಕ್ಕಾಗಲಿಲ್ಲ. ಈ ನಿಟ್ಟಿನಲ್ಲಿ ಅವರಿಗೆ ನೀಡಿರುವ ಪರವಾನಗಿಯನ್ನು ಸಹ ನೀವು ರದ್ದುಗೊಳಿಸಲಿಲ್ಲ, ಈ ಕುರಿತು ನಿಮಗೆ ಇಚ್ಛಾಶಕ್ತಿಯಿಲ್ಲ. ಇವೊತ್ತು ಕೆ.ಪಿ.ಸಿ.ಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವಂಥ ಇಂಜಿನಿಯರುಗಳು ನಿರುದ್ಯೋಗಿಗಳಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಅಲ್ಲಿನ ಸಿಬ್ಬಂದಿ ವರ್ಗದವರು ನಿರುದ್ಯೋಗಿಗಳಾಗುತ್ತಿದ್ದಾರೆ. ಆಲಮಟ್ಟಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನೀವು ಅಣೆಕಟ್ಟು ಕಟ್ಟಿದ್ದೀರಿ, ಪವರ್ ಸ್ಟೇಷನ್ ಕಟ್ಟಿದ್ದೀರಿ, ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ, ಏಕೆಂದರೆ ಎಲ್ಲರ ಗೋಳು ಒಂದೇ. ಪರಿಹಾರ, ಪುನರ್ವಸತಿ ಕಲ್ಪಿಸಕೊಡುತ್ತೇವೆಂದು ಹೇಳಿ ಯೋಜನೆಯಡಿ ಅಲ್ಲಿನ ಜನರನ್ನು ಮುಳುಗಿಸಿದ್ದೀರಿ. ಇವೊತ್ತಿನವರೆವಿಗೂ ಕೂಡ ಅವರಿಗೆ ಪರಿಹಾರ ಕೊಟ್ಟಿಲ್ಲ, ಪುನರ್ವಸತಿ ಕಲ್ಪಿಸಿಲ್ಲ. ಅವರ ಜಮೀನುಗಳೆಲ್ಲಾ, ಮನೆಗಳೆಲ್ಲಾ 50 ಅಡಿ, 100 ಅಡಿ ಆಳದಷ್ಟು ನೀರಿನಲ್ಲಿ ಮುಳುಗಿ ಹೋಗಿದೆ. ಮಾನ್ವಿ ಅಣೆಕಟ್ಟು ಮತ್ತು ಚಕ್ರಾ ಅಣೆಕಟ್ಟು ಯೋಜನೆಯಡಿ ಅವರ ಮನೆ, ಮಠಗಳೆಲ್ಲಾ ಮುಳುಗಿದೆ, ಅವರೆಲ್ಲಾ ಬೀದಿಪಾಲಾಗಿದ್ದಾರೆ. ಒಂದು ತಲೆಮಾರು ಹೋಯಿತು. ತಲತಲಾಂತರದಿಂದ ಅಲ್ಲಿ ಬದುಕುತ್ತಿದ್ದ ಜನರು, ಇಡೀ ರಾಜ್ಯಕ್ಕೆ ವಿದ್ಯುತ್ ಸೌಲಭ್ಯ ಕೊಡುವುದಕ್ಕೋಸ್ಕರ ಅವರು ವಾಸಿಸುತ್ತಿದ್ದ ಸ್ಥಳವನ್ನು ತ್ಯಾಗ ಮಾಡಿರುವವರಿಗೆ ನೀವು ಕೊಟ್ಟಿರುವ ಬಳುವಳಿ ಏನು? ಏನೂ ಇಲ್ಲ, ಅವರನ್ನೆಲ್ಲಾ ಭಿಕ್ಷುಕರನ್ನಾಗಿ ಮಾಡಿದ್ದೀರಿ, ಬೇಕಾದರೆ ಹೋಗಿ ನೋಡಿ. ಇದು ನಿಮಗೆ ಶೋಭೆ ತರುತ್ತದೆಯೆ? ಎಸ್.ಆರ್. ''ಸ್ಟಾಂಡರ್ಡ್ ರೇಟ್'' ಬಗ್ಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಮನೆಗಳಿಗೆ ಪರಿಹಾರ ಕೊಡಬೇಕಾಗಿರುತ್ತದೆ, ಯಾರೋ ಒಬ್ಬ ರೆವಿನ್ಯೂ ಇಲಾಖೆಯ ಅಧೀನ ಕಾರ್ಯದರ್ಶಿ ಈ ಕುರಿತು ಒಂದು ಸ್ಪಷ್ಟೀಕರಣ ನೀಡುತ್ತಾನೆ. ಪ್ರಸೆಂಟ್ ಎಸ್.ಆರ್. ಎಂದರೇನು? 1995-96ರಲ್ಲಿ ಯೋಜನೆಯಡಿ ಸ್ವಾಧೀನಪಡಿಸಿಕೊಂಡಿರುವ ಮನೆಗಳಿಗೂ ಕೂಡ 1983ರ ಎಸ್.ಆರ್. ಪ್ರಕಾರ ಪರಿಹಾರ ಕೊಡುತ್ತಾರೆ! ಇದು ಯಾವ ನ್ಯಾಯ? ಯೋಜನೆಯಡಿ ತಮ್ಮ ಮನೆ, ಮಠ, ಜಮೀನುಗಳನ್ನು ತ್ಯಾಗ ಮಾಡಿ ಮುಳುಗಡೆಯಾಗಿರುವ ಸಾಕಷ್ಟು ನೊಂದಿರುವ ರೈತರಿಗೆ ಇನ್ನಷ್ಟು ಹೊರೆ ಹಾಕಬೇಕೆಂದು ನಿರ್ಧರಿಸಿದ್ದೀರಾ?

1.40 pm

1983ನೇ ಇಸವಿ ಪ್ರಕಾರ ಅವನಿಗೆ ಏನಾದರೂ ಹೊಸ ಮನೆ ನಿರ್ಮಾಣ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುವುದಾದರೆ, ಅದೇ ಕಾಸ್ಟ್‌ನಲ್ಲಿ ಮೆಟೀರಿಯಲ್ಸ್ ಕೊಡುವುದಾದರೆ ಅದೇ ರೀತಿಯಲ್ಲಿ ಮನೆಯನ್ನು ನಿರ್ಮಾಣ ಮಾಡಿಕೊಡುವುದಾದರೆ ಅದು ಆಗಬಹುದು. ಇದನ್ನು ಸರಿ ಮಾಡಿ ಕೊಡಿ ಎಂದರೆ ನಾನು ಯಾರ ಹತ್ತಿರ ಬೇಡಲಿ ಹೇಳಿ? ಆ ಜನರ ಪ್ರತಿನಿಧಿಯಾಗಿ ನಾನು ಯಾರ ಹತ್ತಿರ ಬೇಡಬೇಕು? ಅವರ ಕಣ್ಣೀರನ್ನು ಒಬ್ಬ ಪ್ರತಿನಿಧಿಯಾಗಿ ನಿಮ್ಮ ಎದುರಿಗೆ ಯಾವ ರೀತಿಯಾಗಿ ನಾನು ವ್ಯಕ್ತ ಮಾಡಲಿ? ನಿಮ್ಮ ಒಬ್ಬ ಅಧಿಕಾರಿಗೆ ಇದರ ಬಗ್ಗೆ ಗಮನ ಕೊಡಲು ಇಚ್ಛೆ ಇಲ್ಲ ಎಂದು ಹೇಳುವುದಾದರೆ ಸರ್ಕಾರ ಯಾವ ರೀತಿ ನಡೆಯುತ್ತದೆ? ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ವಿಚಾರ ತೋಡಿಕೊಂಡೆ. ಇಲ್ಲ, ಆಗಲಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಇದ್ದಾರೆ, ಅಲ್ಲೂ ಇಲ್ಲ. ಹೈ ಪವರ್ ಕಮಿಟಿ ಕರೆಯಲಿಕ್ಕೆ ನಿಮಗೆ ಪುರಸೊತ್ತು ಇಲ್ಲ. ಹಿಂದಿನ ಅಧಿವೇಶನದಲ್ಲಿ ಹೇಳಿದಿರಿ, ಮಾನ್ಯ ನಾಗೇಗೌಡರನ್ನು ಕಳುಹಿಸುತ್ತೇವೆ, ಒಟ್ಟಿಗೆ ಹೈಪವರ್ ಕಮಿಟಿ ಮಾಡಿ ಅಲ್ಲಿ ಇತ್ಯರ್ಥ ಮಾಡಿ ಬಿಡಿ ಎಂದು ಹೇಳಿದಿರಿ. ನೀವು ಹೇಳಿ ಆರು ತಿಂಗಳಾಯಿತು. ಆರು ತಿಂಗಳಿಂದ ಒಂದು ಹೈ ಪವರ್ ಕಮಿಟಿ ಮೀಟಿಂಗ್ ಕರೆಯಲು ನಮಗೆ ಆಗುವುದಿಲ್ಲ ಎಂದು ಹೇಳುವುದಾದರೆ, ಸರಿಯಾದ ರಿಪೋರ್ಟ್ ಅಲ್ಲಿಂದ ಬರುವುದಿಲ್ಲ ಎಂದು ಹೇಳುವುದಾದರೆ, ಹಾಗಾದರೆ ಬೇರೆ ಕಡೆಗೆ ನಿಮಗೆ ಡ್ಯಾಮ್ ಕಟ್ಟಲು ರೈತರು ಅವಕಾಶ ಕೊಡುತ್ತಾರಾ? ಮೊನ್ನೆಯ ದಿನ ಯುಕೆಪಿಯ ರೈತರು ನಮ್ಮ ಹತ್ತಿರ ಬಂದಿದ್ದರು. ನಿಮಗೆ ಎಷ್ಟು ಪರಿಹಾರ ಕೊಟ್ಟಿದ್ದಾರೆ? ಪುನರ್ ವಸತಿ ಸೌಲಭ್ಯ ಕೊಟ್ಟಿದ್ದಾರಾ? ಎಂದರೆ ನಮ್ಮ ಜಮೀನಿನ ಕ್ರಾಫನ್ನು ಮುಳುಗಿಸಿದ್ದಾರೆ, ನಮಗೇನೂ ಪರಿಹಾರ ಕೊಡಲಿಲ್ಲ ಎಂದರು. ಹಾಗಾದರೆ ಡ್ಯಾಮ್ ಕಟ್ಟುತ್ತೀರಿ; ಅವರ ಹೆಣಗಳನ್ನೇ ಹಾಕಿ ಡ್ಯಾಮ್‌ಗಳನ್ನು ಕಟ್ಟಿ. ಬೇರೆ ಏನೂ ನಿಮಗೆ ಮಾಡುವುದಕ್ಕೆ ಆಗುವುದಿಲ್ಲ. ಇಡೀ ಸಂಸಾರವನ್ನು ಬಿಡಬೇಡಿ. ಇವತ್ತು ನಮ್ಮ ಕ್ಷೇತ್ರ ಇದೆ. ವಿದ್ಯುತ್ತನ್ನು ಸರಬರಾಜು ಮಾಡಲು ಇವರಿಗೆ ಹಣ ಇಲ್ಲ, ಬೇರೆ ತರಹ ಮಾಡುವುದಕ್ಕೆ ಇದೆ. ಒಂದೊಂದು ತಾಲ್ಲೂಕಿಗೆ ಎರಡೆರಡು ಕೋಟಿ ರೂಪಾಯಿಗಳ ಕೇಂದ್ರ ಸರ್ಕಾರದ ಅನುದಾನ ಇದೆ. ಕೇಂದ್ರ ಸರ್ಕಾರ ಕೊಟ್ಟು ನಾಲ್ಕು ವರ್ಷ ಆಗಿದೆ. ಗ್ರಾಮೀಣ ವಿದ್ಯುದ್ದೀಕರಣ ಮಾಡಲಿಕ್ಕೆ ಕೊಟ್ಟು ನಾಲ್ಕು ವರ್ಷವಾಗಿದೆ. ನಮ್ಮಲ್ಲಿ ಮಜರೆ ಹಳ್ಳಿಗಳು ಇನ್ನೂ ಕೂಡ ಹಾಗೆಯೇ ಇದ್ದಾವೆ. ನಮ್ಮ ಮಲೆನಾಡಿನ ಕೆಲವು ಹಳ್ಳಿಗಳಲ್ಲಿ ವಿದ್ಯುತ್ತನ್ನು ಇನ್ನೂ ನೋಡಿಯೇ ಇಲ್ಲ. ನಿಮಗೆ ಆಶ್ಚರ್ಯಕರವಾದ ಸಂಗತಿಯನ್ನು ಹೇಳುತ್ತಿದ್ದೇನೆ. ಇವತ್ತಿಗೂ ಕೂಡ ಕೆಲವು ಅಜ್ಜಯರು ಬಂದು ರಸ್ತೆ ಭಾಗದಲ್ಲಿ ಯಾವುದಾದರೂ ಭಾಗದಲ್ಲಿ ಕರೆಂಟ್ ಇದ್ದರೆ ನೋಡಿಕೊಂಡು ಹೋಗುತ್ತಿದ್ದಾರೆ. ಎಣ್ಣೆ ಇಲ್ಲದೇ ಇರುವ ದೀಪ ಹೇಗಿದೆ ಎಂದು ನೋಡಿಕೊಂಡು ಹೋಗುತ್ತಿದ್ದಾರೆ. ಸ್ವಾತಂತ್ರ್ಯ ಬಂದು 50 ವರ್ಷದ ನಂತರ ಎಣ್ಣೆ ಇಲ್ಲದೇ ಇರುವ

ದೀಪವನ್ನು ನೋಡಿಕೊಂಡು ಹೋಗುವ ಹಾಗೆ ಆ ಹಳ್ಳಿಗಳಿಗೆ ನೀವು ಮಾಡಿದ್ದೀರಿ. ಇನ್ನೂ ಕೂಡ ವಿದ್ಯುತ್ ಸಂಪರ್ಕವನ್ನು ಕೊಡಲಿಲ್ಲ. ಹಾಗಾದರೆ ನಾವೇನು ಮಾಡಿದ್ದೇವೆ? ಮಲೆನಾಡಿನ ಮೂಲೆಯಲ್ಲಿ ಬದುಕಿರುವುದು ತಪ್ಪೇನು? ರಾಜ್ಯ ಸರ್ಕಾರದ ಹತ್ತಿರ ಹಣ ಇಲ್ಲವಾ? ಕೇಂದ್ರ ಸರ್ಕಾರ ಕೊಟ್ಟಂತಹ ಎರಡು ಕೋಟಿ ರೂಪಾಯಿಯನ್ನು ಅಕ್ರಮವಾಗಿ ನಿಮ್ಮ ಕೆಇಬಿ ಉಪಯೋಗಿಸಿಕೊಂಡಿದೆ. ಏಕೆ ಅದನ್ನು ಗ್ರಾಮೀಣ ವಿದ್ಯುದ್ದೀಕರಣ ಕೆಲಸಕ್ಕೋಸ್ಕರ ಖರ್ಚು ಮಾಡಲಿಲ್ಲ? ಆರ್.ಇ.ಸಿ ಚೀಫ್ ಇಂಜಿನಿಯರ್, ಅವರ ಸಿಬ್ಬಂದಿ ಬೇರೆ ಮಾಡಿದಿರಿ. ನಿಮ್ಮ ರೆಗ್ಯುಲರ್ ಸಿಬ್ಬಂದಿ ವರ್ಗದಲ್ಲಿ ಅದನ್ನು ಸರ್ವೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಅವರಿಗೆ ಏನು ಕೆಲಸ ಕೊಟ್ಟಿದ್ದೀರಿ? ಏನೂ ಕೆಲಸ ಕೊಟ್ಟಿಲ್ಲ. ಪ್ರತಿ ಅಧಿವೇಶನದಲ್ಲೂ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ಮಾರ್ಚ್‌ನಲ್ಲಿ ಅದು ವೈಂಡಪ್ ಆಗುತ್ತಿತ್ತು.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು): ಅಲ್ಲಿ ಬಲ್ಬ್ ಹಾಕಿಲ್ಲ. ಸ್ವಿಚ್ ಕೆಟ್ಟು ಹೋಗಿದೆ ಎಂದು ಹೇಳಿದರೆ ಹೇಗೆ? ಹಾಗಲ್ಲ. ಸಂಸದೀಯ ಸಂಪ್ರದಾಯ ಅಂದರೆ ತಾವು ಹೇಳಬೇಕು, ಆಗ ನಾವು ಎಲ್ಲಿ ಬಲ್ಬ್ ಹಾಕಿಲ್ಲ, ಎಲ್ಲಿ ಸ್ವಿಚ್ ಕೆಟ್ಟು ಹೋಗಿದೆ ಎಂದು ಹೇಳುತ್ತೇವೆ. ಮಾನ್ಯ ಜ್ಞಾನೇಂದ್ರ ಅವರು ಹೆಡ್ ಮಾಸ್ಟರ್ ಹುಡುಗರಿಗೆ ಪ್ರಶ್ನೆ ಕೇಳುತ್ತಾರಲ್ಲಾ ಹಾಗೆ ಕೇಳುತ್ತಾರೆ. ಅದು ಹಾಗಲ್ಲ. ಅವರ ಲೀಡರ್ ಅವರು ಯಾವ ರೀತಿ ಮಾತನಾಡಬೇಕೆಂದು ಹೇಳಿಕೊಡಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಎರಡು ಕೋಟಿ ರೂಪಾಯಿ ಕೆ.ಇ.ಬಿ. ಬಳಸಬೇಕಾದಂತಹ ಹಣ ಬೇರೆಯದಕ್ಕೆ ಹೋಗಿದೆ ಎಂದು ನೇರವಾಗಿ ಹೇಳುತ್ತಿರಬೇಕಾದರೆ ನಾನು ಜ್ಞಾನೇಂದ್ರ ಅವರಿಗೆ ಹೇಳಬೇಕೋ, ತಮಗೆ ಹೇಳಬೇಕೋ ಎಂದು ರಾಜ್ಯದ ಜನರು ತೀರ್ಮಾನ ಮಾಡಲಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ನಾನು ಹೊಸಬ ಇರಬಹುದು. ಶಾಸನಸಭೆಗೆ ಬಂದಾಗ ನೀವು ತರಬೇತಿ ಕೊಟ್ಟಿದ್ದೀರಿ. ಹೇಗೆ ಪ್ರಶ್ನೆ ಕೇಳಬೇಕು, ಹೇಗೆ ಉತ್ತರ ಹೇಳುತ್ತಾರೆ, ಎನ್ನುವ ಬಗ್ಗೆ ತರಬೇತಿ ಕೊಟ್ಟಿದ್ದೀರಿ. ಆಮೇಲೆ ನಾನೇನೂ ಹೆಚ್ಚು ಕಡಿಮೆ ಹೊರಗಡೆ ತಿರುಗಾಡುವ ಶಾಸಕನಲ್ಲ. ಪ್ರತಿನಿತ್ಯ ನಮ್ಮನ್ನು ತಾವು ಗಮನಿಸುತ್ತಿದ್ದೀರಿ. ನಾವು ಇಲ್ಲೇ ಕುಳಿತುಕೊಂಡು ಈ ಹಿರಿಯರೆಲ್ಲಾ ಏನೇನು ಮಾಡುತ್ತಾರೆ? ಹೇಗೆ ಉತ್ತರ ಕೊಡುತ್ತಾರೆ? ಹೇಗೆ ರಾಜಕಾರಣ ನಡೆಯುತ್ತಿದೆ? ಈ ಉತ್ತರ ಕೊಟ್ಟಿದ್ದೆಲ್ಲಾ ಹೇಗೆ ಜಾರಿ ಆಗುತ್ತಿದ್ದಾವೆ ಎನ್ನುವುದನ್ನು ನಾನು ನೋಡಿದ್ದೇನೆ. ನಾನು ಇನ್ನು ಎಲ್ಲಿ ಹೇಳಲಿ? ನಾನು ನಿಮಗೇ ಹೇಳುತ್ತಿದ್ದೇನಲ್ಲಾ. ನಾನು ನಿಮ್ಮ ಮೂಲಕವೇ ಮಾತನಾಡುತ್ತಿದ್ದೇನಲ್ಲಾ. ನಾನು ಹೆಡ್ ಮಾಸ್ಟರ್, ಅವರು ಹುಡುಗರು ಎಂದು ಎಲ್ಲೂ ಈ ನಾಲ್ಕು ವರ್ಷದಿಂದ ಗ್ರಹಿಸಿಲ್ಲ. ಆದರೆ ಈಗ ನಾವು ಹೆಡ್ ಮಾಸ್ಟರ್ ನಿಮ್ಮ ಸರ್ಕಾರದಲ್ಲಿರುವವರೆಲ್ಲಾ ಕೂಡ ಪ್ರೈಮರಿ ಶಾಲೆಯ ಮಕ್ಕಳ

ವರ್ತನೆಗಿಂತ ಕೂಡ ಕೆಲವರ ವರ್ತನೆ ಬಹಳ ಕೆಟ್ಟದಾಗಿವೆ. ಬಹುಶಃ ನಾವು ಅದನ್ನು ಹೇಳಿದರೆ ಪ್ರೈಮರಿ ಶಾಲೆಯ ಮಕ್ಕಳಿಗೆ ಕೂಡ ಅವಮಾನ ಆಗುತ್ತದೆ. ಅದನ್ನು ಹೋಲಿಕೆ ಮಾಡಲಿಕ್ಕೆ ಆಗುವುದಿಲ್ಲ. ಆ ರೀತಿಯಲ್ಲಿ ನಡವಳಿಕೆ ತಮ್ಮ ಸರ್ಕಾರದ್ದು ಇದೆ. ಇದನ್ನು ತಿದ್ದಿಕೊಳ್ಳುವ ಬದಲು ಹೆಡ್ ಮಾಸ್ಟರ್‌ಗೆ ಹೋಲಿಸಿದಿರಿ. ನೀವು ಹಿರಿಯರು, ನನಗೆ ಪಾಠ ಹೇಳುವುದಕ್ಕೆ ನಿಮಗೆ ಶಕ್ತಿ ಇದೆ. ನಾನು ನಿಮ್ಮ ಬಗ್ಗೆ ಅಭಿಮಾನ ಇಟ್ಟುಕೊಂಡಿದ್ದೇನೆ. ಗೋಪಾಲಗೌಡರ ಕ್ಷೇತ್ರದಿಂದ ಬಂದಿರತಕ್ಕವರು ತಾವು. ನಮ್ಮ ಪಟೇಲ್ ಅವರಲ್ಲಿ ನಾವು ಗೋಪಾಲಗೌಡರನ್ನು ಕಾಣುವಂತಹ ಜನ, ನನ್ನ ಕ್ಷೇತ್ರದಲ್ಲಿದ್ದಾರೆ, ಆದರೆ ನಿಮ್ಮ ಕಾಲದಲ್ಲೂ ಕೂಡ ಇದಾಗಲಿಲ್ಲವಲ್ಲಾ ಎಂದು ಅತ್ಯಂತ ನೋವಿನಿಂದ ನಾನು ಹೇಳುತ್ತಿದ್ದೇನೆ. ಅದೇ ಚಕ್ರಾ, ವರಾಹಿ ಪ್ರದೇಶದಲ್ಲಿ ಮುಳುಗಿರತಕ್ಕ ರೈತರು ಕಡಿದರೂ ಸಹ ಇವತ್ತು ಬಿಜೆಪಿಗೆ ಒಂದು ಓಟು ಹಾಕುವುದಿಲ್ಲ. ದಳಕ್ಕೇ ಓಟು ಹಾಕುವವರು. ಅವರಿಗೆ ನೀವು ಕೊಟ್ಟಂತಹ ಕೊಡುಗೆ ಮುಖ್ಯಮಂತ್ರಿಯಾಗಿ ಏನು? ನೀವು ಏನಾದರೂ ಕ್ರಮ ಮಾಡಿದ್ದೀರಾ? ಪರಿಹಾರ ಕೊಡಬೇಕಾಗಿತ್ತಲ್ಲಾ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆಗೆಂದು ಸಾಗರಕ್ಕೆ ಎರಡುಕೋಟಿ ರೂಪಾಯಿ ಹೊಸನಗರಕ್ಕೆ ಎರಡು ಕೋಟಿ ರೂಪಾಯಿ, ತೀರ್ಥಹಳ್ಳಿಗೆ ಎರಡು ಕೋಟಿ ರೂಪಾಯಿ ಕೇಂದ್ರದಿಂದ ಬಂದಿದೆ. ಮೂರು ವರ್ಷದಿಂದ ಇವರು ಬೇರೆಯದಕ್ಕೆ ಅದನ್ನು ಬಳಸಿಕೊಂಡಿದ್ದಾರೆ. ಕೇಂದ್ರಕ್ಕೆ ತಪ್ಪು ಮಾಹಿತಿಯನ್ನು ನೀವು ಹಾಗೂ ನಿಮ್ಮ ಅಧಿಕಾರಿಗಳು ಸೇರಿಕೊಂಡು ಕೊಟ್ಟಿದ್ದೀರಿ. ಇದು ಸರಿನಾ? ನಾನು ಯಾರಿಗೆ ಕೇಳಬೇಕು? ಅಲ್ಲಿ ಎಲ್ಲೋ ಬಲ್ಬ್ ಹಾಕಲಿಲ್ಲ, ಎಂದರೆ ಹೇಗೆ? ಬಲ್ಬ್ ಅಲ್ಲ ನಾವು ಕೇಳುತ್ತಿರುವುದು. ಗ್ರಾಮೀಣ ವಿದ್ಯುದ್ದೀಕರಣದ ವಿಚಾರ ಕೇಳುತ್ತಿರುವುದು. ಯಾವ ರೀತಿ ಟೆಂಡರ್ ಕರೆಯಬೇಕು ಎಂದು ಡಿಸೈಡ್ ಮಾಡಲಿಕ್ಕೆ ಕೆಇಬಿ ಬೋರ್ಡ್ ಮೂರು ವರ್ಷ ತೆಗೆದುಕೊಂಡಿದೆ. ನೀವು ವಿದ್ಯುದ್ದೀಕರಣ ಮಾಡುವುದು ಯಾವಾಗ? ಅದರ ಕಾಸ್ಟ್ ವರ್ಷೇ ವರ್ಷೇ ಕಡಿಮೆ ಆಗುತ್ತಾ ಹೋಗುತ್ತದಾ? ಪ್ರತಿ ವರ್ಷ ಜಾಸ್ತಿ ಆಗುತ್ತಿದೆ. ಈ ರೀತಿಯಲ್ಲಿ ನಿಮ್ಮ ಅಸಾಮರ್ಥ್ಯ ಇವತ್ತು ಕರ್ನಾಟಕ ರಾಜ್ಯದ ಜನರಿಗೆ ಗೊತ್ತಾಗಿದೆ. ನೀವು ಅಧಿಕಾರದಲ್ಲಿ ಮುಂದುವರಿಯುವಂತಹ ಯಾವ ಹಕ್ಕು ಇಲ್ಲ, ಅದನ್ನು ಇವತ್ತು ಕಳೆದುಕೊಳ್ಳುತ್ತಿದ್ದೀರಿ. ವಿದ್ಯುತ್ ಕಡಿತ ಎಂದರೆ ಅದು ಕಡಿತವೇ, ತುರಿಕೆ ಎಂದು ನಮ್ಮಲ್ಲಿ ಹೇಳುತ್ತಾರೆ. ಕರೆಂಟು ಯಾವಾಗ ಬರುತ್ತದೆ? ಯಾವಾಗ ಹೋಗುತ್ತದೆ? ಎಷ್ಟು ಕೊಡುತ್ತೀರಿ? ಕನಿಷ್ಟ ಪವರ್ ಕಟ್ ಮಾಡುತ್ತಾರೆ ಎಂದರೆ 24 ಗಂಟೆ ಬೆಳಕಾದರೂ ಕೊಡಿ. ಕನಿಷ್ಟ ನಮ್ಮ ಶಿವಮೊಗ್ಗ ಕಡೆ ಮಲೆನಾಡಿನ ಪ್ರದೇಶದಲ್ಲಿ ಈ ಸಮಯದಲ್ಲಿ ಪವರ್ ಕನ್ಸ್‌ಂಪ್‌ಷನ್ ಮಾಡುವುದಕ್ಕೆ ನಾವ್ಯಾರೂ ಪಂಪ್ ಹೊಡೆಸುವುದಿಲ್ಲ. ನಮಗಾದರೂ ಅಟ್‌ಲೀಸ್ಟ್ 24 ಗಂಟೆ ಬೆಳಕಾದರೂ ಕೊಡಿ ಎಂದು ಹೇಳುತ್ತೇವೆ. ಅದೂ ಇಲ್ಲ. ಇವರು ತೆಗೆಯುವುದು ಎಂಟು ಗಂಟೆ, ಅದಾಗಿ ಹೋಗುವುದು 12 ಗಂಟೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ನಮಗೆ ಬಂದಿರುವ ತೊಂದರೆ ಅಂದರೆ ಇವತ್ತು ನಾನು ಕೇಳಿದೆ. ಉತ್ತರ ಕನ್ನಡ ಜಿಲ್ಲೆಗೆ ಇಲ್ಲ, ದಕ್ಷಿಣ ಕನ್ನಡ ಜಿಲ್ಲೆಗೆ ಇಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಬೆಳಿಗ್ಗೆ ಆರು ಗಂಟೆಯಿಂದ ಒಂದು ಭಾಗಕ್ಕೆ 12 ಗಂಟೆಯವರೆಗೆ ಕರೆಂಟ್ ಕಟ್ ಮಾಡುತ್ತಾರೆ. ಪ್ರತಿ ತಾಲ್ಲೂಕಿನಲ್ಲಿ ಹೀಗೆ ಮಾಡುತ್ತಾರೆ. ಇನ್ನೊಂದು ಭಾಗದಲ್ಲಿ 12 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಕರೆಂಟ್ ಕಟ್ ಮಾಡುತ್ತಾರೆ. ಹೀಗಾಗಿ ಏನಾಗಿಬಿಟ್ಟಿದೆ, ಎಂದರೆ ನಮ್ಮ ಹಳ್ಳಿ ಪ್ರದೇಶದಲ್ಲಿರತಕ್ಕ ರೇಶ್ಮೆ ನೂಲು, ಸಣ್ಣ ಪುಟ್ಟ ಕೈಗಾರಿಕೆಗಳು ಏನು ಇದ್ದಾವೆ, ಇವರೆಲ್ಲಾ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಹಿಂದೆ ಒಂದು ಸಾರಿ ನಾನು ಹೇಳಿದ್ದೇನೆ. ಬೇರೆ ಜಿಲ್ಲೆಯ ವಿಚಾರ ಕೇಳಿದರೆ ನಮಗೆ ಆ ರೀತಿ ಇಲ್ಲ ಎಂದು ಹೇಳುತ್ತಾರೆ. ವಿಶೇಷವಾಗಿ ನಮಗೇ ಏಕೆ ತೊಂದರೆ ಕೊಡುತ್ತೀರಿ?

ಶ್ರೀ ಎಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ಬೇರೆ ಜಿಲ್ಲೆಯ ಪ್ರಸ್ತಾವನೆ ಅಲ್ಲ. ಕೊಡಗು ಜಿಲ್ಲೆಯಲ್ಲಿ ಕೂಡ ಹಾಗೆಯೇ ಇದೆ. ನಮಗೆ ಈಗ ಮಳೆಗಾಲ, ನಾವು ಒದ್ದಾಡುತ್ತಿದ್ದೇವೆ. ನಮಗೇನೂ ಪಂಪುಸೆಟ್ಟು ಬೇಕಾಗಿಲ್ಲ, ಯಾವುದೇ ಪಂಪುಸೆಟ್ಟು ನಾವು ಹಾಕಿಕೊಳ್ಳುವುದಿಲ್ಲ. ನಮಗೆ ಬೇಕಾಗಿರುವುದು ಆಟ್‌ಲೀಸ್ಟ್ ಲೈಟ್ ಬಂದರೆ ಸಾಕು. ಅದು ಕೂಡ ಕೊಡಗಿನಲ್ಲಿಲ್ಲವಲ್ಲಾ. ಇದೇ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಹೆಚ್ಚು ಕಡಿಮೆ ಇದೆ ಎಂದರೆ ತಪ್ಪಾಗಲಾರದು.

ಡಾ: ಎಂ.ಪಿ.ಕರ್ಕಿ: ಕ್ಯಾಬಿನೆಟ್‌ನಲ್ಲಿ ರೈತರ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸಬಾರದು ಎಂದು ಹೇಳತಕ್ಕ ತೀರ್ಮಾನ ಆಗಿದೆ ಎಂದು ನಾನು ಕೇಳಿದ್ದೇನೆ. ಆದರೆ ಉತ್ತರ ಕನ್ನಡದ ನನ್ನ ಕ್ಷೇತ್ರದಲ್ಲಿ ರಾಶಿ ಪಂಪುಸೆಟ್ಟು ತೆಗೆದುಕೊಂಡು ಹೋಗುತ್ತಿದ್ದರು. ಮೀಟರ್ ಅಳವಡಿಸಲು ತೆಗೆದುಕೊಂಡು ಹೋಗುತ್ತಿರುವಾಗ ಕೇಳಿದರೆ ಪ್ರಾಯೋಗಿಕವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗದಲ್ಲಿ ಅಳವಡಿಸುವುದಕ್ಕೆ ಹೇಳಿದ್ದಾರೆ ಎಂದು ಹೇಳತಕ್ಕ ಮಾತನ್ನು ಅಧಿಕಾರಿಗಳು ಹೇಳುತ್ತಾರೆ. ಇದು ಸತ್ಯವೇ ಅಥವಾ ಸತ್ಯಕ್ಕೆ ದೂರವೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಅಧ್ಯಕ್ಷರು: ನೀವು 45 ನಿಮಿಷ ಆಯಿತು ಭಾಷಣ ಪ್ರಾರಂಭ ಮಾಡಿ. ಮಧ್ಯೆ ಐದು ನಿಮಿಷ ಇಂಟರಪ್ಷನ್ ಆದರೂ 40 ನಿಮಿಷ ಆಗಿದೆ. ನಿಮ್ಮ ಪಕ್ಷದವರೂ ಹಾಗೂ ಈ ಕಡೆ ಮಾತನಾಡುವವರು ಇದ್ದಾರೆ. ತಾವು ಬೇಗ ಮುಗಿಸಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಮ್ಮ ಲೋಕೋಪಯೋಗಿ ಇಲಾಖೆ ಇದೆ. ಅದಕ್ಕೆ ಇವತ್ತು ಹೊಂಡ ಮುಚ್ಚುವುದಕ್ಕೂ ದುಡ್ಡು ಇಲ್ಲ, ಚರಂಡಿ ಹಾಕಿಸುವುದಕ್ಕೂ ದುಡ್ಡು ಇಲ್ಲ. ಇಂತಹ ಸ್ಥಿತಿಯಲ್ಲಿ ನಮ್ಮ ಮಾನ್ಯ ಉದಾಸಿಯವರು ಕೆಲಸ ಮಾಡುತ್ತಿದ್ದಾರೆ. ನಬಾರ್ಡ್‌ನಿಂದ ಸಾಲ ಬರುತ್ತದೆ. ನಬಾರ್ಡ್‌ನಿಂದ

ತೆಗೆದುಕೊಂಡಂತಹ ವರ್ಕ್, ಬಗ್ಗೆ ಸಾಲ ತೆಗೆದುಕೊಂಡರೂ ಸಹ ಕೆಲಸ ಪ್ರಾರಂಭ ಮಾಡಲಿಕ್ಕೋಸ್ಕರ ಉದಾಸೀನ ಮಾಡಿದ್ದಾರೆ. ಅವರ ಇಲಾಖೆ ಕೆಲಸವೇ ಪ್ರಾರಂಭ ಮಾಡಲಿಲ್ಲ. ಬರೇ ಎಸ್ಟಿಮೇಟ್ ಮಾಡುವುದು. ಅದು ಸರಿಯಿಲ್ಲ ಎಂದು ಕೈರಿ ಹಾಕಿ ಕಳುಹಿಸುವುದು; ಮತ್ತೆ ಎಸ್ಟಿಮೇಟ್ ಮಾಡುವುದು ಇದನ್ನೇ ಮಾಡುತ್ತಿದೆ. ಟೆಂಡರ್ ಕರೆಯಲಿಲ್ಲ. ಟೆಂಡರ್ ಕರೆಯದೇ ಇವತ್ತು ವರ್ಕ್ ಸ್ಟಾರ್ಟ್ ಆಗುವ ಹಾಗೆ ಇಲ್ಲ. ಇವತ್ತು ಹಾಟ್ ಮಿಕ್ಸ್ ಪ್ಲಾಂಟ್‌ಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟ ಒಳ್ಳೆಯದು ಇರಬೇಕು ಎಂಬ ನಿಮ್ಮ ಆಶಯ ಸರಿ, ಆದರೆ ಅದನ್ನು ಕಾರ್ಯಗೊಳಿಸುವುದು ಹೇಗೆ? ನನ್ನ ಕ್ಷೇತ್ರದಲ್ಲಿ ಒಬ್ಬರೇ ಟೆಂಡರ್ ಹಾಕಿದ್ದಾರೆ. ಹಾಟ್ ಮಿಕ್ಸ್ ಪ್ಲಾಂಟ್ ಇದ್ದಂತಹ ಕಂಟಾಕ್ಟ್‌ದಾರರು ಬಹಳಷ್ಟು ಜನ ಇಲ್ಲ, ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಒಬ್ಬರೋ ಇಬ್ಬರೋ ಮಾತ್ರ ಇದ್ದಾರೆ. ಊರಿಗೆ ಒಬ್ಬಳೇ ಪದ್ಮಾವತಿ ಎಂಬಂತೆ ಒಬ್ಬರೇ ಇದ್ದಾರೆ. ಅವರೊಬ್ಬರೇ 5-6 ಕೆಲಸಗಳನ್ನು ತೆಗೆದುಕೊಂಡಿರುತ್ತಾರೆ. ಆದರೆ ಇನ್ನೂ ಕೂಡ ಅವರು ಕೆಲಸ ಮಾಡಿಲ್ಲ, ಆ ದಿಕ್ಕಿನಲ್ಲಿ ಮುಖವನ್ನೇ ಹಾಕಿಲ್ಲ. ಆನಂದಪುರದಲ್ಲಿ ಎಲ್ಲೋ ಹಾಟ್ ಮಿಕ್ಸ್ ಪ್ಲಾಂಟ್ ಹಾಕುತ್ತಾರಂತೆ. ಮಿಕ್ಸ್ ಮಾಡಿದ ಜೆಲ್ಲಿ ಮತ್ತು ಟಾರ್‌ಗಳನ್ನು ಆಗುಂಬೆಗೆ ಲಾರಿಯಲ್ಲಿ ತೆಗೆದುಕೊಂಡು ಹೋಗಬೇಕು. ಆ ಮಿಕ್ಸ್‌ನ ಹೀಟ್ ಎಲ್ಲಿಯವರೆಗೆ ಇರುತ್ತದೆ? ಆನಂದಪುರದಿಂದ ಆಗುಂಬೆಯ ತುದಿಯಲ್ಲಿರತಕ್ಕಂತಹ ಮಲಂದೂರಿಗೆ ರಸ್ತೆ ಮಂಜೂರಾಗಿದೆ. ನಾನು ಹೇಳಿದರೂ ಕೂಡ ನಿಮ್ಮ ಅಧಿಕಾರಿಗಳು ಯಾರೂ ಕೇಳುವುದಿಲ್ಲ. ಲಾರಿಯಲ್ಲಿ ಹೋಗಬೇಕಾದರೆ 5 ಗಂಟೆ ಕಾಲ ಬೇಕು. ಎರಡು ಗಂಟೆ ನಂತರ ಗಟ್ಟಿಯಾಯಿತೆಂದು ಹೇಳಿದರೆ ಆ ಲಾರಿಯೇ ಬರುವುದಿಲ್ಲ. ಇಡೀ ಲಾರಿಯನ್ನೇ ಹೀಟ್ ಮಾಡಬೇಕಾಗುತ್ತದೆ. ಈ ರೀತಿ ಇಂಪ್ರಾಕ್ಟಿಕಲ್ ಟೆಂಡರ್ ಅನ್ನು ನೀವು ಕರೆಯುತ್ತಾ ಹೋಗುತ್ತೀರಿ. ಇವತ್ತಿನವರೆಗೂ ಕೆಲಸ ಪ್ರಾರಂಭ ಮಾಡಲಿಲ್ಲ. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 25-30 ಲಕ್ಷ ರೂ.ಗಳನ್ನು ಕೆಲಸ ಮಾಡಿಸುವ ಸಲುವಾಗಿ ಕೊಡುತ್ತೇವೆಂದು ಹೇಳಿದ್ದಿರಿ. ನನ್ನ ಕ್ಷೇತ್ರದಲ್ಲಿ 12-15 ಲಕ್ಷ ರೂ.ಗಳ ಕೆಲಸ ಮಾತ್ರ ಆಗಿದೆ. ಉಳಿದ ದುಡ್ಡು ಏನು ಮಾಡಿದರು? ಏತಕ್ಕೆ ಕೆಲಸ ತೆಗೆದುಕೊಂಡಿಲ್ಲ ಎಂಬ ಬಗ್ಗೆ ಯಾರೂ ಉತ್ತರ ಹೇಳುವವರಿಲ್ಲ. ಎಪಿಎಂಸಿ ಯಿಂದ ಪ್ರತಿ ವರ್ಷ ಒಬ್ಬೊಬ್ಬ ಶಾಸಕರಿಗೆ 15 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳಿದಿರಿ. ಕೇವಲ ಎರಡು ವರ್ಷ ಮಾತ್ರ ಕೊಟ್ಟಿರಿ ಎಂದು ಕಾಣಿಸುತ್ತದೆ, ಆಮೇಲೆ ಏನೂ ಇಲ್ಲ. ಆ ಹಣ ಕೊಡುತ್ತಾರೋ ಇಲ್ಲವೋ ಎಂಬುದೂ ಗೊತ್ತಿಲ್ಲ. ಆ ಹಣ ಏನಾಗಿದೆ ಎಂಬುದನ್ನು ಸರ್ಕಾರ ಹೇಳಬೇಕು. ನಬಾರ್ಡ್‌ನವರು ಹಣ ಕೊಟ್ಟರೂ ಕೂಡ ನೀವು ಕೆಲಸ ಮಾಡುವುದಿಲ್ಲ. ಬೇರೆ ಬೇರೆ ಕಡೆಗಳಿಂದ ತಂದಿದ್ದರಲ್ಲಿ ಕೂಡ ನೀವು ಕೆಲಸ ಪ್ರಾರಂಭ ಮಾಡುವುದಿಲ್ಲ ಎನ್ನುವುದಾದರೆ ಈ ರಾಜ್ಯದ ಪ್ರಗತಿ ಹೇಗೆ ಆಗುತ್ತದೆ? ನೀವು ಎಷ್ಟೊಂದು ಟ್ಯಾಕ್ಸ್ ಕಲೆಕ್ಟ್ ಮಾಡುತ್ತೀರಿ? ನಮ್ಮ ಹತ್ತಿರ ಇರುವ ಹಳೆಯ ಕಾರನ್ನು

ಮಾರಾಟ ಮಾಡಬೇಕಾದರೂ ಕೂಡ ನಿಮಗೆ 50 ಸಾವಿರ ರೂ. ದುಡ್ಡು ಕೊಡಬೇಕು. ಈ ರೀತಿ ನೀವು ಟ್ಯಾಕ್ಸ್ ಹಾಕುತ್ತೀರಿ ಅದು ಎಲ್ಲಿ ಸೋರಿ ಹೋಗುತ್ತಿದೆಯೋ ಗೊತ್ತಿಲ್ಲ. ಪಿ.ಡಬ್ಲ್ಯೂ.ಡಿ ಮಂತ್ರಿಗಳ ಕೈಗೆ ಸರ್ಕಾರ ದುಡ್ಡು ಕೊಟ್ಟಿಲ್ಲ. ಅವರು ಹೊಂಡ ಮುಚ್ಚಿಸುವುದೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ರಸ್ತೆಗಳಲ್ಲೆಲ್ಲಾ ಹಳ್ಳಗಳಾಗಿ ಮಳೆ ಬಂದಾಗ ಹೊಳೆ ಹರಿದಂತೆ ಅದರ ಮೇಲೆಯೇ ನೀರು ಹರಿಯುತ್ತಿರುತ್ತದೆ. ಮಳೆಗಾಲದಲ್ಲಿ ಮಳೆ ಬಂದರೆ ರಸ್ತೆಯಲ್ಲಿ ಹೋಗಲಿಕ್ಕಾಗುವುದಿಲ್ಲ. ಇಂತಹ ಒಂದು ದುರವಸ್ಥೆಯಲ್ಲಿ ನೀವು ಈ ಸರ್ಕಾರವನ್ನು ನಡೆಸುತ್ತಿದ್ದೀರಿ; ಈ ಒಂದು ಇಲಾಖೆಯನ್ನು ನಡೆಸುತ್ತಿದ್ದೀರಿ. ಇನ್ನೊಂದು ಪ್ರಮುಖವಾಗಿರತಕ್ಕಂತಹ ವಿಚಾರ ಏನೆಂದರೆ, 1978ರಿಂದ ಹಿಂದೆ ಅರಣ್ಯ ಇಲಾಖೆಯ ಜಮೀನಿನಲ್ಲಿ ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರೋ ಅವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಸರ್ಕಾರ ಘೋಷಣೆ ಮಾಡಿತ್ತು. ಆದರೆ ಇವತ್ತು ಸಾರಾಸಗಟಾಗಿ ಅರಣ್ಯ ಇಲಾಖೆಯವರು ಸಾಗುವಳಿ ಮಾಡುತ್ತಿದ್ದವರ ಮೇಲೆ ಕೇಸ್‌ಗಳನ್ನು ಹಾಕುತ್ತಿದ್ದಾರೆ. ಬಡವರು ಮತ್ತು ಕಾಡಿನಲ್ಲಿ ಎಲ್ಲೋ ಮೂಲೆಯಲ್ಲಿ ಇದ್ದವರು ಪ್ರತಿನಿತ್ಯ ಎಸಿಎಫ್ ಕೋರ್ಟ್‌ಗೆ ಬರುವಂತಾಗಿದೆ. ಯಾವ ಹರಿಜನ ಗಿರಿಜನರು ಮತ್ತು ದಲಿತರು ಅರಣ್ಯ ಇಲಾಖೆಯ ಗಿಡ ಮರ ಇಲ್ಲದಂತಹ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಒಕ್ಕಲೆಬ್ಬಿಸುತ್ತಿದ್ದೀರಿ. 1978ರ ಹಿಂದೆ ಅಕ್ರಮ ಸಾಗುವಳಿ ಆಗಿರತಕ್ಕದ್ದನ್ನು ಸಾಗುವಳಿದಾರರಿಗೇ ಮಂಜೂರು ಮಾಡುತ್ತೇವೆ ಎಂದು ನೀವು ಹೇಳಿದ್ದಿರಿ. ಈ ಬಗ್ಗೆ ಹಿಂದೆ ಕಂದಾಯ ಮಂತ್ರಿಗಳಾಗಿದ್ದಂತಹ ಮಾನ್ಯ ಜಾಲಪ್ಪನವರು ಒಂದು ಹೇಳಿಕೆಯನ್ನು ಸದನದಲ್ಲಿ ಕೊಟ್ಟಿದ್ದರು. ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದರೂ ನನ್ನ ಕ್ಷೇತ್ರದಲ್ಲಿ ಒಂದು ಗುಂಟೆ ಜಮೀನೂ ಕೂಡ ನೀವು ಸಾಗುವಳಿ ಚೀಟಿ ಕೊಟ್ಟಿಲ್ಲ. ಬೇರೆ ಯಾರದಾದರೂ ಕ್ಷೇತ್ರದಲ್ಲಿ ಕೊಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ. ನನಗೆ ಬಂದ ಮಾಹಿತಿ ಪ್ರಕಾರ ಇಡೀ ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರ ರಿಲೀಸ್ ಮಾಡಿರತಕ್ಕ ಅರಣ್ಯ ಇಲಾಖೆ ಜಮೀನನ್ನು ಸಂಬಂಧಪಟ್ಟಂತಹ ಬಗರ್‌ಹುಕುಂ ಸಾಗುವಳಿ ಮಾಡುತ್ತಿರತಕ್ಕಂತಹ ರೈತರಿಗೆ ಹಂಚುವಂತಹ ವ್ಯವಸ್ಥೆ ನೀವು ಮಾಡಿಲ್ಲ. ನಿಮ್ಮ ಮಂತ್ರಿಗಳು ಇದರ ಬಗ್ಗೆ ಆಲೋಚನೆ ಮಾಡಲಿಲ್ಲ.

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಕೇಂದ್ರ ಸರ್ಕಾರ ಈಗ ಕೆಲವು ಪ್ರಸ್ತಾವನೆಗಳನ್ನು ಕಳುಹಿಸಿದ ಮೇಲೆ ಈ ಜಮೀನುಗಳನ್ನು ಕೊಡಬಹುದೆಂದು ಮಾಡಿದ್ದೇವೆ. ನಾವು ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೋ ಅವರಿಗೆ ಸಾಗುವಳಿ ಚೀಟಿ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅದನ್ನು ಆದಷ್ಟು ಜಾಗ್ರತೆ ನಾನೂ ಒತ್ತಾಯ ಮಾಡಿ ಮಾಡಿಸಿಕೊಡುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೇ, ಈ ಅರಣ್ಯ ಇಲಾಖೆ ಗಿಡ ಹಾಕುವಂತಹ ಒಂದು ವ್ಯವಸ್ಥೆ ಏನಿದೆ, ಅದು ಇಡೀ ರಾಜ್ಯದಲ್ಲಿ ಒಂದು ರೀತಿ

ಕ್ಯಾನ್ಸರ್ ರೀತಿ ಹರಡಿದೆ. ಬಹುಶಃ ಇಲ್ಲಿಯವರೆಗೆ ನಾವು ಹಾಕಿರತಕ್ಕಂತಹ ಮರ ಗಿಡ, ಅದಕ್ಕೆ ಖರ್ಚಾಗಿರತಕ್ಕ ಹಣ ಲೆಕ್ಕ ಹಾಕಿದರೆ ಇಡೀ ಕರ್ನಾಟಕ ಅರಣ್ಯ ಆಗಬೇಕಾಗಿತ್ತು. ಆದರೆ ಅರಣ್ಯ ಆಗಲಿಲ್ಲ, ಅದು ಬೇರೆ ರೀತಿಯಲ್ಲಿ ಹೋಗುತ್ತಿದೆ. ನಮ್ಮ ಸಕಲೇಶಪುರ ಕ್ಷೇತ್ರದಲ್ಲಿ ಈ ಗಿಡ ಹಾಕುವುದಕ್ಕೋಸ್ಕರ ಸುಮಾರು ಒಂದೂವರೆ ಸಾವಿರ ಎಕರೆ ಜಾಗವನ್ನು ಒಬ್ಬ ಅಸಿಸ್ಟೆಂಟ್ ಕಮೀಷನರ್ ಅಲಾಟ್ ಮಾಡಿ ಬಿಟ್ಟಿದ್ದಾನೆ. ಈ ಜಾಗದಲ್ಲಿ ಅರಣ್ಯ ಇಲಾಖೆಯವರು ಗಿಡ ಹಾಕಬೇಕಾಗಿದೆ. ಊರಿನ ಮನೆ, ಸ್ವಂತ ಆಸ್ತಿ ಎಲ್ಲಾ ಸೇರಿ ಏನೋ ಮ್ಯಾಪ್ ಇಟ್ಟುಕೊಂಡು ಒಂದೂವರೆ ಸಾವಿರ ಎಕರೆ ಜಾಗವನ್ನು ಮಂಜೂರು ಮಾಡಿಬಿಟ್ಟಿದ್ದಾರೆ. ನಾನು ಈ ಬಗ್ಗೆ ಡಿ.ಸಿ.ಯವರ ಗಮನಕ್ಕೆ ತಂದಾಗ, ಡಿ.ಸಿ.ಯವರು ಹಾಗೆ ಮಾಡುವುದಕ್ಕೆ ಬರುವುದಿಲ್ಲ, ನೀನು ಏನು ಆರ್ಡರ್ ಅನ್ನು ಮಾಡಿದ್ದೀಯಾ ಅದನ್ನು ವಾಪಸ್ ತೆಗೆದುಕೊಳ್ಳಿ, ಅರಣ್ಯ ಇಲಾಖೆಯವರು ಅಲ್ಲಿ ಗಿಡ ಹಾಕಬಾರದು ಎಂದು ಹೇಳಿದರು. ಆದರೆ ಅಲ್ಲಿ ಇವತ್ತೂ ಕೂಡ ಗಿಡ ಹಾಕುತ್ತಿದ್ದಾರೆ. ಅವರು ಎಲ್ಲಿಯವರೆಗೆ ಹೋಗಿದ್ದಾರೆ ಎನ್ನುವುದಕ್ಕೆ ನಾನು ತಮಗೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಒಂದು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರತಕ್ಕ ಪಂಚಾಯಿತಿ ಆಫೀಸ್ ಒಂದು ಇದೆ, ಅದಕ್ಕೆ ಅರಣ್ಯ ಇಲಾಖೆಯವರು ಬೇಲಿ ಹಾಕಿದರು, ಅಲ್ಲಿ ಇವರು ಗುಂಡಿಗಳನ್ನು ತಗೆಯಲಿಕ್ಕೆ ಶುರು ಮಾಡಿದರು, ಆದರೆ ಇನ್ನೂ ಗಿಡ ಹಾಕಿಲ್ಲ. ಪಂಚಾಯಿತಿಯವರು ಅದಕ್ಕೆ ವಿರೋಧ ಮಾಡಿದಾಗ ಅವರಿಗೂ ಇವರಿಗೂ ಗೊಂದಲ ಪ್ರಾರಂಭವಾಗಿ ಯಾವುದೋ ಕಾಲದಲ್ಲಿ ಕಟ್ಟಿದ್ದ ಪಂಚಾಯಿತಿ ಆಫೀಸಿನ ರಿಪೇರಿಗೆ 6 ಲಕ್ಷ ರೂ.ಗಳನ್ನು ಖರ್ಚು ಹಾಕಿದ್ದಾರೆ. ಇದು ಸರಿಯಲ್ಲವೆಂದು ನಾನು ಡಿ.ಸಿ. ಗಮನಕ್ಕೆ ತಂದೆ, ರೆವಿನ್ಯೂ ಕಮೀಷನರ್‌ರವರ ಗಮನಕ್ಕೆ ತಂದೆ, ಕಂದಾಯ ಮಂತ್ರಿಗಳೂ ಸೇರಿದಂತೆ ಎಲ್ಲರ ಗಮನಕ್ಕೂ ತಂದೆ. ಆದರೆ ಅಲ್ಲಿ ಇನ್ನೂ ಆ ಕೆಲಸ ನಡೆಯುತ್ತಿದೆ. ಪ್ರತಿನಿತ್ಯ ಹೋರಾಟ, ಪೊಲೀಸ್ ವಗೈರೆ ಇವತ್ತು ನಮ್ಮಲ್ಲಿ ನಡೆಯುತ್ತಿದೆ. ಅಲ್ಲಿರುವ ಎಸಿಎಫ್‌ನನ್ನು ಏನಪ್ಪ ಡಿ.ಸಿ. ಹೀಗೆ ಹೇಳುತ್ತಾರೆ, ನೀನು ಹೀಗೆ ಹೇಳುತ್ತೀಯಾ, ನೀನು ರೆವಿನ್ಯೂನವರು ಕುಳಿತುಕೊಂಡು ತೀರ್ಮಾನ ಮಾಡಿ ಜಾಗ ಜನರದ್ದು ಇದ್ದರೆ ಅವರಿಗೆ ಬಿಡಿ, ಸರ್ಕಾರದ ಜಾಗ ಇದ್ದರೆ ನೀವು ಗಿಡ ಹಾಕಿ, ಇಲ್ಲದಿದ್ದರೆ ನೀವು ಗಿಡ ಹಾಕಿಕೊಂಡು ಹೋಗುತ್ತಿದ್ದರೆ ಅವರು ಕಿತ್ತು ಹಾಕುತ್ತಿರುತ್ತಾರೆ, ಯಾವ ಪುರುಷಾರ್ಥಕ್ಕೆ ನೀವು ಗಿಡ ಹಾಕುತ್ತಿದ್ದೀರಿ ಎಂದು ಕೇಳಿದರೆ ಅವನು ಈ ರೀತಿ ಆರ್ಡರ್ ಮಾಡುವುದಕ್ಕೆ ಡಿ.ಸಿ. ಯಾರು? ಆ ಜಾಗ ನಮ್ಮ ಇಲಾಖೆಯದು ಎಂದು ಹೇಳುತ್ತಾನೆ. ಇದ್ಯಾಕೆ ಈ ರೀತಿ ಆಗುತ್ತಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ತೀರ್ಮಾನ ಮಾಡಬೇಕು.

ಶ್ರೀ ಡಿ.ಮಂಜುನಾಥ್: ಈಗ ರೆವಿನ್ಯೂ ಇಲಾಖೆಯಿಂದ ಫಾರೆಸ್ಟ್ ಇಲಾಖೆಗೆ ಲ್ಯಾಂಡ್ ಹ್ಯಾಂಡ್ ಓವರ್ ಮಾಡಿದ ಮೇಲೆ ನಮಗೆ ಅಲ್ಲಿ ಗಿಡ ಹಾಕುವುದಕ್ಕೆ ಅಧಿಕಾರ ಇದೆ. ತಾವು ಈಗ ಪ್ರಸ್ತಾಪಿಸಿದ್ದರ ಬಗ್ಗೆ ನನಗೆ ಬರೆದು ಕಳುಹಿಸಿ, ಅದರ ಬಗ್ಗೆ

ನೋಡೋಣ. ಬೇಕಾದರೆ ನಾನೂ ನಿಮ್ಮ ಜೊತೆ ಬರುತ್ತೇನೆ, ಖುದ್ದಾಗಿ ಅಲ್ಲಿಗೆ ಹೋಗಿ ಅಲ್ಲಿ ಏನಾಗಿದೆ ಎಂಬುದನ್ನು ನೋಡಿ ಸಮಸ್ಯೆ ಇತ್ಯರ್ಥ ಮಾಡೋಣ.

ಅಧ್ಯಕ್ಷರು: ಮಾನ್ಯ ಅರಗ ಜ್ಞಾನೇಂದ್ರರವರೇ ತಮ್ಮ ಭಾಷಣವನ್ನು ಇನ್ನೈದು ನಿಮಿಷಗಳಲ್ಲಿ ಕನ್‌ಕ್ಲೂಡ್ ಮಾಡಿ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಇವತ್ತೇ ಮುಗಿಸಬೇಕಾಗಿದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಒಕ್ಕಲೆಬ್ಬಿಸುವುದಿಲ್ಲ ಎಂದು ಸರ್ಕಾರ ಆಶ್ವಾಸನೆ ಕೊಟ್ಟಿತ್ತು, ಬೇಕಾದರೆ ಸರ್ಕಾರ ಕಡತ ತರಿಸಿ ನೋಡಲಿ. ಅರಣ್ಯ ಇಲಾಖೆಯ ಜಮೀನಿನಲ್ಲಿ ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅಂತಹ ಸಾಗುವಳಿಯನ್ನು ಬಡವರು ಮಾಡುತ್ತಿದ್ದರೆ, ದಲಿತರು ಮಾಡುತ್ತಿದ್ದರೆ ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಸರ್ಕಾರ ಭರವಸೆ ನೀಡಿತ್ತು. ಆದರೆ ಸರ್ಕಾರದ ಅಧಿಕಾರಿಗಳು ಪ್ರತಿನಿತ್ಯ ಅವರ ಮೇಲೆ ಕೇಸ್‌ಗಳನ್ನು ಹಾಕಿ ಅವರನ್ನು ಜೈಲಿಗೆ ಕಳುಹಿಸುವಂತಹ, ಅವರ ಮೇಲೆ ಇಲ್ಲದಿರುವ ಮೊಕದ್ದಮೆಗಳನ್ನು ಹಾಕುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ನನ್ನ ಕ್ಷೇತ್ರವೊಂದರಲ್ಲೇ 150 ಕೇಸ್‌ಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಸಾಗರ, ಹೊಸನಗರ ಹೀಗೆ ಮಲೆನಾಡಿನ ಈ ಭಾಗಗಳಲ್ಲಿ ಆ ರೀತಿ ನಡೆಯುತ್ತಿದೆ. ದೊಡ್ಡ ದೊಡ್ಡ ರೈತರು ಒತ್ತುವರಿ ಮಾಡಿರತಕ್ಕದ್ದನ್ನು ನಿಮಗೆ ಏನೂ ಮಾಡಲಿಕ್ಕೆ ಆಗುತ್ತಿಲ್ಲ. ನಿಮ್ಮ ಅರಣ್ಯ ಇಲಾಖೆಗೆ ಯಾವುದಕ್ಕೂ ಕೂಡ ಶಕ್ತಿ ಸಾಲದು. ಮಾರಿ ಕಣ್ಣು ಹೋರಿ ಮೇಲೆ ಎಂಬಂತೆ ನಿಮ್ಮ ಇಲಾಖೆಯ ಕಣ್ಣು ಅತ್ಯಂತ ಬಡವರ, ದಲಿತರ ಮೇಲೆ ಬೀಳುತ್ತಿದೆ. ಚಾಟಿ ತೆಗೆದುಕೊಂಡು ನಿಮ್ಮ ಇಲಾಖೆಯವರು ತಿರುಗುತ್ತಿದ್ದಾರೆ. ಮೊನ್ನೆ ಆಹಾರ ನಿಗಮದಲ್ಲಿನ ಅವ್ಯವಹಾರದ ಬಗ್ಗೆ ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಹಸಿರು ಕಾರ್ಡ್ ಹಂಚಿಕೆ ಬಗ್ಗೆ ಮಾನ್ಯ ಸಚಿವರು ಪ್ರತಿ ನಿತ್ಯವೂ ಪತ್ರಿಕೆಗಳಲ್ಲಿ ಇಷ್ಟು ಲಕ್ಷ ಹಸಿರು ಕಾರ್ಡ್‌ಗಳನ್ನು ಬಡವರಿಗೆ ವಿತರಣೆ ಮಾಡುತ್ತೇವೆ ಎಂದು ಹೇಳಿಕೆ ಕೊಡುತ್ತಿರುತ್ತಾರೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಸಚಿವರಿಗೆ ತಾವು ಪತ್ರಿಕಾ ಹೇಳಿಕೆಯನ್ನು ನೀಡದಂತೆ ಸೂಚನೆಯನ್ನು ನೀಡಬೇಕು. ಏಕೆಂದರೆ ಅವರು ಹೇಳುವುದೇ ಒಂದು, ಮಾಡುವುದೇ ಒಂದು. ಸಚಿವರ ಪತ್ರಿಕಾ ಹೇಳಿಕೆಯಿಂದಾಗಿ ಜನ ನಮ್ಮ ಬೆನ್ನತ್ತಿದ್ದಾರೆ, ಇವರ ದೆಸೆಯಿಂದಾಗಿ ನಾವು ಬೈಗುಳ ತಿನ್ನಬೇಕಾಗಿದೆ. ಹಸಿರು ಕಾರ್ಡ್ ಸರ್ವೆ ಮಾಡಲಿಕ್ಕೆ ಕಂದಾಯ ಇಲಾಖೆಯವರು ಒಪ್ಪುತ್ತಿಲ್ಲ. ನಮ್ಮ ಇಲಾಖೆ ಬೇರೆ, ನಿಮ್ಮ ಇಲಾಖೆಯೇ ಬೇರೆ ಎಂದು ಅವರು ಹೇಳುತ್ತಿದ್ದಾರೆ. ಆಹಾರ ಇಲಾಖೆಗೂ ಕಂದಾಯ ಇಲಾಖೆಗೂ ಹೊಂದಾಣಿಕೆ ಮಾಡಿಸುವವರು ಯಾರು? ವಿಲೇಜ್ ಅಕೌಂಟೆಂಟ್ ನಾನು ಸರ್ವೆ ಮಾಡಲಿಕ್ಕಾಗುವುದಿಲ್ಲ ಎಂಬ ಮಾತನ್ನು ಹೇಳುತ್ತಿದ್ದಾನೆ. ಹಾಗಾಗಿ ಹಸಿರು ಕಾರ್ಡ್ ವಿತರಣೆ ಇವರ ಸರ್ಕಾರದಲ್ಲಿ ಸಂಪೂರ್ಣವಾಗಿ ಪತ್ರಿಕೆಗಳಲ್ಲಿ ಆಗುತ್ತಿದೆಯೇ ಹೊರತು ಬಡವರ ಮನೆಗೆ ತಲುಪಿಲ್ಲ. ಅವರು ಅಕ್ಕಿ ಮತ್ತು ಸಕ್ಕರೆ ಪಡೆಯುವಂತಹ

ಪರಿಸ್ಥಿತಿಯಲ್ಲಿ ಇಲ್ಲ. ಆಹಾರ ನಿಗಮದಲ್ಲಿ ನಡೆದಿರುವ ಅವ್ಯವಹಾರ ನೀವು ಯಾವ ರೀತಿ ಆಡಳಿತ ನಡೆಸುತ್ತಿದ್ದೀರಿ ಎಂಬುದಕ್ಕೆ ಸಾಕ್ಷಿಯಾಗಿದೆ. ಆಹಾರ ನಿಗಮದಲ್ಲಿ ನಡೆದಿರತಕ್ಕ ಅವ್ಯವಹಾರದಲ್ಲಿ ಒಳಗೊಂಡ 146.98 ಲಕ್ಷ ರೂ.ಗಳಲ್ಲಿ ಒಂದು ಪೈಸೆಯನ್ನೂ ಕೂಡ ನಿಮಗೆ ವಸೂಲು ಮಾಡಲಿಕ್ಕಾಗಲಿಲ್ಲ. 21 ಖಾಸಗಿ ಅಕ್ಕಿ ಗಿರಣಿಗಳಿಂದ ಸರ್ಕಾರಕ್ಕೆ ಬರಬೇಕಾಗಿದ್ದ 2 ಕೋಟಿ 88 ಲಕ್ಷ 17 ಸಾವಿರದ 150 ರೂ.ಗಳ ಬಾಕಿಯನ್ನು ಇವತ್ತಿನವರೆಗೂ ಕೂಡ ಅವರಿಂದ ವಸೂಲಿ ಮಾಡುವಂತಹ, ಅವರ ಅಕೌಂಟ್ಸ್ ಸೆಟ್ ರೈಟ್ ಮಾಡುವಂತಹ ಕೆಲಸ ನಿಮ್ಮ ನಿಗಮದಲ್ಲಿ ಯಾರೂ ಕುಳಿತು ಮಾಡಲೇ ಇಲ್ಲ. ಭ್ರಷ್ಟಾಚಾರ ಸಾಕಷ್ಟು ಆಗಿದೆ. ಲೋಕಾಯುಕ್ತ ಮೂರು ವರ್ಷಗಳ ಧಾಳಿ ನಡೆಸಿ 44 ಪ್ರಕರಣಗಳನ್ನು ಕಂಡು ಹಿಡಿದಿದೆ ಎಂದು ಹೇಳುತ್ತೀರಿ. ಅದರಲ್ಲಿ ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಮಾಲೋಚನೆ ಮಾಡುತ್ತಿರುವಂತಹ ಎರಡು ಪ್ರಕರಣಗಳಿವೆ ಮಾತ್ರ. ಒಟ್ಟಾರೆ ಹಿಡಿದಿರತಕ್ಕಂತಹ ಹಣ ಎಷ್ಟೆಂದರೆ, 24,8,375 ನಗದು, ಬ್ಯಾಂಕ್ ಡಪಾಸಿಟ್ ಒಂದು ಕೋಟಿ ಇಪ್ಪತ್ತೊಂದು ಲಕ್ಷದ 53,220, ಆಭರಣ, 88,61,153 ಇಷ್ಟು ಹಣದ ಆಭರಣ. ಇದು ಭ್ರಷ್ಟಾಚಾರ ಆಗಿ ಲೋಕಾಯುಕ್ತ ನಡೆಸಿರತಕ್ಕಂತಹ ಧಾಳಿಯೇ ಕಡಿಮೆ. ಅದರಲ್ಲಿ ಯಾರ ಮೇಲೆಯೂ ಕ್ರಿಮಿನಲ್ ಕೇಸ್ ಹಾಕಲಿಲ್ಲ, ಯಾರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಈ ರೀತಿಯಲ್ಲಿ ಭ್ರಷ್ಟಾಚಾರಿಗಳಿಗೆ ಇನ್ನಷ್ಟು ಸ್ಕೋಪ್ ಕೊಡುವಂತಹ ಕೆಲಸ ನಿಮ್ಮ ರಾಜ್ಯದಲ್ಲಿ ನಡೆದು ಬಂದಿದೆ. ನಾಲ್ಕು ವರ್ಷದಿಂದ ಇವರು ಒಟ್ಟಾಗಿ ಇದ್ದರೇ ಎಂದು ನನಗೆ ಆಶ್ಚರ್ಯವಾಗುತ್ತದೆ. ಈ ಸರ್ಕಾರ ಹೇಗೆ ನಡೆದು ಬಂದಿತು, ಇವರು ಒಟ್ಟಾಗಿ ಇರಲಿಕ್ಕೆ ಏಕೆ ಲಾಯಕ್ ಇಲ್ಲವೆಂದರೆ, ಇವರೆಲ್ಲರೂ ಒಂದು ಪಕ್ಷಕ್ಕೆ ಸೇರಿದವರಲ್ಲ. ಒಂದು ಪಕ್ಷದ ಒಂದು ಸಿದ್ಧಾಂತದ ತಳಹದಿಯಿಂದ ಬಂದವರಲ್ಲ. ಬೇರೆ ಬೇರೆ ತತ್ವ, ಸಿದ್ಧಾಂತ, ಉದಾಹರಣೆಗೆ, ಪಿ.ಜಿ.ಆರ್.ಸಿಂಧ್ಯರವರು, ಬಂಗೇರರವರು ನಮ್ಮ ಕಡೆಯವರು. ಬಸವಣ್ಣಪ್ಪನವರು, ನಾಗೇಗೌಡರು, ಮೊಹಿಯುದ್ದೀನ್‌ರವರು, ರೋಷನ್‌ಬೇಗ್‌ರವರು, ಮತ್ತು ಶಿವಪ್ಪನವರು ಇವರೆಲ್ಲಾ ಕಾಂಗ್ರೆಸ್ ಪಕ್ಷದಿಂದ ಬಂದವರು. ಹೀಗೆ ಬೇರೆ ಬೇರೆ ಕಡೆಯಿಂದ ಬಂದು ಅಧಿಕಾರ ಹಿಡಿಯುವುದಕ್ಕಾಗಿ ಒಂದು ಪಕ್ಷ ಎಂದು ಮಾಡಿ, ಅವಕಾಶವಾದಿ ರಾಜಕಾರಣವೇ ಹೊರತು ಯಾವ ಸಿದ್ಧಾಂತವಾದಿ ರಾಜಕಾರಣ ಅದರಲ್ಲಿ ಇಲ್ಲ. ನೀವು ನಾಲ್ಕು ವರ್ಷಗಳಿಂದ ಹೇಗೆ ಬೆಳೆದುಕೊಂಡು ಬಂದಿರಿ ಎಂಬುದೇ ಬಹಳ ದೊಡ್ಡ ಆಶ್ಚರ್ಯ. ನೀವು ಹೇಗೆ ನಡೆಸಿಕೊಂಡು ಬಂದಿರಿ ಎಂಬ ಬಗ್ಗೆ ನನಗೆ ಒಂದು ಘಟನೆ ನೆನಪು ಬರುತ್ತದೆ. '' ಒಬ್ಬ ಮಹಾರಾಜನಿಗೆ ಅವನ ಜಾತಕದಲ್ಲಿ ಅತ್ಯಂತ ದರಿದ್ರನಾಗತಕ್ಕಂತಹ ಅವಕಾಶವಿದೆ. ಅವನು ರಾಜನಾಗುವುದಕ್ಕೆ ಮತ್ತು ಸಿಂಹಾಸನದ ಮೇಲೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಜ್ಯೋತಿಷಿಗಳೆಲ್ಲಾ ಚರ್ಚೆ ಮಾಡುತ್ತಾರೆ, ಇವನ ಜಾತಕದ ಪ್ರಕಾರ ರಾಜನಾಗುವ ಹಾಗಿಲ್ಲ, ಆದರೂ ಹೇಗೆ ರಾಜನಾಗಿದ್ದಾನೆಂದು, ಒಂದು ಕಾನ್ಫರೆನ್ಸ್

ನಡೆದು ಬಹಳ ಚರ್ಚೆಯಾಗಿ, ಅದರಲ್ಲಿ ಇದನ್ನು ತಪಾಸಣೆ ಮಾಡಿ ಕಂಡುಹಿಡಿಯುವುದಕ್ಕೋಸ್ಕರ ಒಂದು ಕಮಿಟಿಯನ್ನು ರಚನೆ ಮಾಡುತ್ತಾರೆ. ಆಗ ಆ ಕಮಿಟಿಯವರು ತಪಾಸಣೆ ಮಾಡುತ್ತಾ, ಈತ ಮಹಾರಾಜ ಆಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಆಗ ಮಹಾರಾಜರಿಗೆ ಕರೆಸಿ ಏನಾದರೂ ಮಾಡಬೇಕು, ಇದರ ಗುಟ್ಟು ಏನು ಎಂದು ನಾವು ನೋಡಬೇಕಾಗಿದೆ. ಇಡೀ ದೇಶದ ಜ್ಯೋತಿಷಕ್ಕೆ ನೀನು ಮಹಾರಾಜನಾಗಿರುವುದು ಒಂದು ಸವಾಲಾಗಿದೆ ಎಂದು ಹೇಳಿ, ಅವನಿಗೆ ಕರೆಸಿ ಒಂದು ರೂಮಿನಲ್ಲಿ ಕೂಡಿ ಹಾಕಿ ಹೇಳುತ್ತಾರೆ, ನಿನ್ನ ಮೈ ಮೇಲೆ ಏನಾದರೂ ಮಚ್ಚೆ ಇದ್ದರೆ ನೋಡಬೇಕೆಂದು ಹೇಳುತ್ತಾರೆ. ಆಗ ಅವನ ಬಟ್ಟೆ ಬಿಚ್ಚಿಸಿ ನೋಡುವಾಗ ಅವನ ಕುಂಡಿ ಮೇಲೆ ಒಂದು ಮಚ್ಚೆ ಇತ್ತು. ಅವನ ಕುಂಡಿ ಮೇಲಿರುವ ಮಚ್ಚೆಯಿಂದ ಅವನಿಗೆ ಸಿಂಹಾಸನದಲ್ಲಿ ಕೂರುವಂತಹ ಅದೃಷ್ಟ ಇತ್ತು. ಹಾಗಾಗಿ ಇಲ್ಲೂ ಯಾರದೋ ಕುಂಡಿ ಮೇಲೆ ಏನೋ ಇರಬೇಕು. ಹಾಗಾಗಿ ಇವರು ನಾಲ್ಕು ವರ್ಷ ಅಧಿಕಾರದಲ್ಲಿದ್ದಾರೆ. ಇಲ್ಲದಿದ್ದರೆ ಇವರು ಅಧಕಾರದಲ್ಲಿರುವುದಕ್ಕೆ ಸಾಧ್ಯವೇ ಇಲ್ಲ''. ಈ ರೀತಿಯಾಗಿ ಇವತ್ತು ಸರ್ಕಾರ ನಾಲ್ಕು ವರ್ಷ ನಡೆದು ಬಂದಿದೆ. ಈ ರಾಜಕಾರಣದಲ್ಲಿ ನೀವು ಇಷ್ಟು ದಿನ ಈ ರಾಜ್ಯದ ಸೇವೆ ಮಾಡಿದ್ದು ಸಾಕು, ಇನ್ನಾದರೂ ಕೂಡ ಈ ರಾಜ್ಯವನ್ನು ಉಳಿಸಬೇಕಾದರೆ, ಜೆ.ಹೆಚ್.ಪಟೇಲರ ಕುಂಡಿ ಮೇಲೋ ಯಾರ ಮೇಲೋ ಇರಬೇಕು. ಆದ್ದರಿಂದ ಇನ್ನು ನಿಮ್ಮ ಸೇವೆ ಸಾಕು ದಯಮಾಡಿ ನೀವು ಅಧಿಕಾರದಿಂದ ಇಳಿಯಿರಿ, ಆ ಭಿನ್ನಮತೀಯರು ಇಡೀ ದಿವಸ ಕಾಟ ಕೊಡುತ್ತಿದ್ದಾರೆ. ಅವರು ನಿಮಗೆ ಏನಾದರೂ ಅನಿಸಿಕೆ ಇದ್ದರೆ ಈ ನಿರ್ಣಯದ ಪರ ಓಟು ಹಾಕಬೇಕು, ಇಲ್ಲದಿದ್ದರೆ, ನಿಮ್ಮದು ಅನಾವಶ್ಯಕ ಬೂಟಾಟಿಕೆ ರಾಜಕಾರಣವಾಗುತ್ತದೆ. ಆದ್ದರಿಂದ ನೀವು ಇಳಿದು ಹೋದರೆ ಸಾಕು ಈ ರಾಜ್ಯದ ಜನತೆಗೆ ಅಷ್ಟೊಂದು ಒಳ್ಳೆಯದಾಗುತ್ತದೆ. ಉಪಕಾರವಾಗುತ್ತದೆ. ಆದ್ದರಿಂದ ಭಿನ್ನಮತೀಯರು ಏನು ಹಾರಾಡುತ್ತಿದ್ದೀರಿ, ದಯಮಾಡಿ ನಿಮಗೆ ಈ ರಾಜ್ಯದ ಜನತೆ ಬಗ್ಗೆ ಕಳಕಳಿ ಇದ್ದು, ರಾಜ್ಯ ಬೊಕ್ಕಸ ಸರಿಯಾಗಿ ಸದ್ವಿನಿಯೋಗವಾಗಬೇಕೆಂದು ಕಳಕಳಿ ಇದ್ದರೆ, ನಾಳೆ ದಿನ ನಮ್ಮ ಜೊತೆಗೆ ಎದ್ದು ನಿಂತು ಕೈ ಎತ್ತಬೇಕು. ಜನ ಸೇವೆ ಮಾಡುವುದಕ್ಕೋಸ್ಕರ ನೀವು ಬಂದಿರತಕ್ಕಂಥವರು, ಜನಪರವಾಗಿರತಕ್ಕಂತವರು, ಅನ್ನುವಂಥದ್ದನ್ನು ತೋರಿಸಬೇಕು ಅನ್ನುವಂತಹ ವಿನಂತಿಯನ್ನು ಮಾಡುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಸನ್ಮಾನ್ಯ ಸಭಾಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡತಕ್ಕಂತಹ ಅವಕಾಶ ಕೊಟ್ಟಿದ್ದಕ್ಕೆ ನಾನು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈಗಾಗಲೇ, ನಮ್ಮ ಪ್ರತಿ ಪಕ್ಷದ ನಾಯಕರಾದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಸರ್ಕಾರದ ಬಗ್ಗೆ, ಈ ಸರ್ಕಾರದ ವೈಫಲ್ಯಗಳ ಬಗ್ಗೆ,

ಈ ಸರ್ಕಾರದ ಅಧಿಕಾರ ದುರುಪಯೋಗದ ಬಗ್ಗೆ, ಈ ಸರ್ಕಾರದ ಮಿತಿ ಮೀರಿದ ಹಸ್ತಕ್ಷೇಪದ ಬಗ್ಗೆ ಸುಮಾರು 23 ಆರೋಪ ಪಟ್ಟಿಗಳನ್ನು ಮಾಡಿ ಈ ಸಭೆಯಲ್ಲಿ ಮಂಡಿಸಿದ್ದಾರೆ. ಅವರು ಆರೋಪ ಮಾಡಿರುವಂತಹ ಎಲ್ಲಾ ಆರೋಪಗಳು ನಿಜ ಇವೆ. ನಾನೂ ಸಹ ಬೆಂಬಲವನ್ನು ವ್ಯಕ್ತಪಡಿಸಿ ಬಹುಶಃ ನಾನೇ ಅಲ್ಲ, ಇನ್ನು ಅನೇಕ ಜನ ಸದಸ್ಯರು ಈ ಸದನದಲ್ಲಿ ಮಾತನಾಡಿದ್ದಾರೆ. ಇದನ್ನು ವಿಶೇಷವಾಗಿ ಈ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದಾರೆ. ಆ ಸದಸ್ಯರೂ ಸಹ ಈ ಸರ್ಕಾರದ ವೈಫಲ್ಯವನ್ನು ಅಂಕಿ ಅಂಶಗಳ ಸಮೇತ ಎತ್ತಿ ತೋರಿಸಿದ್ದಾರೆ. ಈ ಸರ್ಕಾರದ ಕಾರ್ಯವೈಖರಿ ಯಾವ ರೀತಿ ನಡೆಯುತ್ತಿದೆ, ಈ ಸರ್ಕಾರದ ವೈಫಲ್ಯ ಏನು, ಅದರಿಂದ ಸಾರ್ವಜನಿಕವಾಗಿ ಆಗುತ್ತಿರತಕ್ಕಂತಹ ತೊಂದರೆಗಳೇನು, ಸಾರ್ವಜನಿಕರ ಬಗ್ಗೆ ಈ ಸರ್ಕಾರ ಎಷ್ಟು ಕಾಳಜಿ ಇಟ್ಟುಕೊಂಡಿದೆ ಅನ್ನತಕ್ಕಂತಹ ವಿಚಾರವನ್ನು ಬಹಳ ವಿಶೇಷವಾಗಿ ಈ ಅವಿಶ್ವಾಸ ನಿರ್ಣಯವನ್ನು ಅನಿವಾರ್ಯವಾಗಿ ತಂದಿರತಕ್ಕಂಥದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ನಡೆಸುತ್ತಿರತಕ್ಕಂತಹ ವ್ಯವಸ್ಥೆಯಲ್ಲಿ ಇದು ಕಡೆಯ ಅಸ್ತ್ರ. ಅನಿವಾರ್ಯವಾಗಿ ಇಂತಹ ಪರಿಸ್ಥಿತಿಯನ್ನು ತರಬೇಕಾದರೆ ಅದಕ್ಕೆ ಬಹಳಷ್ಟು ಕಾರಣಗಳಿವೆ. ಕಳೆದ ನಾಲ್ಕು ವರ್ಷಗಳಿಂದ ನಮ್ಮ ಪಕ್ಷ ಆರೋಪಗಳನ್ನು ಮಾಡಿಕೊಂಡು ಬಂದಿದೆ. ಅನೇಕ ಆರೋಪಗಳು ಮತ್ತು ಈ ಸರ್ಕಾರದ ವೈಫಲ್ಯಗಳನ್ನು ಎಷ್ಟೇ ಹೇಳಿದರೂ ಸಹ, ಅದರ ಕಡೆ ಸರ್ಕಾರ ಗಮನ ಕೊಡುತ್ತಿರಲಿಲ್ಲ. ತಮಗೆ ಗೊತ್ತಿದ್ದ ಹಾಗೆ ಇತ್ತೀಚೆಗೆ ಆಡಳಿತ ಪಕ್ಷದಲ್ಲಿರುವಂತಹ ಆಡಳಿತ ಪಕ್ಷಕ್ಕೆ ಬೆಂಬಲ ಕೊಡತಕ್ಕಂತಹ ಸದಸ್ಯರೆ ಒಂದು ದೊಡ್ಡ ಸಮೂಹ ಈ ಸರ್ಕಾರದ ವೈಫಲ್ಯಗಳ ಪಟ್ಟಿ ಮಾಡಿ ಅದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿರತಕ್ಕಂಥದ್ದು, ಚರ್ಚೆ ರೈಲ್ವೆ ಸ್ಟೇಷನ್‌ವರೆಗೂ ಹೋಗಿದೆ. ರೈಲ್ವೆ ಸ್ಟೇಷನ್‌ನಲ್ಲಿ ಒಂದು ದೊಡ್ಡ ಸಭೆ ಮಾಡಿ ಈ ಸರ್ಕಾರದ ಮೇಲೆ ಛಾರ್ಜ್ ಮಾಡುತ್ತಾರೆ. ಈ ಸರ್ಕಾರ ಯಾವುದೇ ಕಾರಣಕ್ಕೂ ಅಧಿಕಾರದಲ್ಲಿರುವುದಾದರೆ ಇದರಿಂದ ಇಡೀ ರಾಜ್ಯದ ಅಭಿವೃದ್ಧಿಗೆ ಮತ್ತು ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿದ ಹಾಗಾಗುತ್ತದೆ ಅನ್ನತಕ್ಕಂತಹ ವಿಚಾರವನ್ನು ರೈಲ್ವೆ ಸ್ಟೇಷನ್‌ನಲ್ಲಿ ದೊಡ್ಡ ಭಾಷಣದ ಮುಖಾಂತರ ಚರ್ಚೆಯಾಗಿರುವ ವಿಷಯ ತಮಗೂ ಗೊತ್ತಿದೆ. ಈ ರಾಜ್ಯದ ಜನತೆಗೂ ಗೊತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಅವಿಶ್ವಾಸ ನಿರ್ಣಯವನ್ನು ನಮ್ಮ ಪಕ್ಷ ಮತ್ತು ಭಾರತೀಯ ಜನತಾ ಪಕ್ಷ ಇಬ್ಬರೂ ಸೇರಿ ಮಂಡನೆ ಮಾಡಿದ್ದೇವೆ. ರಾಜ್ಯ ಸರ್ಕಾರದ ವೈಫಲ್ಯಗಳು ಯಾವ ರೀತಿ ನಡದುಕೊಂಡು ಹೋಗಿದೆ, ಇದರ ಬಗ್ಗೆ ಪಟ್ಟಿ ಮಾಡಿರತಕ್ಕಂತಹ ವಿಚಾರ ಹೆಚ್ಚಿಗೆ ಹೇಳಬೇಕಾಗಿಲ್ಲ. ವಿಶೇಷವಾಗಿ ವಿದ್ಯುತ್ತಿನ ಪರಿಸ್ಥಿತಿ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ವಿದ್ಯುತ್ತಿನ ಒಂದು ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಮಗೆ ಎಷ್ಟು ಬೇಡಿಕೆ ಇದೆ ಅಷ್ಟು ಉತ್ಪಾದನೆ ಇಲ್ಲ ಅನ್ನತಕ್ಕಂಥದ್ದು ಇಡೀ ರಾಜ್ಯಕ್ಕೆ ತಿಳಿದಿರತಕ್ಕ ವಿಚಾರ. ಅದೇ ಸಂದರ್ಭದಲ್ಲಿ ನಮ್ಮ ಬಳಕೆದಾರರು ಯಾರೂ 24 ಗಂಟೆ ವಿದ್ಯುತ್ ಕೊಡಿ ಎಂದು ಯಾರೂ ಕೂಡ ಸರ್ಕಾರಕ್ಕೆ ಒತ್ತಾಯ ಮಾಡುತ್ತಿಲ್ಲ. ವಿಶೇಷವಾಗಿ ವ್ಯವಸಾಯಗಾರರಿಗೆ ಕನಿಷ್ಟ 12 ಗಂಟೆ ವಿದ್ಯುತ್ತನ್ನು ಕೊಡಬೇಕೆಂಬ

ಒತ್ತಾಯವನ್ನು ಸರ್ಕಾರದ ಮೇಲೆ ಹೇರುತ್ತಾ ಬಂದಿದ್ದಾರೆ. ಇದೇ ಸರ್ಕಾರ ಮಾನ್ಯ ಹಿಂದೆ ಇದ್ದಂತಹ ಮುಖ್ಯ ಮಂತ್ರಿಗಳು ಮತ್ತು ಈಗಿರತಕ್ಕಂತಹ ಮುಖ್ಯ ಮಂತ್ರಿಗಳು ಸರ್ಕಾರದಲ್ಲಿರುವಂತಹ ಹಿರಿಯ ಮಂತ್ರಿಗಳು ಒಂದು ವರ್ಷದಲ್ಲಿ ದಿನಕ್ಕೆ 12 ಗಂಟೆ ವಿದ್ಯುತ್ತನ್ನು ಕೊಡುವುದಕ್ಕೆ ಖಂಡಿತ ಪ್ರಯತ್ನ ಮಾಡುತ್ತೇವೆಂದು ಅನೇಕ ಸಾರ್ವಜನಿಕ ಸಭೆಗಳಲ್ಲಿ ಹೇಳಿದ್ದಾರೆ. ಸಾರ್ವಜನಿಕವಾಗಿ ಆಶ್ವಾಸನೆ ಕೊಟ್ಟಿದ್ದಾರೆ. ರೈತ ಇವತ್ತು ಏನು ಉತ್ಪಾದನೆ ಮಾಡುತ್ತಾನೆ, ಅದಕ್ಕೆ ವೈಜ್ಞಾನಿಕವಾಗಿ ಉತ್ಪಾದನಾ ವೆಚ್ಚದ ಆಧಾರದ ಮೇಲೆ ರಾಜ್ಯದಲ್ಲಾಗಲಿ, ರಾಷ್ಟ್ರ ಮಟ್ಟದಲ್ಲಾಗಲಿ ನಿಗದಿಯಾಗಿಲ್ಲ. ಇಂತಹ ವಿಶೇಷವಾದ ಸಂದರ್ಭದಲ್ಲಿ, ನೇರವಾಗಿ ಆದು ತಮ್ಮದೇ ಆದ ಸ್ವಂತ ಹಣದಿಂದ ಸಾಲ ಪಡೆದು ಬೇರೆ ವ್ಯವಸ್ಥೆಗಳ ಮೂಲಕ ಅವನು ಕೊಳವೆ ಬಾವಿನೋ, ತೆರೆದ ಬಾವಿನೋ ಹಾಕಿಕೊಂಡು ವಿದ್ಯುತ್ತನ್ನು ಇವರಿಗೆ ಕೇಳುತ್ತಾನೆ. ರೈತ ಕೇಳತಕ್ಕಂತಹ ವಿದ್ಯುತ್ತಿಗೆ ಇವರು ಛಾರ್ಜ್ ಹಾಕುವುದಕ್ಕೆ ನಿರ್ಬಂಧ ಇರಬೇಕಾಗಿತ್ತು. ದುರಾದೃಷ್ಟ ರೈತರ ಹೆಸರಿನಲ್ಲಿ ಬಂದಂತಹ ಸರ್ಕಾರ ಇದು. ರೈತರ ಹೆಸರು ಹೇಳಿಕೊಂಡು ಬಂದಂತಹ ಸರ್ಕಾರ. ರೈತರಿಗೋಸ್ಕರ ಇರುತ್ತೇವೆಂದು ಪಣ ತೊಟ್ಟು ಬಂದಂತಹ ಸರ್ಕಾರ.

2.10 ಪಿ.ಎಂ

ರೈತರ ಹೆಸರನ್ನು ಹೇಳಿಕೊಂಡು ಆಯ್ಕೆಯಾಗಿ ಬಂದಂಥ ಈ ಸರ್ಕಾರ ನೇರವಾಗಿ ರೈತರ ಮೇಲೆ ವಿದ್ಯುತ್ ದರ ಏರಿಸಿ ಹೊರೆಯನ್ನು ಹಾಕಿದೆ. ಇಂದಿನ ವಿದ್ಯುತ್ ಉತ್ಪಾದನೆ ಬಗ್ಗೆ ಮತ್ತು ಆ ಮೂಲಕ ವಿದ್ಯುತ್ ಮಂಡಳಿಗೆ ವಿಶ್ವ ಬ್ಯಾಂಕ್‌ನವರು ಒಂದು ಅಬ್ಜೆಕ್ಷನ್ ರೈಸ್ ಮಾಡಿ ನೀವು ಉಚಿತವಾಗಿ ವಿದ್ಯುತ್‌ನ್ನು ಸರಬರಾಜು ಮಾಡಿದರೆ ನಿಮಗೆ ಮರು ಸಾಲವನ್ನು ಕೊಡಲು ನಮಗೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾವೆಲ್ಲರೂ ಮನ್ನಣೆ ಕೊಟ್ಟಿದ್ದೇವಲ್ಲದೆ ರೈತರೂ ಕೂಡ ಮನ್ನಣೆ ಕೊಟ್ಟರು. ಅಂದಿನಿಂದ ನೀವು ಒಂದು ಹೆಚ್.ಪಿ.ಗೆ 300-00 ರೂ.ಗಳನ್ನು ಹಾಕುವ ವ್ಯವಸ್ಥೆಯನ್ನು ತಂದಿರಿ. ರೈತರು ಇದಕ್ಕೆ ಯಾರೂ ವಿರೋಧ ಮಾಡಲಿಲ್ಲ. ಆದರೆ ರೈತನಿಗೆ ಏನು 12 ಗಂಟೆಗಳ ಕಾಲ ನಿಲುಗಡೆರಹಿತ ವಿದ್ಯುತ್ ಬೇಕಾಗಿತ್ತೋ ಆ ರೀತಿಯಲ್ಲಿ ನೀವು 12 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಇದಲ್ಲದೇ ಸರ್ಕಾರ ಇನ್ನೊಂದು ಆದೇಶವನ್ನು ನೀಡಿದೆ. ಅದೆಂದರೆ ಯಾವುದೇ ಪ್ರದೇಶದಲ್ಲಿ ಬಳಕೆದಾರರಾಗಿ ರೈತರಿರಬಹುದು ಅಥವಾ ಮತ್ಯಾವುದೇ ರೀತಿಯ ವಿದ್ಯುತ್ ಪಡೆಯುವ ಗ್ರಾಹಕರಿರಬಹುದು ಅಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟರೆ ಅದನ್ನು ದುರಸ್ತಿ ಮಾಡಬೇಕಾದರೆ ಆ ಪ್ರದೇಶದ ಎಲ್ಲಾ ವಿದ್ಯುತ್ ಬಳಕೆದಾರರು ವಿದ್ಯುತ್ ಬಿಲ್‌ನ್ನು ಸಂಪೂರ್ಣವಾಗಿ ಕಟ್ಟಿರಬೇಕು. ಒಂದು ವೇಳೆ ಯಾವುದೇ ಒಬ್ಬ ಗ್ರಾಹಕ ವಿದ್ಯುತ್ ಬಿಲ್ ಕಟ್ಟಿರದಿದ್ದರೆ ಟ್ರಾನ್ಸ್‌ಫಾರ್ಮರ್ ದುರಸ್ತಿ ಮಾಡಲಾಗುವುದಿಲ್ಲವೆಂದು ಆದೇಶವನ್ನು ಹೊರಡಿಸಿದ್ದಾರೆ. ಯಾವುದೇ ಯೋಚನೆ ಮಾಡದೇ ಬ್ಲೈಂಡ್ ಆಗಿ ಇಂಥ ಒಂದು

ಆದೇಶವನ್ನು ಹೊರಡಿಸಿ ರೈತರಿಗೆ ನೇರವಾಗಿ ಈ ಸರ್ಕಾರ ಅನ್ಯಾಯ ಮಾಡಿದೆ. ನಾನು ಹೇಳುವುದೇನೆಂದರೆ ಆ ಪ್ರದೇಶದಲ್ಲಿ ಯಾರು ವಿದ್ಯುತ್ ಬಿಲ್‌ನ್ನು ಪಾವತಿ ಮಾಡಿರುವುದಿಲ್ಲ ಅಂಥವರ ಮೇಲೆ ಕ್ರಮ ಕೈಗೊಂಡು ವಿದ್ಯುತ್ ಸಂಪರ್ಕವನ್ನು ಕಡಿದುಹಾಕಲಿ. ಅದನ್ನು ಬಿಟ್ಟು ಆ ಪ್ರದೇಶದ ಎಲ್ಲಾ ವಿದ್ಯುತ್ ಬಳಕೆದಾರರಿಗೆ ತೊಂದರೆಯಾಗುವ ಹಾಗೆ ಟ್ರಾನ್ಸ್‌ಫಾರ್ಮರ್ ಬೇರೆ ಹಾಕುವುದಿಲ್ಲವೆಂದರೆ ಇದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಇಂಥ ಒಂದು ಕೆ.ಇ.ಬಿ. ಆದೇಶದ ಬಗ್ಗೆ ಸರ್ಕಾರ ಯೋಚನೆ ಮಾಡಿಲ್ಲವೆಂದರೆ ಇದಕ್ಕಿಂತ ಹೆಚ್ಚಿನ ಅನ್ಯಾಯ ರೈತರಿಗೆ ಆಗಿಲ್ಲವೆಂದರೆ ತಪ್ಪಾಗುವುದಿಲ್ಲ. ವಿಶೇಷವಾಗಿ ಹೇಳುವುದಾದರೆ ರೈತರದು ವಿದ್ಯುತ್ ಬಿಲ್ ಬಾಕಿಯಿಲ್ಲ. ಅಂದಿನ ಮುಖ್ಯಮಂತ್ರಿಗಳಾದ ದಿ: ಗುಂಡೂರಾಯರು ರೈತರ ಬಗ್ಗೆ ಕಾಳಜಿ ವಹಿಸಿ ಈ ರಾಜ್ಯದ ರೈತರಿಗೆ ನೇರವಾಗಿ ನಾವು ಯಾವ ಸವಲತ್ತುಗಳನ್ನೂ ಕೊಟ್ಟಿಲ್ಲವೆಂದು ಹೇಳಿ ರೈತರು ಸ್ವಂತ ಹಣದಿಂದ ಕೊಳವೆ ಬಾವಿಯನ್ನು ತೆಗೆಸಿ ಪಂಪ್‌ಸೆಟ್‌ನ್ನು ಏನು ಅಳವಡಿಸಿಕೊಂಡಿರುತ್ತಾರೋ ಅದಕ್ಕೆ ಒದಗಿಸುವ ವಿದ್ಯುತ್ ಸರಬರಾಜಿನಲ್ಲಿ ಒಂದು ಹೆಚ್.ಪಿ.ಗೆ ಕನಿಷ್ಟ 50-00 ರೂ.ಗಳನ್ನು ಮಾತ್ರ ಫಿಕ್ಸ್ ಮಾಡಿದರು. ಆದರೆ ಈ ಸರ್ಕಾರದವರು 300-00 ರೂ.ಗಳನ್ನು ಫಿಕ್ಸ್ ಮಾಡಿದರು. ಈ ರೀತಿ ಹಾಕಿದ್ದರೂ ಕೂಡ ಒಂದು ಹೆಚ್.ಪಿ. ಪವರ್‌ಗೆ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ 10 ಸಾವಿರ ರೂ.ಗಳಿಗೂ ಹೆಚ್ಚಿನ ಹಣವನ್ನು ಕಟ್ಟಬೇಕಾಗುತ್ತದೆ. ಒಬ್ಬ ಸಾಮಾನ್ಯ ರೈತರ ಒಂದು ಐ.ಪಿ. ಸೆಟ್‌ಗೆ ಪವರ್ ಕನೆಕ್ಷನ್ ತೆಗೆದುಕೊಳ್ಳಬೇಕೆಂದರೆ ಒಂದು ಕಂಬವಿದ್ದರೆ 10 ಸಾವಿರ ರೂ.ಗಳನ್ನು ಅಥವಾ ಹೆಚ್ಚು ಕಂಬಗಳಿದ್ದರೆ ಅದಕ್ಕೆ ತಗಲತಕ್ಕಂಥ ಪೂರ್ಣ ವೆಚ್ಚವನ್ನೂ ಕೂಡ ರೈತನೇ ಭರಿಸಬೇಕಾಗುತ್ತದೆ. ಈ ರೈತನಿಗೆ ಯಾವ ಪ್ರಮಾಣದಲ್ಲಿ ಹೊರೆಯನ್ನು ಏರಿಸಿ ಆತನಿಗೆ ಪೆಟ್ಟನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದಲ್ಲದೇ ಅನೇಕ ಅಭಿವೃದ್ಧಿ ವಿಷಯಗಳಲ್ಲಿ ಈ ಸರ್ಕಾರ ಯಾವ ರೀತಿಯಲ್ಲಿ ವಿಫಲರಾಗಿದ್ದಾರೆ ಎಂಬ ವಿಷಯ ತಮಗೂ ಗೊತ್ತಿರತಕ್ಕಂಥದ್ದೇ ಆಗಿದೆ. ಇನ್ನು ಪಿ.ಡಬ್ಲ್ಯೂ.ಡಿ. ಇಲಾಖೆ ಬಗ್ಗೆ ಹೇಳಬೇಕೆಂದರೆ, ಇದರಡಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 30 ಲಕ್ಷ ರೂ.ಗಳನ್ನು ಎಂ.ಎಲ್.ಎ. ಗ್ರ್ಯಾಂಟ್ ಎಂದು ಹೇಳಿ ಕೊಟ್ಟರು. ಇದರಿಂದ ನಾವು ಸಂತೋಷಗೊಂಡು ಬಹಳ ದಿವಸಗಳಿಂದ ದುರಸ್ತಿ ಮಾಡಿಸಬೇಕಾದ ರಸ್ತೆಗಳನ್ನು ಈ ಹಣದಿಂದ ದುರಸ್ತಿ ಮಾಡಿಸಬಹುದು ಎಂದುಕೊಂಡೆವು. ನಾವು ನಮ್ಮ ಕ್ಷೇತ್ರದಲ್ಲಿ ಸಾರ್ವಜನಿಕರಿಗೆ ವಾಹನ ಓಡಿಸಲು ತೊಂದರೆಯಾಗಿದ್ದಂಥ ಕೆಲವು ರಸ್ತೆಗಳನ್ನು ದುರಸ್ತಿ ಮಾಡಲು ಲೋಕೋಪಯೋಗಿ ಇಲಾಖೆಗೆ ವಹಿಸಿದೆವು. ಈ ರಸ್ತೆಗಳಲ್ಲಿ ಕೆಲವು ರಸ್ತೆಗಳನ್ನು ನಿರ್ಮಿಸಿದ್ದಾರೆ, ಆದರೆ ಇನ್ನೂ ಕೆಲವು ಕಡೆ ರಸ್ತೆಗಳನ್ನು

ಮಾಡಬೇಕಾಗಿದೆ. ಆದರೆ ರಸ್ತೆಗಳನ್ನು ಮಾಡಿರುವ ಗುತ್ತಿಗೆದಾರರಿಗೆ ಇದುವರೆಗೂ ಕೂಡ ಬಿಲ್ ಪಾವತಿಯಾಗಿಲ್ಲ. ಕಳೆದ ಮೂರು ವರ್ಷಗಳಿಂದ ಬಿಲ್ ಪಾವತಿಯಾಗಿಲ್ಲ. ಕೇವಲ 30 ಲಕ್ಷ ರೂ.ಗಳನ್ನು ಮಾತ್ರ ಎಂ.ಎಲ್.ಎ ಗ್ರಾಂಟ್‌ನಲ್ಲಿ ಕೊಟ್ಟಿರುವುದು. ಆದರೆ ಈವರೆಗೂ ಅನೇಕ ಕಡೆಗಳಲ್ಲಿ ಕೆಲಸಗಳು ಪ್ರಾರಂಭವಾಗಿಲ್ಲ, ಅನೇಕ ಕಡೆಗಳಲ್ಲಿ ಇನ್ನೂ ಬಿಲ್‌ಗಳು ಪಾವತಿಯಾಗಿಲ್ಲ. ಇಂಥ ಪರಿಸ್ಥಿತಿಗೆ ಸರ್ಕಾರ ಬಂದಿದೆ. ಇವಿಷ್ಟೇ ಅಲ್ಲ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಹಣವನ್ನು ಬಿಡುಗಡೆ ಮಾಡುವುದಕ್ಕೋಸ್ಕರ ಸುಮಾರು 30 ರಿಂದ 34 ಹೆಡ್ಸ್‌ಗಳಿವೆ. ಆದರೆ ದುರಾದೃಷ್ಟವೆಂದರೆ ಆ ಹೆಡ್ಸ್‌ಗಳಲ್ಲಿ ಇಟ್ಟರತಕ್ಕಂಥ ಹಣವನ್ನು ನಾವು ಒಂದಕ್ಕೊಂದಕ್ಕೆ ಹೋಲಿಕೆ ಮಾಡಿ ನೋಡಿದರೆ ಆಶ್ಚರ್ಯವಾಗುತ್ತದೆ. 1995-96ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗೋಸ್ಕರ 70 ಕೋಟಿ ರೂ.ಗಳನ್ನು ಕೊಡಲಾಗಿತ್ತು. ಆದರೆ 1997-98ನೇ ಸಾಲಿನಲ್ಲಿ ಈ ಶೀರ್ಷಿಕೆಯಡಿ ಕೇವಲ 56.45 ಕೋಟಿ. ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ಇದೇ ಶೀರ್ಷಿಕೆಯಡಿಯಲ್ಲಿ 1996-97, 97-98 ಹಾಗೂ 98-99ನೇ ಸಾಲಿಗೆ ಕ್ರಮವಾಗಿ 60.15 ಕೋಟಿ, 85.78 ಕೋಟಿ ಹಾಗೂ 63 ಕೋಟಿ ರೂ.ಗಳನ್ನು ಕೊಡಲಾಗಿದೆ. ಇದರಲ್ಲಿ 1997-98ಕ್ಕೆ 56 ಕೋಟಿ ರೂ.ಗಳನ್ನು ಏನು ಕೊಡಬೇಕಾಗಿತ್ತೋ ಅದರಲ್ಲಿ 12 ಕೋಟ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಿಲ್ಲ. ಇಷ್ಟೇ ಅಲ್ಲದೇ 1998-99ನೇ ಸಾಲಿಗೆ ಕೇವಲ 37.10 ಕೋಟ ರೂ.ಗಳನ್ನು ಮಾತ್ರ ಕೊಡುತ್ತಾರೆ. ನಾವು 1995-96ನೇ ಸಾಲಿಗೂ ಮತ್ತು 1998-99ನೇ ಸಾಲಿಗೂ ಕೊಟ್ಟಿರುವ ಅನುದಾನವನ್ನು ಬಜೆಟ್‌ನಲ್ಲಿ ಹೋಲಿಕೆ ಮಾಡಿದರೆ ಕೇವಲ ಶೇಕಡ 52ರಷ್ಟು ಹಣವನ್ನು ಮಾತ್ರ ಈ ಸಾಲಿಗೆ ಕೊಟ್ಟಿರುವುದು. ಈ ಮೂರು ವರ್ಷಗಳಲ್ಲಿ ಎಷ್ಟರಮಟ್ಟಿಗೆ ಬಜೆಟ್ ಅನುದಾನವನ್ನು ಕೊಟ್ಟುಕೊಂಡು ಬಂದಿದ್ದಾರೆ, ಅದರಲ್ಲೂ ವಿಶೇಷವಾಗಿ ಈ ರಾಜ್ಯಗಳ ರಸ್ತೆಗಳ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ. ಬಹುಶಃ ಪ್ರತಿ ವರ್ಷ ಪ್ರತಿ ಬಾಬಿನಲ್ಲೂ ಶೆಡ್ಯೂಲ್ ಆಫ್ ರೇಟ್ಸ್ ಜಾಸ್ತಿಯಾಗುತ್ತದೆ. ಈ ಪ್ರಕಾರದಲ್ಲಿಯೇ ಪ್ರತಿ ವರ್ಷ ಕೊಡುವ ಅನುದಾನವೂ ಕೂಡ ಜಾಸ್ತಿಯಾಗಬೇಕಾಗಿತ್ತು. ದುರಾದೃಷ್ಟ ಈ ಸರ್ಕಾರದಲ್ಲಿ ಹಣದ ಕೊರತೆ ಪರಿಸ್ಥಿತಿಯಿಂದ ಎಕಾನಮಿ ಮೆಷರ್ಸ್ ಎಂದು ಹೇಳಿಕೊಂಡು 1995-96ನೇ ಸಾಲಿನಲ್ಲಿ ಏನು ಹಣವನ್ನು ಬಿಡುಗಡೆ ಮಾಡಿದ್ದರೋ ಅದನ್ನು 1998-99ನೇ ಸಾಲಿಗೆ ಕೇವಲ ಶೇಕಡ 52ಕ್ಕೆ ತಂದು ನಿಲ್ಲಿಸಿದ್ದಾರೆ. ಇದರಿಂದ ಈ ಸರ್ಕಾರ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ತಾವೇ ಯೋಚನೆ ಮಾಡಬಹುದು. ಸಾರ್ವಜನಿಕರಿಗೆ ಅವಶ್ಯಕವಿರುವ ರಸ್ತೆಗಳ ಅಭಿವೃದ್ಧಿ ಬಗ್ಗೆ ಈ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ಇನ್ನು ಕಟ್ಟಡಗಳ ನಿರ್ಮಾಣದ ಬಗ್ಗೆ ಹೇಳಬೇಕೆಂದರೆ ಈ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಒಂದು ಕಟ್ಟಡವನ್ನೂ ಕೂಡ ಬಜೆಟ್‌ನಲ್ಲಿ

ತೆಗೆದುಕೊಳ್ಳಲಿಲ್ಲ. ಇದಕ್ಕೆ ಬೇರೆ ಕಾರಣವಿರಬಹುದು. ಅದರ ಬಗ್ಗೆ ಇಲ್ಲಿ ನಾನು ಹೆಚ್ಚಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಹೆಚ್ಚಿನ ಹಣವನ್ನು ನೀರಾವರಿ ಯೋಜನೆಗಳಿಗೆ ವಿನಿಯೋಗಿಸಬೇಕಾದ ಪರಿಸ್ಥಿತಿ ಇದೆ. ಆದುದರಿಂದ ಈ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಒಂದು ಕಟ್ಟಡವನ್ನೂ ಕಟ್ಟತಕ್ಕ ಪರಿಸ್ಥಿತಿ ಇಲ್ಲವಾಗಿದೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಕಳೆದ ಸಾಲುಗಳಲ್ಲಿ ಏನು 'ಸ್ಪಿಲ್ ಓವರ್' ಕೆಲಸಗಳಿವೆಯೋ ಅವನ್ನಾದರೂ ಪೂರ್ಣ ಮಾಡುವುದಕ್ಕೆ ಯಾವ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತೋ ಅಷ್ಟು ಹಣವನ್ನು ಬಿಡುಗಡೆ ಮಾಡುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಇದು ಒಂದು ದೌರ್ಭಾಗ್ಯವೇ ಆಗಿದೆ. 'ಸ್ಪಿಲ್ ಓವರ್' ವರ್ಕ್‌ನಡಿಯಲ್ಲಿ ಕಟ್ಟಡಗಳಿಗೆ ಕೇವಲ 3 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ಅಂಕಿ ಸಂಖ್ಯೆಯನ್ನು ನಿಮಗೆ ಮುಂದೆ ಕೊಡುತ್ತೇನೆ. ಇನ್ನು ಅತಿವೃಷ್ಟಿಯಿಂದಾಗಿ ಏನು ರಸ್ತೆಗಳು ಕೆಟ್ಟಿದ್ದವೋ ಅವುಗಳನ್ನು ದುರಸ್ತಿ ಮಾಡುವ ಸಲುವಾಗಿ 64 ಕೋಟಿ ರೂ.ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಎಸ್ಟಿಮೇಟ್ ಆದಮೇಲೆ 87 ಕೋಟಿ ರೂ.ಗಳ ಪಟ್ಟಿ ತಯಾರಾಯಿತು. ಆದರೆ ಇದಕ್ಕೆ 50 ಕೋಟಿ ರೂ.ಗಳನ್ನು ಕೊಡಬೇಕೆಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಿರ್ಧಾರ ಮಾಡಿದರು. 1997-98ನೇ ಸಾಲಿಗೆ ಏನು 50 ಕೋಟಿ ರೂ.ಗಳನ್ನು ಕೊಡಬೇಕೆಂಬ ಕ್ಯಾಬಿನೆಟ್ ನಿರ್ಧಾರವಾಗಿತ್ತೋ ಅಷ್ಟು ಹಣವನ್ನು ಕೊಡದೇ ಕೇವಲ 30 ಕೋಟಿ ರೂ.ಗಳನ್ನು ಮಾತ್ರ ಕೊಟ್ಟು ಇನ್ನೂ 20 ಕೋಟಿ ರೂ.ಗಳನ್ನು ಕೊಡಬೇಕಾಗಿದೆ. ಈ ರೀತಿ ಹಣ ಬಿಡುಗಡೆ ಮಾಡಿದರೆ ರಸ್ತೆಗಳ ಅಭಿವೃದ್ಧಿ ಕೆಲಸ ಹೇಗೆ ಆಗುತ್ತದೆ ಎಂಬ ವಿಚಾರವನ್ನು ತಾವು ಯೋಚನೆ ಮಾಡಬೇಕು. ಅದೇ ರೀತಿಯಲ್ಲಿ ಇಂದು ಅನೇಕ ಲೆಕ್ಕ ಶೀರ್ಷಿಕೆಗಳಿಗೆ ಹಣವನ್ನೇ ಬಿಡುಗಡೆ ಮಾಡಿಲ್ಲ. ಯೋಜನೆ ಅಡಿಯಲ್ಲಿ ಸಾರ್ವಜನಿಕ ಮಹತ್ವ ಕೆಲಸಗಳಿಗೆ ಏನು ಹಣವನ್ನು ಬಿಡುಗಡೆ ಮಾಡಬೇಕಾಗಿತ್ತೋ ಆ ಹಣವನ್ನು ಬಿಡುಗಡೆ ಮಾಡದೇ ಕೆಲಸಗಳು ಸಂಪೂರ್ಣವಾಗಿ ನಿಂತುಹೋಗಿದೆ. ಇದರಲ್ಲಿ ಮಿನಿ ವಿಧಾನಸೌಧ ಕಟ್ಟಡವಿರಬಹುದು, ಪ್ರಥಮ ದರ್ಜೆ ಕಾಲೇಜ್ ಕಟ್ಟಡವಿರಬಹುದು. ಆ ರೀತಿಯಲ್ಲಿ ಅನೇಕ ಕಟ್ಟಡಗಳ ನಿರ್ಮಾಣಕ್ಕೆ ಹಣ ಬಿಡುಗಡೆಯಾಗದೇ ಕೆಲಸಗಳು ನಿಂತಿವೆ. ಗುತ್ತಿಗೆದಾರರುಗಳಿಗೆ ಮಾಡಿರುವ ಕೆಲಸಕ್ಕೆ ಹಣ ಬಿಡುಗಡೆ ಮಾಡಿಲ್ಲದೇ ಇರುವುದರಿಂದ ಕೆಲಸ ಎಷ್ಟಾಗಿದೆಯೋ ಅಷ್ಟಕ್ಕೆ ನಿಂತುಹೋಗಿದೆ. ಸರ್ಕಾರ ಇದರ ಬಗ್ಗೆ ಯೋಚಿಸದಿರುವುದು ಅನ್ಯಾಯವೇ ಆಗಿದೆ. ಮೂರು ವರ್ಷಗಳಿಂದ ಕಟ್ಟಡಗಳ ನಿರ್ಮಾಣವನ್ನೇ ತೆಗೆದುಕೊಂಡಿಲ್ಲ. ಕಡೆ ಪಕ್ಷ 'ಸ್ಪಿಲ್ ಓವರ್' ವರ್ಕ್‌ಗಳನ್ನಾದರೂ ಪೂರ್ಣ ಮಾಡಲು ಸರ್ಕಾರ ವ್ಯವಸ್ಥೆ ಮಾಡಲಿಲ್ಲವೆಂದರೆ ಜನತೆಗೆ ಇದಕ್ಕಿಂತ ದೊಡ್ಡದಾದ ಅನ್ಯಾಯ ಬೇರೊಂದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ತಮಗೆ ಗೊತ್ತಿರುವ ಹಾಗೆ ನಾವೆಲ್ಲಾ ಬಯಲು ಸೀಮೆಯಿಂದ ಬಂದಿರತಕ್ಕಂಥವರು. ಈ ಬಯಲು ಸೀಮೆ ಮಂಡಳಿಯನ್ನು ಯಾವ ಉದ್ದೇಶಕ್ಕಾಗಿ ಪ್ರಾರಂಭ ಮಾಡಲಾಯಿತು ಎಂಬ ಬಗ್ಗೆ ಒಂದೆರಡು ಮಾತುಗಳಲ್ಲಿ

ಹೇಳಬಯಸುತ್ತೇನೆ. ಸುಮಾರು 12 ಜಿಲ್ಲೆಗಳಲ್ಲಿ 57 ಅಭಾವ ಪೀಡಿತ ಪ್ರದೇಶಗಳ ತಾಲ್ಲೂಕುಗಳನ್ನು ಅಳವಡಿಸಿ ಬಯಲು ಸೀಮೆ ಮಂಡಳಿಯನ್ನು ಪ್ರಾರಂಭ ಮಾಡಲಾಯಿತು. ಈ ತಾಲ್ಲೂಕುಗಳವರಾದ ನಾವು ಕುಡಿಯುವ ನೀರಿಗೋಸ್ಕರ ಪ್ರತಿ ವರ್ಷ ಬೇಸಿಗೆಯಲ್ಲಿ ಹೋರಾಟ ಮಾಡತಕ್ಕಂಥ ದುಸ್ಥಿತಿ ಬಂದೊದಗಿದೆ. ಪ್ರತಿ ವರ್ಷ ಬೇಸಿಗೆಯಲ್ಲಿ ಕೊಳವೆ ಬಾವಿಗಳು ಬತ್ತಿ ಹೋಗುವುದರಿಂದ ನೀರಿಗೋಸ್ಕರ ಹೋರಾಟ ಮಾಡಬೇಕಾಗುತ್ತದೆ. ಇದಕ್ಕೆ ಅನೇಕ ಕಾರಣವಿರಬಹುದು. ಬಹುಶಃ ಅಲ್ಲಿ ಸುಮಾರು 700 ರಿಂದ 750 ಮಿ.ಮೀಟರ್‌ಗಿಂತ ಹೆಚ್ಚಾಗಿ ಮಳೆ ಬರದೇ ಇರುವುದೂ ಒಂದು ಕಾರಣವೆನ್ನಬಹುದು. ನಾವೇನು ಬಯಲು ಸೀಮೆ ಮಂಡಳಿ ವ್ಯಾಪ್ತಿಯನ್ನು ಜ್ಯೂರಿಸ್‌ಡಿಕ್ಷ್ಷನ್ ಮಾಡಿದ್ದೇವೆ, ಆ ಪ್ರದೇಶದಲ್ಲಿ ಮಳೆ ಬರದೇ ತೊಂದರೆಯಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಅಲ್ಲಿರತಕ್ಕಂಥ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಆ ಮಂಡಳಿಯನ್ನು ಮಾಡಿದ್ದು. ಅಲ್ಲಿ ಜೀವನದಿಗಳಾಗಿ ದೊಡ್ಡದೊಡ್ಡ ನದಿಗಳಾಗಲೀ, ನಾಲೆಗಳಾಗಲೀ ಇಲ್ಲ. ಅಲ್ಲಿರತಕ್ಕಂಥ ಸಣ್ಣಸಣ್ಣ ಕೆರೆಗಳೇ ರೈತರ ಜೀವನಾಡಿಗಳು. ಮಳೆ ಬರಬೇಕು, ಅದರ ನೀರು ಕೆರೆಗಳಲ್ಲಿ ಸಂಗ್ರಹವಾಗಬೇಕು, ಅದು ಅಂತರ್‌ಜಲಕ್ಕೆ ಹೋಗಬೇಕು, ಅದರಿಂದ ಬೋರ್‌ವೆಲ್ ಅಥವಾ ಬೇರೆ ರೀತಿಯಲ್ಲಿ ವ್ಯವಸಾಯ ಮಾಡಿ ಜೀವನ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಆ ಬಯಲುಸೀಮೆ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರಿದ್ದಾರೆ. ಇದಕ್ಕೆ ಸರ್ಕಾರ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆ ಕೊಟ್ಟಿದೆ ಎಂದರೆ ಖಂಡಿತವಾಗಿ ನೋವಾಗುತ್ತದೆ. ಈ ಎಲ್ಲಾ ಉದ್ದೇಶಗಳನ್ನಿಟ್ಟುಕೊಂಡು ಮಂಡಳಿ 1994-95ರಲ್ಲಿ ಪ್ರಾರಂಭವಾಯಿತು. ಈ ಮಂಡಳಿಗೆ 1995-96ರಲ್ಲಿ ಕೇವಲ 372 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಅದನ್ನು ಮಾರ್ಚ್ ಕೊನೆಯಲ್ಲಿ ರಿಲೀಸ್ ಮಾಡುತ್ತಾರೆ. ಅದು ಆ ವರ್ಷದಲ್ಲಿ ಖರ್ಚಾಗಲಿಲ್ಲವೆಂದು ಮುಂದಿನ ವರ್ಷಕ್ಕೆ ಹೋಯಿತು. 1996-97ರಲ್ಲಿ 647 ಲಕ್ಷ ರೂಪಾಯಿಗಳನ್ನು ಅಲೋಕೇಷನ್ ಮಾಡಿ ಅದರಲ್ಲಿ 368 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡುತ್ತಾರೆ. ಆ ವರ್ಷ ಇಟ್ಟಂಥ 647 ಲಕ್ಷ ರೂಪಾಯಿಗಳ ಕನಿಷ್ಟ ಹಣವನ್ನೂ ಬಿಡುಗಡೆ ಮಾಡದೆ 289 ಲಕ್ಷವನ್ನು ಕಡಿಮೆ ಕೊಡುತ್ತಾರೆ. 1997-98ರಲ್ಲಿ 740 ಲಕ್ಷ ರೂಪಾಯಿಗಳ ಬಜೆಟ್ಟನ್ನು ಕೊಟ್ಟು ಅದರಲ್ಲಿ 590 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. 1998-99ರಲ್ಲಿ 850 ಲಕ್ಷ ರೂಪಾಯಿಗಳನ್ನು ಇಟ್ಟಿದ್ದು ಅದರಲ್ಲಿ 212 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಕುಡಿಯುವ ನೀರಿಗಾಗಿ ಹೋರಾಟ ಮಾಡತಕ್ಕಂಥ ಆ ಪ್ರದೇಶದ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡಬೇಕು, ಅಂತರ್‌ಜಲವನ್ನು ಜಾಸ್ತಿ ಮಾಡಬೇಕು, ಅಲ್ಲಿಗೆ ಬೇಕಾದಂಥ ಕನಿಷ್ಟ ಸೌಲಭ್ಯಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನುವ ಸದುದ್ದೇಶದಿಂದ ಮಾಡಿದಂಥ ಈ ಮಂಡಳಿಗೆ ಸನ್ಮಾನ್ಯ ವ್ಯವಸಾಯ ಮಂತ್ರಿಗಳೇ ಅಧ್ಯಕ್ಷರು. ನಮ್ಮ ದುರದೃಷ್ಟವೆಂದರೆ, ರೈತರ ಬಗ್ಗೆ ಮತ್ತು ಬಯಲುಸೀಮೆ ಪ್ರದೇಶದ ಬಗ್ಗೆ ಹೋರಾಟ ಮಾಡುತ್ತೇನೆ ಎಂದು ಹೇಳಿಕೊಳ್ಳುವ ಹಿರಿಯ ಮಂತ್ರಿಗಳೇ ಹಲವಾರು ವರ್ಷಗಳ ಕಾಲ

ಇದರ ಅಧ್ಯಕ್ಷರಾಗಿದ್ದರೂ ಇದಕ್ಕೆ ಇಟ್ಟಿದ್ದಂಥ ಬಜೆಟೆಡ್ ಅಲೋಕೇಷನ್‌ಅನ್ನೂ ಸಹ ಪೂರ್ಣವಾಗಿ ತೆಗದುಕೊಳ್ಳುವಂಥ ಪರಿಸ್ಥಿತಿ ಸರ್ಕಾರದಲ್ಲಿ ಇಲ್ಲ ಎನ್ನುವುದಾದರೆ ಇವರು ಎಷ್ಟರಮಟ್ಟಿಗೆ ಹಿಂದುಳಿದವರಿಗೆ, ಕುಡಿಯುವ ನೀರಿಗಾಗಿ ಹೋರಾಟ ಮಾಡುತ್ತಿರುವಂಥ ಪ್ರದೇಶಕ್ಕೆ ಆಸಕ್ತಿಯನ್ನು ಕೊಟ್ಟಿದ್ದಾರೆ, ಎಷ್ಟರ ಮಟ್ಟಿಗೆ ನಿರ್ಲಕ್ಷ್ಯವನ್ನು ತೋರಿದ್ದಾರೆ ಎನ್ನುವ ವಿಚಾರವನ್ನು ಈ ಸರ್ಕಾರ ಗಮನಿಸಬೇಕಾಗಿದೆ. ಅದೇ ರೀತಿ, ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗಳಿವೆ. ಈ ಮಂಡಳಿಗಳಿಗೆ 25-30 ಕೋಟಿ ಕೊಡುತ್ತಿದ್ದಾರೆ. ಅಲ್ಲಿ ಅವರದೇ ಪ್ರತ್ಯೇಕವಾದಂಥ ಸಮಸ್ಯೆಗಳಿವೆ. ಅವುಗಳಿಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಕೊಡಲೇಬೇಕು ಎಂದು ಒತ್ತಾಯ ಮಾಡುತ್ತೇನೆ. ಹಾಗೆಯೇ ಕನಿಷ್ಟವೆಂದರೆ 15-20 ಕೋಟಿ ರೂಪಾಯಿಗಳನ್ನು ಈ ಮಂಡಳಿಗೆ ಕೊಡದೇ ಹೋದರೆ ಏತಕ್ಕೋಸ್ಕರ ಈ ಮಂಡಳಿ ಬೇಕು? ಇದು ಕೇವಲ ನಾಮಕಾವಸ್ಥೆಗಾಗಿ ಇದೆಯೇ? ಯಾವ ಉದ್ದೇಶಕ್ಕಾಗಿ ಈ ಮಂಡಳಿ ಬಂತೋ ಆ ಉದ್ದೇಶದ ಸಫಲತೆಯನ್ನು ಮಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ಅದರ ಬಗ್ಗೆ ಈ ಸರ್ಕಾರಕ್ಕೆ ಆಸಕ್ತಿ ಇಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ. ಅಲ್ಲದೆ ಈ ಎರಡು ಮಂಡಳಿಗಳು ಪ್ಲಾನಿಂಗ್ ಯೋಜನೆಯಲ್ಲಿವೆ. ಆದರೆ ಬಯಲುಸೀಮೆ ಅಭಿವೃದ್ಧಿ ಮಂಡಳಿ ಆಗ್ರಿಕಲ್ಚರ್ ಸೆಕ್ರೆಟೇರಿಯಟ್ ಕೆಳಗೆ ಬರುತ್ತದೆ. ದಯಮಾಡಿ ತಕ್ಷಣ ಇದನ್ನೂ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ತಂದು ಎಲ್ಲಾ ಮಂಡಳಿಗಳಿಗೂ ಏಕರೀತಿಯ ಆದ್ಯತೆಯನ್ನು ಕೊಡುವಂಥ ವ್ಯವಸ್ಥೆಯಾದಾಗ ಮಾತ್ರ ಇದಕ್ಕೆ ಒಂದು ಪ್ರಾಮುಖ್ಯತೆ ಬರುತ್ತದೆ ಎನ್ನುವುದನ್ನು ಸಹ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮತ್ತೊಂದು ವಿಚಾರವೆಂದರೆ, ಇವತ್ತು ಸರ್ಕಾರ ಅನೇಕ ರೀತಿಯಾದಂಥ ಯೋಜನೆಗಳನ್ನು ತಂದಿದೆ. ಹೌಸಿಂಗ್ ಯೋಜನೆಗೆ ನಾವು ಕೇಂದ್ರ ಸರ್ಕಾರದಿಂದ ಸಾಲ ತರುತ್ತಿದ್ದೇವೆ. ನಾವು ಹಿಂದಿನ ಸರ್ಕಾರದಲ್ಲಿ ಆಡಳಿತ ಮಾಡಿದ್ದೆವು. ಬಡವರಿಗೆ ಕೊಡತಕ್ಕಂಥ ಕಾರ್ಯಕ್ರಮಗಳಾದ ಐ.ಆರ್.ಡಿ.ಪಿ ಮತ್ತು ಮನೆ ಕೊಡತಕ್ಕಂಥ ಆಶ್ರಯ, ಅಂಬೇಡ್ಕರ, ಐ.ಎ.ವೈ. ಇಂಥ ಎಲ್ಲಾ ಯೋಜನೆಗಳಲ್ಲಿ ಮನೆಗಳನ್ನು ಇಡೀ ರಾಜ್ಯದಲ್ಲಿರುವ ಜನಸಂಖ್ಯೆಯ ಆಧಾರದ ಮೇಲೆ ವಿತರಣೆ ಮಾಡತಕ್ಕಂಥ ಸಂಪ್ರದಾಯವನ್ನು ಹಿಂದಿನಿಂದಲೂ ನಡೆಸಿಕೊಂಡು ಬಂದಿದ್ದರು. ಇವರು ಅದನ್ನು ಸಂಪೂರ್ಣವಾಗಿ ಬ್ರೇಕ್ ಮಾಡಿದ್ದಾರೆ. ಬಡವರಿಗೆ ಮನೆ ಕೊಡತಕ್ಕಂಥಾದ್ದರಲ್ಲಿ ಹಸ್ತಕ್ಷೇಪವಾಗಿದೆ, ಅದರಲ್ಲಿ ಅಧಿಕಾರದ ದುರುಪಯೋಗವಾಗುತ್ತಿದೆ. ಕನಿಷ್ಟ ಒಂದೊಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕೊಡಬೇಕು ಎಂದು ಸನ್ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಆದೇಶ ಹೊರಡಿಸಿದ್ದರು. ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಬಂದಾಗ ಸುಮಾರು 800 ಮನೆಗಳನ್ನು ಕೊಡಬೇಕು ಎಂದು ಆದೇಶ ಇತ್ತು. ಇವರು ಬಂದ ಮೇಲೆ ಯಾವಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಕೊಡುತ್ತಾರೆ

ಎನ್ನುವುದು ಗೊತ್ತಾಗುತ್ತಿಲ್ಲ. ಲೆಕ್ಕ ಶೀರ್ಷಿಕೆಯನ್ನು ನೋಡಿದರೆ ಗೊತ್ತಾಗುತ್ತದೆ, ಒಂದು ತಾಲ್ಲೂಕಿನಲ್ಲಿ 'ಆಶ್ರಯ'ದಲ್ಲಿ 3 ಸಾವಿರ ಮನೆಗಳನ್ನು ಕೊಟ್ಟಿದ್ದಾರೆ, ಒಂದು ತಾಲ್ಲೂಕಿನಲ್ಲಿ 2 ಸಾವಿರ ಮನೆಗಳನ್ನು ಕೊಟ್ಟಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ ಒಂದು ಮನೆಯನ್ನೂ ಕೊಟ್ಟಿಲ್ಲ. ಎಷ್ಟೊಂದು ಅನ್ಯಾಯ ನಡೆದಿದೆ. ಎಲ್ಲರಿಗೂ ಸಮಾನವಾಗಿ ಕೊಡಿ ಎಂದು ನಾವು ಇದೇ ವಿಧಾನಸಭೆಯಲ್ಲಿ ಹೋರಾಟವನ್ನು ಮಾಡಿದ್ದೇವೆ. ಅದು ಕೇಂದ್ರದಿಂದ ತರತಕ್ಕಂಥ ಸಾಲ. ಆ ಸಾಲದ ಹೊರೆ ಇಡೀ ರಾಜ್ಯದ ಎಲ್ಲಾ ಜನತೆಯ ಮೇಲೂ ಬೀಳುತ್ತದೆ, ಈ ಸರ್ಕಾರದ ಮೇಲೆ ಬೀಳುತ್ತದೆ. ಆದ್ದರಿಂದ ಇದರಲ್ಲಿ ತಾರತಮ್ಯ ಮಾಡುವುದು ಬೇಡ ಎನ್ನುವ ಒತ್ತಾಯವನ್ನು ನಾವು ಸರ್ಕಾರದ ಮೇಲೆ ತಂದೆವು. ದುರದೃಷ್ಟವೆಂದರೆ, ಅದು ಇಲ್ಲಿಯವರೆಗೂ ಸರಿಹೋಗಲಿಲ್ಲ. ನಾವು ಹೋರಾಟವನ್ನು ಮಾಡಿದ ಮೇಲೆ ನಮ್ಮ ಕ್ಷೇತ್ರಗಳಿಗೆ ನೂರು ಮನೆಗಳನ್ನು ಕೊಟ್ಟಿದ್ದಾರೆ. ಆಡಳಿತ ಪಕ್ಷದವರ ಕ್ಷೇತ್ರಗಳಿಗೆ ಎಷ್ಟು ಕೊಟ್ಟಿದ್ದಾರೆಂಬುದು ಗೊತ್ತಿಲ್ಲ. ನನ್ನ ಪಕ್ಕದ ಕ್ಷೇತ್ರದಲ್ಲಿ 800ರಿಂದ 1,000 ಮನೆಗಳನ್ನು ಕೊಡುತ್ತಾರೆ, ನಮಗೆ ಕೇವಲ 100 ಮನೆ ಹಂಚಿಕೆಯಾಗುತ್ತದೆ. ಹೀಗಾದರೆ ನಾವು ಬಡವರ ಹತ್ತಿರ ಯಾವ ರೀತಿಯ ಮುಖವನ್ನಿಟ್ಟುಕೊಂಡು ಹೋಗುವುದು? ನಾವು ಹೋರಾಟ ಮಾಡಿದೆವು, ಧರಣಿ ಕುಳಿತೆವು, ಆದರೂ ಈ ಸರ್ಕಾರ ಇದಕ್ಕೆ ಗಮನ ಕೊಡಲಿಲ್ಲ. ಬಡವರಿಗೆ ಮನೆ ಕೊಡತಕ್ಕಂಥ ಕಾರ್ಯಕ್ರಮದಲ್ಲಿ ಈ ರೀತಿ ಅಧಿಕಾರ ದುರುಪಯೋಗ ಮಾಡತಕ್ಕಂಥ ಸರ್ಕಾರವನ್ನು ನಾವು ಇಲ್ಲಿಯವರೆಗೆ ಕಂಡಿರಲಿಲ್ಲ. ಹಿಂದೆ ನಿಷ್ಪಕ್ಷಪಾತವಾಗಿ ಒಂದೇ ಸಮನಾಗಿ ಹಂಚಿಕೆಯಾಗತಕ್ಕಂಥಾದ್ದು ಇತ್ತು. ಆದೇ ರೀತಿ, ಇವತ್ತು ನಬಾರ್ಡ್‌ನಿಂದ ಸಾಲ ಪಡೆಯುತ್ತಿದ್ದಾರೆ. ಅದರಿಂದ ಈ ರಾಜ್ಯದ ಬೊಕ್ಕಸದ ಮೇಲೆ ಆಗತಕ್ಕಂತ ದುಷ್ಪರಿಣಾಮ ಇನ್ನು ಐದು ವರ್ಷಗಳಲ್ಲಿ ಗೊತ್ತಾಗುತ್ತದೆ. ನಾವು ಅನೇಕ ವರ್ಷಗಳಿಂದ ಇರತಕ್ಕಂಥ ರಿಸೋರ್ಸ್‌ಸ್ ಅನ್ನು ಉಪಯೋಗಿಸಿ ಹಳ್ಳಿಯ ರಸ್ತೆಗಳನ್ನು ಮಾಡಿಕೊಂಡು ಬಂದಿದ್ದೇವೆ. ಇನ್ನೂ ಮಾಡತಕ್ಕಂಥ ಅವಕಾಶವಿತ್ತು. ಅದೃಷ್ಟವಶಾತ್ ಕೇಂದ್ರ ಸರ್ಕಾರದ ಇ.ಎ.ಎಸ್., ಜೆ.ಆರ್.ವೈ., ಅಡಿಷನಲ್ ಜೆ.ಆರ್.ವೈ ಎಂದು ಅನೇಕ ಹೆಡ್‌ಗಳಲ್ಲಿ ಹಣ ಬಂದು ನಾಲ್ಕೈದು ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ರಸ್ತೆಗಳನ್ನು ಅಭಿವೃದ್ಧಿ ಮಾಡುತ್ತಿದ್ದೇವೆ. ನಬಾರ್ಡ್‌ನಿಂದ ಬಂದಿರತಕ್ಕ 300 ಕೋಟಿ ಖರ್ಚಾಗಿದೆ ಎನ್ನುವ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಇನ್ನೂ 200 ಕೋಟಿ ರೂಪಾಯಿ ತರುತ್ತಿದ್ದಾರೆ ಎನ್ನುವ ಮಾತನ್ನು ಆಡುತ್ತಿದ್ದಾರೆ. ಈಗಾಗಲೇ ತಂದಿರತಕ್ಕ 300 ಕೋಟಿ ರೂಪಾಯಿ ಯೋಜನೆಗಳಲ್ಲಿ ಸರ್ಕಾರದಲ್ಲಿ ಅಧಿಕಾರ ದುರುಪಯೋಗವಾಗಿ ಅನ್ಯಾಯದ ಪರಮಾವಧಿಯಾಗಿದೆ. ಹಿಂದೆಂದೂ ಇಂಥ ಅನ್ಯಾಯ ಆಗಿರಲಿಲ್ಲ. ಶೇ12ರಷ್ಟು ಬಡ್ಡಿಗೆ ನಬಾರ್ಡ್‌ನಿಂದ ಸಾಲ ತರುತ್ತಾರೆ. ನಬಾರ್ಡ್‌ನವರು ಅವರದೇ ಆದಂಥ ಗೈಡ್‌ಲೈನ್ಸ್‌ಗಳು, ನಾರ್ಮ್ಸ್‌ಗಳನ್ನು ಫಿಕ್ಸ್ ಮಾಡಿಕೊಡುತ್ತಾರೆ. ಆ ನಾರ್ಮ್ಸ್, ಗೈಡ್‌ಲೈನ್ಸ್‌ಗಳನ್ನೆಲ್ಲಾ ಗಾಳಿಗೆ ತೂರಿದ್ದಾರೆ. ಅದಕ್ಕೆ ಅಧಿಕಾರಿಗಳದ್ದೇ ಅಧ್ಯಕ್ಷತೆ ಇತ್ತು. ಫಸ್ಟ್ ಫೇಸ್‌ನಲ್ಲಿ ಅವರು ಎಲ್ಲ ಕ್ಷೇತ್ರಗಳಿಗೂ

ಸ್ವಲ್ಪಸ್ವಲ್ಪ ಕೊಟ್ಟರು. ಆಮೇಲೆ ಬೇಕಾದಂಥವರು ಅವರ ಮೇಲೆ ಒತ್ತಡ ತಂದು ಮಾಡಿಸಿಕೊಂಡರು. ಅವರ ಕಾಲದಲ್ಲೇ ದುರುಪಯೋಗವಾಗತಕ್ಕಂಥ ಕೆಲಸ ಜಾಸ್ತಿ ಆಯಿತು. ನಬಾರ್ಡ್ ಯೋಜನೆಯಲ್ಲಿ ಒಂದು ಕ್ಷೇತ್ರಕ್ಕೆ 30 ಲಕ್ಷ ಕೊಟ್ಟಿದ್ದಾರೆ, ಇನ್ನೊಂದು ಕ್ಷೇತ್ರಕ್ಕೆ 8 ರಿಂದ 10 ಕೋಟಿ ಕೊಟ್ಟಿದ್ದಾರೆ. ಇದು ಕೇವಲ ಕಾಂಗ್ರೆಸ್ ಸದಸ್ಯರು, ಬಿ.ಜೆ.ಪಿ.ಯ ಸದಸ್ಯರಿಗೆ ಎಂದಲ್ಲ. ಆವರದೇ ಆದಂಥ ಅನೇಕ ಆಡಳಿತ ಪಕ್ಷದ ಸದಸ್ಯರಿಗೂ ಅನೇಕ ಕಡೆ ಕೊಟ್ಟಿಲ್ಲ. ಈ ಕಡೆ ಸರ್ಕಾರ ಗಮನವನ್ನು ಹರಿಸಿಲ್ಲ. ಅಭಿವೃದ್ಧಿ ಕೆಲಸಗಳಲ್ಲಿ ಇಂಥ ಅನ್ಯಾಯ ಜರುಗಿದೆ. ರಾಜ್ಯದಲ್ಲಿ ಯಾವುದೋ ನಾಮಿನೇಷನ್ ಮಾಡುತ್ತಾರೆ ಅಥವಾ ಇನ್ನೊಂದು ಮಾಡುತ್ತಾರೆ ಅಥವಾ ಯಾವುದಕ್ಕೋ ಛೇರ್ಮನ್ ಮಾಡುತ್ತಾರೆ ಅಥವಾ ಯಾವ್ಯಾವುದೋ ಸಂಘಗಳಿಗೆ ಮಾಡುತ್ತಾರೆ ಎಂದರೆ, ಅವರಿಗೆ ಅಧಿಕಾರ ಇದೆ, ಮಾಡಿಕೊಂಡು ಹೋಗಲಿ ಎನ್ನಬಹುದು. ಆದರೆ ಅಭಿವೃದ್ಧಿ ಕೆಲಸಗಳಲ್ಲಿ ಇಂಥ ಅನ್ಯಾಯವೆಂದರೇನು, ಸ್ವಾಮಿ? ಈ ಸಾಲವನ್ನು ಹೊರತಕ್ಕಂಥ ಜವಾಬ್ದಾರಿ ಇಡೀ ರಾಜ್ಯದ ಜನತೆಯ ಮೇಲಿದೆ. ಬೊಕ್ಕಸಕ್ಕೆ ಬರುವಂಥ ಹಣ ಜನಸಾಮಾನ್ಯರಿಂದ ವಸೂಲು ಮಾಡತಕ್ಕಂಥ ಹಣ. ಪ್ರತಿಯೊಬ್ಬ ಜನಸಾಮಾನ್ಯರ ಮೇಲಿರತಕ್ಕಂಥ ಹೊರೆಯನ್ನು, ಇವರಿಗೆ ಸಿಕ್ಕಿದಂಥ ಅಧಿಕಾರವನ್ನು ದುರುಪಯೋಗ ಮಾಡಿ ಸ್ವಾರ್ಥದಿಂದ ಕೇವಲ ಇವರ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಇವರು ಅಳವಡಿಸಿಕೊಂಡಿದ್ದಾರೆ ಎಂದರೆ, ಅದು ಇವರು ಸಂವಿಧಾನಬದ್ಧರಾಗಿ ಏನು ಪ್ರಮಾಣವಚನ ಮಾಡುತ್ತಾರೆ, ಅದಕ್ಕೆ ದ್ರೋಹ ಬಗೆದಿದ್ದಾರೆ ಎಂದು ಹೇಳಬಹುದು. ನಾನು ಯಾರ ಮೇಲೂ ರಾಗ, ದ್ವೇಷವಿಲ್ಲದೆ ನಿಷ್ಪಕ್ಷಪಾತವಾಗಿ ಆಡಳಿತ ಮಾಡುತ್ತೇವೆ ಎಂದು ಮಾಡುವ ಪ್ರಮಾಣವಚನಕ್ಕೆ ದ್ರೋಹ ಬಗೆದಿದ್ದಾರೆ. ಅಧಿಕಾರದ ದುರುಪಯೋಗ ಮಾಡಿಕೊಂಡಿದ್ದಾರೆ. ನಬಾರ್ಡ್‌ನಲ್ಲಿ ಆಗಿರತಕ್ಕಂಥ ಅನ್ಯಾಯದ ಹೊರೆ ಇಡೀ ರಾಜ್ಯದ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯ ಮೇಲೆ ಬೀಳುತ್ತದೆ. ಇಂಥ ಹೊರೆಯ ಹಣವನ್ನು ತಂದು ರಾಜ್ಯದ ಮೇಲೆ ಹೊರಿಸಿದ್ದೇ ಅಲ್ಲದೇ ಅದನ್ನು ದುರುಪಯೋಗ ಮಾಡಿರತಕ್ಕಂಥಾದ್ದು ಮಹದನ್ಯಾಯ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಬಿ.ಶಿವರಾಮು (ಗಂಡಸಿ): ವಿಶೇಷವಾಗಿ ಯಾವಯಾವ ಕ್ಷೇತ್ರಕ್ಕೆ ಹೆಚ್ಚು ಕೊಟ್ಟಿದ್ದಾರೆ ಎನ್ನುವುದನ್ನು ನೀವು ನಿದರ್ಶನ ಕೊಡಬೇಕು. ಆಗ ಅವರಿಗೆ ಗೊತ್ತಾಗುತ್ತದೆ. ಅಲ್ಲದೇ ನೀವು ಸುಮ್ಮನೆ ಹೇಳುತ್ತಿದ್ದರೆ ಏನು ಗೊತ್ತಾಗುತ್ತದೆ. ಪ್ರತಿ ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರಗಳಿಗೆ ಎಷ್ಟು ಹೋಗಿದೆ ಎನ್ನುವ ಅಂಕಿಅಂಶವನ್ನು ಇಟ್ಟುಕೊಂಡು ಹೇಳಿ, ಆಗ ಅವರಿಗೆ ಸ್ಪಷ್ಟವಾಗುತ್ತದೆ.

ಶ್ರೀ ವಿ.ಮುನಿಯಪ್ಪ: ಬೇಕಾದರೆ ಅಂಕಿಅಂಶವನ್ನೂ ಕೊಡೋಣ. ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಕೊಡಿ ಎನ್ನುವ ಪ್ರಶ್ನೆಯನ್ನೂ ನಾನು ಸರ್ಕಾರಕ್ಕೆ ಹಾಕಿದ್ದೇನೆ. ಅವಿಶ್ವಾಸ ನಿರ್ಣಯ ಇರುವುದರಿಂದ ಅದಕ್ಕೆ ಅವರ ಉತ್ತರ ಬರಲಿಲ್ಲ. ನಾವು

ಏನೇನು ಆರೋಪ ಮಾಡಿದ್ದೇವೆ ಅವುಗಳಿಗೆ ಅವರು ಉತ್ತರ ಕೊಡುವಾಗ ಸಮರ್ಥನೆ ಮಾಡಲಿ. ವಿಧಾನಸಭಾ ಕ್ಷೇತ್ರವಾರು ಸಮರ್ಥನೆ ಮಾಡಬೇಕು. ಒಟ್ಟಿಗೇ ಹೇಳಿದರೆ ಅದು ವೇಗ್ ರಿಪ್ಲೈ ಆಗುತ್ತದೆ, ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಬಾರ್ಡ್ ಯೋಜನೆಯಲ್ಲಿ ಬಡವರಿಗೆ ಮನೆಯನ್ನು ಕೊಡುವ ವಿಚಾರದಲ್ಲಿ ಈ ಸರ್ಕಾರ ಅನ್ಯಾಯ ಮಾಡಿದಷ್ಟು ಬೇರೆ ಯಾವ ಸರ್ಕಾರಗಳು ಕೂಡ ಮಾಡಿಲ್ಲ. ಪ್ರತಿಯೊಂದು ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಈ ಸರ್ಕಾರ 30 ಲಕ್ಷ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಯೂನಿಫಾರಂ ಆಗಿ ಕೊಟ್ಟಿದ್ದಾರೆ. ಇಂಥದನ್ನು ನಾವು ಅಭಿನಂದಿಸುತ್ತೇವೆ. ಇನ್ನು ಸಹಕಾರಿ ಇಲಾಖೆ ಬಗ್ಗೆ ಹೇಳುವುದಾದರೆ, ಇದು ಒಂದು ವಿಚಿತ್ರವಾದಂಥ ಇಲಾಖೆಯಾಗಿದೆ. ಮತ್ತು ಇದಕ್ಕೆ ವಿಚಿತ್ರವಾದಂಥ ಮಂತ್ರಿಗಳು ಬಂದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. 'ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಬಾರದು, ಸಹಕಾರಿ ಸಂಘಗಳಲ್ಲಿ ಹಸ್ತಕ್ಷೇಪ ಇರಬಾರದು ಎಂದು ಬಹಳ ನಿಷ್ಠಾವಂತ, ತತ್ವಕ್ಕೆ ಬದ್ಧರಾದಂತೆ ಸಾರ್ವಜನಿಕವಾಗಿ ಭಾಷಣ ಮಾಡುತ್ತಾರೆ. ಆದರೆ ಅವರು ಹೇಳುವುದು ಒಂದಾದರೆ ಮಾಡುವುದು ಒಂದು ಎನ್ನುವುದಕ್ಕೆ ಉದಾಹರಣೆ ಸಹಿತ ಹೇಳುತ್ತೇನೆ. ಸಹಕಾರಿ ರಂಗದಲ್ಲಿ ನಾಮನಿರ್ದೇಶನ ಪದ್ಧತಿಯನ್ನು ತೆಗೆದುಹಾಕುತ್ತೇವೆಂದು ಹೇಳಿ ಆ ಕುರಿತು ಮಸೂದೆಯನ್ನು ಶಾಸನದಲ್ಲಿ ತಂದರು. ಒಳ್ಳೆಯ ಮಸೂದೆ ತಂದಿದ್ದಾರೆಂದು ನಾವೆಲ್ಲರೂ ಕಣ್ಣುಮುಚ್ಚಿಕೊಂಡು ಅದಕ್ಕೆ ಬೆಂಬಲ ಕೊಟ್ಟು ಅಂಗೀಕರಿಸಿದೆವು, ಶಾಸನಸಭೆಯಲ್ಲಿ ಅಂಗೀಕರಿಸಿದಂಥ ಬಿಲ್‌ನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸದೆಯೇ 6 ತಿಂಗಳ ಕಾಲ ಹಾಗೆಯೇ ಪೆಂಡಿಂಗ್‌ನಲ್ಲಿ ಇಡಲಾಗಿತ್ತು. ನಂತರ ಮಸೂದೆಗೆ ರಾಜ್ಯಪಾಲರ ಅಂಕಿತ ಬಿದ್ದ ನಂತರ ಸಹ ಸಹಕಾರ ಸಂಸ್ಥೆಗಳಿಗೆ ಸರ್ಕಾರ ನಾಮನಿರ್ದೇಶನ ಮಾಡಿರತಕ್ಕ ನಿರ್ದೇಶಕರು ಯಾರು ಇದ್ದಾರೆ, ಅವರುಗಳು ಸರ್ಕಾರಿ ಆಜ್ಞೆ ಪ್ರಕಾರ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಬಾರದೆಂಬ ನಿರ್ಬಂಧ ಇದ್ದರೂ ಕೂಡ ಇದಕ್ಕೆ ವಿರುದ್ಧವಾಗಿ ಕೋಲಾರದಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದ ಚುನಾವಣೆ ಸಂದರ್ಭದಲ್ಲಿ ನಿರ್ದೇಶಕರಿಗೆ ಆಹ್ವಾನ ಕೊಟ್ಟಿದ್ದಾರೆ. ಶಾಸನಸಭೆಯಲ್ಲಿ ಈ ಕುರಿತು ಮಸೂದೆ ಪಾಸ್ ಮಾಡಿ ಅದಕ್ಕೆ ರಾಜ್ಯಪಾಲರದಿಂದ ಅಂಕಿತ ದೊರೆತು ಗೆಜೆಟ್ ನೋಟಿಫಿಕೇಶನ್ ಆಗಿದ್ದರೂ ಸಹ ಚುನಾವಣೆ ಸಂದರ್ಭದಲ್ಲಿ ಜಿಲ್ಲಾಮಂತ್ರಿಗಳು ಅಲ್ಲಿಗೆ ಹೋಗಿ ನಾಮ ನಿರ್ದೇಶನದ ನಿರ್ದೇಶಕರುಗಳಿಗೆ ಅಧಿಕಾರಿಗಳಿಂದ ನೋಟೀಸ್ ಕೊಡಿಸುವುದಕ್ಕೆ ಪ್ರೋತ್ಸಾಹಿಸುತ್ತಾರೆ. ಶಾಸನಸಭೆಯಲ್ಲಿ ನಾವೇ ಮಾಡಿರತಕ್ಕಂತ ಶಾಸನ, ಆಜ್ಞೆಯ ವಿರುದ್ಧವಾಗಿ ಇವರು ಬೇರೆ ಯಾವುದೋ ಆರ್ಡರ್ ಮಾಡುತ್ತಾರೆಂದರೆ ಇದು ಅಧಿಕಾರದ ದುರುಪಯೋಗದ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು. ಸದರಿ ಶಾಸನ ಇಂಥ ಸಂಸ್ಥೆಗಳಿಗೆ ಅನ್ವಯಿಸುತ್ತದೆ, ಇಂಥ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ ಎಂದೂ ಕೂಡ ಹೇಳಲಿಲ್ಲ. ಇನ್ನು ಕೋಲಾರದ

ಹಾಲು ಉತ್ಪಾದಕರ ಒಕ್ಕೂಟದಲ್ಲಿ ಅನೇಕ ವರ್ಷಗಳಿಂದ ಖಾಲಿ ಇದ್ದ ಹುದ್ದೆಗಳನ್ನು ತುಂಬುವ ಸಲುವಾಗಿ ಆರ್ಥಿಕ ಮಿತವ್ಯಯವನ್ನು ಸಡಿಲಗೊಳಿಸಿ ಸರ್ಕಾರದಿಂದ ಅನುಮತಿ ಪಡೆದುಕೊಂಡು ನಮ್ಮ ಜಿಲ್ಲೆಯಲ್ಲಿರತಕ್ಕಂಥ ಅಭ್ಯರ್ಥಿಗಳಿಂದ ಸಂದರ್ಶನಕ್ಕಾಗಿ ಅರ್ಜಿಗಳನ್ನು ಆಹ್ವಾನ ಮಾಡಿ ನಂತರ ಸಂದರ್ಶನವನ್ನು ಸಹ ಮಾಡಲಾಯಿತು. ಆದರೆ ಸದರಿ ಒಕ್ಕೂಟದ ಆಡಳಿತ ಮಂಡಳಿಯವರಿಗೆ ಮತ್ತು ಜಿಲ್ಲಾಮಂತ್ರಿಯವರಿಗೆ ಘರ್ಷಣೆ ಆಗಿ ಈ ಸಂದರ್ಶನ ನಡೆದು ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸಹಕಾರಿ ಸಚಿವರು ತಡೆಹಿಡಿದಿದ್ದಾರೆ. ಇದಕ್ಕೆ ಯಾವುದೇ ಕಾರಣ ಇಲ್ಲದೆ ಕೇವಲ ರಾಜಕೀಯ ಕಾರಣಕ್ಕಾಗಿ ಇದನ್ನು ತಡೆಹಿಡಿದಿದ್ದಾರೆ. ಸ್ಟೇ ಕೊಟ್ಟು 2 ವರ್ಷ ಕಳೆದಿದೆ, ಒಬ್ಬರಿಗೂ ಸಹ ಅಪಾಯಿಂಟ್‌ಮೆಂಟ್ ಆರ್ಡರ್ ಇಶ್ಯೂ ಮಾಡಿಲ್ಲ. ಸ್ಟೇ ಏಕೆ ಕೊಡಬೇಕಾಗಿತ್ತು? ಅಲ್ಲಿ ರಿಕ್ರ್ಯೂಟ್‌ಮೆಂಟ್ ಏಕೆ ಮಾಡಬೇಕಿತ್ತು? ಇಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಅದರಿಂದಾಗತಕ್ಕಂಥ ತೊಂದರೆ, ಆಡಳಿತ ವಿಫಲತೆಗೆ ಯಾರು ಜವಾಬ್ದಾರರು? ಸರಿಯಾದ ಕಾರಣವಿಲ್ಲದೆ ಅನಾವಶ್ಯಕವಾಗಿ ತಡೆಹಿಡಿದಿರುವುದು ಇದು ಅಧಿಕಾರ ದುರುಪಯೋಗದ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು. ನಾನು ಸರ್ಕಾರದ ವೈಫಲ್ಯತೆ ಬಗ್ಗೆ ಮಾತನಾಡುವಾಗ ಆಡಳಿತ ಪಕ್ಷದ ಕಡೆ ಸದಸ್ಯರಾಗಲಿ, ಮಂತ್ರಿಗಳಾಗಲಿ ಯಾರೂ ಇಲ್ಲ. ಆದರೂ ಅನಿವಾರ್ಯವಾಗಿ ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಇನ್ನು ಕರ್ನಾಟಕ ರಾಜ್ಯದ ಹಾಲು ಉತ್ಪಾದಕರ ಮಹಾಮಂಡಲಿ, ಬೆಂಗಳೂರು, ಇದಕ್ಕೆ ರಾಜ್ಯಮಟ್ಟದಲ್ಲಿ ಮಂತ್ರಿಗಳಾದಂಥವರು ಈ ಮಹಾಮಂಡಲಿಗೆ ಅಧ್ಯಕ್ಷರಾಗಿದ್ದಾರೆ. ಈ ಮಹಾಮಂಡಲದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಸಾರ್ವಜನಿಕರಿಂದ ಅರ್ಜಿಗಳನ್ನು 1997ರಲ್ಲಿ ಆಹ್ವಾನಿಸಿದ್ದರು. ಇಲ್ಲಿರುವ ಹುದ್ದೆಗಳಿಗೆ ಅರ್ಜಿ ಹಾಕಲು ಯಾವುದೇ ಮಾನದಂಡವನ್ನು ಫಿಕ್ಸ್ ಮಾಡಿರಲಿಲ್ಲ. ಇದರಿಂದ ಅರ್ಜಿ ಹಾಕಿದಂಥ ಸಾವಿರಾರು ಜನರಿಗೆ ಸಂದರ್ಶನ ಮಾಡಿದರು. ಇದಕ್ಕೆ ಅರ್ಜಿ ಹಾಕುವಂಥವರು ಇಂತಿಷ್ಟು ಪರ್ಸೆಂಟ್ ಮಾರ್ಕ್ಸ್ ಇರಬೇಕು, ವಿದ್ಯಾರ್ಹತೆ ಇಷ್ಟು ಇರಬೇಕು, ಮತ್ತು ಒಂದು ಹುದ್ದೆಗೆ 5 ಅಥವಾ 10ರಂತೆ ಸಂದರ್ಶನಕ್ಕೆ ಆಹ್ವಾನಿಸಲಾಗುವುದು ಎನ್ನುವ ಯಾವುದೇ ಗೈಡ್‌ಲೈನ್ಸ್ ಮಾಡಲಿಲ್ಲ. ಏಕೆಂದರೆ ಈ ತರಹದ ಮಾನದಂಡ ಇಟ್ಟುಕೊಂಡರೆ ಅವರಿಗೆ ಬೇಕಾದಂಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ನೇಮಕಾತಿ ಸಂದರ್ಭದಲ್ಲಿ ಪಕ್ಷಪಾತ ಮಾಡಿ ನೇಮಕಾತಿ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿ ಅನರ್ಹರಿಗೆ ಕೆಲಸ ಕೊಟ್ಟಿದ್ದಾರೆ. ಸರ್ಕಾರದಲ್ಲಿ ನಿಜವಾಗಿಯೂ ನ್ಯಾಯ ಇದ್ದರೆ ಈ ನೇಮಕಾತಿಯನ್ನು ರದ್ದು ಮಾಡಬೇಕು. ನನಗೆ ಇಷ್ಟು ನೋವು ಏಕೆ ಆಗುತ್ತಿದೆಯೆಂದರೆ ಸದರಿ ಮಹಾಮಂಡಲದಲ್ಲಿ ಬೆಂಗಳೂರು ಯೂನಿಯನ್‌ನ್ನು ಕಟ್ಟಬೇಕಾದರೆ ಕೋಲಾರ ಜಿಲ್ಲೆಯವರ ಶ್ರಮ, ಕೊಡುಗೆ 100ಕ್ಕೆ 80ರಷ್ಟು ಭಾಗ ಇದೆ. ಕನಿಷ್ಟ ಆ ಜಿಲ್ಲೆಯಿಂದ ಬಂದಿರತಕ್ಕಂಥ ಕೆಲಸಗಾರರಿಗೆ ಕೆಲಸ ಕೊಟ್ಟಿದ್ದರೆ ಸಂತೋಷವಾಗುತ್ತಿತ್ತು. ಮಂತ್ರಿಗಳು

ಈಗ ಅವರವರ ಕ್ಷೇತ್ರದ ಮಂತ್ರಿಗಳಾಗಿಬಿಟ್ಟಿದ್ದಾರೆ, ಪಕ್ಕದ ಕ್ಷೇತ್ರಕ್ಕೆ ಅವರ ಗಮನವೇ ಇರುವುದಿಲ್ಲ. ಜಿಲ್ಲೆಯಲ್ಲಿ ಏನಾಗುತ್ತಿದೆ ಎಂಬುದರ ಅರಿವೇ ಇರುವುದಿಲ್ಲ. ಇನ್ನು ಪ್ರಜಾಪ್ರಭುತ್ವದಲ್ಲಿ ಕೆಲವು ಸಂಪ್ರದಾಯಗಳಿವೆ. ನಾನು 1983-84ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೆ. ಆಗ ನಮ್ಮ ಅದೃಷ್ಟವೋ ದುರಾದೃಷ್ಟವೋ ಮಧ್ಯದಲ್ಲಿ ಚುನಾವಣೆ ಬಂತು. ಶ್ರೀಮತಿ ಇಂದಿರಾಗಾಂಧಿಯವರ ಅಕಾಲ ಮರಣದಿಂದ ಮಧ್ಯಂತರ ಚುನಾವಣೆ ಬಂತು. ದೇಶದಲ್ಲಿ ಲೋಕಸಭೆ ಚುನಾವಣೆ ನಡೆಯಿತು. ನಮ್ಮ ರಾಜ್ಯದಲ್ಲಿ ಆದಂಥ ಚುನಾವಣೆಯ ಫಲಿತಾಂಶ ಬಂದಾಗ ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ರಾಮಕೃಷ್ಣ ಹೆಗಡೆಯವರು 'ನಾನು ಅನೇಕ ಕಡೆ ಹೋಗಿ ಸಾರ್ವಜನಿಕ ಸಭೆಗಳಲ್ಲಿ ನನ್ನ ಆಡಳಿತದ ಬಗ್ಗೆ ಸಮರ್ಥನೆ ಮಾಡಿ ಹೇಳಿದ್ದೇನೆ, ಆದರೆ ಈ ರಾಜ್ಯದ ಜನತೆ ನನ್ನ ಆಡಳಿತದ ಬಗ್ಗೆ ಬೆಂಬಲ ಕೊಟ್ಟಿಲ್ಲ, ನನ್ನ ಸರ್ಕಾರಕ್ಕೆ ಬೆಂಬಲ ಕೊಡದೆ ನಿರಾಕರಿಸಿದ್ದಾರೆ. ಸಾರ್ವಜನಿಕರ ಈ ಸಂದೇಶಕ್ಕೆ ತಲೆಬಾಗಿ, ಮೌಲ್ಯಗಳಿಗೆ ಬೆಲೆ ಕೊಟ್ಟು ನೈತಿಕ ಹೊಣೆ ಹೊತ್ತು ಸರ್ಕಾರಕ್ಕೆ ರಾಜೀನಾಮೆ ಕೊಡುತ್ತೇನೆಂದು ಹೇಳಿ ನಾವು ಶಾಸಕರಾಗಿದ್ದಾಗ ರಾಜೀನಾಮೆ ಕೊಟ್ಟರು, ಕೇವಲ ಎರಡು ವರ್ಷದಲ್ಲಿ ಸರ್ಕಾರ ವಿಸರ್ಜನೆ ಆಯಿತು.

2.40 ಪಿಎಂ

ಒಂದೂವರೆ ವರ್ಷಗಳ ಹಿಂದೆ ಲೋಕಸಭೆ ಚುನಾವಣೆ ನಡೆದಾಗ ಜನತಾದಳ ಪಕ್ಷದ ಮೇಲೆ ನಂಬಿಕೆ ಇಟ್ಟು ಇವರು ರಾಜ್ಯದಲ್ಲಿರತಕ್ಕಂಥ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆಂದು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ಜನರು ತೀರ್ಮಾನಿಸಿ, ಅಂದಿನ ಚುನಾವಣೆಯಲ್ಲಿ ನಿಮ್ಮ ಪಕ್ಷ 16 ಸ್ಥಾನಗಳಿಸುವಂತಾಯಿತು. ವೈಪರೀತ್ಯ ಎಂದರೆ, ಫೆಬ್ರವರಿಯಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ, ಈ ಸರ್ಕಾರ ಸಂಪೂರ್ಣವಾಗಿ ಎಲ್ಲಾ ರಂಗಗಳಲ್ಲಿ ವಿಫಲವಾಗಿದೆ ಎಂದು ಜನರು ತೀರ್ಮಾನಿಸಿ, ಒಂದು ಸ್ಪಷ್ಟ ಆದೇಶ ನೀಡುವುದರ ಮೂಲಕ ಕೇವಲ ಮೂರು ಸ್ಥಾನಗಳು ನಿಮ್ಮ ಪಕ್ಷಕ್ಕೆ ಲಭ್ಯವಾಗುವಂತೆ ಮಾಡಿದರು. ಈ ಸರ್ಕಾರಕ್ಕೆ ಕನಿಷ್ಠ ಸೌಜನ್ಯ ಎನ್ನುವುದಿದ್ದರೆ, ಆ ದಿನವೇ, ನೈತಿಕ ಹೊಣೆ ಹೊತ್ತು, ಪ್ರಜಾತಾಂತ್ರಿಕ ಮೌಲ್ಯಗಳಿಗೆ ಬೆಲೆ ಕೊಟ್ಟು ಕೂಡಲೇ ರಾಜೀನಾಮೆ ಕೊಡಬೇಕಾಗಿತ್ತು. ಆದರೆ ಆಗಿನ ಸಂದರ್ಭ ಬೇರೆ ಇತ್ತು, ಪದೇ ಪದೇ ಚುನಾವಣೆ ಬೇಡ ಇನ್ನೆರಡು ವರ್ಷ ಅಧಿಕಾರಾವಧಿ ಇದೆ ಎಂದು ತೀರ್ಮಾನಿಸಿ ಹಾಗೆ ಸರ್ಕಾರ ನಡೆಸಿಕೊಂಡು ಬಂದರು. ಆದರೆ, ನಿಮ್ಮ ಮಂತ್ರಿಮಂಡಲದಲ್ಲಿರತಕ್ಕಂಥ ಕೆಲವು ಸಚಿವರು, ತಾವೇ ಮುಖಂಡರು, ತಾವೇ ಸರ್ವಜ್ಞರು, ಸಕಲಸಂಪನ್ನರು ಎಂದು ಹೇಳಿಕೊಂಡು, ಚುನಾವಣೆಯಲ್ಲಿ ಸ್ಪರ್ಧಿಸಿದಾಗ, ಮತದಾರರು ಸ್ಪಷ್ಟ ಆದೇಶ ನೀಡಿ ಮಣ್ಣುಮುಕ್ಕಿಸುವಂತೆ ಮಾಡಿದರು, ಕೆಲವರು ಠೇವಣಿ ಹಣವನ್ನೂ ಕೂಡ ಕಳೆದುಕೊಂಡರು. ಇಂಥ ಸಚಿವರು ತಾವು ಜಿಲ್ಲೆಯಲ್ಲಿ ಆಡಳಿತವನ್ನು ಹೇಗೆ ನಡೆಸಬೇಕು? ಜನರು ನಮ್ಮನ್ನು ತಿರಸ್ಕರಿಸಿದ್ದಾರೆಂದು

ಪ್ರಜಾತಂತ್ರದ ಮೌಲ್ಯಗಳಿಗೆ ಬೆಲೆ ಕೊಟ್ಟು ರಾಜಿನಾಮೆ ಕೊಡಬೇಕಾಗಿತ್ತು. ಇವರು ಯಾವ ಮೌಲ್ಯಗಳಿಗೂ ಬೆಲೆ ಕೊಡದೆ, ಯಾವ ಒಂದು ನೈತಿಕತೆ ಕೂಡ ಇಲ್ಲದಿರುವುದು ಇದೊಂದು ಅನ್ಯಾಯದ ಪರಮಾವಧಿ ಎಂದು ನಾವು ಹೇಳದೆ ವಿಧಿಯಿಲ್ಲ. ಇಷ್ಟೆಲ್ಲಾ ಜನರು ತೀರ್ಮಾನ ಕೊಟ್ಟಿದ್ದರೂ ಕೊನೇಪಕ್ಷ ಸರ್ಕಾರದವರು ಏನಾದರೂ ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆಯೇ? ರಾಜ್ಯದಲ್ಲಿರತಕ್ಕಂಥ ಪ್ರಚಲಿತ ಸಮಸ್ಯೆಗಳಿಗೆ ಗಮನಕೊಡಬೇಕೆಂದು ಸರ್ಕಾರದವರು ಗಮನ ಹರಿಸಿದ್ದಾರೆಯೇ? ಯಾವುದೇ ಒಬ್ಬ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಪ್ರತಿಯೊಂದು ತಾಲ್ಲೂಕಿಗೆ ಬಂದು ಅಲ್ಲಿನ ಯಾವುದೇ ಪಕ್ಷದ ಶಾಸಕರು ಇದ್ದರೂ ಕೂಡ ಅವರನ್ನು ಜೊತೆಯಲ್ಲಿ ಕರೆದುಕೊಂಡು, ನಿಮ್ಮ ಸಮಸ್ಯೆ ಏನು? ಸರ್ಕಾರದಿಂದ ಬಿಡುಗಡೆಯಾಗುತ್ತಿರುವ ಅನುದಾನ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ? ನಿಮ್ಮ ಅಧಿಕಾರಿಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ಯಾರಾದರೂ ಒಬ್ಬ ಮಂತ್ರಿಗಳು ಬಂದು ಕೇಳಿದ್ದಾರೆಯೇ? ಸುಮಾರು ನಾಲ್ಕು ವರ್ಷಗಳ ಅಧಿಕಾರಾವಧಿಯಲ್ಲಿ ನಿಮ್ಮ ಮಂತ್ರಿಗಳು ಸಂಬಂಧಪಟ್ಟರತಕ್ಕಂಥ ಕ್ಷೇತ್ರಗಳ ಶಾಸಕರ ಜೊತೆಯಲ್ಲಿ ಅಭಿವೃದ್ಧಿ ಕೆಲಸಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂದು ಒಂದೇ ಒಂದು ಬಾರಿ ಸಭೆ ನಡೆಸಿ ಚರ್ಚೆ ಮಾಡಿದ್ದೀರಾ? ಇದು ಯಾವುದನ್ನು ತಾವು ಮಾಡಲಿಲ್ಲ. ಇದಲ್ಲದೆ, ಒಬ್ಬ ಸಕರ್ಲ್ ಇನ್ಸ್‌ಪೆಕ್ಟರ್ ಆಗಲಿ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಲಿ ಯಾರಾದರೂ ತಪ್ಪು ಮಾಡಿ ಆ ಅಧಿಕಾರಿ ಸಸ್‌ಪೆಂಡ್ ಆಗಿದ್ದರೂ ಇಂಥವರನ್ನು ಅದೇ ಜಾಗದಲ್ಲಿ ಮುಂದುವರಿಸಬೇಡಿ ಎಂದು ವಿರೋಧ ಪಕ್ಷದ ಶಾಸಕರೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಹೇಳಿದರೆ, ಅದಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಆ ರೀತಿ ಮಾಡುವುದಕ್ಕಾಗುವುದಿಲ್ಲ, ಇದು ನನ್ನ ಪ್ರತಿಷ್ಟೆಯ ಪ್ರಶ್ನೆ ಎಂದು ಶಾಸಕರಿಗೆ ಹೇಳಿ ಅದೇ ಅಧಿಕಾರಿಯನ್ನು ಅದೇ ಸ್ಥಳದಲ್ಲಿ ರೀಇನ್‌ಸ್ಟೇಟ್ ಮಾಡಿ ಮುಂದುವರಿಸುವಂಥ ಕಾರ್ಯವನ್ನು ನಿಮ್ಮ ಜಿಲ್ಲಾ ಉಸ್ತುವಾರಿ ಸಚಿವರುಗಳು ಮಾಡಿದ್ದಾರೆ. ಆದರೆ, ಯಾವುದಾದರೊಂದು ಹಳ್ಳಿಯಲ್ಲಿ ಇವರ ಪಕ್ಷದ ಅಧ್ಯಕ್ಷನಿಗೆ ಹಾಗೂ ಆ ಹಳ್ಳಿಯಲ್ಲಿರುವ ಗ್ರಾಮ ಸೇವಕರವರಿಗೆ ಏನಾದರೂ ವೈಮನಸ್ಸು ಇದ್ದರೆ, ಆ ಪಕ್ಷದ ಅಧ್ಯಕ್ಷ ಗ್ರಾಮ ಸೇವಕರವರ ಮೇಲೆ ದೂರು ಕೊಟ್ಟು ಅವನನ್ನು ಬೇರೆ ಕಡೆ ಎತ್ತಂಗಡಿ ಮಾಡುತ್ತಾರೆ. ಬೇರೆ ಕಡೆ ಅಂದರೆ ಬಹಳ ದೂರ ಯಾದಗಿರಿಗೋ ಅಥವಾ ಇನ್ನೂ ದೂರಕ್ಕೆ ಎತ್ತಂಗಡಿ ಮಾಡುತ್ತಾರೆ. ಆ ಗ್ರಾಮ ಸೇವಕನು ಯಾವುದೇ ಒಂದು ಸಣ್ಣ ತಪ್ಪು ಮಾಡದೆ ನಿರಾಪರಾಧಿಯಾಗಿದ್ದರೂ ಕೇವಲ ಅವರ ಪಕ್ಷದ ಅಧ್ಯಕ್ಷನಿಗೆ ಮತ್ತು ಗ್ರಾಮ ಸೇವಕನ ಮೇಲೆ ವೈಯಕ್ತಿಕ ದ್ವೇಷದಿಂದ ಈ ರೀತಿ ಮಾಡುತ್ತಿದ್ದರೆ ಇದು ಯಾವ ನ್ಯಾಯ? ಈ ರೀತಿ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಏಕೆ ಬಿಡುತ್ತೀರಿ? ಈ ಪಕ್ಷದವರು ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ, ಅಕ್ರಮ ಮಾಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇವತ್ತು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದರೆ ಒಂದು ರೀತಿಯಲ್ಲಿ ಪಾಳೇಗಾರರು

ನಡೆದುಕೊಳ್ಳುವ ರೀತಿಯಲ್ಲಿ ಅಧಿಕಾರದ ದರ್ಪವನ್ನು ತೋರಿಸುತ್ತಾರೆ. ಇದಕ್ಕೊಂದು ಉದಾಹರಣೆ ಕೊಡುವುದಾದರೆ, ನಿಮ್ಮ ಮಂತ್ರಿಗಳು ಯಾವುದಾದರೂ ಸರ್ಕಾರಿ ಕಛೇರಿಗೆ ಹೋದಾಗ ಅಲ್ಲಿ ಅಧಿಕಾರಿಗಳು ತಮ್ಮ ಕೆಲಸದಲ್ಲಿ ನಿರತರಾಗಿದ್ದಾರೆ ಆ ಅಧಿಕಾರಿಯನ್ನು ನಿಮ್ಮ ಮಂತ್ರಿಗಳು ತಮ್ಮ ಕೈಯಲ್ಲಿರುವ ದೊಣ್ಣೆಗಳಿಂದ ಹೊಡೆದು ಮಾತನಾಡಿಸುತ್ತಾರೆ, ಒಂದು ರೀತಿಯಲ್ಲಿ ಶಾಲೆಯಲ್ಲಿ ಮಕ್ಕಳನ್ನು ಹೊಡೆಯುವ ಹಾಗೆ ನಿಮ್ಮ ಮಂತ್ರಿಗಳು ಸರ್ಕಾರಿ ಕಛೇರಿಯಲ್ಲಿನ ಅಧಿಕಾರಿಗಳನ್ನು ತಮ್ಮ ದೊಣ್ಣೆಯಿಂದ ಹೊಡೆ:ಏ ಮಾತನಾಡಿಸುತ್ತಾರೆ. ಈ ರೀತಿ ನಡೆದುಕೊಳ್ಳಬೇಕಾದರೆ ಆ ಮಂತ್ರಿಗಳಿಗೆ ಎಷ್ಟೊಂದು ಅಧಿಕಾರದ ದರ್ಪ ಇದೆ ಎನ್ನುವುದು ಗೊತ್ತಾಗುತ್ತದೆ... ಇದರ ಜೊತೆಗೆ, ಕೆ.ಡಿ.ಪಿ. ಮೀಟಿಂಗ್ ನಡೆಯುವಂತಹ ಸಂದರ್ಭದಲ್ಲಿ ಕಾರಣಾಂತರಗಳಿಂದ ಒಬ್ಬ ಅಧಿಕಾರಿ ಸ್ವಲ್ಪ ತಡವಾಗಿ ಬಂದರೆ, ಕೆ.ಸಿ.ಎಸ್.ಆರ್. ನಿಯಮಾವಳಿಯ ಪ್ರಕಾರ ತಡವಾಗಿ ಬಂದಿರುವ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಆದರೆ, ನಿಮ್ಮ ಜಿಲ್ಲಾ ಮಂತ್ರಿಗಳು ಏನು ಮಾಡುತ್ತಾರೆ ಗೊತ್ತೇ? ತಡವಾಗಿ ಬಂದಿರುವ ಆ ಅಧಿಕಾರಿಯನ್ನು ನೂರಾರು ಅಧಿಕಾರಿಗಳ ಸಮ್ಮುಖದಲ್ಲಿ ಅವನನ್ನು ಏಕವಚನದಲ್ಲಿ ಬಯ್ಯುವುದಲ್ಲದೆ ಒಂದು ಗಂಟೆ ಹಾಗೆ ನಿಂತುಕೊಳ್ಳುವ ಶಿಕ್ಷೆ ಕೊಡುತ್ತಾರೆ. ಅಂದರೆ ಶಾಲೆಯಲ್ಲಿ ಮಕ್ಕಳು ತಡವಾಗಿ ಬಂದಾಗ ಯಾವ ರೀತಿಯಲ್ಲಿ ಒಂದೇ ಕಾಲಿನಲ್ಲಿ ನಿಲ್ಲಿಸುತ್ತಾರೊ ಹಾಗೆ ಆ ಅಧಿಕಾರಿಯನ್ನು ನಿಮ್ಮ ಮಂತ್ರಿಗಳು ನಿಲ್ಲಿಸುತ್ತಾರೆಂದರೆ ಇದರ ಅರ್ಥ ಏನು?

ಡಾ: ಎಂ.ಶಂಕರ ನಾಯಕ್: ಅಧ್ಯಕ್ಷರೆ, ನಿರ್ದಿಷ್ಟವಾಗಿ ಅವರ ಜಿಲ್ಲೆಯ ಮಂತ್ರಿಗಳು ಬಗ್ಗೆ ಚಾರ್ಜ್ ಮಾಡಿ ಮಾತನಾಡುತ್ತಿರುವುದರಿಂದ, ಅವರಿಗೆ ನೋಟೀಸ್ ಕೊಟ್ಟು ಗಮನಕ್ಕೆ ತರಬಹುದು....

ಶ್ರೀ ವಿ.ಮುನಿಯಪ್ಪ: ನಿರ್ದಿಷ್ಟವಾಗಿ ನಾನು ಹೇಳುತ್ತಿಲ್ಲ, ಜಿಲ್ಲೆಗಳಲ್ಲಿ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ, ನಿಮ್ಮ ಜಿಲ್ಲಾ ಮಂತ್ರಿಗಳು ಯಾವ ರೀತಿ ನಡೆದುಕೊಳ್ಳುತ್ತಾರೆಂದು ಹೇಳುತ್ತಿದ್ದೇನೆ.

ಡಾ:ಎಂ.ಶಂಕರ್‌ನಾಯಕ್: ಇಲ್ಲಿ ಯಾರೂ ನೀವು ಹೇಳುವ ರೀತಿಯಲ್ಲಿ ಯಾವ ಮಂತ್ರಿಗಳ ಕೈಯಲ್ಲಿ ದೊಣ್ಣೆ ಹಿಡಿದುಕೊಂಡಿಲ್ಲ, ನಿರ್ದಿಷ್ಟವಾಗಿ ದೊಣ್ಣೆ ಹಿಡಿದುಕೊಂಡಿರುವ ಮಂತ್ರಿಗಳ ಮೇಲೆ ಚಾರ್ಜ್ ಮಾಡುತ್ತಿದ್ದೀರಿ....

ಶ್ರೀ ವಿ.ಮುನಿಯಪ್ಪ: ನಿರ್ದಿಷ್ಟವಾಗಿ ಹೇಳುವುದಲ್ಲ. ಇಲ್ಲಿ ಅವಿಶ್ವಾಸ ನಿರ್ಣಯ ತಂದಿರುವುದರಿಂದ ನಿಮ್ಮ ಆಡಳಿತ ವೈಫಲ್ಯಗಳ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ದೊಣ್ಣೆಯನ್ನು ಯಾರ ಮೇಲೆ, ಯಾವಾಗ, ಯಾರು

ಉಪಯೋಗಿಸಿದರು ಎಂಬುದು ಪತ್ರಿಕೆಗಳಲ್ಲಿ ಕೂಡ ಬಂದಿದೆ, ಅದೇ ವಿಚಾರವಾಗಿ ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ...

ಶ್ರೀ ವಿ.ಮುನಿಯಪ್ಪ: ಯಾರೇ ಆಗಲಿ ಅಧಿಕಾರ ಸಿಕ್ಕಿದೆ ಎಂದು ದಬ್ಬಾಳಿಕೆ ಮಾಡಬಾರದು. ಪ್ರಜಾಪ್ರಭುತ್ವದಲ್ಲಿ ಅಧಿಕಾರ ಶಾಶ್ವತವಾಗಿ ಇರುವುದಿಲ್ಲ. ಅಧಿಕಾರ ದೊರೆತಾಕ್ಷಣ ಇದರ ಇತಿಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು, ಅದು ಬಿಟ್ಟು ಎಲ್ಲದಕ್ಕೂ ನಾವೇ ಸರ್ವಜ್ಞರು ಎಂದು ನಡೆದುಕೊಳ್ಳಬಾರದು. ಅಧಿಕಾರ ದೊರೆತಾಗ ಸಾರ್ವಜನಿಕರಿಗೆ ಉಪಯೋಗ ಮಾಡುವಂಥ ಕೆಲಸವನ್ನು ಮಾಡಬೇಕು. ಇವತ್ತು ನಿಮ್ಮ ಮಂತ್ರಿಗಳು, ವಿರೋಧ ಪಕ್ಷದಲ್ಲಿರತಕ್ಕಂಥ ಶಾಸಕರ ಮೇಲೆ ಒಂದು ರೀತಿಯ ಗದಾಪ್ರಹಾರ ಮಾಡಿದ್ದಾರೆ. ಇವರು ಅಧಿಕಾರದ ದಾಹದಿಂದ, ಅಧಿಕಾರದ ಅಮಲಿನಿಂದ ನಮ್ಮ ಮೇಲೆ ಗದಾಪ್ರಹಾರ ಮಾಡಿದ್ದಾರೆ. ಇಷ್ಟೊಂದು ಅನ್ಯಾಯ ನಮಗೆ ಆಗಿರುವಾಗ ನಾವು ಯಾವ ರೀತಿಯಲ್ಲಿ ನೊಂದಿದ್ದೇವೆ, ಬೆಂದಿದ್ದೇವೆ, ಎನ್ನತಕ್ಕಂತದ್ದು ನಮಗೆ ಮಾತ್ರ ಗೊತ್ತಿದೆ. ನಾವು ಯಾವುದೇ ಕೆಲಸ ಮಾಡಿದರೂ ಕೂಡ ಇವರು ಹಸ್ತಕ್ಷೇಪ ಮಾಡುತ್ತಿದ್ದಾರೆ, ಇದಕ್ಕೊಂದು ಇತಿಮಿತಿ ಬೇಡವೆ? ನಾವು ನಿಮಗೆ ಅಧಿಕಾರ ಕೊಟ್ಟಿರುವುದು ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಹೊರತು ನಮ್ಮ ಮೇಲೆ ದ್ವೇಷ ಸಾಧನೆ ಮಾಡುವುದಕ್ಕಲ್ಲ. ಇಂಥ ಅನ್ಯಾಯದ ವಿರುದ್ಧವೇ ನಾವು ಇಂದು ನಿಮ್ಮ ಸರ್ಕಾರದ ವಿರುದ್ಧವಾಗಿ ಅವಿಶ್ವಾಸ ನಿರ್ಣಯವನ್ನು ತರಬೇಕಾಗಿದೆ. ಕನಿಷ್ಟ ಸೌಜನ್ಯ ಇಲ್ಲದಿರತಕ್ಕಂಥವರು ಆಡಳಿತ ನಡೆಸಿದರೆ, ಎಷ್ಟು ಜನರಿಗೆ ಅನ್ಯಾಯವಾಗುತ್ತದೆ, ಎಷ್ಟು ಅಮಾಯಕರಿಗೆ ತೊಂದರೆಯಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇನ್ನು ಕೃಷಿ ನೀತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನೇನು ರೈತರಿಗೆ ನೇರವಾಗಿ ತಟ್ಟಿಗೆ ಅನ್ನ ಹೋಗಿ ಬಿಡುತ್ತದೆಂದು ತಿಳಿದುಕೊಂಡಿದ್ದೆ, ಈ ಮಾತನ್ನು ನಾನು ನಗುತ್ತಾ ಏಕೆ ಹೇಳುತ್ತಿದ್ದೇನೆಂದರೆ, ಪತ್ರಿಕೆಯಲ್ಲಿ ಈ ವಿಚಾರವಾಗಿ ಬಂದಿತ್ತು, ಏನೆಂದರೆ, ಕೃಷಿ ನೀತಿಯನ್ನು ಸಚಿವ ಸಂಪುಟ ಒಪ್ಪಿಕೊಂಡಿದೆ ಮಂತ್ರಿಗಳು ಬಹಳ ಕುಣಿದಾಡಿದರು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮಂತ್ರಿಗಳೂ ಕೂಡ ಇದರ ಬಗ್ಗೆ ಏನೋ ಮಹಾ ಸಾಧಿಸಿದ ತರಹ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಕೊಟ್ಟಿದ್ದು ನೋಡಿ ನನಗೆ ಒಂದು ರೀತಿಯಲ್ಲಿ ಸಂತೋಷವಾಯಿತು. ಕೊನೆಗೂ ರೈತರಿಗೆ ಒಂದು ಪರಿಹಾರ ಸಿಕ್ಕಿತು ಎಂದು ಬಹಳ ಸಂತೋಷಗೊಂಡಿದ್ದೆ. ಆದರೆ, ನಂತರ ಆ ಕೃಷಿ ನೀತಿಯನ್ನು ನೋಡಿದಾಗ ನನಗೆ ಗೊತ್ತಾಯಿತು ಇದರಲ್ಲಿ ರೈತರಿಗಾಗಿ ಒಂದು ಬಿಡಿಗಾಸು ಕೂಡ ಇಟ್ಟಿರಲಿಲ್ಲ. ಯಾವುದೇ ಪಾಲಿಸಿಯನ್ನು ಅನುಷ್ಠಾನಕ್ಕೆ ತರಬೇಕಾದರೆ ಅದಕ್ಕೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ನಂತರ ಆ ಪಾಲಿಸಿಯನ್ನು ಅನುಷ್ಠಾನಗೊಳಿಸಬೇಕಾಗುತ್ತದೆ. ಈ ನೀತಿಗೆ ಇದು ಯಾವುದನ್ನೂ ಮಾಡಿಲ್ಲ. ಬಹುಶಃ ತಮಗೆ ಗೊತ್ತಿರುವ ಹಾಗೆ ಆ ನೀತಿಯಲ್ಲಿ ಅಷ್ಟು ಇಷ್ಟು

ಹಣವಿದ್ದರೆ, ಆ ಹಣ ಎಲ್ಲಾ ಕೇವಲ ಪ್ರಚಾರಕ್ಕಾಗಿ ಬಳಸಿಕೊಂಡಿದ್ದಾರೆ. ನಾನು ಈ ಮಾತನ್ನು ಮಾನ್ಯ ಅಧ್ಯಕ್ಷರ ಮೇರೆಗೆ ಸ್ವಂತ ಅನುಭವದಿಂದ ನೋಡಿರುವಂಥ ಅಂಶಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಇವತ್ತು ಈ ರಾಜ್ಯದಲ್ಲಿ ಕೆಲವು ರೈತರು ಆತ್ಮಹತ್ಯೆ ಮಾಡಿಕೊಂಡರು. ಅನ್ ಸರ್ಟಿಫೈಡ್ ಸೀಡ್ಸ್, ಅನ್ ಕ್ವಾಲೀಟಿ ಸೀಡ್ಸ್, ಕಳಪೆ ಬೀಜ, ಕಳಪೆ ಕೀಟನಾಶಕ ಔಷಧಿಗಳಿಂದ ನಮ್ಮ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳಪೆ-ಬೀಜ ಮತ್ತು ಕಳಪೆ ಔಷಧಿಗಳಿಂದ ಬೆಳೆ ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಒಂದು ದುಸ್ಥಿತಿ ಇಂದು ನಮ್ಮ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇವತ್ತು ಆಕಸ್ಮಿಕವಾಗಿ ಈರುಳ್ಳಿ ಬೆಲೆ ಜಾಸ್ತಿಯಾಗಿದೆ, ನಾನು ನಿಜವಾಗಿಯೂ ಸಂತೋಷ ಪಡುತ್ತೇನೆ. ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ ಹಾಗೆ ಇವತ್ತು ರೈತರು ಬೆಳೆದಂತಹ ಈರುಳ್ಳಿಗೆ ಅಪರೂಪವಾಗಿ ಹೆಚ್ಚಿನ ಬೆಲೆ ಬಂದು ಅವರಿಗೆ ಸ್ವಲ್ಪವಾದರೂ ಹಣ ಸಿಕ್ಕಿದೆ. ಇದರಿಂದ, ಅವರ ಮನೆಯ ವಾತಾವರಣ ಮತ್ತು ಹೆಣ್ಣುಮಕ್ಕಳಲ್ಲಿರತಕ್ಕಂಥ ಅನೇಕ ಸಮಸ್ಯೆಗಳನ್ನು ಕನಿಷ್ಠಪಕ್ಷ ಈಗಲಾದರು ಆ ಸಮಸ್ಯೆಗಳನ್ನು ಬಗೆಹರಿಸಿಕೊಂಡರು. ಒಂದು ಕಾಲದಲ್ಲಿ ಲಾರಿ ಸ್ಟ್ರೈಕ್ ಆದಾಗ ವಿಧಾನ ಸೌಧದ ಮುಂದೆ ಟೋಮೋಟೊ ಬೆಲೆ ಕುಸಿದು ಹೋಯಿತೆಂದು ಇಲ್ಲೆಲ್ಲಾ ಟೊಮೋಟೊವನ್ನು ಚೆಲ್ಲಾಡಿದರು. ಪತ್ರಿಕೆಯಲ್ಲಿಯೂ ದೊಡ್ಡ ಪ್ರಚಾರವನ್ನು ತೆಗೆದುಕೊಂಡರು. ಇವರ ಜಿಲ್ಲೆಗಳಲ್ಲಿ ಬೀದಿಗಳಲ್ಲಿ ನೂರಾರು ಲೋಡ್ ಸುರಿದರು. ಇದಕ್ಕೆ ಕನಿಷ್ಠ ಬೆಂಬಲ ಬೆಲೆಯನ್ನು ಕೊಡಲಿಲ್ಲ. ಆಲೂಗೆಡ್ಡೆ ಬೆಲೆ ಕುಸಿದಾಗ ಆಗ್ರೋ ಇಂಡಸ್ಟ್ರೀಸ್‌ಗೆ ಮತ್ತು ಹಾಫ್‌ಕಾಮ್ಸ್‌ಗೆ ಕೇಂದ್ರ ಸರ್ಕಾರದಿಂದ 2 ಕೋಟಿ ರೂಪಾಯಿ ನಮ್ಮ ಸರ್ಕಾರ ಇದ್ದಾಗ ಬಂತು. ಇಲ್ಲಿಯೂ ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ, ನನ್ನ ಹತ್ತಿರ ಅಂಕಿಅಂಶಗಳು ಗೊತ್ತಿಲ್ಲ. ಆಗ್ರೋ ಇಂಡಸ್ಟ್ರೀ ಮತ್ತು ಹಾಫ್‌ಕಾಮ್ಸ್‌ನಲ್ಲಿ ಈ ಹಣದ ದುರುಪಯೋಗದ ಪರಮಾವಧಿಯೇ ಆಯಿತು. ಮಾನ್ಯ ವ್ಯವಸಾಯ ಮಂತ್ರಿಗಳು ಹಾಫ್‌ಕಾಮ್ಸ್‌ನಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ಸಿ.ಓ.ಡಿ.ಗೆ ರೆಫರ್ ಮಾಡಬೇಕೆಂದು ಪ್ರೆಸ್ ಮುಂದೆ ಹೇಳಿದರು. ಹಾಫ್‌ಕಾಮ್ಸ್‌ನಲ್ಲಿ ಆಲೂಗೆಡ್ಡೆ ಪರ್ಚೇಸ್ ಮತ್ತು ಸೇಲ್ಸ್‌ನಲ್ಲಿ ಹಣದ ದುರುಪಯೋಗ ಮಾಡಿದ್ದಾರೆಂದು ಮಾನ್ಯ ಸಚಿವರು ಆರೋಪ ಮಾಡಿರುವುದು ಪತ್ರಿಕೆಯಲ್ಲಿಯೂ ಬಂದಿದೆ. ಇಲ್ಲಿಯವರೆಗೆ ಆ ತನಿಖೆ ಏನಾಯಿತು? ಇದನ್ನು ಯಾವ ಕಾರಣಕೋಸ್ಕರ ಮುಚ್ಚಿಟ್ಟಿದ್ದೀರಿ? ಇದಕ್ಕಾಗಿ ನೀವು ಎಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಮತ್ತು ಎಷ್ಟು ಕೋಟಿ ರೂಪಾಯಿಗಳಷ್ಟು ಲಾಭ ತಂದಿದೆ ಎಂದು ಹೇಳಬೇಕಾಗಿದೆ.

ಉಪಾಧ್ಯಕ್ಷರು: ಕೃಷಿ ಮಂತ್ರಿಗಳು ಬಂದಿದ್ದಾರೆ, ಈಗ ಕೃಷಿ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜೇಂದ್ರನ್‌ರವರು ಹೇಳಿದ ಹಾಗೆ ಮಾನ್ಯ ಕೃಷಿ ಮಂತ್ರಿಗಳು ನಮಗೆ ಹಿರಿಯ ಮಂತ್ರಿಗಳು. ಅವರ ನಗು

ದುರಾದೃಷ್ಟವಶಾತ್ ನಮಗೆ ದೊಣ್ಣೆ ಪೆಟ್ಟು ಬಿದ್ದಂತಾಗಿದೆ. ಪ್ರಜಾಪ್ರಭುತ್ವದಲ್ಲಿ ನಾವು ಅವರ ಹಾಗೆ ಬಹಳ ಕಷ್ಟ ಪಟ್ಟು ಗೆದ್ದುಕೊಂಡು ಬಂದಿದ್ದೇವೆ. ಇವರೆಲ್ಲರ ಹಿಂಸೆಗಳಿಂದ, ದಬ್ಬಾಳಿಕೆಯಿಂದ ಹಾಗೂ ದೌರ್ಜನ್ಯಗಳ ಮಧ್ಯದಲ್ಲಿ ದೇವರು ನಮ್ಮನ್ನು ಕಾಪಾಡಿಕೊಂಡು ಬಂದಿದ್ದಾನೆ. ಅಷ್ಟಕ್ಕಾದರೂ ಸೌಜನ್ಯ ಕೊಡಬೇಕು. ಕನಿಷ್ಠಪಕ್ಷ ಒಬ್ಬ ಪ್ರಜಾಪ್ರತಿನಿಧಿಯಾಗಿ ಪ್ರಜಾಪ್ರಭುತ್ವದ ಅಡಿಯಲ್ಲಿ ಗೌರವ ಸಿಗಬೇಕು. ನಮ್ಮ ಜಿಲ್ಲೆಯಲ್ಲಿ ಇದರಿಂದ ನಾವು ವಂಚಿತರಾಗಿದ್ದೇವೆ. ಇವತ್ತು ಕೃಷಿ ಇಲಾಖೆಯಲ್ಲಿ ಕೃಷಿ ನೀತಿಯನ್ನು ಜಾರಿಗೆ ತಂದಿದ್ದೀರಿ, ಇದರ ಔಟ್-ಪುಟ್ ಏನು? ಇದನ್ನು ಇಂಪ್ಲಿಮೆಂಟ್ ಮಾಡಿರುವುದರಿಂದ ರಿಜಲ್ಟ್ ಏನಾಗಿದೆ ಎಂಬುದನ್ನು ಹೇಳಬೇಕಾಗಿದೆ. ಈ ನೀತಿಯಿಂದ ಈ ರಾಜ್ಯದ ರೈತರಿಗೆ ಏನೇನು ಅನುಕೂಲ ಮಾಡಿದ್ದೀರಿ? ಸಾಮಾಜಿಕವಾಗಿ, ಈ ರಾಜ್ಯದ ರೈತರ ಭೂಮಿಯ ಸಾಯಲ್ ಟೆಸ್ಟ್ ಮಾಡುತ್ತೀರಿ ಅನ್ನತಕ್ಕಂಥದ್ದಾಗಲಿ ಅಥವಾ ಹೊಸ ತಳಿಗಳನ್ನು ತಂದು, ಈ ಹೊಸ ತಳಿಗಳ ಮುಖಾಂತರ ರಾಜ್ಯದ ರೈತರನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಮಾಡಿದ್ದೀರಾ? ನಮ್ಮ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ ಮತ್ತು ಇದರಲ್ಲಿ ರಿಸರ್ಚ್ ಸೆಂಟರ್ ಕೂಡ ಇದೆ. ಈ ರಿಸರ್ಚ್ ಸೆಂಟರ್‌ಗಳಿಗೆ ಎಷ್ಟು ಬೇಕೋ ಅಷ್ಟನ್ನು ನೀವು ಸಪೋರ್ಟ್ ಮಾಡಿ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಬೇಕಾಗಿತ್ತು, ಆದರೆ ಅದನ್ನು ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ಸತತವಾಗಿ ಇವರೊಬ್ಬರೇ ಕೃಷಿ ಮಂತ್ರಿಗಳಾಗಿ ಅಧಿಕಾರದಲ್ಲಿದ್ದಾರೆ, ಇದು ನಮ್ಮ ಅದೃಷ್ಟವೆಂದು ನಾವು ತಿಳಿದುಕೊಂಡಿದ್ದೆವು. ಆ ಕಾಲದಲ್ಲಿ ಇವರು ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದಾರೆ? ಹೊಸ ಹೊಸ ತಳಿಗಳ ಸೀಡ್ಸ್‌ನ್ನೂ ಸಹ ತಂದಿಲ್ಲ. ಈಗಿರತಕ್ಕಂಥ ಸೀಡ್ಸ್ ಸರ್ಟಿಫಿಕೇಟ್ ಏಜೆನ್ಸಿ ಇವತ್ತು ಪೂರ್ತಿಯಾಗಿ ಸ್ಕ್ಯಾಂಡ್ ಸ್ಟಿಲ್ ಆಗಿದೆ. ಅದಕ್ಕೆ ರೆಕಗ್ನೈಸೇಷನ್ ಇಲ್ಲ ಮತ್ತು ಎಕ್ಸಿಸ್ಟೆನ್ಸ್ ಕೂಡ ಇಲ್ಲ. ರೈತರ ಅಭಿವೃದ್ಧಿಗೋಸ್ಕರ ಇವರು ಹೊಸ ತಳಿಗಳ ಬೀಜವನ್ನು ತರುವುದಕ್ಕೆ ಪ್ರಯತ್ನವನ್ನು ಮಾಡಿಲ್ಲ. ವಿದೇಶಗಳಿಗೆ ಹೋಗಿ ಅಲ್ಲಿಂದ ತಂತ್ರಜ್ಞಾನವನ್ನು ತಂದು ಇಲ್ಲಿ ಸುರಿಯುತ್ತೇವೆಂದು ಹೇಳುತ್ತಾರೆ. ವಿದೇಶಕ್ಕೆ ಒಂದು ಅಥವಾ ಎರಡು ಸಲ ಹೋಗಿಲ್ಲ, ನಾಲ್ಕು ಬಾರಿ ಹೋಗಿದ್ದಾರೆ. ಅವರಿಗೆ ಪರಿಣಿತಿ ಇರುವುದರಿಂದ ಹೋಗಿ ಬಂದಿರುವುದು, ಆದರೆ ಆ ಪರಿಣಿತಿಯ ಫಲಿತಾಂಶ ಏನು ಆಯಿತು? ಸಾರ್ವಜನಿಕರ ಹಣದಿಂದ ಕರ್ನಾಟಕ ಸರ್ಕಾರದ ಹೆಸರಿನಲ್ಲಿ ಹೊರರಾಜ್ಯಗಳಿಗೆ ಹೋಗಿ ಅಲ್ಲಿನ ತಂತ್ರಜ್ಞಾನವನ್ನು ತಂದು ಇಲ್ಲಿನ ಫೀಲ್ಡ್‌ಗೆ ಬಿಡುವುದು ಬಿಟ್ಟು ಅದನ್ನು ಪ್ರೆಸ್‌ಗೆ ಬಿಡುವುದು ಮುಖ್ಯವಲ್ಲ. ಇವತ್ತು ನಮ್ಮ ನಗರದಲ್ಲಿಯೇ ಇರತಕ್ಕಂಥ ಇಂಡೋ ಅಮೇರಿಕನ್ ಸೀಡ್ಸ್‌ನಲ್ಲಿರತಕ್ಕಂಥ ತಂತ್ರಜ್ಞಾನವನ್ನು ಕನಿಷ್ಠಪಕ್ಷ ರೈತರಿಗೆ ಒದಗಿಸಿಕೊಡತಕ್ಕಂಥ ಪ್ರಯತ್ನವನ್ನು ನಿಮ್ಮ ಸರ್ಕಾರದ ಕಡೆಯಿಂದ ಆಗಲಿಲ್ಲ. ಇಂಡೋ ಅಮೇರಿಕನ್ ಸೀಡ್ಸ್ ಸಂಸ್ಥೆಯವರು ಇವತ್ತು ಒಳ್ಳೆಯ ತಂತ್ರಜ್ಞಾನದಿಂದ ಕೂಡಿದ ವೆಜಿಟಬಲ್ ಸೀಡ್ಸ್ ಮತ್ತು ಬೇರೆ ಬೇರೆ ಸೀಡ್ಸ್‌ನ್ನು ರೈತರಿಗೆ ಸರಬರಾಜು ಮಾಡುತ್ತಿದ್ದಾರೆ. ಈ ಒಂದು ತಂತ್ರಜ್ಞಾನವನ್ನು ನಮ್ಮ

ವಿಶ್ವವಿದ್ಯಾನಿಲಯಗಳು ಇಲ್ಲಿಯವರೆಗೆ ತರುವುದಕ್ಕೆ ಆಗುತ್ತಿಲ್ಲ. ಇಂಥ ಪರಿಸ್ಥಿತಿ ಇಲ್ಲಿ ಇರುವಾಗ ಮಾನ್ಯ ಸಚಿವರು ವಿದೇಶಕ್ಕೆ ಹೋಗುವುದಕ್ಕೆ ನಾವು ಏನು ಹೇಳಬೇಕು? ಬೇರೆ ವಿಚಾರಕ್ಕೆ ವಿದೇಶಕ್ಕೆ ಹೋಗುತ್ತೇವೆಂದು ಹೇಳಿದರೆ ತೊಂದರೆ ಏನೂ ಇಲ್ಲ. ಆದರೆ, ರೈತನಿಗೋಸ್ಕರ ಹೋಗುತ್ತಾರೆಂದು ಹೇಳುವುದು ತಪ್ಪೆಂದು ನಾನು ಆರೋಪ ಮಾಡುತ್ತಿದ್ದೇನೆ. ಕೃಷಿ ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಅಲ್ಲಿರತಕ್ಕಂಥ ಸವಲತ್ತುಗಳನ್ನು ಇಲ್ಲಿಯೂ ತಂದಿದ್ದೇವೆಂದು ಸಾರ್ವಜನಿಕವಾಗಿ ರೈತರಿಗೆ ಹೇಳಬೇಕಾಗಿದೆ. ಇವತ್ತು ಟೋಮೋಟೊ ಬಗ್ಗೆ ಮತ್ತು ಶಿರಾದಲ್ಲಿ ರೈತರ ಮೇಲೆ ಆಗಿರತಕ್ಕಂಥ ಗೋಲಿಬಾರ್ ಬಗ್ಗೆ ಈಗಾಗಲೇ ನಮ್ಮ ನಾಯಕರು ಪ್ರಸ್ತಾಪ ಮಾಡಿದ್ದಾರೆ, ಆದ್ದರಿಂದ ಇದರ ಬಗ್ಗೆ ಮಾತನಾಡುವುದಿಲ್ಲ. ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಬೆಂಗಳೂರಿನ ಹೆಬ್ಬಾಳದಲ್ಲಿರುವ ಆಗ್ರೋ ಇಂಡ್‌ಸ್ಟ್ರಿಯಲ್ಲಿ ಒಂದು ಮೊಬೈಲ್ ಫ್ರೂಟ್ ಪ್ರೋಸಸ್ ಯೂನಿಟ್‌ನ್ನು ಉದ್ಘಾಟನೆ ಮಾಡಿದರೆಂದು ನಾನು ಬಹಳ ಸಂತೋಷಪಟ್ಟೆ. ನಮ್ಮ ಪ್ರಧಾನ ಮಂತ್ರಿಗಳು ಇದನ್ನು ಹೊಸದಾಗಿ ಪ್ರಾರಂಭ ಮಾಡಿದ್ದಾರೆ, ನಮ್ಮ ಕಡೆ ಹಣ್ಣು ಹಂಪಲನ್ನು ಜಾಸ್ತಿ ಬೆಳೆಯುತ್ತೇವೆ. ಆದ್ದರಿಂದ, ಈ ಹಣ್ಣುಗಳನ್ನು ಸಂಸ್ಕರಣೆ ಮಾಡುವುದಕ್ಕೆ ಹಣ್ಣು ಸಂಸ್ಕರಣ ವ್ಯಾನ್ ನಮ್ಮ ಕಡೆ ಬರುತ್ತದೆಂದು ನಾವೆಲ್ಲಾ ಅಸೆ ಇಟ್ಟುಕೊಂಡಿದ್ದೆವು. ಇವತ್ತು ಯಾವ್ಯಾವ ಊರಿಗೆ ಹೋಗಿ ಎಷ್ಟೆಷ್ಟು ಹಣ್ಣನ್ನು ಸಂಸ್ಕರಣ ಮಾಡಿದ್ದೀರಿ? ಇದರ ಔಟ್‌ಪುಟ್ ಮೇಲಿನ ಫಲಿತಾಂಶವನ್ನು ದಯಮಾಡಿ ಹೇಳಬೇಕು. ಇದಕ್ಕೆ ಪ್ರಚಾರ ತೆಗೆದುಕೊಳ್ಳದೆ ಇದರ ಫಲಿತಾಂಶವನ್ನು ಕೂಡ ರೈತರಿಗೆ ಹೇಳಬೇಕು. ಇವತ್ತು ಪ್ರಚಾರಕೋಸ್ಕರ ಮೊಬೈಲ್ ಪ್ರೋಸೆಸ್ ಯೂನಿಟ್‌ನ್ನು ಮಾಡಿದ್ದೀರೆ ಹೊರತು, ಎಲ್ಲಿಯಾದರೂ ರೈತನಿಂದ ಹಣ್ಣು ಸಂಸ್ಕರಣ ಮಾಡಿ ಹಣ ಕೊಟ್ಟಿದ್ದೇವೆಂದು ಹೇಳಿದರೆ ನಾನು ಬಡ ರೈತರ ಪರವಾಗಿ ಮಾನ್ಯ ಸಚಿವರನ್ನು ಗೌರವದಿಂದ ಅಭಿನಂದಿಸುತ್ತೇನೆ. ಆದರೆ, ಇಲ್ಲಿಯವರೆಗೆ ಇದನ್ನು ಮಾಡಿಲ್ಲ. ಇವರು ಯಾವರೀತಿ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ ಮತ್ತು ಇದಕ್ಕೆ ತಕ್ಕಂತೆ ಏನೇನು ಕ್ರಮ ರೈತರಿಗೋಸ್ಕರ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಬಹುಶಃ ಎಲ್ಲಾ ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮಂತ್ರಿಗಳಿಗೆ ನಾನು ನೇರವಾಗಿ ಹೇಳುವುದೇನೆಂದರೆ, ನನಗೆ ಆಗಿರತಕ್ಕಂಥ ತೊಂದರೆಗಳನ್ನು ಮತ್ತು ಜಿಲ್ಲೆಯಲ್ಲಿ ಆಗಿರತಕ್ಕಂಥ ಹಸ್ತಕ್ಷೇಪದ ಬಗ್ಗೆ ಹಾಗೂ ಆಡಳಿತದಲ್ಲಿ ಯಾವರೀತಿ ಹಸ್ತಕ್ಷೇಪ ಮಾಡಿರುವುದನ್ನು ಮತ್ತು ಮಿಲ್ಕ್ ಯೂನಿಯನ್, ಡಿ.ಸಿ.ಸಿ. ಬ್ಯಾಂಕ್ ಇರಬಹುದು ಅಥವಾ ತಾಲ್ಲೂಕು ಮಟ್ಟದ ಆಡಳಿತದಲ್ಲಿ ಆಗಿರುವ ಹಸ್ತಕ್ಷೇಪದ ಬಗ್ಗೆ ನಾನು ತೀವ್ರವಾಗಿ ಖಂಡಿಸಿ, ಈ ಸರ್ಕಾರ ನೈತಿಕವಾಗಿ ಹೊಣೆ ಹೊತ್ತು ರಾಜಾನಾಮೆ ಕೊಡಬೇಕು.

ಉಪಾಧ್ಯಕ್ಷರು: ನೀವು ಬೇಗ ಚರ್ಚೆಯನ್ನು ಮುಗಿಸಬೇಕು.

ಶ್ರೀ ವಿ.ಮುನಿಯಪ್ಪ: ರೇಷ್ಮೆ ಬಗ್ಗೆ ಈ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರದ ಮೇಲೆ

ಹೇಳತಕ್ಕಂಥ ಬಹಳಷ್ಟು ವಿಚಾರಗಳು ಇವೆ.

ಉಪಾಧ್ಯಕ್ಷರು: ಕೇಂದ್ರ ಸರ್ಕಾರದ ವಿಚಾರ ಇಲ್ಲಿ ಏಕೆ ಹೇಳುತ್ತೀರಿ? ಕೇಂದ್ರದಲ್ಲಿ ನಿಮ್ಮ ಎಂ.ಪಿ.ಗಳು ಇದ್ದಾರೆ, ಅವರು ಹೇಳುತ್ತಾರೆ.

ಶ್ರೀ ವಿ.ಮುನಿಯಪ್ಪ: ಇವತ್ತು ಹಾಲಿನ ದರವನ್ನು ಹೆಚ್ಚಿಗೆ ಮಾಡಿರುವುದರಿಂದ ನಗರಪ್ರದೇಶದಲ್ಲಿರತಕ್ಕಂಥವರು ಕೆಲವರು ವಿರೋಧ ಮಾಡುತ್ತಿದ್ದಾರೆ. ಆದರೆ ಹೆಚ್ಚಿಗೆ ಮಾಡಿರುವ ಹಾಲಿನ ದರಕ್ಕೆ ನಾನು ವಿರೋಧ ಮಾಡುವುದಿಲ್ಲ. ಹಾಲಿನ ದರವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೆ, ಇದರ ಬಗ್ಗೆ ಸರ್ಕಾರ ನಿರ್ಲಕ್ಷ ಮಾಡುತ್ತಿದೆ. ಇವತ್ತು ಒಂದು ಬಾಟಲ್ ಬಿಸಲೇರಿ ವಾಟರ್‌ಗೆ ಹೊರಗಡೆ 15 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇವತ್ತು ನಮ್ಮ ದೇಶದಲ್ಲಿ ಹಾಲನ್ನು ಅಮೃತವೆಂದು ಗೌರವ ಕೊಡುತ್ತೇವೆ, ಆದರೆ ಈ ಅಮೂಲ್ಯವಾದ ಹಾಲಿಗೆ ಎಷ್ಟು ಬೆಲೆ ಕೊಡುತ್ತಿದ್ದೀರಿ? ಕನಿಷ್ಠಪಕ್ಷ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಬೆಲೆ ನಿಗದಿ ಮಾಡತಕ್ಕಂಥ ಪರಿಸ್ಥಿತಿಯನ್ನು ನಿಮಗೆ ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತು ಹಾಲಿನ ಬೆಲೆಯನ್ನು ಹೆಚ್ಚು ಮಾಡಬೇಕೆಂದು ಒತ್ತಾಯ ಇದೆ. ರಾಜ್ಯದ ರೈತರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂತ ಜವಾಬ್ದಾರಿಯನ್ನು ಈ ಸರ್ಕಾರ ಮಾಡುತ್ತಿಲ್ಲ. ಆರ್ಗನೈಜೇಷನ್ಸ್ ಅಸೋಸಿಯೇಷನ್‌ಗಳಿಗೆ ಮತ್ತು ಬೆಂಗಳೂರಿನಲ್ಲಿ ಇರತಕ್ಕಂಥ ಅಸೋಸಿಯೇಷನ್‌ಗಳ ಪ್ರತಿಭಟನೆಗೆ ಇವರು ಮನ್ನಣೆ ಕೊಟ್ಟಿದ್ದಾರೆಯೇ ಹೊರತು, ರೈತರ ಕಡೆ ಗಮನ ಹರಿಸಿಲ್ಲ. ಇವತ್ತು ನಮ್ಮ ಜಿಲ್ಲೆಗಳಲ್ಲಿ 100ಕ್ಕೆ 50ರಷ್ಟು ರೈತರು ಹಾಲಿನಿಂದ ಬರತಕ್ಕಂಥ ಹಣದಿಂದ ಜೀವನ ಮಾಡತಕ್ಕಂಥ ವಾತಾವರಣ ಇದೆ. ಬೇರೆ ರೀತಿಯಿಂದ ಜೀವನ ಮಾಡುವುದಕ್ಕೆ ಇವರಿಗೆ ದಾರಿಯೇ ಇಲ್ಲ. ರೈತರ ಹೆಸರನ್ನು ಹೇಳಿಕೊಂಡು ಬಂದಂತಹ ಈ ಸರ್ಕಾರ, ಇವತ್ತು ರೈತರ ಅನುಕೂಲಕ್ಕಾಗಿ ಹಾಲಿನ ಬೆಲೆಯನ್ನು ಸರಿಯಾಗಿ ನಿಗದಿ ಮಾಡುವುದರಲ್ಲಿ ಶೋಷಣೆ ಮಾಡುತ್ತಿದೆ. ಇಂಥ ಪರಿಸ್ಥಿತಿ ರಾಜ್ಯದಲ್ಲಿ ಆಗುತ್ತಿರುವುದರಿಂದ, ಇವರಿಗೆ ಸರ್ಕಾರ ನಡೆಸುವುದಕ್ಕೆ ನೈತಿಕ ಹೊಣೆ ಖಂಡಿತವಾಗಿ ಇಲ್ಲ. ನೈತಿಕವಾದ ಜವಾಬ್ದಾರಿಗಳ ಮೌಲ್ಯಕ್ಕೆ ಬೆಲೆ ಇದ್ದರೆ ಇವರು ಯಾವತ್ತೋ ರಾಜೀನಾಮೆಯನ್ನು ಕೊಡಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಸುಮಾರು 300-400 ವರ್ಷಗಳಿಂದ ರೇಷ್ಮೆ ಬೆಳೆಯಿಂದ ಅನೇಕ ರೈತರು ಜೀವನ ಮಾಡಿಕೊಂಡು ಬರುತ್ತಿದ್ದಾರೆ. ವಿಶೇಷವಾಗಿ ಕೋಲಾರ, ಮೈಸೂರು, ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ಮತ್ತು ಇವತ್ತು ಹೊಸದಾಗಿ ಬೆಳಗಾಂ ಮತ್ತು ಗುಲ್ಬರ್ಗದವರಿಗೆ ಇದು ವಿಸ್ತರಣೆಯಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ರೇಷ್ಮೆ ಇಂಡಸ್ಟ್ರೀಸ್‌ನಲ್ಲಿ ಸುಮಾರು 30 ಲಕ್ಷಕ್ಕೂ ಹೆಚ್ಚು ಜನ ಈ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಒಂದು ಉದ್ಯಮಕ್ಕೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಿಲ್ಲ. ಕೇಂದ್ರ ರೇಷ್ಮೆ ಆಮದು ನೀತಿಯನ್ನು ನಮ್ಮ ಸರ್ಕಾರ ಮೊದಲಿಂದಲೂ ವಿರೋಧ ಮಾಡಿಕೊಂಡು ಬಂದಿದೆ. ಹಿಂದೆ ಇದ್ದಂಥ ರೇಷ್ಮೆ ಆಮದು ಸರಳೀಕರಣ

ಆದಾಗಿನಿಂದಲೂ ರೇಷ್ಮೆಯನ್ನು ರಿಸ್ಟ್ರಿಕ್ಷನ್ ಐಟಂ ಎಂದು ಮಾಡಿದ್ದಾರೆ. ಸನ್ಮಾನ್ಯ ಕೇಂದ್ರ ವಾಣಿಜ್ಯ ಮಂತ್ರಿಗಳು ಆಮದು ಬಗ್ಗೆ ಹೇಳಿದ್ದಾರೆ, ಆದರೂ ಸಹ ಇಲ್ಲಿ ತೊಂದರೆ ಇದೆ. ಏನು ತೊಂದರೆ ಇದೆಯೆಂದರೆ ಗ್ರೇಡ್-2(ಎ)ನ್ನು ಮಾತ್ರ ನಾವು ತರಿಸುತ್ತೇವೆ. ಆ ಎಕ್ಸ್‌ಪೋರ್ಟಿಗೆ ಮಾತ್ರ ನಾವು ಯುಟಿಲೈಸ್ ಮಾಡುತ್ತೇವೆ. ಆ ಗ್ರೇಡ್ 2(ಎ)ದು ಯಾರು ಎಕ್ಸ್‌ಪೋರ್ಟ್, ಇಂಪೋರ್ಟ್ ಮಾಡುತ್ತಾರೆ, ಎಕ್ಸ್‌ಪೋರ್ಟ್ ಓರಿಯೆಂಟೆಡ್ ಯೂನಿಟ್ಸ್ ಯಾವುದು ಇದೆ. ಅವರು ಈಗಾಗಲೇ ತರಿಸುತ್ತಿದ್ದಾರೆ. ಅವರ ಮುಖೇನ ಸ್ಮಗಲ್ ಆಗಿದೆ. ಈಗಾಗಲೇ ನಮ್ಮ ರಾಜ್ಯದ ರೇಷ್ಮೆ ಉತ್ಪಾದನೆಯ ಮೇಲೆ ಸತತವಾಗಿ ಡ್ಯಾಮೇಜ್ ಮಾಡುತ್ತಾ ಬರುತ್ತಿದ್ದಾರೆ. ಅದನ್ನು ತಡಗಟ್ಟಬೇಕೆಂದು ನಮ್ಮ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತಾಯವನ್ನು ತರುತ್ತಾ ಇದ್ದೇವೆ. ಆದರೆ ದುರಾದೃಷ್ಟ ಇವತ್ತು ಏನಾಗಿದೆ ಎಂದರೆ ಕೇಂದ್ರಸರ್ಕಾರದವರು ಇದನ್ನು ಸಡಿಲ ಮಾಡಿದ್ದಾರೆ. ನಾವು ರಾಷ್ಟ್ರದಲ್ಲೇ ನಮ್ಮ ರಾಜ್ಯ ಮೂರನೇ ಎರಡು ಭಾಗ ರೇಷ್ಮೆ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ರೇಷ್ಮೆ ಉತ್ಪಾದನೆಯ 15 ಸಾವಿರ ಟನ್‌ಗಳಲ್ಲಿ 10 ಸಾವಿರ ಟನ್‌ಗಳಿಗೆ ಮೇಲ್ಪಟ್ಟು ರಾಜ್ಯದ ಉತ್ಪಾದನೆಯ ಮೇಲೆ ಹೊರೆ ಬೀಳತಕ್ಕಂತಹ ಒಂದು ನೀತಿಯನ್ನು ಮಾಡಿದ್ದಾರೆ. ಯಾವುದೇ ಕಾರಣಕ್ಕೂ ಕೇಂದ್ರಸರ್ಕಾರದವರು ಸಡಿಲಗೊಳಿಸಿದ್ದಾರೆ, ಆ ರಿಸ್ಟ್ರಿಕ್ಟೆಡ್ ಐಟಮ್ ಎನ್ನುವುದನ್ನು ಬೇರೆ ತರಹದ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆದುದರಿಂದ ಈ ರಾಜ್ಯದ ರೈತರ ರೇಷ್ಮೆ ಉದ್ಯಮಕ್ಕೆ ಧಕ್ಕೆಯಾಗುತ್ತದೆ. ರೇಷ್ಮೆ ಬೆಳೆಯುವಂತಹ ರೈತರು ಈಗಾಗಲೇ ಕಷ್ಟದಲ್ಲಿದ್ದಾರೆ. ಇವತ್ತು ರೇಷ್ಮೆ ಬೆಳೆಗಾರರು ತೊಂದರೆಯಲ್ಲಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಬಹುಶಃ ರೇಷ್ಮೆ ಆಮದು ನೀತಿ ಏನಿದೆ ಅದನ್ನು ರಾಜ್ಯಸರ್ಕಾರ ಸಾಮೂಹಿಕವಾಗಿ ನಿರಾಕರಿಸಬೇಕೆಂದು ನಾನು ಈ ಸದನದಲ್ಲಿ ತಮ್ಮ ಮುಖೇನ ಪ್ರಾರ್ಥನೆ ಮಾಡುತ್ತಿದ್ದೇನೆ. ಇಡೀ ಸದನವೇ ಕೇಂದ್ರಸರ್ಕಾರದ ವಿರೋಧ ನೀತಿಯನ್ನು ತಡೆಗಟ್ಟಬೇಕು. ಏನು ರಿಸ್ಟ್ರಿಕ್ಟೆಡ್ ಐಟಮ್ ಎಂದು ಹಿಂದಿನ ಪದ್ಧತಿ ಇತ್ತು ಅದನ್ನು ಮುಂದುವರಿಸಿಕೊಂಡು ಹೋಗಬೇಕು. ರಾಜ್ಯದ ರೇಷ್ಮೆ ಬೆಳೆಗಾರರ ಮತ್ತು ವೀವರ್ಸ್‌ಗಳ ಭವಿಷ್ಯಕ್ಕೆ ಈ ಕಾನೂನಿನಿಂದ ಇದು ಮಾರಕವಾಗುತ್ತಿದೆ, ಎಂಬ ಘಾತನ್ನು ಈ ಸಭೆಯಲ್ಲಿ ಹೇಳುತ್ತಾ ಈ ರಾಜ್ಯ ಸರ್ಕಾರದ ಮೇಲೆ ಒತ್ತಾಯವನ್ನು ತರುತ್ತಿದ್ದೇವೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕು. ರೇಷ್ಮೆಯನ್ನು ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬಾರದು. ಬಹುಶಃ ಇನ್ನು ಅನೇಕ ಆರೋಪಗಳು ಇದೆ. ಇವತ್ತು ನಮ್ಮ ಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಮಾತನಾಡುತ್ತಿದ್ದಾರೆ. ನಾನು ಇನ್ನೂ ಕೆಲವು ವಿಚಾರಗಳನ್ನು ಮಾತನಾಡಬೇಕಾಗಿದೆ. ಆದರೂ ಕೂಡ ತಾವು ನನಗೆ ತೊಂದರೆಯನ್ನು ಕೊಡುತ್ತಿದ್ದೀರಿ.

ಉಪಾಧ್ಯಕ್ಷರು: ಮಾನ್ಯ ಮುನಿಯಪ್ಪನವರೇ, ತಮಗೆ ತೊಂದರೆ ಕೊಡುವ ಉದ್ದೇಶ

ನಮಗಿಲ್ಲ. ಇನ್ನು ಅನೇಕ ಸದಸ್ಯರು ಮಾತನಾಡಬೇಕಾಗಿರುವುದರಿಂದ ತಾವು ದಯಮಾಡಿ ಆದಷ್ಟು ಬೇಗನೆ ತಮ್ಮ ಭಾಷಣವನ್ನು ಮುಗಿಸಿ.

(ಗೊಂದಲ)

ಶ್ರೀ ವಿ.ಮುನಿಯಪ್ಪ: ಈ ಸರ್ಕಾರದ ವೈಫಲ್ಯಗಳೇನು, ಅಧಿಕಾರದ ದುರುಪಯೋಗವೇನು, ಈ ಸರ್ಕಾರ ಕಾನೂನು ಮೀರಿ ಹಸ್ತಕ್ಷೇಪ ಹೇಗೆ ಮಾಡುತ್ತಾರೆ ಎನ್ನುವುದನ್ನೂ ನಾನು ವಿವರಣೆ ಕೊಡಬಯಸುತ್ತೇನೆ.

ಉಪಾಧ್ಯಕ್ಷರು: ಇನ್ನು 8- 10 ಜನ ಮಾತನಾಡಬೇಕಾಗಿರುವುದರಿಂದ ತಾವು ತಮ್ಮ ಭಾಷಣವನ್ನು ಕನ್‌ಕ್ಲೂಡ್ ಮಾಡಿ ಆದಷ್ಟು ಬೇಗನೆ ಮುಗಿಸಿ.

ಶ್ರೀ ವಿ.ಮುನಿಯಪ್ಪ: ಈಗ ನಾವು ಜಾರ್ಜ್ ಮಾಡಿರುವ ಬಗ್ಗೆ ರೆಕಾರ್ಡ್‌ಗಳೆಲ್ಲಾ ಇದೆ. ತಾವುಗಳು ನೈತಿಕ ಜವಾಬ್ದಾರಿಯನ್ನು ಹೊತ್ತು, ಗೌರವವಾಗಿ ರಾಜೀನಾಮೆಯನ್ನು ಕೊಟ್ಟಿದ್ದರೆ ಇವತ್ತು ಚುನಾವಣೆಯು ಮತ್ತೆ ಬರಲಿ, ಯಾರಿಗೆ ಅದೃಷ್ಟವಿದೆಯೋ, ಪ್ರಜೆಗಳು ಪ್ರಭುಗಳು ಅವರು ಏನು ನಿರ್ಣಯ ಮಾಡುತ್ತಾರೋ ಅದಕ್ಕೆ ನಾವೆಲ್ಲರೂ ತಲೆಬಾಗಬೇಕು. ಅವರುಗಳೇ ಹಾಲಿಂಟರಿಯಾಗಿ ರಾಜೀನಾಮೆಯನ್ನು ಕೊಟ್ಟರೆ ಅದನ್ನು ನಾನು ಅಭಿನಂದಿಸುತ್ತೇನೆ; ಎನ್ನುವ ಮಾತನ್ನು ಹೇಳುತ್ತಿದ್ದೇನೆ. ನಾವು ಏನು ಇವತ್ತು ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ. ಆ ನಿರ್ಣಯಕ್ಕೆ ಇಲ್ಲಿರತಕ್ಕಂತಹ ಎಲ್ಲಾ ಪಕ್ಷದವರು ಬೆಂಬಲವನ್ನು ಕೊಡಬೇಕು. ಅದರಲ್ಲೂ ವಿಶೇಷವಾಗಿ ಅವರ ಸರ್ಕಾರದವರು ಆಡಳಿತ ಪಕ್ಷದ ಮೇಲೆ 50 ಜನರು ಅವಿಶ್ವಾಸವನ್ನು ತಂದಿದ್ದಾರೆ. ಅವರ ವೈಫಲ್ಯಗಳನ್ನು ಅವರೇ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಯಾವಯಾವ ಮಂತ್ರಿಗಳು ದಬ್ಬಾಳಿಕೆ ಮಾಡುತ್ತಾರೋ, ಯಾವ ಯಾವ ರೀತಿ ಗೌಡಸ್ತಿಗೆ ಮಾಡುತ್ತಾರೆ, ಅವರೇ ಹೇಳಿದ್ದಾರೆ. ಅವರ ಪಕ್ಷದ ಜನರೇ ಹೇಳಿದ್ದಾರೆ, ಬೇರೆ ಏನೂ ಹೇಳಿಲ್ಲ. ಆದುದರಿಂದ ದಯಮಾಡಿ ಈ ಸರ್ಕಾರಕ್ಕೆ ನೈತಿಕ ಹಕ್ಕಿಲ್ಲ, ಕನಿಷ್ಟ ಪ್ರಜಾತಂತ್ರ ಮೌಲ್ಯಗಳಿಗೆ ಬೆಲೆಯಿದ್ದರೆ ಈ ಒಂದು ಕ್ಷಣ ಈ ಸರ್ಕಾರ ಅಧಿಕಾರದಲ್ಲಿರಬಾರದು ಎಂದು ತಮ್ಮ ಮುಖೇನ ತಿಳಿಸಿ, ದಯಮಾಡಿ ಆಡಳಿತ ಪಕ್ಷದವರು ರಾಜೀನಾಮೆಯನ್ನು ಕೊಡಬೇಕೆಂದು ಹೇಳಿ, ಅದು ಆಗದಿದ್ದರೆ ಏನು ಭಿನ್ನಮತೀಯರು ಸಾರ್ವಜನಿಕವಾಗಿ ವ್ಯಕ್ತ ಮಾಡಿದ್ದಾರೆ, ರೈಲ್ವೆನಿಲ್ದಾಣದಲ್ಲಿ ಏನು ವ್ಯಕ್ತಮಾಡಿದ್ದಾರೆ, ಮಂತ್ರಿಮಂಡಲದ ಮೇಲೆ ಆರೋಪಗಳಿಗೆ ಅವರು ಬೆಂಬಲವನ್ನು ಕೊಡಬೇಕು ಎಂಬ ಮನವಿಯನ್ನು ಕೂಡ ತಮ್ಮ ಮುಖೇನ ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ

ಮುನಿಯಪ್ಪನವರು ಬಹಳ ವಿಚಾರಗಳನ್ನು ಮಾತನಾಡಿದ್ದಾರೆ. ನಮ್ಮ ಜಿಲ್ಲೆ ಹಾಗೂ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಎರಡು ನಿಮಿಷದಲ್ಲಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಫ್ಯಾಕ್ಟರಿ ಆನ್ ವೀಲ್ಸ್ ಎನ್ನುವುದರ ಬಗ್ಗೆ ಹೇಳಿದ್ದಾರೆ. ಅವರು ಮೊದಲನೆಯ ಬಾರಿಗೆ ಇಡೀ ಪ್ರಪಂಚದಲ್ಲಿ ಈ ರೀತಿಯಾದ ವ್ಯವಸ್ಥೆಯನ್ನು ರೈತರಿಗೆ ಒದಗಿಸಬೇಕೆಂಬ ಪ್ರಯೋಗವನ್ನು ನಮ್ಮ ರಾಜ್ಯದಲ್ಲಿ ನಡೆಸಿದ್ದು ನಿಜ. ಒಂದು ಯೂನಿಟ್‌ನ್ನು ತಯಾರು ಮಾಡಬೇಕಾದರೆ 50 ರಿಂದ 60 ಲಕ್ಷ ರೂಗಳು ಬೇಕಾಗುತ್ತದೆ. ಆ ಹಣವನ್ನು ಒದಗಿಸುವುದಕ್ಕೆ ಸ್ವಲ್ಪ ವಿಳಂಬವಾಯಿತೆಂದು ಅವರು ಹೇಳಿದರು. ಮಾನ್ಯ ಪ್ರಧಾನ ಮಂತ್ರಿಗಳು ಇದನ್ನು ಪ್ರಾರಂಭ ಮಾಡುವುದಕ್ಕೆ ಬಂದಿದ್ದರು ಹೌದು. ಇವತ್ತಿನದಿವಸ ಸುಮಾರು 12 ಯೂನಿಟ್‌ಗಳನ್ನು ತಯಾರು ಮಾಡುವುದಕ್ಕೆ ಕೇಂದ್ರಸರ್ಕಾರದವರು ಹಣವನ್ನು ಕೊಡುತ್ತೇವೆಂಬ ಆಶ್ವಾಸನೆಯನ್ನು ನೀಡಿದರು. ಕೇಂದ್ರ ಸರ್ಕಾರದಿಂದ ಹಣ ಬರದೇ ಇರುವುದರಿಂದ ಅದನ್ನು ನಾವು ತತ್‌ಕ್ಷಣ ಮಾಡುವುದಕ್ಕೆ ಆಗಲಿಲ್ಲ. ಆದರೆ ಬೇರೆ ಬೇರೆ ಮೂಲಗಳಿಂದ ಹಣವನ್ನು ಕೂಡಿಸಿ ಇವತ್ತಿನದಿವಸ ಅದಕ್ಕೆ 30 ಲಕ್ಷ ರೂ.ಗಳನ್ನು ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಅದರ ನಕ್ಷೆ ಎಲ್ಲವನ್ನು ಕೂಡ ಬಹಳ ಸೊಫೆಸ್ಟಿಕೇಟ್ ಆಗಿ ಇರತಕ್ಕದ್ದನ್ನು ಪ್ಲಾನಿಂಗ್ ಎಲ್ಲಾ ಮಾಡಿ ಅದನ್ನು ತಯಾರು ಮಾಡತಕ್ಕಂತಹ ಹಂತದಲ್ಲಿದೆ. ಈ ದೇಶದ, ರಾಜ್ಯದ ರೈತರಿಗೆ ನೀಡಿರತಕ್ಕಂತಹ ಕೊಡುಗೆ ಎಂದು ನಾನು ಬಹಳ ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ರೇಷ್ಮೆ ಬಗ್ಗೆ ಮಾತನಾಡುತ್ತಿದ್ದರು, ಅವರ ಮಾತನ್ನು ನಾನು ಒಪ್ಪುತ್ತೇನೆ. ಅವರ ವಾದದಲ್ಲಿ ಅರ್ಥವಿದೆ. ಏನು ಇವತ್ತು ಮುಕ್ತವಾಗಿ ರೇಷ್ಮೆಯನ್ನು ಚೀನಾದೇಶದಿಂದ ತರಿಸುತ್ತಿರುವುದರಿಂದ ನಮ್ಮ ದೇಶದಲ್ಲಿ ಉತ್ಪಾದನೆ ಆಗುತ್ತಿರತಕ್ಕಂತಹ ರೇಷ್ಮೆಯಲ್ಲಿ ಶೇಕಡ 60ರಿಂದ 70ರಷ್ಟು ಭಾಗ ನಮ್ಮ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದೆ. ರೇಷ್ಮೆಗೆ ಧಕ್ಕೆ ಬರುವುದು ನಿಜ. ಇದನ್ನು ನಾವು ಈಗಾಗಲೇ ಪ್ರಧಾನಮಂತ್ರಿಗಳು ಹಾಗೂ ಕೇಂದ್ರಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ರೇಷ್ಮೆಯನ್ನು ಮುಕ್ತವಾಗಿ ತರತಕ್ಕಂತಹ ಅವಕಾಶವನ್ನು ಒದಗಿಸಿರುವುದನ್ನು ರದ್ದು ಮಾಡಬೇಕು. ಮೊದಲು ಇದ್ದ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಮನವಿಯನ್ನೂ ಸಹ ನಾವು ಮಾಡಿದ್ದೇವೆ. ಈ ವಿಚಾರದ ಬಗ್ಗೆ ಹೇಳಬೇಕೆಂದರೆ ಹಿಂದೆ ಈ ರಾಜ್ಯದಲ್ಲಿ ರೇಷ್ಮೆ ಉದ್ದಿಮೆ ರೋಗಕ್ಕೆ ತುತ್ತಾಗಿ ನಾಶವಾಗುವಂತಹ ಪರಿಸ್ಥಿತಿ ಉಂಟಾಗಿತ್ತು. ಇವತ್ತಿನ ದಿವಸ ನಾನು ಇಲ್ಲಿಗೆ ಬಂದು ಮಾತನಾಡಬೇಕಾದರೆ ನಾನು ರೇಷ್ಮೆ ಬೆಳೆಗಾರನಾಗಿರುವುದೇ ಮುಖ್ಯ ಕಾರಣ. ಇದರಲ್ಲಿ ನನ್ನ ಸ್ವಂತ ಹಿತಾಸಕ್ತಿಯು ಉಂಟು. ಈ ರೇಷ್ಮೆ ಉದ್ಯಮದಲ್ಲಿ ಸುಮಾರು 35 ಲಕ್ಷ ಜನರು ತೊಡಗಿದ್ದಾರೆ. ಅದರಲ್ಲಿ ನಾನೂ ಕೂಡ ಒಬ್ಬ. ಇದರಲ್ಲಿ ನನ್ನ ವೈಯಕ್ತಿಕ ಆರ್ಥಿಕ ಪರಿಸ್ಥಿತಿಯೂ ಇದರಲ್ಲಿ ಅಡಕವಾಗಿರುವುದರಿಂದ ಇದನ್ನು ನಾನು ತೀವ್ರವಾಗಿ ಮೊದಲಿನಿಂದಲೂ ಗಮನಿಸುತ್ತಿದ್ದೇವೆ. ಮಾನ್ಯ ಮುನಿಯಪ್ಪನವರು ರೇಷ್ಮೆ ಮಂತ್ರಿಗಳಾಗಿದ್ದಂತಹ

ಕಾಲದಲ್ಲಿ ಈ ರೇಷ್ಮೆ ಉದ್ಯಮ ವಿನಾಶದ ಅಂಚಿನಲ್ಲಿತ್ತು. ಇವತ್ತಿನದಿವಸ ರೇಷ್ಮೆಗೆ ರೋಗರಹಿತವಾದಂತಹ ಬೀಜಬಿತ್ತನೆಯನ್ನು ಕೊಡತಕ್ಕಂತಹ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಅವ್ಯವಹಾರ ನಡೆಯುತ್ತಿತ್ತು, ರೋಗರಹಿತವಾದ ಬಿತ್ತನೆಯ ಮೊಟ್ಟೆಯನ್ನು ಉತ್ಪಾದನೆಯನ್ನು ಮಾಡುತ್ತಿರುವುದಕ್ಕೆ ಕಾರಣಗಳೇನು ಎಂಬುದನ್ನು ಕಂಡುಹಿಡಿದು ಅದನ್ನು ಸರಿಪಡಿಸಿದ್ದೇವೆ ಎಂಬ ಹೆಮ್ಮೆಯ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜಿಲ್ಲೆಯಲ್ಲಿ ದಬ್ಬಾಳಿಕೆಯನ್ನು ನಡೆಸುತ್ತಾರೆ ಎಂದು ಅವರು ಹೇಳುತ್ತಾರೆ, ನಿಜ. ನಾವು ದಬ್ಬಾಳಿಕೆಯನ್ನು ಯಾವಯಾವ ರೀತಿ ನಡೆಸಿದ್ದೇವೆಂದರೆ ಮಕ್ಕಳಿಗೋಸ್ಕರ ಮಿಡ್‌ಡೇ ಮಿಲ್ಕ್ ಸ್ಕೀಂನಲ್ಲಿ 2-3 ಕೆಜಿ ಅಕ್ಕಿಯನ್ನು ಕೊಡಬೇಕೆಂದು ಇದೆ. ಒಂದು ತಾಲ್ಲೂಕಿನಲ್ಲಿ ಸುಮಾರು 36ಪಿಡಿಎಸ್ ಅಂಗಡಿಗಳು ಏನಿತ್ತು, ಆ ಅಂಗಡಿಗಳವರು ತಿಂಗಳಾನುಗಟ್ಟಲೆ ಸುಮಾರು 50-60 ಲಕ್ಷ ರೂಗಳಷ್ಟು ಅಕ್ಕಿಯನ್ನು ಮಕ್ಕಳಿಗೆ ಕೊಟ್ಟಿರಲಿಲ್ಲ. ಅಂತಹ ಅಧಿಕಾರಿಗಳನ್ನು ಕರೆಯಿಸಿ ತನಿಖೆ ಮಾಡಿಸಿದ್ದೇನೆ. ಅವರು ಮಾಡುತ್ತಿರುವ ಹಂತದಲ್ಲಿ ಕೆಲವರು ಬಂದು ಅಕ್ಕಿಯನ್ನು ಹಂಚಿಕೆ ಮಾಡಿದ್ದರು. ಅದರಲ್ಲಿ 18 ಜನರು ಅಕ್ಕಿಯನ್ನು ಹಂಚಿಕೆ ಮಾಡಿರಲಿಲ್ಲ. ಅಂಥವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿ ಅವರನ್ನು ನ್ಯಾಯಾಲಯದ ಕಟಕಟೆಯಲ್ಲಿ ನಾವು ನಿಲ್ಲಿಸಿದ್ದೇವೆ. ಇದನ್ನು ತಾವು ದಬ್ಬಾಳಿಕೆ ಎನ್ನುವುದಾದರೆ ನಾನು ಬಹಳ ಖುಷಿಪಡುತ್ತೇನೆ. ಇದನ್ನು ದಬ್ಬಾಳಿಕೆ ಎನ್ನುವುದಾದರೆ, ಈ ದಬ್ಬಾಳಿಕೆಯನ್ನು ನಾನು ಪ್ರತಿ ದಿವಸ, ಪ್ರತಿನಿಮಿಷ ಮಾಡುವುದಕ್ಕೆ ಸಿದ್ದನಿದ್ದೇನೆ.

3.10 ಪಿಎಂ

ಕೆಲವು ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ ಎಷ್ಟಾಗಿದೆ, ಏನೋ ನೂರು ಇನ್ನೂರು, ಒಂದು ಸಾವಿರ, ಎರಡು ಸಾವಿರ, ಐದು ಸಾವಿರ, ಹತ್ತು ಸಾವಿರ ಆಗಿರಬಹುದು ಅಂದುಕೊಳ್ಳೋಣ. ಆದರೆ ಒಂದು ತಾಲ್ಲೂಕಿನ ವ್ಯವಸಾಯ ಉತ್ಪನ್ನ ಸಹಕಾರ ಸಂಘದಲ್ಲಿ 29ಲಕ್ಷ ರೂಪಾಯಿ ಹಣ ದುರುಪಯೋಗವಾಗಿದೆ. ಈ ಸಹಕಾರಸಂಘದಲ್ಲಿ ಮಾರಾಟಗಾರನಾಗಿರತಕ್ಕವನು ತಾನು ಕಂಟೆಸ್ಸಾ ಕಾರಿನಲ್ಲಿ ಓಡಾಡುತ್ತಿದ್ದಾನೆ. ಇಂತಹವರನ್ನು ಇವತ್ತಿನದಿವಸ ಹಿಡಿದು ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಇದು ದಬ್ಬಾಳಿಕೆ ಅನ್ನುವುದಾದರೆ ಅದಕ್ಕೆ ನಾನು ಬಹಳ ಖುಷಿಪಡುತ್ತೇನೆ. ಯಾವ ಸಹಕಾರಸಂಘವೇ ಇರಲಿ ಈ ದಬ್ಬಾಳಿಕೆಯನ್ನು ಮುಂದುವರಿಸುವುದಕ್ಕೆ ನಾವು ಸರ್ಕಾರದಲ್ಲಿದ್ದೇವೆ. ಯಾರು ಸರ್ಕಾರದ ಹಣವನ್ನು ಸಾರ್ವಜನಿಕರ ಹಣವನ್ನು ನುಂಗುವಂತಹ ಕೆಲಸ ಮಾಡುತ್ತಿದ್ದಾರೆ ಅಂತಹವರನ್ನು ಕಾನೂನಿಗೆ ಒಳಪಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸರ್ಕಾರದಲ್ಲಿ ಮಂತ್ರಿಯಾಗಿರತಕ್ಕದ್ದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವನ್ನು ಹೇಳುತ್ತೇನೆ, ಬಯೋಗ್ಯಾಸ್‌ಪ್ಲಾಂಟ್. ಗ್ರಾಮೀಣಾ ಪ್ರದೇಶಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಮತ್ತು ಕೃಷಿ ಇಲಾಖೆಯಲ್ಲಿ

ಬಯೋಗ್ಯಾಸ್‌ಪ್ಲಾಂಟ್ ಮಾಡುವುದಕ್ಕೆ ಹಣ ಕೊಟ್ಟಿರುತ್ತಾರೆ. ನಾನೇ ಹೋಗಿ ಖುದ್ದಾಗಿ ನೋಡಿದ್ದೇನೆ. ಒಂದು ತಾಲ್ಲೂಕಿನಲ್ಲಿ 15-20 ಕೂಡ ಇಲ್ಲ. 10 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ಏನೂ ಆಧಾರವೇ ಇಲ್ಲ. ನಾನು ಅಲ್ಲಿಗೆ ಹೋಗಿದ್ದ ದಿವಸ ನನ್ನ ಜೊತೆಯಲ್ಲಿ ಉನ್ನತಮಟ್ಟದ ಅಧಿಕಾರಿಗಳು ಇದ್ದರು. ಅವರನ್ನು ಕರೆದು ಯಾರು ಈ ಹಣವನ್ನು ದುರುಪಯೋಗಪಡಿಸಿಕೊಂಡರು ಅವರ ಮೇಲೆ ಪೋಲೀಸ್ ಕಂಪ್ಲೆಂಟ್ ಕೊಟ್ಟು ತತ್‌ಕ್ಷಣ ಅರೆಸ್ಟ್ ಮಾಡಿಸಿ ಅವರ ಮೇಲೆ ಕಾನೂನಿನ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇನೆ. ಇದು ದಬ್ಬಾಳಿಕೆಯಾಗುವುದಾದರೆ ನಾನು ಇರತಕ್ಕದ್ದು ಈ ದಬ್ಬಾಳಿಕೆ ನಡೆಸುವುದಕ್ಕೆ. ಅದಕ್ಕೋಸ್ಕರ ಈ ಸರ್ಕಾರದಲ್ಲಿ ಇದ್ದೇನೆ ಎನ್ನುವ ಮಾತನ್ನು ಒತ್ತಿ ಒತ್ತಿ ಹೇಳುತ್ತೇನೆ. ಇಷ್ಟೆಲ್ಲಾ ಮಾಡಿದ ಮೇಲೆ ಸಿಟ್ಟು ಸ್ವಾಭಾವಿಕವಾಗಿ ಬರುತ್ತದೆ, ಕೋಪ ಬರುತ್ತದೆ. ಇಷ್ಟೆಲ್ಲಾ ಆಗಿರತಕ್ಕದ್ದು

ಅಧ್ಯಕ್ಷರು (ಶ್ರೀರಮೇಶ್ ಕುಮಾರ್‌ರವರು) ಪೀಠವನ್ನಂಕರಿಸಿದರು.

ಮಾನ್ಯ ವಿ.ಮುನಿಯಪ್ಪನವರ ಕ್ಷೇತ್ರದಲ್ಲಿ. ಆದ್ದರಿಂದ ಸ್ವಾಭಾವಿಕವಾಗಿ ಇವರಿಗೆ ಇವರ ಅಧಿಕಾರಾವಧಿಯಲ್ಲಿ ಮಾಡಿರುವುದರಿಂದ ಸಿಟ್ಟು ಬಂದೇ ಬರುತ್ತದೆ. ಅವರು ಸಿಟ್ಟು ಆಗಿರುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ನಾನೇನೂ ಚಿಂತೆಪಡುವುದಿಲ್ಲ. ಇದಕ್ಕಿಂತ ನಾಲ್ಕರಷ್ಟು ಅಥವ ನೂರಕ್ಕೆ ನೂರರಷ್ಟು ಸಿಟ್ಟು ಮಾಡಿಕೊಂಡರೂ ನಾನೇನೂ ಚಿಂತೆಪಡುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು. ನನಗೆ ಮಾತನಾಡಲು ಅವಕಾಶ ಕೊಡಿ. ಏಕೆಂದರೆ ಮಾನ್ಯ ಮಂತ್ರಿಗಳು ನನ್ನ ಮೇಲೆ ಮೂರು ಆರೋಪಗಳನ್ನು ಮಾಡಿದ್ದಾರೆ. ನಾನು ರೇಷ್ಮೆ ಸಚಿವನಾಗಿದ್ದಾಗ ನಮ್ಮ ಇಲಾಖೆಯಲ್ಲಿ ಆಗಿರತಕ್ಕ ಕೆಲಸಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರ್ಕೆಟ್‌ನಲ್ಲಿ ಆಗಿರತಕ್ಕ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನೂ ಸಹ ಬೇರೆ ಬೇರೆ ವಿಷಯಗಳ ಬಗ್ಗೆ ಆರೋಪಗಳನ್ನು ಮಾಡಿದ್ದೆ. ಅದಕ್ಕೆ ವಿರುದ್ಧವಾಗಿ ಮಂತ್ರಿಗಳು ಬೇರೆ ಆರೋಪಗಳನ್ನು ನನ್ನ ವಿರುದ್ಧ ಮಾಡಿದ್ದಾರೆ. ನಾನು ಆರೋಪಗಳನ್ನು ಮಾಡಿ ಅವರಿಂದ ಉತ್ತರ ನಿರೀಕ್ಷೆ ಮಾಡಿದ್ದೆ. ನಾನು ನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ. ನೇರವಾಗಿ ಆರೋಪಗಳನ್ನು ಮಾಡಿರುವುದರಿಂದ ನಾನು ಅದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಲೇಬೇಕು. ನಾನು ರೇಷ್ಮೆಮಂತ್ರಿಯಾಗಿದ್ದ ಸಂದರ್ಭದಲ್ಲಿ ಒಂದು ದುಸ್ಥಿತಿ ಬಂತು. ಗಂಟುರೋಗ ಬಂತು. ಆ ಗಂಟುರೋಗ ಒಂದೇ ದಿನ ಬಂದದ್ದು ಅಲ್ಲ. ಇಲಾಖೆಯು ಏಳೆಂಟು ವರ್ಷಗಳಿಂದ ನಿರ್ಲಕ್ಷ ಮಾಡಿದ್ದರಿಂದ ಗಂಟುರೋಗ ಬಂತು. ಬಹುಶಃ ನಿಮಗೆ ಗೊತ್ತಿದೆ. ಹೆಚ್ಚು ಮಳೆಯಿಂದ ನೂರಾರು ಮನೆಗಳು ಬಿದ್ದುಹೋದವು. ಬಹಳ ಮಳೆ ಬಂತು. ಮಳೆ

ಜಾಸ್ತಿಯಾದ ಸಂದರ್ಭದಲ್ಲಿ ಆ ರೋಗ ಉಲ್ಬಣಗೊಂಡಿತು. ತತ್‌ಕ್ಷಣ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಎಲ್ಲಾಕಡೆಗೆ ಗಂಟುರೋಗ ಆವರಿಸಿತು. ಆ ಸಂದರ್ಭದಲ್ಲಿ ಆರು ತಿಂಗಳು ಸತತವಾಗಿ ಹೋರಾಟ ಮಾಡಿದ್ದೇನೆ. ರಾಜ್ಯದಲ್ಲಿ ಬಹುಶಃ ಇವತ್ತಿನವರೆಗೂ ಆ ರೆಕಾರ್ಡ್ ಕ್ರಾಸ್ ಆಗಲಿಲ್ಲ. ರಾಮನಗರ ಮಾರ್ಕೆಟ್‌ನಲ್ಲಿ 20-15ಟನ್ ರೇಷ್ಮೆಗೂಡು ಬರುತ್ತಿದ್ದುದನ್ನು 66ಟನ್‌ಗೆ ಏರಿಸಿದ್ದೇನೆ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಶಿಡ್ಲಘಟ್ಟ ಮತ್ತು ರಾಮನಗರ ಮಾರ್ಕೆಟ್‌ಗಳಲ್ಲಿ 10ರಿಂದ 12ಟನ್‌ಗೆ ರೇಷ್ಮೆಗೂಡು ಕಡಿಮೆ ಬಂದಿತ್ತು. ಅಂತಹದ್ದನ್ನು ಆವೊತ್ತು 45ಟನ್‌ಗೆ ಏರಿಸಿದ್ದೇನೆ. ಮೇಜರ್ ಮಾರ್ಕೆಟ್‌ಗಳಾದ ಶಿಡ್ಲಘಟ್ಟ, ರಾಮನಗರ ಮತ್ತು ಕೋಲಾರದಲ್ಲಿ ನನ್ನ ಕಾಲದಲ್ಲಿ ಏನು ಗಂಟುರೋಗ ಬಂದಿತ್ತು ಅದನ್ನು ತಡೆಗಟ್ಟಿ ಈವೊಂದು ಇಲಾಖೆಗೆ ಹೆಚ್ಚಿನ ಒತ್ತನ್ನು ಕೊಟ್ಟು ರೇಷ್ಮೆ ಇಲಾಖೆಯ ಇತಿಹಾಸದಲ್ಲಿಯೇ ಹೈಯೆಸ್ಟ್ ಅರೈವಲ್ ಕಕ್ಕೂನ್ ಬಂದಿರತಕ್ಕದ್ದು ನನ್ನ ಕಾಲದಲ್ಲಿ ಎನ್ನುವುದನ್ನು ದಯವಿಟ್ಟು ಮಂತ್ರಿಗಳು ರೆಕಾರ್ಡ್ ತರಿಸಿ ನೋಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ ರೋಗ ಬಂದು ಇಡೀ ಇಂಡಸ್ಟ್ರೀ ಹೋಗಿತ್ತು ಎನ್ನುವ ಏನು ಆರೋಪವನ್ನು ಮಾಡಿದ್ದಾರೆ ಅದು ಸರಿಯಲ್ಲ. ಅದು ಬಹಳ ದಿವಸಗಳಿಂದ ಇದ್ದ ರೋಗವನ್ನು ತಡೆಗಟ್ಟಿ 40-45 ಟನ್ ರೇಷ್ಮೆಗೂಡು ಮಾರ್ಕೆಟ್‌ಗೆ ಬರುವ ಹಾಗೆ ಮಾಡಿದ್ದ ರೆಕಾರ್ಡ್ ತರಿಸಿ ನೋಡಿ. ಇದು ಯಾರ ಕಾಲದಲ್ಲೂ ಆಗಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ಈ ವರ್ಷ ಸಹ ಬಹಳಷ್ಟು ಮಳೆಯಾಗಿದೆ. ಈ ವರ್ಷ ಏಕೆ ಆ ರೋಗ ಬರಲಿಲ್ಲವೆಂಬುದು ಗೊತ್ತಾಗಲಿಲ್ಲ.

ಶ್ರೀ ವಿ.ಮುನಿಯಪ್ಪ: ಹಾಲು ಇರಬಹುದು, ಬೇರೆ ಯಾವುದೇ ಇರಬಹುದು ಎರಡರಷ್ಟು ಇಂಡಸ್ಟ್ರೀ ಆಗುತ್ತಿದೆ. ಏರಿಯಾ ಜಾಸ್ತಿಯಾಗಿದೆ. ಯೀಲ್ಡ್ ಜಾಸ್ತಿಯಾಗಿಲ್ಲ. ಆ ವಿಚಾರವನ್ನು ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡೋಣ. ಆ ಸೊಸೈಟಿಯಲ್ಲಿ ನಾಲ್ಕು ವರ್ಷಗಳಿಂದ ನಿಮ್ಮ ಪಕ್ಷದವರೇ ಆಡಳಿತ ಮಾಡುತ್ತಿದ್ದಾರೆ. ನಿಮ್ಮ ಪಕ್ಷದವರು ಎರಡು ವರ್ಷದಿಂದ ಅಕ್ಕಿಯನ್ನು ಗ್ರೀನ್‌ಕಾರ್ಡ್‌ಗೆ ಕೊಡುತ್ತಿಲ್ಲ. ಕಾರ್ಡು ಕೊಡುವುದರಲ್ಲಿ ಸಹ ದುರುಪಯೋಗವಾಗಿದೆ. ಜಿಲ್ಲಾಧಿಕಾರಿಗಳಿಗೆ ನಾವು ಕಂಪ್ಲೆಂಟ್ ಮಾಡಿದ್ದೇವೆ. ಕಂಪ್ಲೆಂಟ್ ಮಾಡಿದಮೇಲೆ ಅವರ ಮೇಲೆ ತನಿಖೆ ಪ್ರಾರಂಭ ಆಯಿತು. ಅದಕ್ಕೆ ವಿರುದ್ಧವಾಗಿ, ನಾಲ್ಕು ವರ್ಷಗಳ ಹಿಂದೆ ಇದ್ದ ನಮ್ಮ ಕಮಿಟಿಯವರ ಮೇಲೆ ಆರೋಪಗಳನ್ನು ತಂದರು. ನಾಲ್ಕು ವರ್ಷಗಳ ಹಿಂದೆ ಇದ್ದ ಕಮಿಟಿಯವರ ಮೇಲೆ ದುರುಪಯೋಗ ಮಾಡಿದ್ದಾರೆಂದು ಆರೋಪ ಮಾಡಿದ್ದಾರೆ. ನಾವು ಮಾಡಿದ್ದು ಬೇರೆ. ಪ್ರಸೆಂಟ್ ಗ್ರೀನ್ ಕಾರ್ಡ್‌ಗೆ ಮುಕ್ಕಾಲ್ಕು ಕೆ.ಜಿ. ಅಕ್ಕಿಯನ್ನು ಕೊಡುವುದರಲ್ಲಿ ದುರುಪಯೋಗವಾಗುತ್ತಿದೆ ಎಂದು ಹೇಳಿದ್ದೇವೆ. ಬಡವರಿಗೆ ಹೋಗತಕ್ಕ ಅಕ್ಕಿ ಹೋಗುತ್ತಿಲ್ಲವೆಂದು ಹೇಳಿದಮೇಲೆ. ಇವರು ಟಿಎಪಿಎಂಸಿಯಲ್ಲಿ ಹಣವಿಲ್ಲ. ಹಣವಿಲ್ಲದಿರುವುದರಿಂದ ಬಿಲ್ಲು ಹಾಕಿದರೂ ಒಂದು ತಿಂಗಳಿಂದ ಆಚೀಚೆ

ಒದಗಿಸುತ್ತಿಲ್ಲವೆಂದು ನಾವು ಜಿಲ್ಲಾಧಿಕಾರಿಗಳನ್ನು ಕೇಳಿಕೊಂಡ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಂಡು ಅದನ್ನು ವಿಚಾರ ಮಾಡಿ ಟಿಎಪಿಎಂಸಿ ಸಂಸ್ಥೆಯವರು ಕೊಡುತ್ತಿದ್ದುದನ್ನು ತೆಗೆದುಹಾಕಿ ಫುಡ್ ಕಾರ್ಪೊರೇಷನ್‌ಗೆ ಕೊಟ್ಟರು. ಫುಡ್ ಕಾರ್ಪೊರೇಷನ್‌ದವರಿಗೆ ಕೊಟ್ಟಮೇಲೆ ಒಂದು ಅಲಾಟ್‌ಮೆಂಟ್ ಬಂತು, ಆಹಾರಧಾನ್ಯಗಳನ್ನು ವಿತರಣೆ ಮಾಡುತ್ತಿದ್ದರು. ಒಂದು ತಿಂಗಳಾದರೂ ಆಹಾರಧಾನ್ಯಗಳನ್ನು ಟಿಎಪಿಎಂಸಿಯವರು ಮಾಡುತ್ತಿರಲಿಲ್ಲ. ಮಂತ್ರಿಗಳು ಒಂದೇ ತಿಂಗಳಿನಲ್ಲಿ ಮಧ್ಯಪ್ರವೇಶ ಮಾಡಿ ಫುಡ್ ಕಾರ್ಪೊರೇಷನ್‌ದವರು ವಿತರಣೆ ಮಾಡುವುದು ಬೇಡ, ಮತ್ತೆ ಟಿಎಪಿಎಂಸಿಯವರು ವಿತರಣೆ ಮಾಡಬೇಕೆಂದು ಫುಡ್ ಮಿನಿಸ್ಟರ್ ಕಡೆಯಿಂದ ಸ್ಟೇ ಕೊಡಿಸಿದರು. ಇದರ ಬಗ್ಗೆ ಡೀಟೈಲ್ ಎನ್‌ಕ್ವಾಯರಿ ಆಯಿತು. ಜಿಲ್ಲಾಧಿಕಾರಿಗಳು ಮಾಡಿದ ಆಜ್ಞೆಗೆ ಫುಡ್ ಮಿನಿಸ್ಟರ್ ಸ್ಟೇ ಕೊಟ್ಟರು. ಇವತ್ತಿನವರೆಗೆ ಈ ರೀತಿ ನಡೆಯುತ್ತಿದೆ. ನಾವು ಅವರ ಮೇಲೆ ಕಂಪ್ಲೆಂಟ್ ಮಾಡಿದ್ದೇವೆ. ಹೇಗಿದೆ ನೋಡಿ? ನಾಲ್ಕು ವರ್ಷಗಳ ಹಿಂದೆ ನಮ್ಮ ಕಮಿಟಿಯವರಿದ್ದಾಗ ಆಗ ಯಾರೋ ಒಬ್ಬ ಸೆಕ್ರೆಟರಿ ದುರುಪಯೋಗ ಮಾಡಿದ್ದಾನೆಂದು ಹೇಳಿ ಒರಿಜನಲ್ ಬಿಲ್ಸ್‌ಗಳು ಇಲ್ಲ, ಡುಪ್ಲಿಕೇಟ್ ಬಿಲ್‌ಗಳ ಸೆಟ್ ತೆಗೆದುಕೊಂಡು ಆ ಸೆಕ್ರೆಟರಿಯ ಮೇಲೆ ಆರೋಪ ಮಾಡಿ ಎನ್‌ಕ್ವಾಯರಿ ಮಾಡಿಯೆಂದು ಜಿಲ್ಲಾಧಿಕಾರಿಗಳಿಗೆ ಕೊಟ್ಟು ಅವರ ಮೇಲೆ ಒತ್ತಾಯ ತಂದು ಆರೋಪ ಮಾಡಿ ನಾಲ್ಕು ವರ್ಷಗಳ ಹಿಂದೆ ಇದ್ದ ಸೆಕ್ರೆಟರಿ ಹೆಸರು ಸೇರಿಸಿದ್ದಾರೆ. ಹೊಸದಾಗಿ ನಾವೇನು ಕಂಪ್ಲೆಂಟ್ ಕೊಟ್ಟಿದ್ದೇವೆ ಅವನ ಮೇಲೆ ತನಿಖೆ ಮಾಡಿಸುವುದನ್ನು ಬಿಟ್ಟು ಹಿಂದಿನವನ ಹೆಸರನ್ನು ಸೇರಿಸಿ ರಾಜಕೀಯ ಕುತಂತ್ರ ಮಾಡಿ ಈ ಕೆಲಸ ಮಾಡಿದ್ದಾರೆ. ಅವನ ಮೇಲೆ ಆರೋಪ ಮಾಡಿರುವುದನ್ನು ನಾವು ಸ್ವಾಗತ ಮಾಡಿದ್ದೇವೆ. ಪೋಲೀಸ್ ಕೇಸ್ ಹಾಕಿದ್ದಾರೆ. ಎನ್‌ಕ್ವಾಯರಿ ನಡೆಯುತ್ತಿದೆ. ಕೋರ್ಟ್‌ನಲ್ಲಿ ಹೋಗಿ ಅದನ್ನು ಎದುರಿಸುವುದಕ್ಕೆ ತಯಾರಿದ್ದೇವೆ. ಇನ್ನೊಂದು ಆರೋಪವನ್ನು ಮಾಡಿದ್ದಾರೆ. ಬಯೋಗ್ಯಾಸ್‌ನಲ್ಲಿ ದುರುಪಯೋಗವಾಗಿರುವುದು ಅದು ನಮ್ಮ ತಾಲ್ಲೂಕಿನಲ್ಲಿ ಆದು ಪ್ರಸ್ತಾಪಕ್ಕೆ ಬಂತು. ನಮ್ಮಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಆಫೀಸರ್ ಇದ್ದ. ಏನ್ರಿ ಇದು, ಅದರ ಬಗ್ಗೆ ಡೀಟೈಲ್ ವರದಿ ಕೊಡಿಯೆಂದು ಹೇಳಿದೆ. ಆ ಸಂದರ್ಭದಲ್ಲಿ ನಮ್ಮ ಪಕ್ಷದ ಜಿಲ್ಲಾಪಂಚಾಯಿತಿಯ ಸದಸ್ಯರಾದ ನಾರಾಯಣಪ್ಪ ಎಂಬುವವರು ಓಪನ್ ಆಗಿ ಎಕ್ಸಿಕ್ಯೂಟಿವ್ ಆಫೀಸರ್ ಮೇಲೆ ಇರತಕ್ಕ ಆರೋಪದ ಬಗ್ಗೆ ಎತ್ತಿದ್ದಾರೆ. ಬಯೋಗ್ಯಾಸ್‌ಪ್ಲಾಂಟ್ ಮಾಡುವಲ್ಲಿ ಎರಡು ಲಕ್ಷ ರೂಪಾಯಿ ಹಣ ದುರುಪಯೋಗವಾಗಿದೆಯೆಂದು ಹೇಳಿದರು. ಅದನ್ನು ತನಿಖೆ ಮಾಡಬೇಕೆಂದು ಡೆಪ್ಯುಟಿ ಸೆಕ್ರೆಟರಿಯವರನ್ನು ಕಳುಹಿಸಿದರು. ಯಾವರೀತಿಯಾಗಿ ಇವರು ಅಧಿಕಾರವನ್ನು ಬ್ಲಾಕ್‌ಮೇಲ್ ಮಾಡಿಕೊಳ್ಳುತ್ತಾರೆಂದು ಸ್ವಂತ ಪ್ರಚಾರಕ್ಕೆ ಮಾಡಿಕೊಳ್ಳುತ್ತಾರೆನ್ನುವುದಕ್ಕೆ ಇದೇ ಉದಾಹರಣೆ. ಈ ವಿಚಾರವನ್ನು ಜಿಲ್ಲಾಪಂಚಾಯಿತಿಯ ಮೀಟಿಂಗ್‌ನಲ್ಲಿ ನಮ್ಮವರೇ ಪ್ರಸ್ತಾಪ ಮಾಡಿದರು. ಆ

ಅಧಿಕಾರಿಯನ್ನು ನಾನು ಹಾಕಿಸಿಕೊಂಡಿದ್ದಲ್ಲ. ಇವರೇ ಮಂತ್ರಿಗಳು ರೆಕಮಂಡ್ ಮಾಡಿದರು. ಅದರ ಬಗ್ಗೆ ರೆಕಾರ್ಡ್ ಇದೆ, ಪತ್ರ ಇದೆ. ನಾನು ಶಿಫಾರಸ್ಸು ಮಾಡಿದ ಅಧಿಕಾರಿಯಲ್ಲ. ಇದನ್ನು ಮಂತ್ರಿಗಳಿಗೆ ತಿಳಿಸುತ್ತೇನೆ. ಕಾನೂನು ದುರುಪಯೋಗ ಮಾಡಿದ ಅಧಿಕಾರಿಯ ಬಗ್ಗೆ ನಮ್ಮ ಪಕ್ಷದ ಜಿಲ್ಲಾ ಪಂಚಾಯಿತಿ ಸದಸ್ಯರು ಆರೋಪ ಮಾಡಿದರು. ಅವರ ಮೇಲಿರತಕ್ಕ ಆರೋಪಗಳ ಬಗ್ಗೆ ಡೆಪ್ಯುಟಿ ಸೆಕ್ರೆಟರಿಯವರು ಬಂದು ತನಿಖೆ ಮಾಡಿ ಅವರ ಆರೋಪ ಸಾಬೀತಾಗಿದೆಯೆಂದು ರಿಪೋರ್ಟ್ ಕೊಟ್ಟರು. ಈ ಮಧ್ಯೆ ರಿಪೋರ್ಟ್ ಇವರ ಗಮನಕ್ಕೆ ಬಂತು. ಮಂತ್ರಿಗಳ ಗಮನಕ್ಕೆ ಬಂದಾಗ, ಸಂಪ್ರದಾಯಕ್ಕೆ ಲೋಕಲ್ ಎಂಎಲ್ಎ ಗಳಿಗೆ ತಿಳಿಸಬೇಕು. ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟರು. ಭೇಟಿ ಕೊಟ್ಟಮೇಲೆ ಲೋಕಲ್ ಎಂಎಲ್ಎಗಳನ್ನು ಕರೆಸಬೇಕು. ಇವರು ಭೇಟಿ ಕೊಟ್ಟ ಸಂದರ್ಭದಲ್ಲಿ ನಮಗೆ ಯಾರಿಗೂ ತಿಳಿಸಲಿಲ್ಲ. ಇವರು ಬೆಳಿಗ್ಗೆ 10.30 ಗಂಟೆಗೆ ಕರೆಕ್ಟಾಗಿ ಪ್ರೆಸ್ ರಿಪೋರ್ಟರ್ಸ್‌ಗಳ ಜೊತೆಯಲ್ಲಿ ಬಂದರು. ಬೆಂಗಳೂರಿನಿಂದ ಸೆಪರೇಟ್ ವ್ಯಾನ್ ಮಾಡಿಕೊಂಡು ಮುಂದುಗಡೆ ಮಂತ್ರಿಗಳು ಹಿಂದುಗಡೆ ಪ್ರೆಸ್‌ನವರು. ಇವರೇ ಕರೆದುಕೊಂಡು ಬಂದಿದ್ದಾರೆ. ನಮಗೆ ಗೊತ್ತಿಲ್ಲ. ನಾನು ಆವೊತ್ತು ಊರಿನಲ್ಲಿದ್ದೆ. ನನಗೆ ಒಂದು ಇಂಟಿಮೇಷನ್ ಇಲ್ಲ. ಸಂಪ್ರದಾಯಕ್ಕೆ ಮಾನ್ಯ ಮಂತ್ರಿಗಳು ಬಂದಾಗ ಸ್ಥಳೀಯ ಎಂಎಲ್ಎಗಳು ಯಾರೇ ಇರಲಿ ಅವರಿಗೆ ಇನ್‌ಫಾರ್ಮ್ ಮಾಡಿ ಏನು ಇದರ ಹಿನ್ನಲೆ ನಿಮಗೆ ಗೊತ್ತಿದೆಯೇ ಎಂದು ಕೇಳತಕ್ಕ ಸೌಜನ್ಯಕ್ಕೆ ವಿಚಾರ ಮಾಡತಕ್ಕದ್ದು ಧರ್ಮ ಇವರದು. ಅದನ್ನು ಮಾಡಲಿಲ್ಲ. ಇದರ ಬಗ್ಗೆ ಅವರು ವಿಚಾರ ಮಾಡಲಿಲ್ಲ. ಬಂದರು ಆಫೀಸಿನಲ್ಲಿ ಕುಳಿತುಕೊಂಡರು. ಅಧಿಕಾರಿಗಳನ್ನು ಕರೆಸಿಬಿಟ್ಟರು, ಸಿ.ಇ.ಒ.ರನ್ನು ಕರೆಸಿಬಿಟ್ಟರು. ಆ ಅಧಿಕಾರಿ ಮೇಲೆ ಒಂದು ಆರೋಪಗಳ ಪಟ್ಟಿ ಮಾಡಿದರು. ಸಾರ್, ನಾವು ಮಾಡಿದ್ದು ಈ ಆರೋಪವನ್ನು. ಜಿಲ್ಲಾಪಂಚಾಯತ್‌ನಲ್ಲಿ ಓಪನ್ ರೆಕಾರ್ಡ್ ಇದೆ. ದಯವಿಟ್ಟು ಈ ಮನೆಗೆ ಅದನ್ನು ತರಿಸಿಬಿಡಿ. ಆ ರೆಕಾರ್ಡ್‌ನಲ್ಲಿ ನಾವೇ, ನಮ್ಮಪಕ್ಷದವರೇ ಆರೋಪ ಮಾಡಿದ್ದೇವೆ. ಅದು ತನಿಖೆ ಕೂಡ ಆಗಿದೆ. ಅದನ್ನು ಪ್ರೆಸ್‌ನವರಿಗೆ ಕೊಟ್ಟುಬಿಟ್ಟು ಅವರನ್ನು ಪೊಲೀಸ್ ಸ್ಟೇಷನ್‌ನಲ್ಲಿ ಕೂಡಿಸಿಬಿಟ್ಟು ಹೋಗಿ ಕೃಷಿ ಮಂತ್ರಿಗಳು ದೊಡ್ಡ ಹಗರಣ ಪತ್ತೆ ಮಾಡಿದರು ಎಂದು ಹೇಳಿ ದೊಡ್ಡದಾಗಿ ಬೆಳಿಗ್ಗೆ ಪತ್ರಿಕೆಗಳಲ್ಲಿ ಹಾಕಿಸಿಕೊಳ್ಳುವ ಮಟ್ಟಕ್ಕೆ ಬಂದರೆ, ಇದನ್ನು ನಾನು ಮಾಡಿಬಿಟ್ಟೆ ಎಂದು ಹೇಳುವುದಾದರೆ, ನಿಜವಾಗಿಯೂ ನಾವು ಮಾಡಿರುವುದನ್ನು, ನಾವು ಚಾರ್ಜ್ ಮಾಡಿರುವುದನ್ನು, ನಾವು ಆರೋಪ ಮಾಡಿರುವುದನ್ನು ಇವರು ಯಾವ ತರಹ ತೆಗೆದುಕೊಳ್ಳುತ್ತಾರೆ ಮತ್ತು ಸ್ಥಳೀಯವಾಗಿ ಬಂದಂಥ ಸಂದರ್ಭದಲ್ಲಿ ಶಾಸಕರನ್ನು ಯಾವರೀತಿ ನಿರ್ಲಕ್ಷ್ಯ ಮಾಡುತ್ತಾರೆ ಮತ್ತು ಈ ಪ್ರಜಾಪ್ರಭುತ್ವದಲ್ಲಿ ಏನು ಸಂಪ್ರದಾಯ ಇದೆ ಆ ಸಂಪ್ರದಾಯಕ್ಕೆ ತಿಲಾಂಜಲಿ ಕೊಟ್ಟು ಈ ತರಹ ಮಾಡುವುದಾದರೆ ಇದಕ್ಕಿಂತ ಅನ್ಯಾಯ ಇನ್ನು ಬೇರೆ ಇಲ್ಲ.

+ ಶ್ರೀಮತಿ ಪ್ರಮಿಳಾ ನೇಸರ್ಗಿ (ಚಾಮರಾಜಪೇಟೆ): ಸನ್ಮಾನ್ಯ ಅಧ್ಯಕ್ಷರೇ, ಅಕ್ಕಮಹಾದೇವಿ ಒಂದು ಮಾತನ್ನು ಹೇಳಿದ್ದಾಳೆ. 'ಬೆಟ್ಟದ ಮೇಲೊಂದು ಮನೆಯನ್ನು ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯಾ' ಎಂದು ಹೇಳಿ. ಹಾಗೆಯೇ ಇನ್ನೊಂದು ಮಾತನ್ನು ಹೇಳುತ್ತಾರೆ. 'ಲೋಕದೊಳಗೆ ಸ್ತುತಿ ನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು' ಎಂದು ಆಗಿನ ವಚನಗಾರ್ತಿ ಅಕ್ಕಮಹಾದೇವಿ ಇದನ್ನು ಹೇಳಿರುವುದು. ಅದು ಈಗಿನ ಕಾಲದವರಿಗೆ ಬಹಳ ಸೂಕ್ತವೆಂದು ನಾನು ಅಂದುಕೊಂಡಿದ್ದೇನೆ. ಈಗ ಯಾರೋ ಸಾಹಿತಿಗಳು, ಕಲಾವಿದರು, ಬುದ್ದಿಜೀವಿಗಳು ಸಾರ್ವಜನಿಕರು ಏನೇನೋ ಮಾತನಾಡಿಬಿಡುತ್ತಾರೆ ಎಂದುಹೇಳಿ ನಾವು ಏಕೆ ಮನಸ್ಸು ಕೆಡಿಸಿಕೊಳ್ಳಬೇಕಾ ಅಥವಾ ನಾವು ಅಸಮಾಧಾನವಾಗಿರಬೇಕಾ ಎನ್ನುವುದನ್ನು ನಾವು ಇವತ್ತು ನಿಜವಾಗಿಯೂ ಕೂಲಂಕಷವಾಗಿ ಆಲೋಚನೆ ಮಾಡಬೇಕಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತಿದ್ದೇನೆ ಎಂದರೆ, ಪ್ರತಿಯೊಬ್ಬರೂ ಕೂಡ ತಮ್ಮತಮ್ಮ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಶಾಸಕರಾಗಿ ಬಂದ ಮೇಲೆ ರಾಜ್ಯಾಂಗದಲ್ಲಿ ನಾವು ಪ್ರಮಾಣಪತ್ರ ತೆಗೆದುಕೊಂಡು ಬಂದಮೇಲೆ ರಾಜ್ಯಾಂಗಕ್ಕೆ ನಾವು ಬದ್ಧರು. ಈ ಮನೆಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾರೂ ಕೂಡ ಬದ್ಧರು. ಅಂದಮೇಲೆ ರಾಜ್ಯಾಂಗದಲ್ಲಿ ಆರ್ಟಿಕಲ್ 19ರ ಪ್ರಕಾರವಾಗಿ ಪ್ರತಿಯೊಬ್ಬರೂ ಕೂಡ ಮಾತನಾಡತಕ್ಕಂಥ ಮೂಲಭೂತ ಹಕ್ಕು ಇರುವುದರಿಂದ ಯಾರು ಬೇಕಾದರೂ ಹೇಳುವುದಕ್ಕೆ ಹಕ್ಕು ಇದೆ. ನಾವು ಅವರಿಂದ ಚುನಾಯಿತರಾಗಿ ಬಂದಂಥವರು ನಾವು ಏನಾದರೂ ತಪ್ಪು ದಾರಿಗೆ ಹೋದಾಗ ನೀವು ತಪ್ಪು ಮಾಡುತ್ತಿದ್ದೀರಿ ಎಂದು ಹೇಳತಕ್ಕಂಥ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇದೆ ಎಂಬುದು ನನ್ನ ಭಾವನೆ. ಆದ್ದರಿಂದ ಅವರ ಮನಸ್ಸಿಗೆ ನೋವು ಆಗತಕ್ಕಂಥ ಮಾತನ್ನು ಯಾವಾಗಲೂ ಆಡಬಾರದು ಮತ್ತು ಯಾರೂ ಕೂಡ ಮಾತನಾಡಬಾರದು. ಅವರ ಹಕ್ಕನ್ನು ತೆಗೆದುಹಾಕತಕ್ಕಂಥ ಕೆಲಸವನ್ನು ರಾಜ್ಯಾಂಗಕ್ಕೆ ವಿರುದ್ಧವಾಗಿ ನಾವು ಯಾರೂ ಕೂಡ ಮಾಡತಕ್ಕಂತ ಕೆಲಸ ಮಾಡಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತಾ ಈ ಸಂದರ್ಭದಲ್ಲಿ ಈ ಅವಿಶ್ವಾಸಮತ ನಿರ್ಣಯವನ್ನು ಅವರ ಪಕ್ಷದವರೇ ತಂದಿದ್ದಾರೋ ಅಥವಾ ನಾವು ತಂದಿದ್ದೇವೋ ಅದಲ್ಲ ಮುಖ್ಯ....

ಅಧ್ಯಕ್ಷರು: ನೀವು ಹೇಳಿದ್ದು, ಇದು ಯಾವ ಕಾಂಟಿಕ್ಸ್ ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ: ನಾನು ಹೇಳುತ್ತೇನೆ. ನಾನು ಹೇಳತಕ್ಕದ್ದು ಏನೆಂದರೆ ಏನಾದರೂ ಕೆಲವು ಮಾತುಗಳು ಬಂದಾಗ ಸಮಾಧಾನಚಿತ್ತದಿಂದ ಇರಬೇಕು ಎಂದು ಮಹಾದೇವಿ ಹೇಳಿದ್ದಾರೆ. ಆ ಮಾತುಗಳು ಬಂದಾಗ ಅದು ಏನೇನಾಗಿದೆ ಎನ್ನುವುದನ್ನು ಸರಿಪಡಿಸಬೇಕು ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿದ್ದೇನೆ. ಯಾರ್ಯಾರು ಯಾವ್ಯಾವ ದೃಷ್ಟಿ ಕೋನದಲ್ಲಿ ನೋಡುತ್ತಾರೆ, ಆ ತರಹ ಕಾಣುತ್ತದೆ.

ಸಾರ್ವಜನಿಕವಾಗಿ ಹೇಳತಕ್ಕದ್ದು ಇರಬಹುದು ಶಾಸಕರು ಇರಬಹುದು ಯಾರು ಬೇಕಾದರೂ....

ಅಧ್ಯಕ್ಷರು: ಒಂದೇ ಒಂದು ನಿಮಿಷ. ಬೆಳಿಗ್ಗೆ ತಾನೇ ನಾನು ಆವತ್ತಿನ ಪ್ರೊಸೀಡಿಂಗ್ಸ್ ತರಿಸಿ ಓದುತ್ತಾ ಇದ್ದೆ. ನಾನು ಬಹಳ ಕ್ಲಿಯರ್ ಆಗಿ ಹೇಳಿದ್ದೇನೆ. ಸಾರ್ವಜನಿಕರು ಅಲ್ಲ, ಐದೇಐದು ಜನ ಒಂದುಕಡೆ ಸೇರಿ ಒಂದು ಮಾತು ಹೇಳಿದರೂ ಕೂಡ ಅದನ್ನು ಸದನ ಗೌರವಿಸಬೇಕು. ನಾವು ಈ ಭಾವನೆಗಳಿಗೆ ಸ್ಪಂದಿಸಬೇಕಾದಂಥ ಕರ್ತವ್ಯ ಮತ್ತು ನಿರ್ಬಂಧ ನಮ್ಮ ಮೇಲೆ ಇದೆ ಅಂತಲೇ ನಾನು ಹೇಳಿದ್ದೇನೆ. ನಮಗೆ ಯಾರಿಗೂ ಈ ಅಭಿಪ್ರಾಯ ಇಲ್ಲ. ಯಾರಿಗೂ ಹಕ್ಕು ಇಲ್ಲ ಎಂದು ಹೇಳಿಲ್ಲ. ಯಾರ ಹಕ್ಕನ್ನು ಮೊಟಕುಗೊಳಿಸುವ ಉದ್ದೇಶ ಇಲ್ಲ. ಯಾರನ್ನು ನಿರ್ಬಂಧಪಡಿಸುವುದಿಲ್ಲ. ನಮ್ಮ ಕಷ್ಟ ಏನು ಎಂದು ಹೇಳಿಕೊಳ್ಳುವಂಥ ಸ್ಥಿತಿ ಬಂದಿದೆ ಅಷ್ಟೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಅದಕ್ಕೆ ನಾನು ಹೇಳಿದೆ, ಅವರವರ ಭಾವಕ್ಕೆ ತಕ್ಕಂತೆ ಅವರವರು ಅರ್ಥಮಾಡಿಕೊಳ್ಳಲಿ ಎಂದು. ಈ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಇವರೊಬ್ಬರಿಗೇ ಸಮಾಧಾನ ಇದೆ, ನಮಗೆ ಆ ಸಹನೆಯೂ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. ನಾವು ಸಾರ್ವಜನಿಕರು ಟೀಕೆ ಮಾಡಿದರೆ ನಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಪಾಪ, ಅವರು ಹೆಂಗಸರು ಸಮುದ್ರ ಇದ್ದಹಾಗೆ, ಏನು ಬಂದರೂ ನುಂಗಿಕೊಳ್ಳಬೇಕು. ಅವರು ಸಮಾಧಾನವಾಗಿರುತ್ತಾರೆ ಎಂದು. ನಾವು ಕಡ್ಡಾಯವಾಗಿ ಸಮಾಧಾನವಾಗಿರುತ್ತೇವಮ್ಮ, ನೀವು ಹೇಳಿದ್ದೆಲ್ಲಾ ಸಮಾಧಾನವಾಗಿ ಕೇಳುತ್ತೇವೆ, ತುಟಿ ಪಿಟಕ್ ಎನ್ನುವುದಿಲ್ಲ. ತಾವು ಏನು ಅಪ್ಪಣೆ ಕೊಡಿಸುತ್ತೀರೋ ಕೊಡಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈ ಸಮಾಧಾನ ಲಂಕೇಶ್ ಪತ್ರಿಕೆ ಮೇಲೆ ಮಾತನಾಡುವ ದಿವಸ ಅವರಿಗೆ ಎಲ್ಲಿ ಹೋಗಿತ್ತು?

ಶ್ರೀಮತಿ ಪ್ರಮಿಳಾ ನೇಸರ್ಗಿ: ಹೇಳುತ್ತೇನೆ. ಬಹಳ ಚೆನ್ನಾಗಿ ಮಾಧುಸ್ವಾಮಿಯವರು ಹೇಳುತ್ತಾರೆ. ಕಾನೂನಿನ ಚೌಕಟ್ಟಿನಲ್ಲಿ ರಾಜ್ಯಾಂಗಕ್ಕೆ ನಾವು ಬದ್ಧರು. ಪತ್ರಿಕೋದ್ಯಮವಾಗಲೀ, ರಾಜ್ಯಾಂಗವಾಗಲೀ, ನ್ಯಾಯಾಂಗವಾಗಲೀ, ಶಾಸಕಾಂಗವಾಗಲಿ ನಾವು ಎಲ್ಲರೂ ಕೂಡ ಬದ್ಧರು. ಅದನ್ನು ಮಾಡಿದಮೇಲೆ ಆ ನಿಯಮಕ್ಕೆ ಮೀರಿ ಹೊರಗಡೆ ಹೋದಾಗ ತಾವು ಮಾಡಿದ್ದು ಎಂದು ಹೇಳತಕ್ಕಂಥ ಹಕ್ಕು ನನ್ನದಾಗಿದೆ. ಅದನ್ನು ಸಮರ್ಥಿಸತಕ್ಕಂಥ ಹಕ್ಕು ನಿಮ್ಮದಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಅದಕ್ಕೆ ನಾನು ಹೇಳಿದ್ದು ಅವರವರ ಭಾವಕ್ಕೆ ಅವರವರು ಅರ್ಥ ಮಾಡಿಕೊಳ್ಳಲಿ ಅಂತ. ನಾನು ನಂಜೇಗೌಡರಿಗೆ ಆಗಲಿ, ಅಥವಾ ಬೇರೆ ಯಾರಿಗಾಗಲೀ ಈ ವಿಷಯವನ್ನು ಹೇಳಿಲ್ಲ. ಅದು ಯಾರ್ಯಾರು ಯಾವ ತರಹ ಅರ್ಥ

ಮಾಡಿಕೊಳ್ಳಬೇಕೋ ಆರೀತಿ ಮಾಡಿಕೊಳ್ಳಲಿ ಎಂದು ಹೇಳಿದೆ. ಅಧ್ಯಕ್ಷರೇ, ಇಲ್ಲಿ ಸನ್ಮಾನ್ಯ ಬೈರೇಗೌಡರು ಇಲ್ಲ, ಅಥವಾ ನಾಗೇಗೌಡರೂ ಇಲ್ಲ. ನಮ್ಮ ಮುನಿಯಪ್ಪನವರು ಬಹಳ ಚೆನ್ನಾಗಿ ಮಾತನಾಡಿದರು. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಬೈರೇಗೌಡರು ರೈತರ ಹಿತರಕ್ಷಣೆ ಬಯಸತಕ್ಕಂಥ ನಾವು ರೈತರ ಹಿತಕ್ಕೆ ಧಕ್ಕೆ ಆಗತಕ್ಕಂತ ಕೆಲಸ ಆದಾಗ ತಾವು ಎಲ್ಲಿದ್ದೀರಿ, ಏನು ಮಾಡುತ್ತಿದ್ದಿರಿ? ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, 1992ರಲ್ಲಿ ಆಂಜನೆಯಪುರ ಏತನೀರಾವರಿ ಎಂದು ಹಾಸನ ತಾಲ್ಲೂಕಿಗೆ ಕಾಂಗ್ರೆಸ್ ಸರ್ಕಾರದವರು ಮಂಜೂರು ಮಾಡಿದ್ದರು. ಇದಕ್ಕೆ ಮೂರು ಕೋಟಿ ರೂಪಾಯಿ ವೆಚ್ಚ ಮಾಡಿದ್ದರು. ನಾನು ಇವತ್ತು ಕೇಳುತ್ತಿದ್ದೇನೆ, ಏತಕ್ಕೋಸ್ಕರ ಇದನ್ನು ಮಾಡಿದ್ದರು? ಯಾರಿಗೋಸ್ಕರ ಮಾಡಿದ್ದರು? ಅಲ್ಲಿರತಕ್ಕಂಥ ಹಳ್ಳಿಯ ಜನರಿಗೆ ನೀರು ಒದಗಲಿ ಎಂದು ಹೇಳಿ ಮೂರು ಕೋಟಿ ರೂಪಾಯಿ ಖರ್ಚುಮಾಡಿ ನಾಲೆ, ಕಾಲುವೆ ಎಲ್ಲಾ ತೆಗೆದರು. 50 ಲಕ್ಷ ರೂಪಾಯಿಯ ಮೆಷನರಿಯನ್ನು ಕೊಂಡುಕೊಂಡು ಬಂದದ್ದು ಏನಾಯಿತು? ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳು ಬಂದರು. ಬಂದು ಆ ರೈತರಿಗೆ ಅನುಕೂಲ ಮಾಡಬೇಕಲ್ಲಾ. ಆದರೆ ಅವರು ಏನು ಮಾಡಿದರು ಎಂದರೆ ಆಂಜನೇಯಪುರ ಏತನೀರಾವರಿ ಯೋಜನೆಯನ್ನು ವಜಾ ಮಾಡಿ ಬಡರೈತನ ಮಗ ರೈತರಿಗೆ ಕೊಡುಗೆ ಕೊಟ್ಟರು. ಕೆಲಸ ಆಗಲಿಲ್ಲ. 50 ಲಕ್ಷ ರೂಪಾಯಿ ಮೆಷಿನ್ ತಂದಿದ್ದು ಏನಾಯಿತು, ಅದು ಎಲ್ಲಿಗೆ ಹೋಯಿತು? ಮೂರು ಕೋಟಿ ರೂಪಾಯಿ ವೆಚ್ಚಮಾಡಿ ಏತನೀರಾವರಿ ತಂದಿರಲ್ಲಾ ಆಗ ನಿಮಗೆ ರೈತರ ಬಗ್ಗೆ ಗಮನ ಇರಲಿಲ್ಲವೆ? ರೈತರ ಬಗ್ಗೆ ಹಿಂದಿನ ಸರ್ಕಾರ ಏನಾದರೂ ತಪ್ಪುಮಾಡಿ ದುಡ್ಡು ಏನಾದರೂ ಖರ್ಚುಮಾಡಿದ್ದೀರಾ? ಹಣ ಏನಾಯಿತು ಎಂದು ನಾವು ಕೇಳಬೇಕಲ್ಲಾ. ನಾವು ಇವತ್ತು ಅವಿಶ್ವಾಸ ನಿರ್ಣಯ ತಂದಿರತಕ್ಕಂಥ ಸಂದರ್ಭದಲ್ಲಿ ನಿಮ್ಮ ಸರ್ಕಾರ ಬಂದಾಕ್ಷಣ ರೈತರಿಗೆ ಏನು ಮಾಡಿದ್ದೀರಿ ಎಂದು ಹೇಳುತ್ತಾ ಇರತಕ್ಕಂಥ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಕ್ಷರೇ, ಇಲ್ಲಿ ಒಬ್ಬ ರಿಟೈರ್ಡ್ ಡ್ರೈವರ್‌ನ ಒಬ್ಬ ಮಗ ಇದ್ದಾನೆ. ನನಗೆ ಅವನು ಯಾರು ಎಂದು ಗೊತ್ತಿಲ್ಲ. ಅವರ ಹೆಸರು ನಾನು ಕೂಡ ಕೇಳಿದ್ದೇನೆ 'ಪರಮೇಶ' ಎಂದು ಹೇಳುತ್ತಾರೆ. ಯಾರು ಈ ಪರಮೇಶ? ಇದು ನನಗೆ ಅರ್ಥವಾಗುತ್ತಿಲ್ಲ. ದೇವರಾಯಪಟ್ಟಣದ ಟಿ.ಟಿ.ಪರಮೇಶ, ಕೆ.ಎಸ್.ಆರ್.ಟಿ.ಸಿ. ಡ್ರೈವರ್‌ನ ಮಗ. ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತದೆ. ನಾಲ್ಕು ವರ್ಷದ ಒಳಗೆ ರಿಟ್ಯಾರ್ಡ್ ಡ್ರೈವರ್‌ನ ಮಗ ಮೊನ್ನೆ ಇನ್‌ಕಮ್ ಟ್ಯಾಕ್ಸ್ ಡಿಕ್ಲರೇಷನ್ ಕೊಡುವಾಗ ಇವರು 80 ಕೋಟಿಗೆ ಡಿಕ್ಲರೇಷನ್ ಕೊಡುತ್ತಾರೆ. 80 ಕೋಟಿ ರೂಪಾಯಿಗಳ ಡಿಕ್ಲರೇಷನ್ ಕೊಡುವ ಈ ಟಿ.ಟಿ.ಪರಮೇಶ ಯಾರು? ಯಾರಿಗೆ ಸಂಬಂಧ ಇವರು? ಇವರು ಹಾಸನದವರು ಎಂದು ನಾನು ಕೇಳಿದ್ದೇನೆ. ಈ ಹಣ ಅವರಿಗೆ ಹೇಗೆ ಬಂತು? 80 ಕೋಟಿ ರೂಪಾಯಿ..

ಅಧ್ಯಕ್ಷರು: ವಿ.ಡಿ.ಎಸ್.ನಲ್ಲಿ ಕೊಟ್ಟಿದ್ದಾರಾ?

ಶ್ರೀಮತಿ ಪ್ರಮಿಳಾ ನೇಸರ್ಗಿ: ಹೌದು. ಈಗ ಒಬ್ಬ ರಿಟ್ಯಾರ್ಡ್ ಡ್ರೈವರ್‌ನ ಮಗ. ಇದನ್ನು ಒಂದು ಉದಾಹರಣೆಗೆ ಮಾತ್ರ ಹೇಳುತ್ತಿದ್ದೇನೆ. ನೀವು ಪೂರ್ತಿ ದಿವಸ ಸಮಯ ಕೊಡುವುದಾದರೆ ನಾನು ಎಲ್ಲರ ಹೆಸರುಗಳನ್ನು ಕೊಡುತ್ತೇನೆ. ನಾನೇನೂ ಕೊಡುವುದಕ್ಕೆ ಹಿಂಜರಿಯುವುದಿಲ್ಲ. ನಾವು, ನೀವು ಅಥವಾ ಯಾರಾದರೂ ಮಂತ್ರಿಗಳು 80 ಕೋಟಿ ರೂಪಾಯಿಗಳ ಡಿಕ್ಲರೇಷನ್ ಕೊಟ್ಟಿದ್ದಾರಾ? ಇಷ್ಟು ಹಣ ಇವರಿಗೆ ಹೇಗೆ ಬಂತು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವರಿಗೆ ಟಿಪ್ಪರ್ಸ್ ಎಷ್ಟು ಇದೆ? ಜೆ.ಸಿ.ಬಿ.ಗಳು ಇವರ ಹತ್ತಿರ ಎಷ್ಟು ಇವೆ? ಎಂಬುದನ್ನು ಹೇಳುತ್ತೀರಾ? ಏನಾದರೂ ಎನ್‌ಕ್ವೈರಿ ಮಾಡಿ ಸದನದ ಮುಂದೆ ಇಡುತ್ತೀರಾ? ಎಲ್ಲಿಂದ ಬಂತು ಇಷ್ಟೊಂದು ಹಣ? ಹೇಗೆ ಬಂತು ಎಂದರೆ ನಾಗೇಗೌಡರು ಉತ್ತರ ಕೊಡಬೇಕು. ಇಲ್ಲಿನ ಅಪ್ಪರ್‌ಕೃಷ್ಣಾ ಯೋಜನೆಗೆ ಇವರು ಒಬ್ಬರು ಕಂಟ್ರಾಕ್ಟರ್....

ಅಧ್ಯಕ್ಷರು: ವಾಲೆಂಟರಿ ಡಿಸ್‌ಕ್ಲೋಷರ್ ಸ್ಕೀಮ್‌ನಲ್ಲಿ ಪ್ರಾವಿಷನ್ ಏನಮ್ಮ? ತಾವು ಕಾನೂನು ಚೆನ್ನಾಗಿ ಬಲ್ಲವರು. ವಾಲಂಟರಿ ಡಿಸ್‌ಕ್ಲೋಷರ್ ಸ್ಕೀಮ್‌ನ್ನು ಕೇಂದ್ರಸರ್ಕಾರದವರು ಏಕೆ ತಂದರು?

ಶ್ರೀಮತಿ ಪ್ರಮಿಳಾ ನೇಸರ್ಗಿ: ಇಂಥಾದ್ದೆಲ್ಲಾ ಕಾಣಲಿ ಅಂತಲೇ ತಂದಿರುವುದು.

ಅಧ್ಯಕ್ಷರು: ಕೇಂದ್ರಸರ್ಕಾರವೇ ಅವಕಾಶ ಮಾಡಿಕೊಟ್ಟಾಗ ನಿಮ್ಮ ಆಕ್ಷೇಪಣೆ ಹೇಗೆ ಆಗುತ್ತದೆ?

ಶ್ರೀಮತಿ ಪ್ರಮಿಳಾ ನೇಸರ್ಗಿ ; ನನ್ನ ಆಕ್ಷೇಪಣೆ ಒಂದು ಚೂರು ಇಲ್ಲ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಒಬ್ಬ ರಿಟ್ಯಾರ್ಡ್ ಡ್ರೈವರ್‌ಗೆ 80 ಕೋಟಿ ರೂಪಾಯಿ ಮೂರು ವರ್ಷದಲ್ಲಿ ಹೇಗೆ ಬರುವುದಕ್ಕೆ ಸಾಧ್ಯವಿದೆ? ಅದನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಕೇಂದ್ರಸರ್ಕಾರದ ಆದಾಯ ತೆರಿಗೆ ಇಲಾಖೆಯವರು ಅಧಿಕೃತವಾದ ಸರ್ಕಾರಿ ಆಜ್ಞೆ ಮುಖಾಂತರ ವಾಲಂಟರಿ ಡಿಸ್‌ಕ್ಲೋಷರ್ ಸ್ಕೀಮ್‌ನ್ನು ಜಾರಿಗೆ ತಂದು ನೀವು ಹೇಗಾದರೂ ಮಾಡಿರಿ, ಎಲ್ಲಾದರೂ ಮಾಡಿರಿ, ಎಷ್ಟಾದರೂ ಮಾಡಿರಿ, ಟ್ಯಾಕ್ಸ್ ಕೊಡದೇ ಇರುವ ಹಣ ಒಟ್ಟು ನೀವು ಡಿಸ್‌ಕ್ಲೋಸ್ ಮಾಡಿಬಿಟ್ಟರೆ ಇಷ್ಟು ವರ್ಷದೊಳಗೆ ನಿಮ್ಮದೆಲ್ಲಾ ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳಿದಮೇಲೆ ಅವರು ಕೊಟ್ಟಿದ್ದಾರೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಒಪ್ಪುತ್ತೇನೆ. ಅದು ಸರ್ಕಾರಕ್ಕೆ ಬರತಕ್ಕಂಥ ಹಣ. ಆದರೆ, ಇಲ್ಲಿ ವಿಶ್ವಾಸ ಮತ ಕೋರತಕ್ಕ ಸಂದರ್ಭದಲ್ಲಿ, ಈ ಸರ್ಕಾರವನ್ನು ಕೇಳುತ್ತಿದ್ದೇನೆ. ನಿಮ್ಮ ಸರ್ಕಾರದಲ್ಲಿ ಒಬ್ಬ ನಿವೃತ್ತ ಡ್ರೈವರ್ ಮಗ, 4 ವರ್ಷದಲ್ಲಿ 80

ಕೋಟಿ ಹಣವನ್ನು ಹೇಗೆ ಸಂಪಾದನೆ ಮಾಡಿದ? ಇದನ್ನು ನಾವು ಕೇಳಬೇಕಲ್ಲಾ. ಆ ವಿಷಯಕ್ಕೋಸ್ಕರ ಹೇಳುತ್ತಾ ಇರುವುದು. ಸನ್ಮಾನ್ಯ ನಾಗೇಗೌಡರು ಈ ಬಗ್ಗೆ ಹೇಳಬೇಕು. ಅಧ್ಯಕ್ಷರೇ, ಆಧಾರ ಕೇಳುತ್ತಿದ್ದಾರೆ. ವಾಲಂಟರಿ ಡಿಕ್ಲರೇಷನ್, ಇನ್‌ಕಮ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಏನು ಕೊಟ್ಟಿದ್ದಾರೆ ತಂದು ಕೊಡಿ ಎಂದರೆ, ಅದು ಪೇಪರಿನಲ್ಲಿ ಬಂದಿದೆ, ಎಲ್ಲವನ್ನೂ ತಂದುಕೊಡೋಣ. ಇವರು, ಅಪ್ಪರ್ ಕೃಷ್ಣ ಯೋಜನೆಯಲ್ಲಿ ಒಬ್ಬ ಕಂಟ್ರಾಕ್ಟರು. ಒಬ್ಬ ಕಂಟ್ರಾಕ್ಟರು, ಅಪ್ಪರ್ ಕೃಷ್ಣ ಯೋಜನೆಗೆ ಕೊಟ್ಟ ತಕ್ಷಣ, 80 ಕೋಟಿ ರೂಪಾಯಿ ಆದಾಯ 4 ವರ್ಷದಲ್ಲಿ ಬರುತ್ತದೆ ಎನ್ನುವುದಾದರೆ, ನಾವು, ನೀವು ಇಲ್ಲೇಕೆ ಕೆಲಸ ಮಾಡಬೇಕು? ಯೋಚನೆ ಮಾಡಿ. ಒಬ್ಬ ಕಂಟ್ರಾಕ್ಟರು 80 ಕೋಟಿ ರೂ ಆದಾಯ ತರಬೇಕಾದರೆ, ನಿಜವಾಗಿಯೂ ಕೂಡ, ಅಪ್ಪರ್ ಕೃಷ್ಣ ಯೋಜನೆಯಲ್ಲಿ ಕೆಲಸ ಆಗಿದೆಯೇ? ಇವರು ಇಷ್ಟು ಹಣ ಸಂಪಾದನೆ ಮಾಡಬೇಕಾದರೆ, ಅಲ್ಲಿ ಏನಾಗಿದೆ ಎಂಬುದನ್ನು ನೋಡಬೇಕಲ್ಲಾ.

ಅಧ್ಯಕ್ಷರು: ಅವರು ವಾಲಂಟರಿ ಡಿಸ್‌ಕ್ಲೋಷರ್ ಸ್ಕೀಮ್‌ನಲ್ಲಿ ಏಮು ಡಿಸ್‌ಕ್ಲೋಸ್ ಮಾಡಿದರು ಎಂಬುದು, it is a confidential correspondence between him and the department. ಅವರು ಅಪ್ಪರ್ ಕೃಷ್ಣಾದಲ್ಲಿಯೇ ಮಾಡಿದರೋ ಅಥವಾ ಇನ್ನೆಲ್ಲಿಯಾದರೂ ಎತ್ತಿಕೊಂಡು ಬಂದರೋ? ಇದು ಯಾರಿಗೆ ಗೊತ್ತು?

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾಹಿತಿ ತೆಗೆದುಕೊಳ್ಳತಕ್ಕಂತಾದ್ದು ನನ್ನ ಕರ್ತವ್ಯ.

MR. SPEAKER: I am not trying to defend that man. ನೀವು ಲೀಗಲ್ ಲ್ಯೂಮಿನರಿ ಅಲ್ಲವೇ, ತಿಳಿದುಕೊಳ್ಳೋಣ ಎನ್ನುವ ಆಸಕ್ತಿಗಾಗಿ ನಿಮ್ಮನ್ನು ಕೇಳಿದೆ. ನೀವು ಎಜ್ಯುಕೇಟ್ ಮಾಡಿದರೆ, ನಮ್ಮ ಹತ್ತಿರವೂ ಕೆಲವರು ಇದ್ದಾರೆ, ಅವರ ಹೆಸರನ್ನು ಯಾವರೀತಿ ಹೇಳಿಸಬೇಕೆಂಬುದಕ್ಕೆ ಐಡಿಯಾ ಸಿಗುತ್ತದೆ ಎಂದು ಕೇಳಿದೆ. ಕೆಲವರು ಲಾರಿಯಲ್ಲಿ ಕರೆನ್ಸಿ ನೋಟುಗಳನ್ನು ತೆಗೆದುಕೊಂಡಿದ್ದಾರೆ. ಹೈದರಾಬಾದ್‌ನಲ್ಲಿ ಒಬ್ಬರು ಹೊತ್ತುಕೊಂಡು ಹೋಗಲಾರದೆ ಲಾರಿಯಲ್ಲಿ ತೆಗೆದುಕೊಂಡು ಹೋಗಿ ಡಂಪ್ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸಿಂಗಾಪುರ್ ಪಾರ್ಕ್ ಆಗುವಾಗಲೇ ಆಯಿತು ಎಂದು ನಾನೂ ಕೇಳಪಟ್ಟಿದ್ದೇನೆ.

ಅಧ್ಯಕ್ಷರು: ಅದನ್ನೂ ನೀವೇ ನನಗೆ ಹೇಳಿದ್ದಿರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ತಾವು ಹೇಳಿದ್ದು ನಿಜ. ಲಾರಿಯಲ್ಲೇ ಬಂದಿದೆ. ಯಾವ ಲಾರಿಯಲ್ಲಿ ಬಂತು, ಹೇಗೆ ಬಂತು, ಎಲ್ಲಿಗೆ ತೆಗೆದುಕೊಂಡುಹೋದರು,

ಯಾರು ತೆಗೆದುಕೊಂಡು ಬಂದರು ಇದನ್ನೆಲ್ಲಾ ಕೂಲಂಕುಷವಾಗಿ ಸಿ ಬಿ ಐ ಎನ್‌ಕ್ವೈರಿ ಮಾಡಿದರೆ ಗೊತ್ತಾಗುತ್ತದೆ. ಎಲ್ಲಿ ಮಾಹಿತಿ ಸಿಗಬೇಕು, ಯಾರನ್ನು ಕೇಳಬೇಕೆಂದು ನಾನು ಅವರಿಗೆ ಹೇಳುತ್ತೇನೆ. ಇದನ್ನು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಆದರೆ, ಅದನ್ನು ತೆಗೆದುಕೊಂಡು ಬಂದಿರುವುದು ನಿಜ, ಆಗಿರುವುದೂ ನಿಜ.

ಅಧ್ಯಕ್ಷರು: ಸರ್ವಾಂಬಲ್ಲವರು ನೀವು, ಮುಂದುವರಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಲ್ಲಿ, ಇಲ್ಲಿ ಈ ರೀತಿಯಾಗುತ್ತಿದೆ ನೋಡಿ, ಏನಾದರೂ ಆಗುತ್ತದೆಯೇ ಎಂದು ಕೇಳುವುದಕ್ಕೆ ಸ್ವಲ್ಪ ಜನ ನನ್ನ ಹತ್ತಿರ ಬರುತ್ತಾರೆ.

ಅಧ್ಯಕ್ಷರು: ಕೇಸ್ ಏನಾದರೂ ನಿಮ್ಮ ಹತ್ತಿರಕ್ಕೆ ತೆಗೆದುಕೊಂಡು ಬಂದರೆ, ವಕಾಲತ್ತು ಮಾತ್ರ ಹಾಕಬಾರದು. ನಾನು ಈಗಲೇ ಹೇಳಿರುತ್ತೇನೆ. ಫೀಜಿನ ಆಸೆಗೆ, ಕೇಸ್ ಎಲ್ಲಾದರೂ ತೆಗೆದುಕೊಂಡರೆ ಚೆನ್ನಾಗಿರುವುದಿಲ್ಲ. ಅದು ನನ್ನ ವೃತ್ತಿಧರ್ಮ ಎಂದು ಹೇಳುವುದು, ಮತ್ತೆ ಅದಕ್ಕೊಂದು ಡಿಫೆನ್ಸ್ ಅದು ಆಗಕೂಡದು. Mr.Suresh Kumar, you must ensure that she should not take the brief. ಇವರು ಯಾರು ರಿಟರ್ನ್ಸ್ ಫೈಲ್ ಮಾಡಿದ್ದಾರೆ, ಅವರು ಯಾರಾದರೂ ಇವರ ಹತ್ತಿರ ಬಂದರೆ, ತೆಗೆದುಕೊಳ್ಳಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರೇ, ಅದೇನೂ ಕಷ್ಟವಿಲ್ಲ. ಇದು ಸೀಕ್ರೆಟ್ ಡಾಕ್ಯುಮೆಂಟ್ಸ್ ಆದರೂ ಕೂಡ, ಪ್ರಿವಿಲೇಜ್ ಇದ್ದರೂ ಕೂಡ ಕೋರ್ಟ್‌ನಲ್ಲಿ it can come on as the documents. It may be voluntary declaration or some other thing. ನಾವು ತರಿಸುವುದು ಹೇಗೆ ಎಂಬುದು ನಮಗೆ ಗೊತ್ತಿದೆ. ಯಾವ ಸಂದರ್ಭದಲ್ಲಿ ತರಿಸಬೇಕೋ ತರಿಸುತ್ತೇವೆ. ನಾನು ಏಕೆ ಹೇಳಿದೆ ಎಂದರೆ, ಮಾರುತಿ ಉದ್ಯೋಗ್ ಏಜೆನ್ಸಿ ಅದೇ ಮನುಷ್ಯನಿಗೆ ಈಗ ವಿವಮೊಗ್ಗಾದಲ್ಲಿ ಸಿಕ್ಕಿದೆ. ನಾನು ಇಷ್ಟೆಲ್ಲಾ ಹೇಳುತ್ತಿರಲಿಲ್ಲ. ನಾನೇಕೆ ಹೇಳುತ್ತಿದ್ದೇನೆಂದರೆ, ಒಬ್ಬ ಕಿಂಚಿತ್ ಡ್ರೈವರ್ ಮಗನಿಗೆ, ಯಾರಾದರೊಬ್ಬರು ನಿಮ್ಮದು ಅವನಿಗೆ ಆಶೀರ್ವಾದ ಇರಬೇಕಲ್ಲಾ. ಇಲ್ಲದೇ ಹೋದರೆ, ಇದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅವರು ಯಾರು ಇರಬಹುದು? ಇದು ತಮ್ಮ ಊಹೆಗೆ ಬಿಟ್ಟ ವಿಷಯ. ಯಾವ ಜಿಲ್ಲೆಗೆ ಸೇರಿದವರು, ಏನು ಮಾಡಿದ್ದಾರೋ ಅದನ್ನು ತಾವು ಯೋಚನೆ ಮಾಡಿ. ಹಾಸನದಲ್ಲಿ ಒಂದು ಸರ್ಕಾರಿ ಆಸ್ಪತ್ರೆಗೆ ಒಂದು ಸಾವಿರ ಹಾಸಿಗೆಗಳಿಗೆ ಮಂಜೂರ್ಮಾಡಿದರು...

ಶ್ರೀ ಹೆಚ್.ಎನ್.ನಂಜೇಗೌಡ: ಅವರು ಹಾಸನ ಜಿಲ್ಲೆಯವರು ಎಂದು ಹೇಳಿದರು. ನಮ್ಮ ಆಶೀರ್ವಾದವಂತೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾನು ನಂಜೇಗೌಡರಿಗೆ ಹೇಳುತ್ತೇನೆಯೇ? ನಿಮ್ಮ ಆಶೀರ್ವಾದವೂ ಇಲ್ಲ, ಅದು ನಿಮಗೆ ಸಂಬಂಧವೂ ಇಲ್ಲ. ನಿಮಗೆ ಅದರಲ್ಲಿ ಕಿಂಚಿತ್ತು ಆಸಕ್ತಿಯೂ ಇಲ್ಲ. ನಾನು ನಿಮ್ಮ ಬಗ್ಗೆ ಹೇಳಿಯೂ ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಯಾರು ಎಂದು ನಿಮಗೆ ಗೊತ್ತಿದೆಯೇ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಯಾರು ಎಂದು ನನಗೆ ಗೊತ್ತಿದೆ. ಇಲ್ಲಿ ಸಭಾಧ್ಯಕ್ಷರು ಹೇಳಿದ್ದಾರೆ. ಹೆಸರುಗಳನ್ನು ಹೇಳಬಾರದು, ನೀವು ಮೊದಲೇ ನೋಟೀಸ್ ಕೊಡಬೇಕು. ಯಾರಾದರೂ ಮಂತ್ರಿಗಳಿದ್ದರೆ ಮೊದಲೇ ನೋಟೀಸ್ ಕೊಡಿ ಎಂದು ಹೇಳಿದ್ದಾರೆ. ಆ ಕೆಲಸ ನಾನು ಮಾಡಿಲ್ಲ, ಆದ್ದರಿಂದ ಹೆಸರು ಹೇಳುವುದಕ್ಕೆ ಹೋಗುತ್ತಾ ಇಲ್ಲ. ನಾನು ಇದರ ಬಗ್ಗೆ ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಹಾಸನದಲ್ಲಿ 1000 ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡಿದರು. ಇದು ಒಳ್ಳೆಯದಾಗಲಿ ಎಂದು. ಆದರೆ, ಏನಾಯಿತು? ಹಿಂದಿನ ಮುಖ್ಯಮಂತ್ರಿಗಳು ಬಂದರು, 1000 ಹಾಸಿಗೆಗಳ ಆಸ್ಪತ್ರೆಯನ್ನು ಕಾಂಗ್ರೆಸ್ ಸರ್ಕಾರದಲ್ಲಿ ಏನು ಗ್ರಾಂಟ್ ಮಾಡಿದ್ದರೋ ಅದನ್ನು 500 ಹಾಸಿಗೆಗಳಿಗೆ ರೆಡ್ಯೂಸ್ ಮಾಡಿದರು. ಮಾಡಲಿ, ತಪ್ಪೇನಿಲ್ಲ. ಏಕೆಂದರೆ ಖರ್ಚಾಗುತ್ತದೆ. ಅಲ್ಲಿ ಪೇಷೆಂಟ್ಸ್ ಇಲ್ಲವೇನೋ, ಖಾಯಿಲೆಯೇ ಬರುವುದಿಲ್ಲವೇನೋ ಎಂದು ಹಾಸನ ಜಿಲ್ಲೆಯಲ್ಲಿ ಕಡಿಮೆ ಮಾಡಿರಬೇಕು. ಅದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ, ಅಲ್ಲಿ ಗ್ಲೂಕೋಸ್ ತೆಗೆಯತಕ್ಕ ಫ್ಯಾಕ್ಟರಿಗೆ ಸ್ಯಾಂಕ್ಷನ್ ಆಗಿ, ಬಿಲ್ಡಿಂಗ್ ಕೂಡ ಕಟ್ಟಿದ್ದರು. ಅಲ್ಲಿನ ಜನಕ್ಕೆ ಅನುಕೂಲವಾಗಲಿ ಎಂದು ಮಾಡಿದರು. ಆದರೆ, ಅಲ್ಲಿರತಕ್ಕ ನರ್ಸಿಂಗ್ ಹೋಮ್‌ನವರು ಈ ಗ್ಲೂಕೋಸ್ ಘಟಕ ಹಾಸನದಲ್ಲಿ ಬಂದರೆ, ಗ್ಲೂಕೋಸ್ ಸುಲಭವಾಗಿ ಸಿಗುತ್ತದೆಂದು, ಅದುಬೇಡವೆಂದು ಆ ಗ್ಲೂಕೋಸ್ ಘಟಕವನ್ನು ಕ್ಲೋಸ್ ಮಾಡಿದರು. ಅದು ಇವತ್ತಿಲ್ಲ. ಅದನ್ನು ಏನು ಮಾಡಿದರು. ಬಿಲ್ಡಿಂಗ್ ಕಟ್ಟಿದ್ದಾಯಿತು. ಕಟ್ಟಡ ಕಟ್ಟಬೇಕೆಂದು ಆಯಿತು. ಅಲ್ಲಿ ಇವತ್ತು ಒಂದು ಗೋಡೌನ್ ಆಗಿದೆ. ಆಸ್ಪತ್ರೆಗೆ ಎಂದು ಮಂಜೂರ್ಮಾಡಿಸಿಕೊಳ್ಳುವುದು, ಅಲ್ಲಿ ಗ್ಲೂಕೋಸ್ ಘಟಕ ಕಟ್ಟುತ್ತೇವೆಂದು ಹಣ ಖರ್ಚು ಮಾಡುವುದು. ಆ ಹಣ ಯಾರದು, ನಾವು, ನೀವು ಕೊಡತಕ್ಕ ಹಣ ತಾನೇ. ಅಲ್ಲಿ ಇವತ್ತು ಅದು ಗೋಡೌನ್ ಆಗಿ ಪರಿತರ್ವನೆಯಾಗಿ ಬಿದ್ದಿದೆ. ಏತಕ್ಕೋಸ್ಕರ ಈ ಕೆಲಸ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ನಂಜನಗೂಡಿನಲ್ಲಿ ಒಂದು ಮಿನಿ ವಿಧಾನ ಸೌಧ ಕಟ್ಟಿದರು. ಅಧ್ಯಕ್ಷರೇ, ಅದರ ಫೋಟೋ ತಮಗೆ ಕಳುಹಿಸಿಕೊಡುತ್ತಿದ್ದೇನೆ. ಆ ಮಿನಿ ವಿಧಾನಸೌಧದ ಫೋಟೋ ತಾವು ನೋಡಬೇಕು. ಕೆಂಗಲ್ ಹನುಮಂತಯ್ಯನವರು ಎಂತಹ ದೊಡ್ಡ ಕೆಲಸ ಮಾಡಿ, ಈ ವಿಧಾನ ಸೌಧ ಕಟ್ಟಿದರು. 1985ನೇ ಇಸವಿಯಲ್ಲಿ ನಂಜನಗೂಡಿನಲ್ಲಿ ಒಂದು ಮಿನಿ ವಿಧಾನಸೌಧ ಕಟ್ಟಿದರು. ಅದು ಇವತ್ತು ಏನಾಗಿದೆ ಎಂಬುದನ್ನು ನೋಡಬೇಕು. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ, ಮಿನಿ ವಿಧಾನಸೌಧ ಎಂದು

ಕಟ್ಟಿದರು. ಅದು ಇನ್ನೂ 2 ವರ್ಷ ಕೂಡ ಆಗಲಿಲ್ಲ. ಪೂರ್ತಿ ಬರುಕು ಬಿಟ್ಟಿದೆ. ಆಮೇಲೆ ಇಂಜಿನಿಯರು ನಾವು ಮಾಡಿದ್ದೇ ಒಳ್ಳೆಯ ಕೆಲಸವೆಂದು ಹೇಳಿ, ಮೆಯಿನೆಟಿನೆನ್ಸ್ ಸರಿಯಿಲ್ಲ, ರಿಪೇರಿ ಮಾಡುತ್ತೇವೆಂದು ಹೇಳಿ ಅದಕ್ಕೆ ಮತ್ತೆ ಹಣ ಖರ್ಚು ಮಾಡಿದರು. 6 ಇಂಚು ಒಳಗೆ ಹೊರಟು ಹೋಗಿದೆ. ಇವತ್ತು ಪೂರ್ತಿ ಇಡೀ ಕಟ್ಟಡ ಬಿರುಕು ಬಿಟ್ಟಿದೆ. ಇವತ್ತು, ಇವರೊಂದು ಲೆಟರ್ ಕಳುಹಿಸಿಕೊಟ್ಟಿದ್ದಾರೆ. ನಂಜನಗೂಡಿನಲ್ಲಿ 1985ನೇ ಇಸವಿಯಲ್ಲಿ ಕಟ್ಟಿದ ಮಿನಿ ವಿಧಾನ ಸೌಧ, ಇವತ್ತು ಒಡೆದು ಹೋಗಿ, ಮುರಿದು ಹೋಗತಕ್ಕ ಪರಿಸ್ಥಿತಿ ಬಂದಿದೆ. 2ನೇ ಜುಲೈ 1998ರಲ್ಲಿ ಅಭಿಯಂತರರು ಒಂದು ಲೆಟರ್ ಬರೆಯುತ್ತಾರೆ. ಏನೆಂದರೆ, ನಂಜನಗೂಡು ಮಿನಿ ಸೌಧದ ಮೊದಲನೇ ಮಹಡಿಯನ್ನು ಕೆಡವಿ ಹಾಕಲು ಅಂದಾಜು ಅನುಮೋದನೆ ಕೋರಿಕೆ ಬಗ್ಗೆ. ಮೊದಲೇನು ಕಟ್ಟಡಕ್ಕೆ ಅನುಮೋದನೆ, ಇವತ್ತು ಒಡೆದುಹಾಕುವುದಕ್ಕೆ ಎಷ್ಟು ಖರ್ಚುಮಾಡಬೇಕೆಂದು ಅನುಮೋದನೆ ಪತ್ರ ಬರೆದು, ಈಗಲೋ ಆಗಲೋ ಮುಗಿಯುವ ಹಂತದಲ್ಲಿದೆ. ಇದನ್ನು ನಾನೇಕೆ ಹೇಳುತ್ತಿದ್ದೇನೆಂದರೆ, ಈ ಕಟ್ಟಡವನ್ನು ಏತಕ್ಕೋಸ್ಕರ ಕಟ್ಟಿದಿರಿ? ಎಷ್ಟು ಖರ್ಚು ಮಾಡಿದ್ದೀರಿ? ಇದಕ್ಕೆ ಸಂಬಂಧಿಸಿದ ಇಂಜಿನಿಯರು ಯಾರು? ನೀವೇನು ಮಾಡಿದ್ದೀರಿ? ಯಾರನ್ನಾದರೂ ಒಬ್ಬರನ್ನು ಸಸ್ಪೆಂಡ್ ಮಾಡಿದ್ದೀರಾ? ಅದನ್ನು ಕಟ್ಟುವುದಕ್ಕೆ ಮೂರು ವರ್ಷ ತೆಗೆದುಕೊಂಡಿದ್ದಾರೆ. ಭಾರಿ ದೊಡ್ಡ ಕಟ್ಟಡ ಕಟ್ಟಿ, ಏತಕ್ಕೋಸ್ಕರ ಹೀಗಾಯಿತೆಂದರೆ....

ಅಧ್ಯಕ್ಷರು: ಪಿ ಡಬ್ಲ್ಯು ಡಿ ನಾರಮ್ಸ್ ಪ್ರಕಾರ ಕಟ್ಟಡ ಎಷ್ಟು ವರ್ಷ ಗ್ಯಾರಂಟಿ ಇರುತ್ತದೆ? ಒಂದು ಕಟ್ಟಡ ಪೂರ್ಣವಾದ ಮೇಲೆ, ಪಿ ಡಬ್ಲ್ಯೂ ಡಿ ನಾರಮ್ಸ್ ಪ್ರಕಾರ, ಅದಕ್ಕೆ ಇಂತಿಷ್ಟು ವರ್ಷ ಎಂದು ಆಯುಸ್ಸು ಇರುತ್ತದೆಯಲ್ಲಾ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಈ ಕಟ್ಟಡದ ಬಗ್ಗೆ ಪತ್ರಿಕೆಯಲ್ಲೂ ಸಹಿತ ಒಂದು ವರದಿ ಬಂದಿದೆ. ಇದರ ಮೇಲೆ ಮಾಹಿತಿಯನ್ನು ನಾವು ಕೇಳಿದ್ದೇವೆ. 1985ನೇ ಇಸವಿಯಲ್ಲಿ ಕಟ್ಟಿರತಕ್ಕ ಈ ಕಟ್ಟಡ ಇಷ್ಟುಬೇಗ ಬಿದ್ದುಹೋಗತಕ್ಕ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ, ಅಲ್ಲಿ ಮಾಡಿರತಕ್ಕ ಡಿಸೈನ್‌ಗಳಲ್ಲಿ ಕೆಲವು ಡಿಫೆಕ್ಟ್‌ಗಳಿವೆ ಎಂದು ಕಂಡುಬರುತ್ತದೆ. ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬುದು ಈಗಾಗಲೇ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಕೊಡಗಿನಲ್ಲಿ 2 ತಿಂಗಳ ಹಿಂದೆ ಕೆಲಸ ಮಾಡಿದ 90 ಲಕ್ಷ ರೂ.ಗಳನ್ನು ಖರ್ಚುಮಾಡಿದ ರಸ್ತೆ ಇವತ್ತು ಕಂಪ್ಲೀಟ್ ಹೋಗಿಬಿಟ್ಟಿದೆ. ಅದನ್ನೂ ಕೂಡ ನಾನು ಸನ್ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಆದಷ್ಟು ಬೇಗನೆ, ಎನ್‌ಕ್ವೈರಿ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇದಕ್ಕೂ ಹಾಸನದವರೇ ಕಂಟ್ರಾಕ್ಟರು ಎಂದು ಹೇಳುತ್ತಾರೆ. ಯಾರು ಎಂಬುದು ನಮಗೆ ಗೊತ್ತಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ಸರ್ಕಾರ ಹಣ ಖರ್ಚು ಮಾಡುವುದು, ಜಮಾ ಖರ್ಚಿಗಿಲ್ಲ. ಕಂಟ್ರಾಕ್ಟರು ಹಣ ತೆಗೆದುಕೊಂಡು ಹೋಗಿರುತ್ತಾನೆ, ಇದಕ್ಕೆ ಯಾರು ಜವಾಬ್ದಾರರು, ಅದರ ಬಡ್ಡಿಗೆ ಯಾರು ಜವಾಬ್ದಾರರು? ಕಟ್ಟಿಬಿಡುವುದು, ಸರಿಯಾಗಿ ನೋಡಿಕೊಳ್ಳುವವರಿಲ್ಲ, ಸರಿಯಾದ ಕ್ವಾಲಿಟಿ ಮೆಯಿನ್‌ಟೇನ್ ಮಾಡುವುದಿಲ್ಲ, ಪ್ರಪೋರ್ಷನೇಟ್ ಸಿಮೆಂಟ್ ಬಳುಸುವುದಿಲ್ಲ. ಕಂಟ್ರಾಕ್ಟರ್‌ಗೆ ''ಎ'' ಕ್ಲಾಸ್ ಎಂದು ಕೊಟ್ಟು ಅಪ್ಪರ್ ಕೃಷ್ಣಾದಲ್ಲಿ ಕೆಲಸ ಕೊಡತಕ್ಕಂತಾದ್ದು ನಡೆಯುತ್ತಿದೆ. ನೀವು ಕಂಟ್ರಾಕ್ಟರ ಮೇಲೆ ಏನು ಖಚಿತ ಕ್ರಮ ಕೈಗೊಳ್ಳುತ್ತೀರಿ? ಆ ಇಂಜಿನಿಯರನ್ನು ಯಾವಾಗ ಸಸ್ಪೆಂಡ್ ಮಾಡುತ್ತೀರಿ? ಏನು ಕ್ರಮ ಕೈಗೊಳ್ಳುತ್ತೀರಿ? ದುಡ್ಡು ಯಾರಿಂದ ರಿಕವರಿ ಮಾಡುತ್ತೀರಿ? ಸರ್ಕಾರ, ಕಂಟ್ರಾಕ್ಟರ ಮರ್ಸಿಯಲ್ಲಿ ಕೆಲಸ ಮಾಡುತ್ತಿದೆಯೇ? ಇದು ಯಾವ ದೇಶದ ವ್ಯವಹಾರಗಳೋ ಗೊತ್ತಾಗುವುದಿಲ್ಲ. ನನಗೆ ಖಚಿತವಾದ ಉತ್ತರ ಹೇಳಿ. ಇದಕ್ಕೆ ಯಾರು ಯಾರು ಕಾರಣಕರ್ತರೋ, ಅಧಿಕಾರಿಗಳು, ಇಂಜಿನಿಯರ್‌ಗಳು ಮತ್ತು ಅಲ್ಲಿ ಕಾಂಟ್ರಾಕ್ಟ್ ಯಾರು ಮಾಡಿದ್ದನೋ ಅವನು. ಇವರನ್ನು ಬ್ಲಾಕ್ ಲಿಸ್ಟ್ ಮಾಡಬೇಕು ಮತ್ತು ವಸೂಲಿ ಮಾಡಬೇಕು. ಜೊತೆಗೆ ಅಧಿಕಾರಿಗಳನ್ನು ಪೀನಲೈಸ್ ಮಾಡಬೇಕು; ಮತ್ತು ಡಿಸ್‌ಮಿಸ್ ಕೂಡ ಮಾಡಬೇಕು. ದೇಶಕ್ಕೆಲ್ಲಾ ಗೊತ್ತಾಗಬೇಕು. ನೀವು ಖಚಿತವಾಗಿ ಇಂತಹ ಉತ್ತರ ಎಂದುಹೇಳಿ.

3.40 ಪಿ.ಎಂ

ಶ್ರೀ ಜಿ ವಿ ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಈಗ ಈ ಕಂಟ್ರಾಕ್ಟರ್ಸ್ ವಿಷಯದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲವು ರೂಲ್ಸ್ ಇದೆ. ಅವರ ರೂಲ್ಸ್‌ನಲ್ಲಿ ಅವರ ಜನ್ಮದಲ್ಲಿ ಆ ಕಂಟ್ರಾಕ್ಟರ್ ಏನು ಮಾಡಿದರೂ ಆ ಕಂಟ್ರಾಕ್ಟರ್ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾದಂತಹ ಪ್ರೊಸೀಜರ್ಸ್‌ನ್ನು ಇಟ್ಟುಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಎರಡು ಕಡೆ ಟೆಂಡರ್ ಹಾಕಿರತಕ್ಕಂಥ ವರ್ಕ್ ನಿರ್ದಿಷ್ಟವಾಗಿ ಇವರೇ ಟೈಮ್ ಫಿಕ್ಸ್ ಮಾಡಿದ್ದಾರೆ. ಪ್ರತಿ ತಿಂಗಳು ಇಷ್ಟು ಕೆಲಸ ಆಗಬೇಕೆಂದು ಹೇಳುತ್ತಾರೆ. ಒಂದು ಪರ್ಸೆಂಟ್ ಕೆಲಸ ಆಗದಿದ್ದರೂ ಸಹ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಹಾಗಾದರೆ ಯಾರು ಅವರು ಮೇಲೆ ಕ್ರಮ ತೆಗೆದುಕೊಳ್ಳಬೇಕು. ಲಕ್ಷಾಂತರ ರೂಪಾಯಿಗಳ ಹಣವನ್ನು ಸರ್ಕಾರದವರು ಹಾಕುತ್ತಾರೆ. ಕೆಲಸ ಆಗುವುದಿಲ್ಲ ಕಳಪೆ ಕೆಲಸ ಆಗುತ್ತದೆ. ನಿಮ್ಮ ಅಧಿಕಾರಿಗಳಿಗೆ 76 ರೂಲ್ಸ್ ಇಟ್ಟಿದ್ದೀರಿ. ನಾನು ಮಾನ್ಯ ಮಂತ್ರಿಗಳಿಗೆ ಈ ವಿಷಯವನ್ನು ನೂರು ಸಲ ಹೇಳಿದ್ದೇನೆ. ತಾವು ಈ ಬಗ್ಗೆ ನಿರ್ದಿಷ್ಟವಾದ ಉತ್ತರ ಹೇಳಬೇಕು. ಇಲ್ಲದಿದ್ದರೆ ನಾನು ತಮ್ಮ ಮನೆಯ ಮುಂದೆ ಬಂದು ಧರಣಿ ಮಾಡಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಹೇಳಿದ ಹಾಗೆ ಇಲಾಖಾ ಅಧಿಕಾರಿಗಳು ಮತ್ತು ಅನೇಕ ಸಂದರ್ಭಗಳಲ್ಲಿ ಗುತ್ತಿಗೆದಾರರು ಶಾಮೀಲಾಗಿದ್ದರೂ ಸಹ ಕಳಪೆ ಕೆಲಸ ಮಾಡಿರುವ ಉದಾಹರಣೆಗಳು ಇವೆ. ಕಾನೂನು ಕ್ರಮ ತೆಗೆದುಕೊಳ್ಳುವುದರಲ್ಲಿ ವಿಳಂಬವಾಗಿದೆ ಎನ್ನುವ ಮಾತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿ ಬಂದಾಗಲೇ ಮಾಹಿತಿ ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ನಾನು ಬರೆದಿದ್ದೇನೆ. ಆದರೆ ಪ್ರಾಥಮಿಕ ಹಂತದ ವರದಿಯಲ್ಲಿ ಅವರು ನನಗೆ ಹೇಳಿದ ಪ್ರಕಾರ ಮೊದಲು ಮಾಡಿರುವಂತಹ ಡಿಜೈನ್‌ನಲ್ಲಿ ಡಿಫೆಕ್ಟ್ ಇದೆ ಎಂದು ಇಂಜಿನೀಯರ್ಸ್ ನನಗೆ ಹೇಳಿದರು. ಡಿಸೈನ್‌ನಲ್ಲಿ ಡಿಫೆಕ್ಟ್ ಇದ್ದರೂ ಸಹ ಯಾರು ಇಂಜಿನೀಯರ್ಸ್ ಈ ಕೆಲಸ ಮಾಡಿದ್ದಾರೆ ಆ ಡಿಸೈನ್ ಮಾಡಿದವರ ಮೇಲೂ ಸಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ಕಂಟ್ರಾಕ್ಟರ್ ಮಾಡಿರುವ ಕೆಲಸ ಕಳಪೆ ಎನ್ನುವುದನ್ನು ಕಂಡು ಬಂದಿದ್ದು ಅದರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ನಾವು ಈಗಾಗಲೇ ಗಂಭೀರವಾಗಿ ಪರಿಗಣನೆ ಮಾಡಿದ್ದೇವೆ. ಒಂದು ಮಾತನ್ನು ಅವರು ಹೇಳಿದರು, ಇವತ್ತು ಟೆಂಡರ್ ಕೋಡ್‌ನಲ್ಲಿ ಬದಲಾವಣೆ ಮಾಡದೇ ಇರುವುದರಿಂದ ಗುತ್ತಿಗೆದಾರರಿಗೆ ವಹಿಸಿರುವಂತಹ ಕೆಲಸವನ್ನು ಸುಲಭವಾಗಿ ರದ್ದು ಮಾಡುವುದಕ್ಕೆ ಆಗುವುದಿಲ್ಲ ಮತ್ತು ಆ ಕೆಲಸವನ್ನು ಬೇರೆಯವರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಗುತ್ತಿಗೆದಾರರ ಬಗ್ಗೆ ಇರುವ ಕೋಡ್‌ನ್ನು ಬದಲಾವಣೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಿ ಇನ್ನು ಒಂದು ತಿಂಗಳಲ್ಲಿ ಆ ಕೋಡನ್ನೂ ಸಹ ತಿದ್ದುಪಡಿ ಮಾಡಬೇಕು, ಶೀಘ್ರದಲ್ಲಿ ಇಂತಹ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಅವರ ಕ್ಷೇತ್ರದಲ್ಲಿ ಆಗಬೇಕಾದಂತಹ ಒಂದು ಕೆಲಸದ ಬಗ್ಗೆ ಅವರು ಹೇಳಿದರು.

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರಾದ ಪ್ರಮೀಳಾ ಅವರು ಹೇಳಿದ ಮಾತಿನ ಸಾರಾಂಶ ಏನೆಂದರೆ 1985ನೇ ಇಸವಿಯಲ್ಲಿ ಕಟ್ಟಡ ಕಟ್ಟುತ್ತಾರೆ. ಈಗ ಆ ಕಟ್ಟಡ ಬಿದ್ದು ಹೋಗುವಂತಹ ದುರವಸ್ಥೆಗೆ ಬಂದಿದೆ. ಫಸ್ಟ್ ಫ್ಲೋರನ್ನು ಕೆಡವಬೇಕು ಎನ್ನುವಂತಹ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಇದೆಲ್ಲಾ ಆಗಬೇಕಾದರೆ ಕೆಲವು ಅಧಿಕಾರಿಗಳು ಕಾರಣ. ಅವರ ಮೇಲೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ಯಾರೋ ಬೆಂಬಲ ಕೊಡುವಂತಹವರು ರಾಜಕೀಯವಾಗಿ ಒತ್ತಡ ತರುತ್ತಾರೆ. ನೀವು ಉದ್ದೇಶಪೂರ್ವಕವಾಗಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುವುದಿಲ್ಲ. ಇದಕ್ಕೆ ಕಾರಣವಾಗುತ್ತದೆ. ಹೀಗಾಗಿಯೇ ನಾವು ರಾಜಕಾರಣಿಗಳು ಅವಹೇಳನಕ್ಕೆ ಗುರಿಯಾಗುವುದು. ಅವರು ಈಗ ಹೇಳಿದ್ದು ಪ್ರಾರಂಭದಿಂದ ಹೇಳಿದ್ದು ಲಿಂಕ್ ಆಫ್ ಮಾಡಿಕೊಂಡರೆ ಈ ರೀತಿ ಮಾಡಿದಾಗ ಜನ ನಮ್ಮನ್ನು ಅನ್ನದೇ ಇರುತ್ತಾರೆಯೇ? ಹಾಗಾದರೆ ಆ ಹಕ್ಕು ಜನಗಳಿಗೆ ಇಲ್ಲವೇ? ಆದ್ದರಿಂದ ನೀವು ಇದಕ್ಕೆ ತಾಂತ್ರಿಕವಾಗಿ

ಉತ್ತರ ಕೊಡುವ ಬದಲು ಇಷ್ಟು ಹೊತ್ತಿಗೆ ಆಗಲೇ ಕ್ರಮ ಜರುಗಿಸಬೇಕಾಗಿತ್ತು.

ಶ್ರೀ ಎಂ.ಬಸಪ್ಪ: ಡಿಜೈನ್ ಈಜ್ ಡಿಪರೆಂಟ್. ಎಗ್ಜಿಕ್ಯೂಷನ್ ಈಜ್ ಡಿಫರೆಂಟ್ ಎಂದು ಹೇಳುತ್ತಿದ್ದಾರೆ. ಡಿಜೈನ್ ತಪ್ಪಾಗಿದ್ದರೂ ಕೂಡ ಎಗ್ಜಿಕ್ಯೂಷನ್‌ನಲ್ಲಿ ಸರಿಪಡಿಸಿಕೊಳ್ಳಬಹುದಿತ್ತು. ಆದರೂ ಅವರು ಆದನ್ನು ಸರಿಪಡಿಸಿಕೊಳ್ಳಲಿಲ್ಲ. ಅದಕ್ಕೆ ಆ ಕಟ್ಟಡ ಇವತ್ತು ಶಿಥಿಲವಾಗುತ್ತಿದೆ. ಆಮೇಲೆ ಅವರು ಯೋಚನೆ ಮಾಡುತ್ತಿದ್ದಾರೆ. ಫಸ್ಟ್ ಫ್ಲೋರ್‌ನ್ನು ಕೆಡವಬೇಕೆಂದು. ಫಸ್ಟ್‌ಫ್ಲೋರ್ ಕೆಡವಿ ಗ್ರೌಂಡ್ ಫ್ಲೋರ್ ಇಟ್ಟುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಗ್ರೌಂಡ್ ಫ್ಲೋರ್ ಡಿಫೆಕ್ಟ್ ಇದ್ದಾಗ ಫಸ್ಟ್ ಫ್ಲೋರ್ ಕಟ್ಟಿದರೆ ಏನಾಗುತ್ತದೆ? ಗ್ರೌಂಡ್ ಫ್ಲೋರ್ ಡಿಫೆಕ್ಟೀವ್ ಇದ್ದಾಗ ಮೇಲೆ ಫಸ್ಟ್ ಫ್ಲೋರ್ ಕಟ್ಟಿದರೆ ಮತ್ತೆ ಅದೇ ಪರಿಸ್ಥಿತಿಯುಂಟಾಗುತ್ತದೆ.

ಅಧ್ಯಕ್ಷರು: ಈಗಾಗಲೇ ಕಟ್ಟಿದ್ದಾರೆ. ಕಟ್ಟಿರುವುದನ್ನು ಕೆಡವಲು ಪ್ರಸ್ತಾವನೆ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಆ ಕಟ್ಟಡದ ಫೌಂಡೇಷನ್ ಸಹ ಕುಸಿಯುತ್ತಿದೆ. ಈಗಾಗಲೇ ಸುಮಾರು 6 ಇಂಚ್ ಸಿಂಕ್ ಆಗಿದೆ.

ಅಧ್ಯಕ್ಷರು ; ಮಾನ್ಯ ತೋಟಗಾರಿಕಾ ಸಚಿವರು ಏನು ಹೇಳುತ್ತಾರೆ. ಅದು ಅವರ ಕ್ಷೇತ್ರ

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು: ಆ ಕಟ್ಟಡ 1985ನೇ ಇಸವಿಯಲ್ಲಿ ಕಟ್ಟಿರುವುದು. ತಾವು ಆ ಕ್ಷೇತ್ರದ ಪ್ರತಿನಿಧಿಗಳು. ಮತ್ತು ಮಂತ್ರಿಮಂಡಲದ ಸದಸ್ಯರು. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನು ಕ್ರಮ ಜರುಗಿಸಿದ್ದೀರಿ? ಏಕೆ ಜರುಗಿಸಲಿಲ್ಲ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಡಿ.ಟಿ.ಜಯಕುಮಾರ್: ಎರಡು ಸಾರಿ ಇನ್ಸ್‌ಪೆಕ್ಷನ್ ಆಗಿದೆ.

ಅಧ್ಯಕ್ಷರು: ಮೇಲ್‌ನೋಟಕ್ಕೆ ಕಾಣುವಂತೆ ಸರ್ಕಾರದ ಹಣ ಅಪವ್ಯಯವಾಗಿದೆ. ಕಳಪೆ ಮಟ್ಟದ ಕಟ್ಟಡ ಕಟ್ಟಿದ್ದಾರೆ. ಅದಕ್ಕೆ ಕಾರಣಕರ್ತರಾಗಿರತಕ್ಕಂಥ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಕ್ರಮ ಜರುಗಿಸುವುದಕ್ಕೆ ಮುಂದಾಗಿದೆಯೇ ಎಂದು ಅಥವಾ ಕ್ರಮ ಜರುಗಿಸಿದೆಯೇ ಎಂದು ಅವರು ಕೇಳುತ್ತಾರೆ. ಕ್ರಮ ಜರುಗಿಸಿದ್ದರೆ ಮಾಡಿದ್ದೇವೆಂದು ಹೇಳಿ, ಇಲ್ಲದಿದ್ದರೆ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿ. ಅದಕ್ಕೇನೂ ತೊಂದರೆ ಇಲ್ಲ

ಶ್ರೀ ಸಿ.ಎ ಉದಾಸಿ: ಮಾನ್ಯ ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಬಂದಾಗಲೇ ನಾನು ಇದರ ಬಗ್ಗೆ ಕ್ರಮ ಜರುಗಿಸಬೇಕೆಂದು ಮಾಹಿತಿ ಕೇಳಿದ್ದೇನೆ.

ಅಧ್ಯಕ್ಷರು: ಮಾನ್ಯ ಉದಾಸಿಯವರೇ, ಬೇಸರ ಮಾಡಿಕೊಳ್ಳಬೇಡಿ. ನಾವು ನೀವು ಅಧಿಕಾರದಲ್ಲಿ ಗೂಟ ಹೊಡೆದುಕೊಂಡು ಇರುವುದಿಲ್ಲ. ಇಂತಹದ್ದು ಬಂದಾಗ ನಾವು ಪಾದರಸದಂತೆ ಕೆಲಸ ಮಾಡಿದರೆ ಜನ ನಮ್ಮ ಮೇಲೆ ವಿಶ್ವಾಸ ಇಡುತ್ತಾರೆ. ಇಲ್ಲದಿದ್ದರೆ ರಾಜಕಾರಣಿಗಳನ್ನು ಅವಹೇಳನ ಮಾಡದೇ ಇನ್ನೇನು ಮಾಡುತ್ತಾರೆ ಹೇಳಿ ಜನ. ಇದೆಲ್ಲಾ ಆದಾಗ ನಾವು ಕೈಲಾಗದವರಂತೆ ಮೂಕರಂತೆ ಕುಳಿತಿದ್ದರೆ ಈಗ ನಡೆಯುವುದೆಲ್ಲಾ ನಡೆಯುತ್ತಲೇ ಇರುತ್ತದೆ; ಜನ ಆಗ ಅವರನ್ನು ನಂಬುತ್ತಾರೆ ನಮ್ಮನ್ನು ನಂಬುವುದೇ ಇಲ್ಲ. ಯಾರಾದರೂ ಒಬ್ಬರೋ ಇಬ್ಬರೋ ಉಳಿದುಕೊಂಡರೆ ಮಾತ್ರ ಅವರು ಪ್ರಾಮಾಣಿಕವಾಗಿ ಬಾಯಿ ಬಡಿದುಕೊಳ್ಳಬೇಕು, ನಮ್ಮನ್ನು ಯಾರು ಕೇಳುತ್ತಾರೆ.

ಶ್ರೀ ಸಿ ಎಂ. ಉದಾಸಿ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಯಾರನ್ನೂ ಕೈ ಬಿಡುವಂತಹ ಪ್ರಶ್ನೆ ಇಲ್ಲ. ಅಧಿಕಾರಿಗಳ ಮೇಲೆ ಆಗಲಿ ಗುತ್ತಿಗೆದಾರರ ಮೇಲೆ ಆಗಲಿ ಒಂದು ವೇಳೆ ಕ್ರಿಮಿನಲ್ ಮೊಕದ್ದಮೆ ಹೂಡುವಂತಹ ಪ್ರಮೇಯ ಬಂದರೂ ಸಹ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಅಧ್ಯಕ್ಷರು: ಇಷ್ಟು ದಿವಸ ಏಕೆ ಅಂತ? ಅದು ಒಬ್ಬ ಮಂತ್ರಿಗಳ ಕ್ಷೇತ್ರ.

ಶ್ರೀ ಸಿ ಎಂ ಉದಾಸಿ: ವರದಿ ಬರಲಿ ಎಂದು ಇದ್ದೆ.

ಅಧ್ಯಕ್ಷರು: ನಾನು ನಿಮಗೆ ಹೇಳುತ್ತೇನೆ. ಪ್ರತಿ ದಿವಸ ನಾನು ನನ್ನ ಕ್ಷೇತ್ರಕ್ಕೆ ಹೋಗುವುದಿಲ್ಲ. 3 ತಿಂಗಳಿಗೆ 2 ತಿಂಗಳಿಗೆ ಹೋದಾಗ ಒಂದು ಎಂಟು ದಿವಸ ಇದ್ದು ಬರುತ್ತೇನೆ. ಪ್ರತಿ ದಿವಸ ಅಲ್ಲಿ ಏನೇನು ಕೆಲಸ ಆಗುತ್ತಿದೆ ಎಂದು ತಿಳಿದುಕೊಳ್ಳುತ್ತೇನೆ. ಯಾವುದೋ ಒಂದು ರಸ್ತೆಯ ಕೆಲಸ ಸರಿಯಾಗಿ ಆಗುತ್ತಿಲ್ಲ ಎಂದು ಊರಿನ ಜನ ಇಬ್ಬರು ಬಂದು ಹೇಳಿದ್ದಕ್ಕೆ ನಾನು ಮೇಜರ್ ರಮೇಶ್ ಅವರಿಗೆ ಹೇಳಿದೆ, ಎಗ್ಜಿಕ್ಯೂಟೀವ್ ಇಂಜನೀಯರ್‌ಗೆ ಹೇಳಿದೆ. ತಾವು ಸ್ವತಃ ಹೋಗಿ ನೋಡಿಕೊಂಡು ಬಂದು ನನಗೆ ವರದಿ ಕೊಡಬೇಕು, ನಾವು ಬಹಳ ಕಷ್ಟಪಟ್ಟು ಇದಕ್ಕೆಲ್ಲಾ ಮಂಜೂರಾತಿ ಕೊಡಿಸಿದ್ದೇವೆ, ಒಂದು ಚೂರು ಕಳಪೆ ಕೆಲಸ ಆಗಿದ್ದರೆ ನಾನು ರಾಜಿ ಆಗುವುದಿಲ್ಲ ಎಂದು ಹೇಳಿದ್ದೇನೆ. ತಾವು ಬೇಕಾದರೆ ಕೇಳಿ ನಿಮ್ಮ ಅಧಿಕಾರಿಗಳನ್ನು.

ಶ್ರೀ ಎಂ.ಬಸಪ್ಪ: ಮಾನ್ಯ ಅಧ್ಯಕ್ಷರೇ, ನಾವು ಎನ್ ಎಚ್ 4ರಲ್ಲಿ ಪ್ರಯಾಣ ಮಾಡಿದರೆ ಬೆಂಗಳೂರು ಟು ಚಿತ್ರದುರ್ಗ. ರಸ್ತೆಗಳ ಅವ್ಯವಸ್ಥೆ ಏನು ಎಂಬುದು ಗೊತ್ತಾಗುತ್ತದೆ. ಒಂದು ಕಿಲೋಮಿಟರ್‌ಗೂ ಇನ್ನೊಂದು ಕಿಲೋಮಿಟರ್‌ಗೆ ಕ್ವಾಲಿಟಿಯಲ್ಲಿ ಡಿಫರ್ ಆಗುತ್ತದೆ.

ಶ್ರೀ ಸಿ ಎಂ ಉದಾಸಿ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇನ್ನು 15 ದಿವಸದಲ್ಲಿ ಕ್ರಮ

ಜರುಗಿಸಿ ತಮಗೆ ವರದಿಯನ್ನು ಸಲ್ಲಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಅರ್ಥಕೋಶ ಮತ್ತು ಅನರ್ಥ ಕೋಶ ಎಂದು ಎರಡು ಇದೆ. ಪಿಡಬ್ಲ್ಯೂಡಿ ಅಂದರೆ ಇವರು ಹೇಳುವುದು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದು. ಆದರೆ ನಿಜವಾಗಿಯೂ ಆಗಿರುವುದು ಇದೆಲ್ಲಾ ಕಥೆ ಕೇಳಿದಾಗ PWD ಎಂದರೆ It is Pilferage without detection ಎಂದು. ನಾವು ಡಿಟೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಆ ರಸ್ತೆ ಬಗ್ಗೆ ಹೇಳಿದರು ಅವರು ಆ ರಸ್ತೆಯ ಕೆಲಸವನ್ನು ಡಿಟೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಮತ್ತು ನಂಜನಗೂಡಿನ ಕಟ್ಟಡದ ಬಗ್ಗೆ ಕೂಡ ಡಿಟೆಕ್ಟ್ ಮಾಡುವುದಕ್ಕಾಗುವುದಿಲ್ಲ. ಇಟ್ ಈಜ್ ಪಿಲ್ಫರೇಜ್ ವಿತ್ ಔಟ್ ಡಿಟೆಕ್ಷನ್ ಆಗಿಬಿಟ್ಟಿದೆ ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್. ಇದು 1978-79ನೇ ಇಸವಿಯಲ್ಲಿ ಫೌಂಡೇಷನ್ ಆಗಿದೆ ಮಿನಿ ವಿಧಾನಸೌಧಕ್ಕೆ. ಆ ಸಂದರ್ಭದಲ್ಲಿ ಅದಕ್ಕೆ ಕಾಲಂ ಹಾಕಬೇಕಾಗಿತ್ತು. ಕಾಲಂ ಹಾಕದೇ ಅವರು ಫೌಂಡೇಷನ್ ಹಾಕಿದ್ದರಿಂದ ಈ ರೀತಿ ಆಗಿದೆ. ಆ ಫೌಂಡೇಷನ್ ಆಗ ಸರ್ಕಾರದವರು ಹಾಕಿದರು. ಆಮೇಲೆ ಕಂಟ್ರಾಕ್ಟರ್ ಬಂದರು. ಆಗ ಕಂಟ್ರಾಕ್ಟರ್ ಹೇಳಿದರು ಇಲ್ಲಾ ಸ್ವಾಮಿ ಡಿಪಾರ್ಟ್‌ಮೆಂಟ್‌ನವರು ಮಾಡಿದ್ದಾರೆ ಅದಕ್ಕೋಸ್ಕರ ನಾವು ಅದನ್ನು ಸರಿಪಡಿಸುವುದಿಲ್ಲ ಎಂದು ಕಂಟ್ರಾಕ್ಟರ್ ಹೇಳುತ್ತಾರೆ. ಈ ಕಡೆ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ ಇಲ್ಲಾ ಅದು ಕಂಟ್ರಾಕ್ಟರ್‌ದ್ದು ಜವಾಬ್ದಾರಿ ಎಂದು ಹೇಳುತ್ತಾರೆ. ಈ ರೀತಿ ಎರಡು ಇನ್ಸ್‌ಪೆಕ್ಷನ್ ಆಗಿ ಎರಡು ರೀತಿಯ ವರದಿಗಳು ಬಂದಿವೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ವಿವರವಾದ ಮಾಹಿತಿಯನ್ನು ತರಿಸಿಕೊಂಡು ಮುಂದುವರಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೇ ಈಗ ಬೆಂಗಳೂರು ಸ್ಟೇಟ್ ಹೈವೇ ನಂಜನಗೂಡಿನ ಮೇಲೆಯೇ ಹೋಗುತ್ತದೆ. ನ್ಯಾಷನಲ್ ಹೈವೇ ಮಾಡಬೇಕೆಂದು ಈಗಾಗಲೇ ಪ್ರಸ್ತಾವನೆ ಇದೆ. ಬೆಂಗಳೂರು ಟು ನೀಲಗಿರಿ ಮಾಡಿದ್ದಾರೆ. ಇದರ ಮಧ್ಯದಲ್ಲಿ ಮೂಡದವರು ಒಂದು ಬ್ರಿಡ್ಜ್ ಕಟ್ಟಿದ್ದಾರೆ. ಮೂರು ತಿಂಗಳಲ್ಲಿ ಆ ಬ್ರಿಡ್ಜ್ ಪೂರ್ಣ ಮಾಡಿದರು. ನ್ಯಾಷನಲ್ ರೋಡ್ ಆಕ್ಟ್ ಪ್ರಕಾರವಾಗಿ ಬಾಕ್ಸ್ ಟೈಪ್ ಬ್ರಿಡ್ಜ್ ಮಾಡಬಾರದು ಎಂದು ಹೇಳಿ ಆದೇಶ ಕೊಟ್ಟಿದ್ದಾರೆ. ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನೀಯರ್, ಮತ್ತು ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜನೀಯರ್ ಸೂಪರಿಂಟೆಂಡೆಂಟ್ ಇಂಜನಿಯರ್ಸ್ ಅಲ್ಲಿ ಮಣ್ಣು ಲೂಸ್ ಇದೆ, ಸಾಯಿಲ್ ಟಿಸ್ಟ್ ಆಗಿಲ್ಲ ಲೂಸ್ ಸಾಯಿಲ್ ಇದೆ, ಫೌಂಡೇಷನ್ ಸರಿಯಾಗಿಲ್ಲ ಎಂದು ಹೇಳಿ ವಿಚಾರಣೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ. 3 ನೋಟಿಸ್ ಕೊಟ್ಟರು ಜನ

ಹೋಗಿ ಹೇಳಿದರು. ನಿಮ್ಮ ಇಲಾಖೆಗೆ ಹೇಳಿದರು. ಮೂಡ ಆಫೀಸ್‌ಗೆ ಹೋಗಿ ಹೇಳಿದರು. ಪೇಪರ್‌ನಲ್ಲಿ ಪಬ್ಲಿಷ್ ಮಾಡಿದರು. ನೋಟಿಸ್ ಕೊಟ್ಟರು. ಲಾಯರ್ ನೋಟಿಸ್ ಕೊಟ್ಟರು. ಏನಾಯಿತು, ನೀವು 21ನೇ ತಾರೀಖು ಓಪನಿಂಗ್ ಮಾಡುತ್ತೇವೆಂದು ಪತ್ರಿಕೆಯಲ್ಲಿ ದೊಡ್ಡದಾಗಿ ಅಡ್ವರ್‌ಟೈಜ್‌ಮೆಂಟ್ ಕೊಟ್ಟರಿ. ಲಾಯರ್ ನೋಟೀಸ್ ಹೋದ ತಕ್ಷಣ ಮರುದಿನ ಎರಡೇ ದಿವಸಕ್ಕೆ ತರಾತುರಿಯಿಂದ ನಮ್ಮ ಉಪ ಮುಖ್ಯಮಂತ್ರಿಗಳು ಹೋಗಿ ಉದ್ಘಾಟನೆ ಸಹ ಮಾಡಿದರು. ಇವತ್ತು ಯಾವಾಗ ಆ ಬ್ರಿಡ್ಜ್ ಮುರಿದು ಬಿದ್ದು ಹೋಗುತ್ತದೆಯೋ ಗೊತ್ತಿಲ್ಲ. ಜನ ಸಾಯುತ್ತಾರೋ ಏನಾಗುತ್ತದೆಯೋ ಗೊತ್ತಿಲ್ಲ. ಆ ಬ್ರಿಡ್ಜ್‌ನ್ನು ಮೂರೇ ತಿಂಗಳುಗಳಲ್ಲಿ ಕಂಪ್ಲೀಟ್ ಮಾಡಿದ್ದಾರೆ. ಆ ಬ್ರಿಡ್ಜ್ ಒಡೆದುಹೋಗಿರುವುದನ್ನು ಕೊಟ್ಟಿದ್ದೇವೆ. ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟ್‌ನ ಓಪೀನಿಯನ್‌ನ್ನು ಕೊಟ್ಟಿದ್ದೇವೆ. ಇಷ್ಟೆಲ್ಲಾ ಕೊಟ್ಟರೂ ಕೂಡ ಅದನ್ನು ಕಟ್ಟಿಯೂ ಆಯಿತು ಮತ್ತು ಇನ್ಯಾಗುರೇಷನ್ ಕೂಡ ಆಯಿತು. ಬೆಂಗಳೂರು ನಗರದಲ್ಲಿನ ಸಿಟಿ ಮಾರ್ಕೆಟ್‌ನ್ನು ಕಟ್ಟುವಾಗ ನಾನು ಇನ್‌ಸ್ಪೆಕ್ಷನ್ ಮಾಡಿಸಿ...

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯೆಯರು ತುಂಬಾ ಗಂಭೀರವಾದ ವಿಚಾರವನ್ನು ಹೇಳುತ್ತಿದ್ದಾರೆ. ಏಕೆಂದರೆ ಫೌಂಡೇಷನ್ ತೆಗೆದಾದ ಮೇಲೆ ಸಾಯಿಲ್‌ಟೆಸ್ಟ್ ರಿಪೋರ್ಟ್ ಬಂದಾದ ಮೇಲೆ ಡಿಸೈನ್ ಕೊಡುತ್ತಾರೆ. ಡಿಸೈನ್ ಕೊಟ್ಟಾದ ಮೇಲೆ ಅಪ್ರೂವಲ್ ಕೊಡುತ್ತಾರೆ. ಇದಾದ ಮೇಲೆಯೇ ಫೌಂಡೇಷನ್ ಹಾಕಬೇಕು. ಇವರು ಹೇಳುವ ಪ್ರಕಾರ ಇಂಜಿನೀಯರ್ ಹೇಳಿದ್ದೂ ಕೇಳಲಿಲ್ಲ. ಅವರೇ ತಮಗೆ ಇಷ್ಟ ಬಂದ ಹಾಗೆ ಮಾಡಿದ್ದಾರೆ ಎಂಬ ಹಾಗೆ ಆಯಿತು. ಒಟ್ಟಿನಲ್ಲಿ ಇರುವ ನಿಯಮಗಳನ್ನು ಗಾಳಿಗೆ ತೂರಿದ್ದಾರೆ ಎಂದು ಆಗುತ್ತದೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಇಷ್ಟೆಲ್ಲಾ ಇದ್ದರೂ ಕೂಡ ಮೂರೇ ತಿಂಗಳಲ್ಲಿ ಕಟ್ಟಿ ಮುಗಿಸಿ ಬಿಟ್ಟಿದ್ದಾರೆ. ಬೆಂಗಳೂರು ನಗರ ಕಾರ್ಪೋರೇಷನ್‌ರವರು ಮಾರ್ಕೆಟ್‌ನ್ನು ಕಟ್ಟಿಸಿದ್ದಾರೆ. ಅಲ್ಲಿ ಕೂಡ ನಾನು ಹೋಗಿ ನೋಡಿದ್ದೇನೆ. ಅಲ್ಲಿಯೂ ಕೂಡ ಒಂದುಕಡೆ 6ಇಂಚುಗಳಷ್ಟು ಫೌಂಡೇಷನ್ ಕೆಳಗೆ ಹೋಗಿದೆ. ಈಗ ಬಿಲ್ಡಿಂಗ್‌ಗೆ ಮಾರುಕಟ್ಟೆಯನ್ನು ಶಿಫ್ಟ್ ಮಾಡಿಬಿಟ್ಟಿದ್ದಾರೆ. ಆದರ ಸೆಲ್ಲಾರ್‌ನಲ್ಲಿ ಆರು ಅಡಿಗಳಷ್ಟು ನೀರು ನಿಂತುಕೊಳ್ಳುತ್ತದೆ. ಫೌಂಡೇಷನ್‌ನಲ್ಲಿ ನೀರು ಬುಗ್ಗೆಯಾಗಿ ಉಕ್ಕಿ ಬರುತ್ತಾ ಇದೆ. ಫೌಂಡೇಷನ್ ಟ್ರೀಟ್‌ಮೆಂಟ್ ಕೊಟ್ಟಿಲ್ಲ, ವಾಟರ್‌ಟ್ರೀಟ್‌ಮೆಂಟ್ ಕೊಟ್ಟಿಲ್ಲ. ಕೆಮಿಕಲ್ ಟ್ರೀಟ್‌ಮೆಂಟ್ ಕೊಟ್ಟಿಲ್ಲ. ಫೌಂಡೇಷನ್ ಹಾಕಿದ್ದು ಕೆಳಮಟ್ಟದಲ್ಲಿ ಸಿಮೆಂಟ್‌ನ ಗುಣಮಟ್ಟವೇ ಇಲ್ಲ. ಅಲ್ಲಿ ಉಪಯೋಗಿಸಿದ ಸಿಮೆಂಟ್‌ನ್ನೂ ಕೂಡ ಟೆಸ್ಟ್ ಮಾಡಿಸಿ ತಂದುಕೊಟ್ಟೆ. ಆಗ ಮಾನ್ಯ ಶೆಣೈಯವರು ಕಮಿಶನರ್ ಆಗಿದ್ದರು. ನೀವು ಹೇಳುವುದರಲ್ಲಿ ಸತ್ಯ ಇದೆ, ನಾನು ಎಲ್ ಅಂಡ್ ಟಿ ಅಥವಾ ಸೂಕ್ತ ಸಂಸ್ಥೆಗಳವರನ್ನು ಕರೆದುಕೊಂಡು ಬಂದು ಟೆಸ್ಟ್ ಮಾಡಿಸುತ್ತೇನೆಂದು ಹೇಳಿದರು.

ಇಷ್ಟು ಹೇಳಿದ್ದೇ ತಡ ಮಾರನೇ ದಿವಸವೇ ಅವರನ್ನು ಕಾರ್ಪೊರೇಷನ್‌ನಿಂದ ಎತ್ತಿ ಬೇರೆ ಕಡೆಗೆ ಹಾಕಿಸಿದರು. ಈಗ ಎಲ್ ಅಂಡ್ ಟಿ ಯವರ ಹತ್ತಿರ ಒಪೀನಿಯನ್‌ನ್ನು ಇವರು ತರಿಸಿಕೊಂಡಿದ್ದಾರೆ. ಅದರ ಪ್ರಕಾರ ಈ ಕಟ್ಟಡದ ಆಯುಸ್ಸು ಮೂರು ವರ್ಷಗಳು ಎಂದು ಇದೆ. ಲಕ್ಷಾಂತರ ಜನರು ಹೋಗಿ ವ್ಯಾಪಾರ ಮಾಡತಕ್ಕಂಥ ಸಿಟಿ ಮಾರ್ಕೆಟ್, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರತಕ್ಕಂಥ ಈ ಕಟ್ಟಡದ ಆಯುಸ್ಸು ಮೂರು ವರ್ಷಗಳು ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದಕ್ಕಾಗಿ ಮೊನ್ನೆ ಸನ್ಮಾನ್ಯ ಇಬ್ರಾಹಿಂ ಸಾಹೇಬರು ಅಲ್ಲಿರತಕ್ಕಂಥ ಸ್ಟೀಲ್ ಅಂಗಡಿಗಳವರನ್ನು ಅಲ್ಲಿಗೆ ಕರೆದುಕೊಂಡು ಹೋಗಬಾರದು, ಕಬ್ಬಿಣವನ್ನು ಮೇಲೆ ಹಾಕಿದರೆ ಕಟ್ಟಡ ಭಾರ ತಡೆಯುವುದಿಲ್ಲ ಎಂದು ಹೇಳಿ ಅಲ್ಲಿಗೇ ನಿಲ್ಲಿಸಿದ್ದಾರೆ. ಹಾಗಾದರೆ ಅದನ್ನು ಏಕೆ ಕಟ್ಟಿದ್ದೀರಿ? ಅದರ ಕಂಟ್ರಾಕ್ಟರ್ ಯಾರು? ಅದರ ಇಂಜಿನಿಯರ್ ಯಾರು? ಇಷ್ಟೇ ಆಗಿದ್ದಲ್ಲಿ ಸುಮ್ಮನೆ ಇರಬಹುದಾಗಿತ್ತು. ಈಗ ಪುನಃ ಅದೇ ಕಂಟ್ರಾಕ್ಟರ್‌ಗೆ ಕಾರ್ಪೊರೇಷನ್‌ನವರು ಬೇರೆ ಕೆಲಸಕ್ಕೆ ಹಣವನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಪೋಡಿಯಂ ಬ್ಲಾಕ್ ಕಟ್ಟುವ ಕೆಲಸವನ್ನು ಅವರಿಗೆ ಪುನಃ ಕೊಡಲಾಗಿದೆ. ಯಾವ ಕಂಟ್ರಾಕ್ಟರ್ ಇಂಥ ಕೆಟ್ಟ ಕಟ್ಟಡವನ್ನು ಕಟ್ಟಿ ಜನರಿಗೆ ಅನ್ಯಾಯ ಮಾಡಲು ಹೋಗಿದ್ದಾರೋ ಅವರಿಗೆ ಮತ್ತೆ ಕಂಟ್ರಾಕ್ಟ್ ಕೆಲಸವನ್ನು ಕೊಟ್ಟಿದ್ದಾರೆ. ಇತ್ತೀಚೆಗೆ ನಾವುಗಳು ಎಲ್ಲರೂ ಬೆಂಗಳೂರಿನ ರಸ್ತೆಗಳು ಸರಿ ಇಲ್ಲ, ಕೂಡಲೇ ರಿಪೇರಿ ಕೆಲಸ ಮಾಡಬೇಕು, ಟೆಂಡರ್ಸ್ ಕರೆಯಬೇಕು, ಎಸ್ಟಿಮೇಟ್ಸ್ ಮಾಡಿಕೊಡಬೇಕೆಂದು ಕೇಳಿದ್ದೆವು. ಟೆಂಡರ್ ಕಾಲ್‌ಫಾರ್ ಮಾಡಿದರು. ಅಲ್ಲಿ ಬಂದ ಕಂಟ್ರಾಕ್ಟರ್‌ಗಳಿಗೆಲ್ಲಾ ಅರ್ಜಿಯನ್ನು ಕೊಟ್ಟರು. ಟೆಂಡರ್ ಫಾರ್ಮ್ ತೆಗೆದುಕೊಳ್ಳಲು ನಿಂತವರಿಗೆ ಫಾರ್ಮ್‌ಗಳನ್ನು ಕೊಡಲಾಯಿತು. ಅದಾದ ಮೇಲೆ ಯಾರ್ಯಾರು ಕ್ಯೂನಿಂತು ಟೆಂಡರ್ ಫಾರ್ಮ್‌ಗಳನ್ನು ತಂದಿದ್ದರೋ ಅದನ್ನೆಲ್ಲಾ ಅಲ್ಲಿದ್ದ ಮೂರು ಜನ ಅಂಡರ್ ವರ್ಲ್ಡ್ ಡಾನ್‌ಗಳು ಆ ಫಾರ್ಮಗಳನ್ನು ಕಿತ್ತು ಕೊಂಡರು. ಹೀಗೆ ಕಿತ್ತುಕೊಂಡ ಫಾರ್ಮ್‌ಗಳನ್ನು ಅವರುಗಳು ತಮಗೆ ಬೇಕು ಬೇಕಾದವರಿಗೆ ಹಂಚಿ, ಬಿಟ್ಟರು. ಅಂದರೆ ಇವ್ರೊತ್ತು ಇಡೀ ಬೆಂಗಳೂರಿನ ಕೆಲಸಕಾಮಗಾರಿಗಳನ್ನು ಈ ಅಂಡರ್ ವರ್ಲ್ಡ್ ಡಾನ್‌ಗಳ ಕೈಯಲ್ಲಿ ಕೊಟ್ಟಿದ್ದಾರೆ. ಈ ಕೆಲಸಗಳನ್ನು ಇವರ ಕೈಯಲ್ಲಿ ಕೊಟ್ಟರೆ ಬೆಂಗಳೂರಿನ ಗತಿ ಏನಾಗಬೇಕು? ಯಾರು ಅಂಥ ಕೆಟ್ಟ ಕೆಲಸ ಮಾಡಿ ಕ್ರಿಮಿನಲ್ ರೆಕಾರ್ಡ್ ಇದೆಯೋ ಅಂಥವರ ಕೈಯಲ್ಲಿ ನಾವು ಬೆಂಗಳೂರಿನ ಕೆಲಸವನ್ನು ಮಾಡಿಸಿದರೆ ಬೆಂಗಳೂರು ಅವರ ಕೈಕೆಳಗೆ ಬರುವುದಿಲ್ಲವೇ? ಬೆಂಗಳೂರಿನ ಸೀಕ್ರೆಸಿ, ಇಲ್ಲಿರತಕ್ಕಂಥ ವಿವಿಧ ಸೂಕ್ಷ್ಮ ಸ್ಥಳಗಳು, ಆಯಕಟ್ಟಿನ ಸ್ಥಳಗಳನ್ನು ಅವರ ಕೈಗೆ ಕೊಟ್ಟು ಕೆಲಸ ಮಾಡಿಸಿದರೆ ಏನಾಗಬಹುದು? ಈ ವಿಷಯವನ್ನು ಕೂಡಲೇ ನಾನು ಹೋಗಿ ಕಮಿಷನರ್‌ರವರಿಗೆ ಹೋಗಿ ಹೇಳಿದೆ. ನಿಮ್ಮ ಟೆಂಡರ್ ಕಾಲ್ ಫಾರ್ ಮಾಡಿದಾಗ ಕೊಟ್ಟ ಫಾರಂಗಳನ್ನು ಅಲ್ಲಿದ್ದ ಮೂವರ ಕಿತ್ತುಕೊಂಡಿದ್ದಾರೆ. ನೀವು ಅದನ್ನು ತತ್‌ಕ್ಷಣ ಸರಿಪಡಿಸಬೇಕು, ಬೇರೆ ಟೆಂಡರ್‌ನ್ನು ಕರೆಯಬೇಕು. ಈ ರೀತಿಯಲ್ಲಿ ಆದರೆ ಅದು

ಒಳ್ಳೆಯದಲ್ಲ ಎಂದು ಅವರ ಹತ್ತಿರ ನಾನು ಹೇಳಿದ್ದೆ. ಆದರೆ ಅದನ್ನು ಯಾರೂ ಕೂಡ ಕಿವಿಗೆ ಹಾಕಿಕೊಂಡೇ ಇಲ್ಲ. ಇನ್ನೇನು ಬರುವ ತಿಂಗಳು ಕೆಲಸ ಪ್ರಾರಂಭವಾಗಲಿದ್ದು ಕೆಲಸವನ್ನು ಅವರ ಕೈಯ್ಯಲ್ಲಿಯೇ ಕೊಡುವವರಿದ್ದಾರೆ. ಹೀಗಾದರೆ ಬೆಂಗಳೂರಿನ ಜನರ, ನಾಗರೀಕರ ಗತಿ ಏನಾಗಬೇಕು? ಇಂಥವರು ಈ ಕೆಲಸಗಳನ್ನು ಮಾಡಿದಲ್ಲಿ ನಮ್ಮ ಜನರ ಭವಿಷ್ಯ ಏನಾಗಬಹುದು ಎಂಬುದನ್ನು ಯೋಚನೆ ಮಾಡಬೇಕು. ಇದು ಇಂದಿನ ಬೆಂಗಳೂರಿನ ಪರಿಸ್ಥಿತಿ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರೈತರ ಬಗೆ ಹೇಳಿರತಕ್ಕಂಥ ನಮ್ಮ ಮಾನ್ಯ ನಾಯಕರುಗಳು ಇದ್ದಾರೆ. ಸ್ವಜನ ಪಕ್ಷಪಾತ ನಿಮ್ಮ ಸರಕಾರದಲ್ಲಿ ಆಗುತ್ತದೆಯೇ ಇಲ್ಲವೇ ಎಂಬುದನ್ನು ತಾವುಗಳು ಹೇಳಬೇಕು. ಆ ಕುರಿತು ಒಂದೆರಡು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಇವೊತ್ತು ಕ್ಯಾಟಲ್ ಫೀಡ್ ಫ್ಯಾಕ್ಟರಿಯನ್ನು ಹಾಸನದಲ್ಲಿ ಪ್ರಾರಂಭಿಸಿದರು. ಗುಬ್ಬಿಯಲ್ಲಿ, ದೊಡ್ಡಬಳ್ಳಾಪುರದಲ್ಲಿ, ಧಾರವಾಡದಲ್ಲಿ, ಮುಂತಾಗಿ ನೂರು ಟನ್‌ಗಳಷ್ಟು ಕೆಪ್ಯಾಸಿಟಿ ಇರುವ ಫ್ಯಾಕ್ಟರಿಗಳು ಅಲ್ಲಿ ಇದ್ದರೂ ಹಾಸನದಲ್ಲಿ ಏಕೆ ಮತ್ತೆ ಪ್ರಾರಂಭ ಮಾಡಿದ್ದೀರಿ? ಇದಕ್ಕೆ ಆರೂವರೆ ಕೋಟಿಗಳ ವೆಚ್ಚವನ್ನು ಮಾಡಿದ್ದೀರಿ. ಅದನ್ನು ಎಲ್ಲಿ ಪ್ರಾರಂಭ ಮಾಡಿದ್ದೀರಿ? ಅದರ ಜಮೀನು ಯಾರದ್ದು ಹೇಗೆ ಆಯಿತು ಎಂಬುದೆಲ್ಲ ಒಂದು ದೊಡ್ಡ ಇತಿಹಾಸವೇ ಇದೆ. ಇದಕ್ಕೆ ಬೇಕಾಗುವ ಹಣವನ್ನು ಎಲ್ಲಿಂದ ತಂದಿದ್ದೀರಿ? ಹಾಗೆ ಹಣವನ್ನು ತರುವಾಗ ಏನು ಹೇಳಿದ್ದೀರಿ? ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೆಲವು ಹಣ, ಚಿಕ್ಕಮಗಳೂರು, ಕೂರ್ಗ್, ಜಿಲ್ಲಾ ಪಂಚಾಯತ್‌ಗಳಿಂದ ಇದಕ್ಕಾಗಿ ಹಣ ತೆಗೆದುಕೊಂಡಿದ್ದೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿನ ಕ್ಯಾಟಲ್ ಫೀಡ್ ಪ್ಲಾಂಟ್‌ನ್ನು ಮಾಡಿದ ದಿವಸವೇ ಹಾಸನ, ಮಂಗಳೂರು, ಚಿಕ್ಕಮಗಳೂರು, ಕೊಡಗು ಭಾಗವನ್ನು ಕ್ಯಾಟರ್ ಮಾಡಬೇಕೆಂದು ಮಾಡಿದ್ದರು. ಈ ಮೂರು ಪ್ಲಾಂಟ್‌ಗಳು ರಾಜಾನಕುಂಟೆ, ಗುಬ್ಬಿ ಮತ್ತು ಧಾರವಾಡದ ಪ್ಲಾಂಟ್‌ಗಳು ಅಂಡರ್ ಯುಟಿಲೈಸೇಶನ್ ಆಗುವಾಗ ದೊಡ್ಡದಾಗಿ ಹಾಸನದಲ್ಲಿ ಈ ಪ್ಲಾಂಟ್‌ನ್ನು ಹಾಕುವುದರಲ್ಲಿ ಜಸ್ಟಿಫಿಕೇಷನ್ ಇಲ್ಲ. ಆದ್ದರಿಂದ ಈ ಸದನಕ್ಕೆ ಆ ಕುರಿತು ಮಾಹಿತಿಗಳನ್ನು ಕೊಡಬೇಕು. ಕೆಎಂಎಫ್‌ನಲ್ಲಿ ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಏನು ಇತ್ತು ಎಂಬುದನ್ನು ಹೇಳಬೇಕು. ಹಿಂದೆ ಈ ಕುರಿತು ಹೇಳುವಾಗ ಅಲ್ಲಿನ ಪ್ಲಾಂಟ್‌ಗಳಲ್ಲಿ 100ರಿಂದ 200 ಟನ್‌ಗಳಷ್ಟು ಕೆಪ್ಯಾಸಿಟಿ ಇದೆ ಎಂದು ಹೇಳುವಾಗ ಅದನ್ನು ಉಪಯೋಗಿಸಿಕೊಳ್ಳದೆ ಹೊಸತಾಗಿ ಬಂಡವಾಳವನ್ನು ಹಾಕಿಕೊಂಡು ಯಾರಿಗೋ ಉದ್ಯೋಗವನ್ನು ಕೊಡುತ್ತಾ ಹೋಗುವಾಗ ಅದು ಹೀಗೆ ನಡೆದರೆ ಕೆಎಂಎಫ್‌ನ ಗತಿ ಏನಾಗಬೇಕು?

ಶ್ರೀಮತಿ ಪ್ರಮಿಳಾ ನೇಸರ್ಗಿ: ಇದನ್ನು ಕೇಳಿದಾಗ ಮಂಗಳೂರಿಗೆ ಹೋಗಬೇಕಾಗಿ ಬಂದಾಗ ಸಾಗಾಣಿಕೆ ವೆಚ್ಚವು ಕಡಿಮೆಯಾಗುತ್ತದೆ, ಎಂದು ಹೇಳಿ ಜಸ್ಟಿಫಿಕೇಷನ್

ಮಾಡಿಕೊಳ್ಳಲು ಹೋದರು. ಇದರಲ್ಲಿ ಯಾರಿಗೆ ಉಪಯೋಗವಾಯಿತು? ಮೊನ್ನೆ ಇತ್ತೀಚೆಗೆ ಅದಕ್ಕಾಗಿ ರಿಕ್ರೂಟ್‌ಮೆಂಟ್ ಆಯಿತು. ಇಡೀ ರಿಕ್ರೂಟ್‌ಮೆಂಟ್‌ನಲ್ಲಿ ಹೊಳೆನರಸೀಪುರದ ಅಭ್ಯರ್ಥಿಗಳಿಗೆ ಮಾತ್ರ ಸೀಮಿತವಾಗಿ ಉದ್ಯೋಗವನ್ನು ನೀಡಲಾಯಿತು. ಇಬ್ಬರು ಹಾಸನದವರಿಗೆ ಕೊಟ್ಟಿದ್ದನ್ನು ಬಿಟ್ಟರೆ ಚಿಕ್ಕಮಗಳೂರಿನವರಿಗೆ, ಮಂಗಳೂರಿನವರಿಗೆ, ಕೊಡಗಿನವರಿಗೆ ಅಲ್ಲಿ ಉದ್ಯೋಗ ಸಿಕ್ಕಿಲ್ಲ. ಇದರ ವಿವರಗಳನ್ನು ನಾನು ಕೊಡುತ್ತೇನೆ. ಆ ಕ್ಯಾಟಲ್ ಫೀಡ್ ಫ್ಯಾಕ್ಟರಿಗೆ ಹೊಸ ಅಧಿಕಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಸಂಯುಕ್ತಕರ್ನಾಟಕ ಪತ್ರಿಕೆಯಲ್ಲಿ ಜಾಹೀರಾತು ಬಂತು. ಈಗಾಗಲೇ ಅಪಾಯಿಂಟ್‌ಮೆಂಟ್ ಮಾಡಿದವರ ಸ್ಥಿತಿ ಹೀಗೆ ಇದೆ. ಇನ್ಯಾರನ್ನು ಅಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ? ಯಾರಿಗೋಸ್ಕರ ಈ ಅಡ್ವರ್‌ಟೈಸ್‌ಮೆಂಟ್? ಈಗ ತೆಗೆದುಕೊಂಡಿರುವವರು ಎಲ್ಲರೂ ಒಂದೇ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಿರುವವರು. ಕೇವಲ ಹೊಳೆನರಸೀಪುರಕ್ಕೆ ಸೀಮಿತವಾಗಿ ಎಲ್ಲಾ ಅಪಾಯಿಂಟ್‌ಮೆಂಟ್‌ಗಳು. ರೈತರಿಗೆ ತುಂಬ ಸಹಾಯ ಮಾಡುವ ನಿಮ್ಮ ಸರಕಾರ ಅವರಿಗೆ ಏನು ಮಾಡಿದೆ? ಈ ಕ್ಯಾಟಲ್‌ಫೀಡ್ ಫ್ಯಾಕ್ಟರಿ ಬಂದ ತತ್‌ಕ್ಷಣ ಎರಡು ತಿಂಗಳಲ್ಲಿ ಅಂದರೆ ಮೇ ತಿಂಗಳಲ್ಲಿ ಒಂದು ಟನ್‌ಗೆ 500ರೂ.ಗಳಷ್ಟು ಹೆಚ್ಚು ಮಾಡಿದರು. ಜೂನ್ ತಿಂಗಳಲ್ಲಿ ಪುನಃ 500 ರೂ.ಗಳಷ್ಟು ಹೆಚ್ಚು ಮಾಡಿದರು. ಹೀಗೆ ಒಂದು ಟನ್‌ಗೆ ಸಾವಿರ ರೂ.ಗಳಷ್ಟು ಬೆಲೆ ಹೆಚ್ಚಳ ಮಾಡಿದರು. ಇದು ನೀವು ರೈತರಿಗೆ ಮಾಡಿದ ಅನುಕೂಲವೇ? ಕ್ಯಾಟಲ್ ಫೀಡ್‌ಗಳು ಗುಜರಾತ್‌ನಲ್ಲಿ ಮಹಾರಾಷ್ಟ್ರದಲ್ಲಿ ಕಡಿಮೆ ಬೆಲೆಗೆ ದೊರೆಯುತ್ತಾ ಇತ್ತು. ಇಷ್ಟು ಬೆಲೆಕೊಟ್ಟು ತೆಗೆದುಕೊಂಡ ಹಾಲು ಉತ್ಪಾದಕರಿಗೆ ಯಾರಿಗೂ ಉದ್ಯೋಗವಿಲ್ಲ. ಶೇರ್ ಹೋಲ್ಡರ್‌ಗಳ ಮನೆ ಮಕ್ಕಳಿಗೂ ಉದ್ಯೋಗವನ್ನು ಕೊಟ್ಟಿಲ್ಲ. ಯಾರು ಇದಕ್ಕಾಗಿ ಸಹಾಯ ಮಾಡಿದ್ದಾರೆ, ಯಾರ ಮನೆಮಕ್ಕಳಿಗೂ ಉದ್ಯೋಗವನ್ನು ಕೊಟ್ಟಿಲ್ಲ. ಹೀಗೆಲ್ಲಾ ಪರಿಸ್ಥಿತಿ ಇರುವಾಗ ನಿಮ್ಮನ್ನು ಸ್ವಜನಪಕ್ಷಪಾತಿಗಳು ಎಂದು ಹೇಳದೇ ಇನ್ನೇನು ಹೇಳಬೇಕು? ಒಂದೇ ಊರಿನವರಿಗೆ ಮಾತ್ರ ಉದ್ಯೋಗವನ್ನು ಕೊಡುತ್ತಿರುವುದನ್ನು ನಾವೇನೆಂದು ಕರೆಯಬೇಕು? ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಚೆನ್ನಪಟ್ಟಣದಲ್ಲಿನ 43 ಎಕರೆಗಳಷ್ಟು ಗೋಮಾಳ ಜಾಗದ ಬಗ್ಗೆ ಹೇಳುತ್ತೇನೆ. ಇದರಲ್ಲಿ 22 ಎಕರೆಗಳಷ್ಟು ಪ್ರದೇಶದಲ್ಲಿ ಪಶು ಆಹಾರ ಕಾರ್ಖಾನೆಯಾಗಿದೆ. ಉಳಿದ 21 ಎಕರೆಗಳನ್ನು ಯಾರಿಗೆ ಕೊಡುತ್ತಿದ್ದೀರಿ? ಹಸುಗಳು ಮೇಯುವ ಈ 43 ಎಕರೆ ಪ್ರದೇಶವನ್ನು ತೆಗೆದುಕೊಂಡು ಅಲ್ಲಿ ಫ್ಯಾಕ್ಟರಿಯನ್ನು ಮಾಡಿ, ಉಳಿದ 21 ಎಕರೆ ಪ್ರದೇಶವನ್ನು ಯಾರಿಗೆ ಕೊಡಲು ಹೊರಟಿದ್ದೀರಿ? ಯಾವ ಟ್ರಸ್ಟ್‌ಗೆ ಇದನ್ನು ಕೊಡಹೊರಟಿದ್ದೀರಿ, ಅದನ್ನು ಹೇಳಬೇಕು. ಯಾವ ಉದ್ದೇಶಕ್ಕಾಗಿ ಆ ಜಾಗವನ್ನು ತೆಗೆದುಕೊಂಡು ಅದನ್ನು ಪೂರ್ಣವಾಗಿ ಉಪಯೋಗ ಮಾಡದೇ ಇದ್ದಾಗ, ಪುನಃ ಅದು ರೈತರಿಗೆ ಹೋಗಬೇಕಾಗಿರುವಾಗ, ಅವರ ಜಮೀನನ್ನು ಟ್ರಸ್ಟ್‌ನವರಿಗೆ ಕಡಿಮೆ ಬೆಲೆಗೆ

ಕೊಡಲು ಹೊರಟಿರುವಾಗ ಇದನ್ನು ಯಾರಿಗೆ ಕೊಡಲು ಸಿದ್ಧತೆ ಮಾಡಿಕೊಂಡಿದ್ದೀರಿ ಎಂಬುದನ್ನು ಹೇಳಬೇಕಲ್ಲಾ? ಅಧ್ಯಕ್ಷರೇ, ಚನ್ನಪಟ್ಟಣ ಟ್ಯಾಂಕ್ ಬಗ್ಗೆ ಹೇಳಬೇಕಾದರೆ ಸ್ಟೇಟಸ್‌ಕೋ ಮೈಂಟೆನ್ ಮಾಡಬೇಕು, ಅದನ್ನು ಒಡೆಯಬಾರದು ಎಂದು ಕೋರ್ಟಿನಲ್ಲಿ ಆರ್ಡರ್ ಆಯಿತು. ಆದರೂ ಇಡೀ ಟ್ಯಾಂಕನ್ನು ಒಡೆದರು. ನೀರು ಹರಿದುಹಂಚಿಹೋಯಿತು. ಅಂತರ ರಾಷ್ಟ್ರೀಯ ಕಾನೂನು ಪ್ರಕಾರ ಪರಿಸರ ಕಾಯಿದೆ ಪ್ರಕಾರ ಇದನ್ನು ಒಡೆಯಬಾರದಾಗಿತ್ತು. ನಾನು ಕೇಳುತ್ತಿದ್ದೇನೆ. ಯಾರು ಕೇಳಿ ಒಡೆದಿರಿ? ಒಂದು ಸಾವಿರ ಇತಿಹಾಸವಿರುವ ಟ್ಯಾಂಕನ್ನು ಒಡೆಯಬೇಕಾದಾಗ ಅರಣ್ಯ ಇಲಾಖೆ ನೀರಾವರಿ ಇಲಾಖೆಗಳು ನೋಡಬೇಕಾಗಿತ್ತು. ಒಂದೇ ದಿನದಲ್ಲಿ ಎಲ್ಲಾ ಇಲಾಖೆಗಳೂ ಅಭಿಪ್ರಾಯ ಕೊಟ್ಟರು ಒಡೆಯಬಹುದು ಎಂದು. ಇದು ಯಾರಿಗೆ ಶೋಭೆ ತರುತ್ತದೆ? ಈ ಕೆರೆಯಿಂದ ಅಲ್ಲಿನ ರೈತರ ಬೆಳೆಗೆ ನೀರು ಹರಿಯುತ್ತಿತ್ತು. ಅವೆಲ್ಲಾ ಬಂದ್, ಈ ಸಲ ಬೆಳೆ ತೆಗೆಯಲು ಆಗುವುದಿಲ್ಲ. ಯಾರಿಗೋಸ್ಕರ ಕೆರೆಯನ್ನು ಒಡೆದಿರಿ ಎಂಬುದನ್ನು ಹೇಳಬೇಕಲ್ಲಾ. ಪಿಡಬ್ಲ್ಯೂಡಿ, ಅರಣ್ಯ ಯಾವುದೇ ಇಲಾಖೆ ಆಗಲಿ ಇದರ ಬಗ್ಗೆ ಮಾಹಿತಿ ಕೊಡಬೇಕು.

ಅಧ್ಯಕ್ಷರು: ಕೆರೆಗೆ ಅಚ್‌ಕಟ್ಟು ಇತ್ತಾ? ಅಚ್‌ಕಟ್‌ದಾರರು ಇದ್ದರೆ?

ಶ್ರೀಮತಿ ಪ್ರಮೀಳಾನೇಸರ್ಗಿ: ರಾತ್ರೋರಾತ್ರಿ ನೀರು ನಿಲ್ಲಿಸುತ್ತೇವೆ ಎಂದು ಅಧಿಸೂಚನೆ ಹೊರಡಿಸಿಬಿಟ್ಟರು. ನೀರಾವರಿ ಕಾಯಿದೆಯಲ್ಲಿ ಅದಕ್ಕೆ ಅವಕಾಶವೇ ಇಲ್ಲ. ಡಿನೋಟಫೈ ಸಹ ಇವರು ಮಾಡಿಸಲಿಲ್ಲ. ಅಧ್ಯಕ್ಷರೇ, ತಮ್ಮ ಊರಿನಲ್ಲಿ ಹೇಗೆ ಕಾನೂನಿನ ಪ್ರಕಾರ ಮಾಡಬೇಕಾಗಿತ್ತೋ ಹಾಗೆ ಮಾಡಿಸಿದಿರಿ, ನನಗೆ ಗೊತ್ತಿದೆ, ಆದರೆ ಇಲ್ಲಿ ಹಾಗೆ ಮಾಡಲಿಲ್ಲ. ಜೊತೆಗೆ ಅಲ್ಲಿ ಸ್ಟೋರೇಜ್ ಇತ್ತು. ಅಲ್ಲದೆ ಕೆರೆ ಒಡೆದರೆ ಅಲ್ಲಿದ್ದ ಬಾವಿಯೆಲ್ಲಾ ಬತ್ತಿಹೋಗುತ್ತವೆ ಎಂಬ ಒಂದು ಒಪೀನಿಯನ್ ಸಹ ಇದೆ. ಯಾಕೆ ಒಡೆದರು ಅಂದರೆ ಹೌಸಿಂಗ್‌ಬೋರ್ಡಿನಿಂದ ಮನೆ ಕಟ್ಟಿಸಬೇಕೆಂದು, ರೈಲ್ವೆ ಬ್ರಿಡ್ಜ್ ಹಾಕುತ್ತೇವೆ ಎಂದು ಹೇಳಿದರು, ಬಸ್ ಸ್ಟಾಂಡ್ ಮಾಡುತ್ತೇವೆ ಎಂದು ಹೇಳಿದರು. ಆಮೇಲೆ ಪರಿಸರ ಇಲಾಖೆಯವರು ಒಪೀನಿಯನ್ ಕೊಟ್ಟರು. ಬಹಳ ಗಲೀಜು ನೀರು ಟ್ಯಾಂಕಿಗೆ ಬಿಡುತ್ತಿದ್ದಾರೆ, ಆದ್ದರಿಂದ ಕಲುಷಿತವಾಗಿದೆ, ಒಡೆಯಬಹುದು ಎಂದು ಕೊಟ್ಟರು. ಟ್ಯಾಂಕ್ ಉಳಿಯದಿದ್ದರೆ ಸುತ್ತಮುತ್ತ ವಾಟರ್‌ಟೇಬಲ್ ಕಡಿಮೆಯಾಗುತ್ತದೆ ಎಂಬುದು ಪರಿಣತರ ಒಪೀನಿಯನ್. ಈಗ ಹೊಸದಾಗಿ, ಆ ಟ್ಯಾಂಕ್ ಒಡೆದ ಜಾಗವನ್ನು ಹೌಸಿಂಗ್ ಬೋರ್ಡಿಗಾಗಿ ಅಕ್ವೈರ್ ಮಾಡಲಾಗುವುದೆಂದು ಅಧಿಸೂಚನೆ ಹೊರಡಿಸಿದ್ದಾರೆ. ನಾನು ಹೌಸಿಂಗ್‌ಬೋರ್ಡಿನ ಸಚಿವರನ್ನು ಕೇಳುತ್ತಿದ್ದೇನೆ. ಅಧಿಸೂಚನೆ ಆಗಿಲ್ಲ, ಸ್ಕೀಂ ಸರ್ಕಾರಕ್ಕೆ ಬಂದು ಅನುಮತಿ ದೊರಕಿಲ್ಲ. ಆದರೂ ಇವತ್ತು ಕೋರ್ಟಿನ ಮುಂದೆ ಇದ್ದು ತೀರ್ಪಿಗಾಗಿ ಕಾಯಲಾಗಿದೆ, ಆದರೂ ಅಲ್ಲಿನ ರೈತರ ಜಮೀನನ್ನು ಅಕ್ವೈರ್ ಮಾಡಲು ಹೊರಟಿದ್ದಾರೆ. 300ಕೂ ಮಿಕ್ಕ ರೈತರಿಗೆ ಅಧಿಸೂಚನೆ ಹೊರಡಿಸಿ ನಿಮ್ಮ ಜಮೀನನ್ನು ಅಕ್ವೈರ್

ಮಾಡುತ್ತೇವೆ, ಅಲ್ಲಿ ಮನೆ ಕಟ್ಟುತ್ತೇವೆ ಎಂದು. ಇದಕ್ಕಿಂತ ರೈತರಿಗೆ ಅನ್ಯಾಯವಾಗುವ ಕೆಲಸ ಏನಾದರೂ ಇದೆಯಾ? ಅದನ್ನು ನಾವು ಯೋಚನೆ ಮಾಡಬೇಕು. ಈಗ ಇಲ್ಲಿ ನಾಗೇಗೌಡರೂ ಇದ್ದಾರೆ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟಿದರು.

ಶ್ರೀ ಎಚ್.ಎನ್.ನಂಜೇಗೌಡ: ಅಧ್ಯಕ್ಷರೇ, ಸರ್ಕಾರ ಸ್ವಲ್ಪಮಟ್ಟಿಗೆ ತನ್ನ ಪಾಲಿಸಿಯನ್ನು ತಿದ್ದುಪಾಟು ಮಾಡಿಕೊಳ್ಳಬೇಕು. ಚನ್ನಪಟ್ಟಣ ಈ ಕಡೆ ಇದೆ, ಕೆರೆ ಆ ಕಡೆ ಇದೆ, ಎಲ್ಲಾ ನನಗೆ ಗೊತ್ತಿದೆ. ಆ ರೈತರ ಜಮೀನು ಸೈಟಾಗಿ ಕನ್‌ವರ್ಟಾದರೆ ಚದರಡಿ ಕನಿಷ್ಟ 300 ರೂ ಆಗುತ್ತದೆ. ಸರ್ಕಾರ ಅದನ್ನು ಅಕ್ವೈರ್ ಮಾಡಿಕೊಂಡು ಲಾಭ ಮಾಡಲು ಹೊರಟಿದೆ. ಕೆರೆ ಒಡೆದರಲ್ಲಾ, ರೈತರಿಗೆ ಬಿಟ್ಟುಬಿಡಿರಿ, ಅಕ್ವೈರ್ ಯಾಕೆ ಮಾಡಲು ಹೋಗುತ್ತೀರಿ? ಅವರೇ ಸೈಟ್ ಮಾಡಿ ಇವರು ಮಾರುವ ರೇಟಿಗೆ ಅವರೂ ಮಾರಿಕೊಳ್ಳಲಿ. ಅಥವಾ ಇವರು ಫಿಕ್ಸ್ ಮಾಡಿದ್ದಕ್ಕಿಂತ 50, 100 ರೂಗೆ ಕಮ್ಮಿ ಕೊಡುವುದಕ್ಕೆ ಹೇಳೋಣ. ಆ ರೈತರ ತಂಟೆಗೆ ಹೋಗುವುದು ಬೇಡ. ಸರ್ಕಾರ ಮಾರವಾಡಿ ಕೆಲಸ ಮಾಡುವುದು ಬೇಡ. ಇದರ ಸಂಕಟ ರೈತರಿಗೆ ಗೊತ್ತು. ನಾನು ಬಿಡಿಎಯಿಂದ ಒಂದು ಸೈಟ್ ತೆಗೆದುಕೊಂಡಿದ್ದೇನೆ, ನನ್ನ ಜಮೀನು ಕಳೆದುಕೊಂಡಿಲ್ಲ. ಐಎಎಸ್ ಅಧಿಕಾರಿಗಳಿಗೆ ಸೈಟ್ ಸಿಕ್ಕವೆ, ಅವರು ಜಮೀನು ಕಳೆದುಕೊಂಡಿಲ್ಲ. ಜಡ್ಜಸ್‌ಗೆ ಸೈಟ್ ಸಿಕ್ಕವೆ. ಅವರು ಜಮೀನು ಕಳೆದುಕೊಂಡಿಲ್ಲ. ಕಳೆದುಕೊಂಡಿರುವವರೆಲ್ಲಾ ರೈತರು. ಅವರಪ್ಪನ 20 ಎಕರೆಯಲ್ಲಿ 20 ಗುಂಟೆ ಉಳಿಸಿಕೊಳ್ಳೋಕೆ ಇವತ್ತು ಹೈಕೋರ್ಟಿನಲ್ಲಿ ಹೇಳುತ್ತಾರೆ: ಡಿನೋಟಿಫೈ ಮಾಡಲು ಅವಕಾಶ ಇಲ್ಲ ಎಂದು. ರೈತರು ಇಷ್ಟೊಂದು ಎಲ್ಲಾ ಬಾಬಿನಿಂದ ತುಳಿತಕ್ಕೆ ಒಳಪಟ್ಟರೆ ಏನಾಗಬೇಕು? ಕೆಲವು ರೈತರು ಜಮೀನು ಕಳೆದುಕೊಂಡಿದ್ದಾರೆ, ಅವರು ನೂರಾರು ವರ್ಷದಿಂದ ಅದರಲ್ಲಿ ವಾಸವಾಗಿದ್ದಾರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವರಿಗೆ ಅವಕಾಶ ಇಲ್ಲ. ಆದ್ದರಿಂದ ಕಾನೂನಿನಲ್ಲಿ ಒಂದು ಸಣ್ಣ ತಿದ್ದುಪಡಿ ತಂದುಕೊಂಡು ಅವರಿಗೆ ವಾಸ ಮಾಡಲು ಅವಕಾಶ ಮಾಡಿಕೊಡುವುದಕ್ಕೆ ಸರ್ಕಾರಕ್ಕೆ ಪುರಸೊತ್ತಿಲ್ಲ. ಈ ಸಭೆಗೆ ಎರಡು ಮೂರು ಸಲ ಹೇಳಿದೆ. ನಾಣಯ್ಯನವರೂ ಒಪ್ಪಿಕೊಂಡರು, ಇಲ್ಲಿಯವರೆಗೆ ಆ ಕೆಲಸ ಆಗಲಿಲ್ಲ. ಹೊಸದಾಗಿ ಎಲ್ಲೆಲ್ಲಿ ಇವರು ಮಾಡುತ್ತಾರೋ ಅಲ್ಲಿ ಮಾರುವುದು ಬೇಡ, ರೈತರಿಗೆ ಕೈಟೀರಿಯ ಹಾಕಲಿ, ಲಾಭ ಬಂದರೆ ರೈತರಿಗೇ ಬರಲಿ. ಹೌಸಿಂಗ್‌ಬೋರ್ಡಾಗಲಿ, ಬಿಡಿಎ ಮೂಡಾ ಆಗಲಿ ಮಧ್ಯವರ್ತಿ ಕೆಲಸ ಮಾಡುವುದು ಬೇಡ.

ಶ್ರೀಮತಿ ಪ್ರಮೀಳಾ ನೇಸರ್ಗಿ: ವಿಶ್ವೇಶ್ವರಯ್ಯನವರು ಮಾಡಿದ್ದ ಪ್ಲಾನ್ಸ್ ಡಿಸೈನ್ಸ್ ಎಲ್ಲಾ ಇದೆ. ಆದರೆ ನೀವೇನು ಮಾಡಿದ್ದೀರಿ? ಮಾಡಿಫೈ ಮಾಡುತ್ತೇವೆ ಎನ್ನುವ ನೆಪದಲ್ಲಿ ಹಣವನ್ನು ವೆಚ್ಚ ಮಾಡಿ ವಿಶ್ವೇಶ್ವರಯ್ಯನವರಿಗೆ ಅನ್ಯಾಯ ಮಾಡಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲು ನಾನು ಇಚ್ಛಿಪಡುತ್ತೇನೆ. ಡ್ಯಾಮ್ ಕಟ್ಟುವಾಗ ಸುಳಿ ಬರಬಾರದೆನ್ನುವ ರೀತಿ ವಿಶ್ವೇಶ್ವರಯ್ಯ ಡ್ರಾಯಿಂಗ್ ಮಾಡಿದ್ದರು. ಅದನ್ನೆಲ್ಲಾ

ಸುತ್ತಲೂ ಒಡದುಹಾಕಿ ಮುಂದೆ ಒಂದು ಹೊಂಡ ಇದೆ. ಹೇಳಿ ಅದನ್ನು ಮುಚ್ಚುತ್ತೇವೆ ಎಂದು ಎರಡೂವರೆ ಕೋಟಿ ಅಲ್ಲಿಗೆ ಖರ್ಚು ಮಾಡಿದ್ದಾರೆ. ವಿಶ್ವೇಶ್ವರಯ್ಯನವರು ಡ್ರಾಯಿಂಗ್ ಮಾಡಿ ಏನೇನು ಅನುಕೂಲತೆ ಮಾಡಿಕೊಟ್ಟಿದ್ದರೋ ಅದಕ್ಕೆ ಅನ್ಯಾಯ ಮಾಡಿದ್ದಾರೆ. ಇವತ್ತು ವಿಶ್ವೇಶ್ವರಯ್ಯನವರ ಡ್ರಾಯಿಂಗ್ಸನ್ನೆಲ್ಲಾ ಸಭೆಯ ಮುಂದಿಡಿ. ವಿಶ್ವೇಶ್ವರಯ್ಯನವರ ಕೆಲಸಕ್ಕೆ ಅನ್ಯಾಯ ಯಾರಿಗೋಸ್ಕರ ಮಾಡಿದಿರಿ? ಆಮೇಲೆ ಮತ್ತೊಂದು ಕೆಲಸ ಮಾಡಿದ್ದಾರೆ. ಲೈನಿಂಗ್ ಹಾಕುತ್ತೇವೆ ಎಂದು ಹಣ ಮಂಜೂರು ಮಾಡಿಸಿಕೊಂಡರು. ಎಲ್ಲೆಲ್ಲಿ ಲೈನಿಂಗ್ ಹಾಕಿದ್ದೀರಿ? ಎಲ್ಲಿ ಹಾಕಬೇಕೋ ಅಲ್ಲಿ ಹಾಕಿಲ್ಲ. ಇವರು ಲೈನಿಂಗ್ ಹಾಕಿದ ಮೇಲೆ ಪರಿಣತರು ಹೇಳುತ್ತಿದ್ದಾರೆ: ಅಲ್ಲಿ ಹಾಕಬಾರದಾಗಿತ್ತು, ಎಲ್ಲಿ ಹಾಕಬೇಕಾಗಿತ್ತೋ ಅಲ್ಲಿ ಹಾಕಿಲ್ಲ. ಮತ್ತೆ ಯಾರಿಗೆ ಅನುಕೂಲ ಮಾಡಿಕೊಡಬೇಕೆಂದು ಆಧುನೀಕರಣದ ಚಿಂತೆ ಮಾಡಿದರೋ ಅದು ಅನ್ಯಾಯವಾಗಿದೆ.

ಅಧ್ಯಕ್ಷರು: ನಾಗೇಗೌಡರು ಲೈನಿಂಗ್ ವಿಚಾರದಲ್ಲಿ ಪಟ್‌ಪಟ್ ಎಂದು ಮಾಡುವುದಿಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ನಂಜೇಗೌಡರು, ಯಡಿಯೂರಪ್ಪನವರೂ ನೋಡಿದ್ದಾರೆ. ಪ್ರಮೀಳಾ ಅವರೇ ನಿಮಗೆ ಡ್ರಾಯಿಂಗ್ಸ್ ಕೊಡುತ್ತೇನೆ. ಬೇಕಾದರೆ ಅವತ್ತು ಮಾಡದೇ ಇದ್ದರೆ ಇಡೀ ಕನ್ನಂಬಾಡಿಕಟ್ಟೆ ಒಡೆದುಹೋಗುತ್ತಿತ್ತು ಎಂದು ನಾನಲ್ಲ ಹೇಳಿರುವುದು, ರಿಸರ್ಚ್ ಸ್ಟೇಷನ್ ಇದೆ. ಮಹಾರಾಷ್ಟ್ರದವರು ಬಂದು ವಿಶ್ವೇಶ್ವರಯ್ಯ ನಾಲೆ ಆಧುನೀಕರಣದ ಕೆಲಸ ನೋಡಿ ಎಂತಹ ಮಾತು ಪ್ರೆಸ್‌ಗೆ ಹೇಳಿದ್ದಾರೆ ಹೋಗಿ ನೋಡಿಕೊಂಡು ಬನ್ನಿ. ನಂಜೇಗೌಡರು ನೋಡಿದ್ದಾರೆ, ಕೇಳಿ. ನೀವು ನೋಡಬೇಕು. ನೋಡದೇ ಮಾತನಾಡಿದರೆ ಏನು ಬಂತು ಮೇಡಂ? ದಯವಿಟ್ಟು ಬನ್ನಿ ಒಂದ್ಸಲ, ಕರೆದುಕೊಂಡು ಹೋಗುತ್ತೇನೆ. ಪುಟ್ಟಣ್ಣಯ್ಯನವರ ಕ್ಷೇತ್ರದಲ್ಲಿ ಲೈನಿಂಗ್ ಮೇಜರ್ ವರ್ಕ್ಸ್ ಆಗಿರುವುದು. ನಾನು ಮಾಡಿದೆ ಎಂದು ಅಲ್ಲ, ಮಹಾರಾಷ್ಟ್ರದವರು ನೋಡಿ ಹೇಳಿದ್ದಾರೆ ಎಷ್ಟು ಚೆನ್ನಾಗಿ ಮಾಡಿದ್ದಾರೆ ಎಂದು. ನೋಡಿ ಆಮೇಲೆ ಮಾತನಾಡಿದರೆ ಅದಕ್ಕೆ ಅರ್ಥ ಇರುತ್ತದೆ.

4.10 ಪಿಎಂ

ಶ್ರೀ ಬಿ.ಎಸ್.ಯಡಿಯೂರಪ್ಪ: ಪುಟ್ಟಣಯ್ಯನವರಿಗೆ ಅದೇನು ಮಾಟ ಮಾಡಿಸಿದ್ದಾರೋ ಅವರು ಇತ್ತೀಚೆಗೆ ಮಾತನಾಡುವುದನ್ನೇ ಬಿಟ್ಟಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ: ಛೆ.ಛೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಆ ಡ್ರಾಯಿಂಗ್ಸ್ ತರಿಸಿನೋಡಿ ನಾನು ಕೊಡುತ್ತೇನೆ.

ಶ್ರೀ ಎಚ್.ಎನ್.ನಂಜೇಗೌಡ: ಇದನ್ನು ಸುದ್ಯವ ಎಂದು ಹೇಳಬೇಕು. ಇವರೇನು ಅಲ್ಲಿ ಪೊಟರೆ ಬಿದ್ದಿದ್ದನ್ನು ಕಂಡುಹಿಡಿಯುವುದಕ್ಕೆ ಹೋಗಲಿಲ್ಲ. ಏನೋ ಅಯಾರ್ಜಿತವಾಗಿ ಎರಡು ತೂಬನ್ನು ಕೂಡ ಬ್ಲಾಕ್ ಮಾಡಬೇಕಾದ ಪರಿಸ್ಥಿತಿ ಬಂತು. ಬ್ಲಾಕ್ ಮಾಡಿದ ಪರಿಸ್ಥಿತಿಯಲ್ಲಿಯೇ ಇದು ಕೊರೆದುಕೊಂಡು ಕೊರೆದುಕೊಂಡು ಹೋಗಿ ಇದರ ಪಕ್ಕದಲ್ಲೇ ದೊಡ್ಡ ಹೊಂಡ ಆಳವಾಗಿ ಉದ್ದಕ್ಕೂ ಹೊರಟುಹೋಗಿ ಡ್ಯಾಮ್‌ಗೆ ಡೇಂಜರ್ ಆಗುವ ಪರಿಸ್ಥಿತಿ ಇತ್ತು. ಇದು we are lucky. it was accidentally indentified. ಅದರ ಮೇಲೆ ಕೆಲಸವನ್ನು ಮಾಡಿಸಿದ್ದಾರೆ. ಅದನ್ನು ಕೆಲಸ ಮಾಡಿಸಿದ್ದು ಅದು ಅವರಿಗೆ ಸೇರಿದ್ದು. ಇದು ಆಗಿರುವುದಂತೂ ನಿಜ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಮಾತನಾಡುತ್ತಾ ಮಾಟ ಮಾಡಿಸಿಬಿಟ್ಟದ್ದಾರೆ ಎಂದರು. ಏನು ನಾಗೇಗೌಡರು ಮಾಟ ಮಾಡಿಸಿದ್ದಾರೆಯೇ? ನಾನು ಸತ್ಯವನ್ನು ಹೇಳಬೇಕಾಗುತ್ತದೆ. ಸೊನ್ನೆಯಿಂದ 35 ನೇ ಕಿಲೋಮೀಟರ್‌ವರೆಗೂ ಲೈನಿಂಗ್ ವಿಷಯದಲ್ಲಿ ನಾನೇ 15 ಜನ ರೈತಸಂಘದ ಕಾರ್ಯಕರ್ತರನ್ನು ನೇಮಕಮಾಡಿ ಅದೆಲ್ಲಾ ಮುಗಿದಮೇಲೆ ಅವರಿಗೊಂದು ಸನ್ಮಾನವನ್ನು ಮಾಡಿಸಿದ್ದೇವೆ. ಸುಮಾರು ಜನರನ್ನು ಹೊಡೆದು ಓಡಿಸಿ ಇಂಜಿನಿಯರುಗಳಿಗೆಲ್ಲಾ ದೊಡ್ಡ ಗಲಾಟೆಯಾಗಿ ಅದನ್ನು ಸ್ವಲ್ಪ ಕಾಯ್ದುಕೊಳ್ಳುವ ಕೆಲಸವನ್ನು ಇದು ನಮ್ಮ ದುಡ್ಡು ಎಂದು ಹೇಳಿ ಕಾಯ್ದುಕೊಳ್ಳುವ ಕೆಲಸವನ್ನು ಮಾಡಿದ್ದೇವೆ. ಮುಂದೆ ಏನಾಗಿದೆಯೋ ಅದು ನಿಮಗೆ ಗೊತ್ತು. ಆದರೆ ನೀರಾವರಿ ಇಲಾಖೆಯಿಂದ..

ಶ್ರೀಮತಿ ಪ್ರಮಿಳಾ ನೇಸರ್ಗಿ: ತಾವು ಹೇಳಿದ್ದನ್ನು ಒಪ್ಪುತ್ತೇನೆ. ಅಲ್ಲಿಯವರೆಗೂ ಮಾಡಿಸಿದರು. ಮುಂದೆ ಮಾಡಿಲ್ಲ. ಮುಂದೆ ಮಾಡದೇ ಇರುವ ಪರಿಣಾಮ ಏನಾಗಿದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದು ಒಟ್ಟಾರೆ ಅದು ಈ ದಳ ಪಕ್ಷ ಇರಬಹುದು. ಇನ್ನೊಂದು ಕಾಂಗ್ರೆಸ್ ಪಕ್ಷ ಬರಬಹುದು. ಅದನ್ನು ತಡೆಯುವ ಸಾಮರ್ಥ್ಯವನ್ನು ಅತ್ಯಂತ ಗಂಭೀರವಾಗಿ ಮಾಡದಿದ್ದರೆ, ಸದನದಲ್ಲಿ ಯಾವ ಯಾವ ಮಟ್ಟದ ಪರ್ಸೆಂಟೇಜ್ ಹೋಗುತ್ತದೆ ಎಂಬುದನ್ನು ಎಕ್ಸ್‌ಪ್ಲೈನ್ ಮಾಡಿ: ಆದರೆ ಅದರ ಬಗ್ಗೆ ಏನಾದರೂ ಒಂದು ಮಸೂದೆಯನ್ನು ತಂದು ಏನಾದರೂ ಕಾಯ್ದೆ ಮಾಡದಿದ್ದರೆ ಈ ಹಣ ಏನು ನಾವು 30 ಪರ್‌ಸೆಂಟ್ ಬಜೆಟ್ ಎಂದು ಮಾಡಿದ್ದೇವೆ, 60 ಪರ್‌ಸೆಂಟ್ ಇಂಜಿನಿಯರ್ ಮತ್ತು ಕಂಟ್ರಾಕ್ಟರ್‌ಗೆ ಹೋಗುತ್ತದೆ. 40 ಪರ್‌ಸೆಂಟ್ ಮಾತ್ರ ಕೆಲಸ ಆಗುತ್ತದೆ. ಇದನ್ನು ಎಲ್ಲರೂ ತಡೆಯುವುದರಲ್ಲಿ ವಿಫಲರಾಗಿದ್ದೀರಿ. ಅದರಲ್ಲಿ ಬೇರೆ ಮಾತಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಮುಂದೆ ಹೇಳಿದರಲ್ಲಾ, ನೀವು ನಾಲೆ ಮೇಲೆ ಹೋಗಿ

ನೋಡಿಕೊಂಡು ಬನ್ನಿ. ಆ ಮುಂದಕ್ಕೆ ಮಾಡಬೇಕಾದರೆ 900 ಕಿಲೋ ಮೀಟರ್. It requires crores of rupees ಸಧ್ಯಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಕೆಪ್ಯಾಸಿಟಿಯನ್ನು ಎಲ್ಲಿ ಮೆಯಿನ್ ಕೆನಾಲ್‌ನಲ್ಲಿ ಇನ್‌ಕ್ರೀಸ್ ಮಾಡಿದ್ದೇವೆ. ಡಿಸ್‌ಛಾರ್ಜಿಂಗ್ ಕೆಪ್ಯಾಸಿಟಿಯನ್ನು ನಾವು ಒಂದು ಸಾವಿರ ಕ್ಯೂಸೆಕ್ಸ್‌ಗೆ ಮಾಡಿದ್ದೇವೆ, ಆ ಬಂಡ್ಸ್ ಸ್ಟ್ರೆಂಗ್ತ್ ತಡೆದುಕೊಳ್ಳಲಿ ಎಂದು ಹೇಳಿ ಲೈನಿಂಗನ್ನು ಪ್ರಪೋಸ್ ಮಾಡಿ ಟೆಕ್ನಿಕಲ್ ಅಡ್ವೈಸ್ ಮೇಲೆ ನಾವು ಮಾಡಿದ್ದೇವೆ. ಮುಂದಕ್ಕೆ ಮಾಡುವುದಕ್ಕಾಗುವುದಿಲ್ಲ. ಮಾಡಬೇಕಾದರೆ 900 ಕಿಲೋಮಿಟರ್ ವಿಶೇಷವಾಗಿ ಅದೊಂದು ಜೇಡರ ಬಲೆ ಇದ್ದ ಹಾಗೆ ಇದೆ. ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಬಸಪ್ಪ: ಮಾನ್ಯ ಅಧ್ಯಕ್ಷರೇ, ಈಗ ಅವರೇನು ಹೇಳಿದರು, ಒಂದು ಗುಂಡಿ ಬಿದ್ದಿತ್ತು. ಗುಂಡಿಯನ್ನು ಮುಚ್ಚದಿದ್ದರೆ ಡ್ಯಾಮ್‌ಗೆ ಡೇಂಜರ್ ಆಗುತ್ತಿತ್ತು ಎನ್ನುವ ಮಾತನ್ನು ಸನ್ಮಾನ್ಯ ನಾಗೇಗೌಡರು ಹೇಳಿದರು. ಆ ಗುಂಡಿ ಫೌಂಡೇಷನ್‌ಗಿಂತ ಕೆಳಗೆ ಹೋಗಿದ್ದ ಪಕ್ಷದಲ್ಲಿ ಡ್ಯಾಮ್‌ಗೆ ಅಪಾಯ ಬರುತ್ತದೆಯೇ ವಿನಹ if it is above foundation level, there will be no danger to the dam, because it is designed like that.

SRI K.N.NAGE GOWDA: These things have been decieded by the experts. An expert committee is there ಇದನ್ನು ಸರ್ಕಾರ ಡಿಸೈಡ್ ಮಾಡುವುದಲ್ಲ. ಎಕ್ಸ್‌ಪರ್ಟ್ಸ್ ಕಮಿಟಿ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಫೋರ್ಸ್ ಆಗಿ ನೀರು ಬರುತ್ತದೆ. ಆ ವಾಟರ್ ಸುರುಳಿ ಸುತ್ತಿದಂತೆ ಮತ್ತೆ ರಿವರ್ಸ್ ಹೊಡೆಯುತ್ತದೆ.

ಶ್ರೀ ಎಂ.ಬಸಪ್ಪ: ಅದು ಏನೂ ಆಗುವುದಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಬಸಪ್ಪನವರೇ, ನೀವು ಅದನ್ನು ನೋಡಿಲ್ಲ. ಟೆಕ್ನಿಕಲಿ ಡಿಸ್ಕಸ್ ಮಾಡಿ ಎಕ್ಸ್‌ಪರ್ಟ್ಸ್ ಕಮಿಟಿ ಅದನ್ನು ಫೈನಲೈಸ್ ಮಾಡಿದರು. ಅಷ್ಟು ಸುಲಭವಾಗಿ ಇಲ್ಲಿ ಕುಳಿತುಕೊಂಡು ಮಾತನಾಡುವ ವಿಚಾರ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಸ್ಟೋರೇಜ್‌ನಲ್ಲಿ ಹೇಗೆ ಸುಳಿ ಸುತ್ತುತ್ತದೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಾನು ಹೇಳುವುದು ಡ್ಯಾಮ್ ಒಳಗಲ್ಲ. ಡಿಸ್‌ಛಾರ್ಜ್ ಆಗುತ್ತದಲ್ಲಾ, ಡಿಸ್‌ಛಾರ್ಜ್ ಆದಂತೆ ಫೋರ್ಸ್ ಆಗಿ ನೀರು ಬಂದು ಮತ್ತೆ ಅದು ರಿವರ್ಸ್ ಹೋಗುತ್ತದೆ ಡಿಸ್‌ಛಾರ್ಜ್ ಜಾಗದಲ್ಲಿ ಅದು ಆಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ವಿಶ್ವೇಶ್ವರಯ್ಯನವರು ಅದಕ್ಕೆಲ್ಲಾ ಪ್ಲಾನ್ ಮಾಡಿ

ಹೇಗೆ ಕ್ರಿಸ್‌ಕ್ರಾಸ್ ಮಾಡಿ ಅದನ್ನು ಮಾಡಿದ್ದು. ಇವತ್ತು ಭದ್ರಾ ಪ್ರಾಜೆಕ್ಟ್‌ನಲ್ಲಿ ಆಗಿದೆಯಲ್ಲಾ, ಅದೇ ಪ್ಲಾನ್.....

SRI K.N.NAGE GOWDA: No, there, it is inside the dam. This is outside the dam. ಅದಕ್ಕೆ ನಾನು ಹೇಳಿದ್ದು. ಟೆಕ್ನಿಕಲ್ ಆಸ್ಪೆಕ್ಟ್‌ನ್ನು ದಯವಿಟ್ಟು ತಾವು ಒಂದು ಸಾರಿ ನೋಡಿ.

ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮಿನಿರವರು) ಅಧ್ಯಕ್ಷ ಪೀಠವನ್ನುಂಕರಿಸಿದರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನೀರಾವರಿ ಇಲಾಖೆಯಲ್ಲಿ ಹೊಂಡದ ಬಗ್ಗೆ ಹೇಳಿದರು.

ಶ್ರೀ ಎಂ.ಬಸಪ್ಪ: ಇರುವ ಡೇಂಜರನ್ನು ಹಿಂದುಗಡೆಯಿಂದ ನಾವು ಭದ್ರ ಮಾಡುವುದಕ್ಕಾಗುವುದಿಲ್ಲ. ಹಿಂದುಗಡೆ ಭದ್ರ ಮಾಡಿಕೊಳ್ಳುತ್ತೀರಿ. ಅದು ನಿಲ್ಲುತ್ತದೆಯೇ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಯಾವುದಾದರೂ ಒಬ್ಬ ಮೇಧಾವಿ ಈ ಪ್ರಪಂಚದಲ್ಲಿ ಬಹಳ ಮೇಧಾವಿ ಎನಿಸಿಕೊಂಡ ಸನ್ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯನವರು ಯಾವ ಪ್ಲಾನ್ ಇಟ್ಟು ಯಾವ ರೀತಿ ಮಾಡಿದ್ದರೋ ಅದಕ್ಕೇ ಧಕ್ಕೆ ತಂದಿದ್ದಾರೆ ಎಂದು ಹೇಳುತ್ತಿರುವುದು. ಅದನ್ನು ತರದೆ ಎಲ್ಲಾದರೂ ರಿಪೇರಿ ಮಾಡಿಸಿದ್ದರೆ ನಮಗೇನೂ ಆಗುತ್ತಿರಲಿಲ್ಲ. ಆದರೆ ಮಾಡಿದ್ದಾರೆ ಎಂದರೆ ಅವರು ಮಾಡಿದ ರೋಡ್ ಪ್ಲಾನ್ ಮತ್ತು ಡಿಸೈನ್ ಏನು ಇತ್ತಲ್ಲಾ ಇವರೇನು ಅದಕ್ಕೆ ತದ್ ವಿರುದ್ಧವಾಗಿ ಅವರು ಎಲ್ಲಿ ಕಲ್ಲು ಹಾಕಬೇಕೆಂದು ಹಾಕಿದ್ದರೋ ಅದರ ಮೇಲೆಲ್ಲಾ ಇವತ್ತು ಸಿಮೆಂಟ್ ಹಾಕಿ ಮುಚ್ಚಿದ್ದಾರೆ. ಇದು ಬಹಳ ದುಃಖ ತರುವ ವಿಷಯ. ತಾವು ಇಂಥ ವಿಷಯದಲ್ಲಿ ಅವರ ಪ್ಲಾನನ್ನು ತೆಗೆದುಕೊಳ್ಳಬೇಕಾಗಿತ್ತು. ಅವರು ಮಾಡಿದ ಪ್ಲಾನಿಗೆ ತದ್ವಿರುದ್ಧವಾಗಿ ಇವತ್ತು ಮಾಡಿರುವುದರಿಂದ ಮುಂದೆ ಏನಾಗುತ್ತದೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಲೈನಿಂಗನ್ನು ಎಲ್ಲಿ ಹಾಕಬೇಕೋ ಅಲ್ಲಿ ಬಿಟ್ಟು ಬೇರೆ ಕಡೆ ಹಾಕಿದರೆ ಪರಿಣಾಮ ಏನಾಗುತ್ತದೆ ಎಂದು ನಾವೂ ಕೂಡ ಮುಂದೆ ನೋಡಬೇಕಾಗಿದೆ. ಸನ್ಮಾನ್ಯ ನಾಗೇಗೌಡರು ಹೇಳುತ್ತಾರೆ. ಹೌದು, ನಮಗೆ ದುಡ್ಡು ಇಲ್ಲ ಎಂದು. ಆ ರೀತಿ ಇದ್ದ ಮೇಲೆ ಒಂದುಕಡೆ ಲೈನಿಂಗನ್ನು ಏಕೆ ಹಾಕಿದಿರಿ? ಇನ್ನೊಂದು ಕಡೆ ಏಕೆ ಹಾಕಿಲ್ಲ? ಅಲ್ಲಿ ಹಾಕದೇ ಇದ್ದ ಪರಿಣಾಮ ಮತ್ತೊಂದು ಕಡೆ ಲೈನಿಂಗ್ ಇಲ್ಲದೇ ಇರುವ ಕಡೆ ಅದು ಹೆಚ್ಚು ಆಘಾತ ಉಂಟುಮಾಡುತ್ತದೆ. ಮಾಡುವ ಹಾಗಿದ್ದರೆ ಒಂದೇ ಸಾರಿ ಲೈನನ್ನು ಮಾಡಿಕೊಂಡು ಬರಬೇಕಾಗಿತ್ತು. ಅದನ್ನು ಮಾಡಿಲ್ಲ. ದುಡ್ಡು ಇಲ್ಲ ಎಂದರೆ ಎಲ್ಲವನ್ನೂ ಒಟ್ಟಿಗೆ ಸ್ಯಾಂಕ್ಷನ್ ಮಾಡಿ ಮಾಡಬೇಕಾಗಿತ್ತು. ಒಂದು ಕಡೆ ಮಾಡಿ ಮತ್ತೊಂದು ಕಡೆ ಮಾಡದೇ ಇರುವುದರಿಂದ ಹೆಚ್ಚು ಲೈನ್ ಇರುವ ಕಡೆ ನೀರಿನ

ಪ್ರಮಾಣ ಹೆಚ್ಚು ಬಂದು ಲೈನ್ ಇಲ್ಲದೇ ಇರುವ ಕಡೆ ಹೆಚ್ಚಿನ ಪ್ರಮಾಣ ಉಂಟಾಗಿ ಅಲ್ಲಿ ಧಕ್ಕೆಯಾಗತಕ್ಕಂಥ ಪರಿಣಾಮವುಂಟಾಗುತ್ತದೆ. ಆಯಿತು, ನೀವು ಎಷ್ಟು ಕ್ಯೂಸೆಕ್ಸ್ ಕೊಡಬೇಕು ಎಂದು ಮಾಡಿದ್ದೀರಿ. ಯಾರಿಗೆ ಕೊಡಬೇಕೆಂದು ಮಾಡಿದ್ದೀರಿ? ಈಗ ಕೊಡುತ್ತಿದ್ದೀರಾ? ಲಿಂಕ್ ಕೆನಾಲ್ ಮಧ್ಯದಲ್ಲಿ ಎಲ್ಲಾ ಕಡೆ sub distributoryಗಳನ್ನು ಮಾಡಿದ್ದಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಲ್ಲವೇ? ಯಾವ ಜನಕ್ಕೋಸ್ಕರ. ಈ ನೀರು ಉಪಯೋಗವಾಗಬೇಕು ಎಂದು ನೀವು ಒಂದು ಲಿಂಕ್ ಕೆನಾಲ್‌ನ್ನು ಮಾಡುವುದಕ್ಕೆ ಹೋದರೋ ಅದರ ಮಧ್ಯ ಎಲ್ಲಾ sub distribtory ಗಳನ್ನು ಹಾಕಿ ಅಲ್ಲಿ ಅಷ್ಟು ನೀರು ಬರುತ್ತಿಲ್ಲವಲ್ಲಾ. ಅಲ್ಲೂ ಜನರಿಗೆ ಉಪಯೋಗವಾಗದೇ ಇರಬೇಕಾದರೆ ನೀವು ಇಷ್ಟು ಮಾಡಿ ಪ್ರಯೋಜನ ಏನಾಯಿತು? ಇದರ ಬಗ್ಗೆ ನೀವು ಯೋಚನೆ ಮಾಡಬೇಕಾಗಿತ್ತು. ನನಗೆ ಇವತ್ತು ಬಹಳ ಆಶ್ಚರ್ಯವಾಗುತ್ತದೆ. ಈ ಲಿಂಕ್, ಕೆನಾಲ್, ಟನಲ್ ಎಂದಾಗ ನನಗೊಂದು ಜ್ಞಾಪಕ ಬರುತ್ತದೆ. ಕೊಯಂಬತ್ತೂರಿನಲ್ಲಿ ಬಹಳ ಬಾಂಬ್ ಸ್ಫೋಟ ಎಲ್ಲಾ ಆಯಿತು. ಸರಣಿ ಬಾಂಬ್ ಆಯಿತು. ಎಲ್ಲಿಂದ ಬಂತು ಈ ಬಾಂಬ್‌ಗಳು. ಈ ಸಾಮಾನು ಜಿಲೆಟಿನಗಳು ಎಲ್ಲಿಂದ ಬಂತು? ನಾನು ಇವತ್ತು ನೇರ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ, ಈ ಕೊಯಂಬತ್ತೂರಿನಲ್ಲಿ ಬಾಂಬ್ ಸ್ಫೋಟ ಆಗುವುದಕ್ಕೆ ಕಾರಣವಾದ ಜಿಲಿಟಿನ್‌ಗಳು ಎಲ್ಲಿಂದ ಬಂತು? ನಾನು ಹೇಳುತ್ತಿದ್ದೇನೆ, ಜಿಲೆಟಿನ್‌ಗಳನ್ನು ಇವರ ಟನಲ್ ವರ್ಕ್‌ಗೆ ಎಂದು ಹೇಳಿ ಲೋಕೋಪಯೋಗಿ ಇಲಾಖೆಯಲ್ಲಿ ಏನು ತೆಗೆದುಕೊಂಡಿದ್ದರು, 1500 ಟನ್‌ಗಿಂತ ಹೆಚ್ಚಾಗಿ ಏನು ಸಪ್ಲೈ ಮಾಡಿದ್ದರು, ಅದನ್ನು ಉಪಯೋಗಿಸಬಾರದು ಎಂದು ಹೇಳಿ ಸರ್ಕಾರ ಆದೇಶವನ್ನು ಕೊಟ್ಟರು. ಉಪಯೋಗಿಸಬಾರದು ಎಂಥು ಹೇಳಿ ಆದೇಶವನ್ನು ಕೊಟ್ಟಮೇಲೆ ಅದೆಲ್ಲಾ ಏನಾಯಿತು? ಆ ಸ್ಫೋಟಕ ವಸ್ತುಗಳು ಅಲ್ಲೇ ಇರಬೇಕಲ್ಲಾ. ಇಲಾಖೆಯಲ್ಲಿ ಇಲ್ಲ. ಅದು ಎಲ್ಲಿ ಹೋಯಿತು? ಇಲಾಖೆಯಲ್ಲಿ ಎಂದರೆ ಏನು ಮಾಡುವುದು, purchased in the name of the Department 1500ಕ್ಕಿಂತ ಹೆಚ್ಚು ಟನ್. ಒಂದು ಟನ್ನಿನ ಬಗ್ಗೆ ನಾನು ಹೇಳುತ್ತಿದ್ದೇನೆ. ಇದನ್ನು ಬಿಟ್ಟು ಬೇರೆ ಬೇಕಾದಷ್ಟು ಕೊಂಡುಕೊಂಡಿದ್ದಾರೆ. ಆ ರೀತಿ ಕೊಂಡುಕೊಂಡಿದ್ದು ಇಲಾಖೆಯ ಗೋಡೌನ್‌ಗೆ ಹೋಯಿತು. ಅಲ್ಲಿಂದ ವರ್ಕ್‌ಗೆ ಇಷ್ಯೂ ಆಗಲಿಲ್ಲ. ಉಪಯೋಗವಾಗಿಲ್ಲ. ಆದರೆ ಇವರೇನು ಮಾಡಿದ್ದಾರೆ ಈಗ ಎಂದರೆ ಬಿಲ್ಲನ್ನು ಪೇಮೆಂಟ್ ಮಾಡಬೇಕಾದರೆ ಅದನ್ನು ಡಿಡಕ್ಟ್ ಮಾಡಿಕೊಂಡು ಕಂಟ್ರಾಕ್ಟರ್‌ಗೆ ಕೊಡುತ್ತೇವೆ ಎಂದು ಹೇಳಿ ಅದನ್ನು ಡಿಡಕ್ಟ್ ಮಾಡಿ ಬಿಲ್ ಪೇಮೆಂಟ್ ಮಾಡಿದ್ದಾರೆ. ಆ ಜಿಲೆಟಿನ್ ವಸ್ತುಗಳು ಎಲ್ಲಿ ಹೋಯಿತು? ಆ ವಸ್ತುಗಳು ಎಲ್ಲಿ ಹೋಯಿತು? ಅಲ್ಲಿರುವ ಕಂಟ್ರಾಕ್ಟರ್, ಅಲ್ಲಿರುವ ಇಂಜಿನಿಯರ್, ಮೈಸೂರಿನಲ್ಲಿರುವ ಒಬ್ಬ ಸ್ಫೋಟಕ ವ್ಯಾಪಾರಿಗೆ ಅಲ್ಲಿಗೆ ಕಳುಹಿಸಿ ಅವನಿಂದ ಕೊಯಂಬತ್ತೂರಿಗೆ ಹೋಗಿದೆ ಎಂದು ಹೇಳಿ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತಾರೋ ಇಲ್ಲವೋ? ನಾನು ಕೇಳುತ್ತಿದ್ದೇನೆ, ಟನಲ್ ವರ್ಕ್‌ಗೆ ಕೊಟ್ಟ

ಸ್ಫೋಟಕ ವಸ್ತುಗಳು ಸಾರ್ವಜನಿಕವಾಗಿ ಇರಬೇಕಾದ ವಸ್ತುಗಳು ಬೇರೆ ಒಬ್ಬ ಮನುಷ್ಯನ ಕೈಗೆ ಹೇಗೆ ಹೋಯಿತು. ಇದರಿಂದ ಎಷ್ಟು ಆಘಾತವಾಯಿತು? ಎಷ್ಟು ಜನರು ಸಾವು ನೋವಿಗೆ ಈಡಾದರು ಎಂದು ನಾನು ಕೇಳುತ್ತಿದ್ದೇನೆ. 1500 ಟನ್‌ಗಳ ಶಸ್ತ್ರಾಸ್ತ್ರ ವಸ್ತುಗಳನ್ನು ಬಾಂಬ್ ಹಾಕಲಿಕ್ಕೆ ಬಂದವನಿಗೆ ಮಾರಿದೆವಲ್ಲಾ, ಇಂಥ ಕೆಲಸವನ್ನು ತಾವು ಮಾಡುತ್ತಿದ್ದೀರಿ, ದೇಶದ್ರೋಹ ಮಾಡತಕ್ಕಂಥ ಕೆಲಸಗಳಿಗೆ, ಮಾಡುವವರಿಗೆ ಕುಮ್ಮಕ್ಕು ಕೊಡುತ್ತಿದ್ದೀರಿ, ದೇಶದ್ರೋಹಿಗಳಿಗೆ ಸಹಾಯ ಮಾಡುವ ಅಧಿಕಾರಿಗಳನ್ನು ನಿಮ್ಮ ಕಛೇರಿಯಲ್ಲಿ ಇಟ್ಟುಕೊಂಡಿದ್ದೀರಿ, ತಪ್ಪು ಮಾಡಿದಾಗ ಅವರನ್ನು ಶಿಕ್ಷೆ ಮಾಡದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಅವರಿಗೆ ನೀವು ಬೇನಾಮಿ ರೀತಿ ಮಾಡಿ ಅವರನ್ನು ಬಿಟ್ಟು ಕಳುಹಿಸಿ ಕೊಡುತ್ತೀರಿ ಇದು ಯಾವ ನ್ಯಾಯ? ನಾನು ಕೇಳುತ್ತಿದ್ದೇನೆ, ಸ್ಫೋಟಕವಸ್ತು ದೈವವಶಾತ್ ಸನ್ಮಾನ್ಯ ಅಧ್ವಾನಿಯವರ ಜೀವ ಅವತ್ತು ಬದುಕಿತು. ಸರಣಿಯಲ್ಲಿ ಏನೂ ಆಗಲಿಲ್ಲ. ಇವತ್ತು ಯಾವ ಪರಿಸ್ಥಿತಿಗೆ ಹೋಗುತ್ತಿತ್ತು ಎನ್ನುವುದನ್ನು ನೋಡಬೇಕಲ್ಲಾ ಇಡೀ ಬೆಂಗಳೂರಿನಿಂದ ಸ್ಫೋಟಕವಸ್ತುಗಳು 1991ನೇ ಇಸವಿಯಿಂದ ಈ ಸ್ಫೋಟಕ ವಸ್ತುಗಳು ಒಂದೂ ಕೂಡ ನಿಮ್ಮ ಇಲಾಖೆಯಲ್ಲಿ ಉಪಯೋಗವಾಗದೆ ಸುಮ್ಮನೆ ಅವರಿಗೆ ಪೇಮೆಂಟ್ ಮಾಡಿಕೊಂಡು ಎಲ್ಲೂ ಕೂಡ ಅದು ಖರ್ಚಾಗದೆ, ಉಪಯೋಗವಾಗದ ಹೋಗುತ್ತಿವೆ. ನಾನು ಕೇಳುತ್ತಿದ್ದೇನೆ, ಏತಕ್ಕೋಸ್ಕರ ಮಾಡುತ್ತಿದ್ದೀರಿ? ನೀವು ಶಾಫ್ಟ್‌ಗೆ ಮಾಡಿದ್ದೀರಲ್ಲಾ. ನಿಮ್ಮ ಬಿಲ್ಡಿಂಗ್‌ನಲ್ಲಿ, ಟನಲ್‌ನಲ್ಲಿ ಶಾಫ್ಟ್ ಕಟ್ಟಬೇಕೆಂದು ಹೇಳಿ ನಿಮ್ಮ ಎಸ್ಟಿಮೇಟ್‌ನಲ್ಲಿ ಸೇರಿಸಿದ್ದೀರಲ್ಲವೇ? ಟನಲ್ ಕಟ್ಟಬೇಕಾದರೆ ಸೇರಿಸಿದ್ದೀರಿ. ಕಟ್ಟದೇನೇ ಪೇಮೆಂಟ್ ಆಗಿದೆ, ಅದಕ್ಕೋಸ್ಕರ ನಾನು ಇಷ್ಟು ಕೇಳುತ್ತಿರುವುದು. ನಾನು ತಮಗೆ ದಾಖಲೆ ಕೊಡುತ್ತೇನೆ. ಇಲ್ಲಿ ತಾವೇನು ಮಾಡಿದ್ದೀರಿ ಎಂದರೆ ಅಲ್ಲಿ ಕೊಡಬೇಕಾದಂತಹ ಶಾಫ್ಟ್ ಕಟ್ಟೇ ಇಲ್ಲ ಎಂದು ಹೇಳಿ ನಿಮ್ಮ ಅಫಿಷಿಯಲ್ ರಿಪೋರ್ಟ್ ಕಾಲ್‌ಫಾರ್ ಮಾಡಿದ್ದಾರೆ. ಅದನ್ನು ತಾವು ತರಿಸಿ ನೋಡಿ. ಇದರ ಬಗ್ಗೆ ಸ್ಕ್ಯಾಡ್ ಆಗಿತ್ತು. ಅವರು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಎಸ್ಟಿಮೇಟ್‌ನಲ್ಲಿ ಶಾಫ್ಟ್‌ಗೆ ಹಣವನ್ನು ಕೂಡ ತಾವು ಇಟ್ಟಿದ್ದೀರಿ. ಶಾಫ್ಟ್ ಇಲ್ಲದೇ ಇವತ್ತು ಬಿಲ್ಡಿಂಗ್ ಕಟ್ಟಿರುವುದರಿಂದ ಮುಂದೆ ಸರಿಯಾಗಿ ನಿಲ್ಲತಕ್ಕ ಪ್ರಸಂಗ ಇಲ್ಲ ಎಂದು ವರದಿ ಕೊಟ್ಟಿದ್ದಾರೆ. ನೀವು ಬಾಗೂರು-ನವಿಲೆ ಮಾಡಿದ್ದೀರಲ್ಲಾ ಅಲ್ಲಿ ಜನರನ್ನು ಬದುಕಿಸಿದ್ದು ಹೇಗೆ? ಶಾಫ್ಟ್ ಹಾಕಿದ್ದರಿಂದ ಅದರ ಮುಖಾಂತರ ಬದುಕಿಸಿದಿರಿ. ಈ ಒಂದು ಪ್ರಕರಣದಲ್ಲಿ ನನ್ನ ಹತ್ತಿರ ರಿಪೋರ್ಟ್ ಇದೆ. ನಾನು ಕೊಡುತ್ತೇನೆ. ಇದರ ಉಪಯೋಗಕ್ಕೆ ಹಣ ಇಟ್ಟರು, ಶಾಫ್ಟ್ ಕಟ್ಟಲೇ ಇಲ್ಲ. ಆಮೇಲೆ ಏನು ಮಾಡಿದರು? ಕಟ್ಟದೇ ಇದ್ದಾಗ ದುಡ್ಡು ಹೆಚ್ಚಾಗಿ ಕೂಡಬೇಕಾದ ಪ್ರಸಂಗ ಬಂತು. ಬೇರೆ ನೆಪದಲ್ಲಿ ಶಾಫ್ಟ್‌ಗೆ ಎಂದು ಯಾವ ಹಣವನ್ನು ಇಟ್ಟಿದ್ದರು, ಆ ಹಣವನ್ನು ಕೊಟ್ಟುಬಿಟ್ಟರು. ಇವತ್ತಿನವರೆಗೂ ಅಲ್ಲಿ ಕಟ್ಟಡ ಕಟ್ಟೇ ಇಲ್ಲ, ಶಾಫ್ಟ್ ಕಟ್ಟೇ ಇಲ್ಲ. ಅದರ ಪರಿಣಾಮ ಏನಾಗಿದೆ ಎಂದರೆ ಒಂದು ವೇಳೆ ಅಲ್ಲಿ ಆತಂಕ ಆದರೆ, ಏನಾದರೂ ಅಲ್ಲಿ ಆಕ್ಸಿಡೆಂಟ್ ಆದರೆ ಜನಗಳನ್ನು ಬದುಕಿಸುವುದಕ್ಕೆ ಆಗುವುದಿಲ್ಲ.

ನೀವು ಬಾಗೂರು-ನವಿಲೆಯಲ್ಲಿ ಮಾಡಿದ್ದೀರಿ. ಮೊನ್ನೆ ಮಾಡಿದಂತಹ ಟನಲ್‌ನಲ್ಲಿ ನೀವು ಶಾಫ್ಟ್ ಮಾಡಿದ್ದೀರಿ. ನಾನು ಅಧ್ಯಕ್ಷರನ್ನು ಕೇಳಿದೆ, ಅವರು ಒಂದು ಗಂಟೆ ಮಾತನಾಡಿ ಎಂದು ಹೇಳಿದರು. ಇನ್ನೂ ಮಾತನಾಡುವವರು ಇದ್ದಾರೆ, ನಾನು ಅಡ್ಡಿ ಬರುವುದಿಲ್ಲ. ನಾನು ಏತಕ್ಕೇ ಹೇಳುತ್ತೇನೆಂದರೆ ಇಷ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಅದಕ್ಕೆ ಬೇಕಾದಂತಹ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಳ್ಳದೇ, ಯಾವುದು ಅಗತ್ಯವಾಗಿ ಕಟ್ಟಬೇಕಾಗಿತ್ತೋ, ಅದನ್ನು ಕಟ್ಟದೇ, ಕಟ್ಟದೇ ಇರುವವರಿಗೆ ಹಣ ಕೊಟ್ಟು, ಇದರ ಬಗ್ಗೆ ಸ್ಟ್ಯಾಡ್ ರಿಪೋರ್ಟ್ ಆಗಿದೆ. ಕಟ್ಟಿಲ್ಲ ಎಂದು ರಿಪೋರ್ಟ್ ಬಂದ ಮೇಲೆ ಇವತ್ತಿನವರೆಗೂ ಏನೂ ಆಕ್ಷನ್ ತೆಗದುಕೊಂಡಿಲ್ಲ. ನಿಮ್ಮ ಹತ್ತಿರ ಸ್ಟ್ಯಾಡ್ ರಿಪೋರ್ಟ್ ಇದೆ. ನಾನು ಮಾತನಾಡಿದ ನಂತರ ದಾಖಲೆ ಕೊಡುತ್ತೇನೆ. ಶಾಫ್ಟ್ ಕಟ್ಟದೇ ಹಣ ಪೇ ಮಾಡಿದ್ದಾರೆ. ಕಟ್ಟೂ ಇಲ್ಲ, ಪೇಮೆಂಟ್ ಸಹ ಆಗಿ ಹೋಗಿದೆ. ಶಾಫ್ಟ್ ಕಟ್ಟಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಈ ಹಣ ಯಾವುದಕ್ಕೋಸ್ಕರ ನಿಗದಿ ಮಾಡಿದ್ದರೋ, ಬೇರೆ ಹೆಸರಿನಲ್ಲಿ ಅದೇ ಹಣವನ್ನು ಕೊಟ್ಟಿದ್ದಾರೆ. ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಇಷ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಈ ರೀತಿ ಆಗಿದೆಯಲ್ಲಾ ಎಂದು ದುಃಖದಿಂದ ಈ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳಬೇಕೋ, ಆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರ. ಈ ಟನಲ್ ವರ್ಕ್ ಮಾಡುವಾಗ 21.10.94ರಲ್ಲಿ 'Lining work between 16,700 to 16866' ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ತಮಗೆ ರಿಪೋರ್ಟ್ ಕೊಟ್ಟಿದ್ದಾರೆ. ಅದು ಏನಾಯಿತು? "First to Second part pertaining to the tunnel work is not cancelled. But, the same has been returned to Sub-Division.. on the 21.10.94 on the ground that the agreement is not executed with the K.S.S.C. The agreement was later executed with the K.S.S.C. on 13.1.95." Date is relevant. " The work done subsequently during the period from 11/94 to 1/95 (January, 95) was also included in the IRA Bill and payment made during March, 95." ನಾನು ಕೇಳುತ್ತಿದ್ದೇನೆ. ಅಗ್ರಿಮೆಂಟೇ ಆಗಿಲ್ಲ, ಬಿಲ್ಲೂ ಇಲ್ಲ, Work was done earlier. ಆ ಬಿಲ್ಲ್ ಅನ್ನು ತಾವು ಕೊಟ್ಟಿದ್ದೀರಿ. ತಾವು ಇದರ ಬಗ್ಗೆ ಮಾಹಿತಿ ತರಿಸಿಕೊಳ್ಳಬೇಕು. ಮಾರ್ಚ್‌ನಲ್ಲಿ ಕೊಟ್ಟಿದ್ದೀರಿ. ಹಳೆ ಬಿಲ್ಸ್, ಲೇಟರ್ ಅಗ್ರಿಮೆಂಟ್ ಇದರಲ್ಲಿ ಏನು ಮಾಡಿದ್ದಾರೆ? ಒರಿಜಿನಲ್ ಅಗ್ರಿಮೆಂಟ್‌ನಲ್ಲಿ 12.6 ಲಕ್ಷಕ್ಕೆ ಅಗ್ರಿಮೆಂಟ್ ಇದ್ದದ್ದು. ಇವರು ಏನು ಮಾಡಿದರು? ಬಿಲ್ಲೆ ಕಳೆದು ಹೋಯಿತು ಎಂದು ಹೇಳಿದರು. ಬಿಲ್ಲು

ಕಳೆದು ಹೋಯಿತೆಂದು ಹೇಳಿ ಎಸ್.ಆರ್, ಜಾಸ್ತಿ ಹಾಕಬೇಕಲ್ಲಾ. ಕಳೆದು ಹೋಯಿತೆಂದು ಹೇಳಿ ಬೇರೆ ಬಿಲ್ಲ್ ಕೊಟ್ಟಿದ್ದಾರೆ? ಎಷ್ಟು ಕೊಟ್ಟಿದ್ದಾರೆ? 77 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಯಾವ ಕೆಲಸ 12.6 ಲಕ್ಷಕ್ಕೆ ಅಗ್ರಿಮೆಂಟ್ ಆಗಿತ್ತೋ ಆ ಬಿಲ್ಲ್ ಅನ್ನು ಕಳೆದು ಹೋಗಿದೆ ಎಂದು ನಿಮ್ಮ ಅಧಿಕಾರಿಗಳು, ಕಂಟ್ರಾಕ್ಟರ್ ಎಲ್ಲರೂ ಕೂಡ ಶಾಮೀಲಾಗಿ ಆ ಬಿಲ್ಲ್ ಅನ್ನು ಹಿಂದಕ್ಕೆ ಇಟ್ಟು, ಈಗ ಹೊಸ ಬಿಲ್ಲ್ ತಯಾರು ಮಾಡಿ, ಲೇಟರ್ ಎಸ್.ಆರ್. ಅನ್ನು ಇನ್‌ಕ್ಲೂಡ್ ಮಾಡಿದರು. ಇನ್‌ಕ್ಲೂಡ್ ಮಾಡಿ 1995ರ ಮಾರ್ಚ್‌ನಲ್ಲಿ 77 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ನಾನು ಹೇಳಬೇಕು ಎಂದರೆ ಈ ತರಹ ಪೇಮೆಂಟ್ ಕೋಟ್ಯಾಂತರ ರೂಪಾಯಿ ಆಗಿದೆ, ಒಂದಲ್ಲ ಎರಡಲ್ಲ. ಒಂದೋ ಅಥವಾ ಎರಡೋ ಐಟಂ ಆಗಿದ್ದರೆ ನಾನು ಸುಮ್ಮನೆ ಇರುತ್ತಿದ್ದೆ. ಈ ರೀತಿ ಲಕ್ಷಾಂತರ ರೂಪಾಯಿ ಆಗಿರುವಾಗ ಏನು ಮಾಡಬೇಕು? ಈ ಇಲಾಖೆ ಇದೆಯೇ ಅಥವಾ ಕಣ್ಣಿದ್ದೂ ಕೂಡ ಕುರುಡಾಗಿದೆಯೋ ಎನ್ನುವುದನ್ನು ನಾವು ಯೋಚನೆ ಮಾಡಬೇಕಲ್ಲಾ. ಇಂತಹ ಡಿಪಾರ್ಟ್‌ಮೆಂಟ್‌ನಲ್ಲಿ ನಾವು ನಿಮ್ಮಲ್ಲಿ ಭರವಸೆ ಇಡಬೇಕಾ? ನಿಮ್ಮಲ್ಲಿ ವಿಶ್ವಾಸ ಇಡಬೇಕಾ? ನಿಮ್ಮನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕಾ? ಇಂತಹ ಬಿಲ್‌ಗಳನ್ನು ಸೃಷ್ಟಿಮಾಡಿ ಬರತಕ್ಕ ಕಂಟ್ರಾಕ್ಟರ್‌ಗಳಿಗೆ ದುಡ್ಡು ಕೊಡುವುದಕ್ಕೋಸ್ಕರ, ಶಾಮೀಲಾಗುವುದಕ್ಕೋಸ್ಕರ ನಾವು ನಿಮ್ಮಲ್ಲಿ ವಿಶ್ವಾಸ ಇಡಬೇಕಾ ಎನ್ನತಕ್ಕ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಾವು ಅವಕಾಶ ಕೊಟ್ಟರೆ ಇನ್ನು ಕೆಲವು ಮಾತುಗಳನ್ನು ಹೇಳುತ್ತೇನೆ.

ಉಪಾಧ್ಯಕ್ಷರು: ತಾವು ಮುಗಿಸಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇನ್ನು ಎರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬೆಂಗಳೂರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳೆಲ್ಲಾ ಮುಳುಗಿ ಹೋಗುತ್ತಿದೆ. ಮಾಲೂರಿನಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಕಟ್ಟಿದಿರಿ. ಅಲ್ಲಿ ಯಾರೂ ಕೇಳುವವರೇ ಇಲ್ಲ. ಹಾಸನದಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಎಲ್ಲಾ ಲೇ ಔಟ್ ಮಾಡಿ ಕಟ್ಟಿದಿರಿ. ಅಲ್ಲಿ ಎರಡೇ ಎರಡು ಕಾರ್ಖಾನೆ, ದುಃಖವಾಗುತ್ತಿದೆ, ಅದೂ ನಡೆಯುತ್ತಿಲ್ಲ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಜಮೀನನ್ನು ಅಕ್ವೈರ್ ಮಾಡಿ, ಅಲ್ಲಿ ಇವತ್ತು ಇಂಡಸ್ಟ್ರೀಯಲ್ ಎಸ್ಟೇಟ್ ಮಾಡಿ ಇಂಡಸ್ಟ್ರಿಗಳೇ ಇಲ್ಲ. ಅಲ್ಲಿ ಯಾರು ಕೈಗಾರಿಕಾ ವಸಾಹತು ಕಟ್ಟಬೇಕೆಂದು ಹೋಗುತ್ತಿದ್ದರೋ ಅವರೆಲ್ಲಾ ಇವತ್ತು ವಾಪಸ್ ಬರುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇಂಡಸ್ಟ್ರೀ ಡೆವಲಪ್ ಆಗುತ್ತಿಲ್ಲ. ರೈತರಿಗೆ ಆಗಬೇಕಾದಂತಹ ಒಂದೂ ಕೆಲಸ ಆಗುತ್ತಿಲ್ಲ. ಹೋಗಲಿ ಮಹಿಳೆಯರಿಗಾದರೂ ಏನಾದರೂ ಕೆಲಸ ಆಗುತ್ತಿದೆಯಾ? ಸ್ಟೆಪ್ ಪ್ರಾಜೆಕ್ಟ್ ಬಗ್ಗೆ ನಾನು ಕೇಳುತ್ತಿದ್ದೇನೆ. ಸ್ಟೆಪ್ ಸ್ಕೀಮ್‌ನಲ್ಲಿ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ. ಗುಜರಾತ್, ಬಿಹಾರ್, ಒರಿಸ್ಸಾದವರೆಲ್ಲಾ ಹಣವನ್ನು ಉಪಯೋಗಿಸಿ ಕೊಂಡಿದ್ದಾರೆ; ಎಂಟು ವರ್ಷದಿಂದ ಸ್ಕೀಮ್ ನಡೆಯುತ್ತಿದೆ. ಕರ್ನಾಟಕದಲ್ಲಿ ಈ

ಹಣವನ್ನು ತೆಗದುಕೊಂಡೇ ಇರಲಿಲ್ಲ. ಮೊನ್ನೆ ತೆಗೆದುಕೊಂಡಿದ್ದಾರೆ. ಸ್ಟೆಪ್ ಎನ್ನತಕ್ಕ ಏಡ್‌ನಲ್ಲಿ to uplift women in self-employment schemeನಲ್ಲಿ ಅವರು ಗೌರವಯುತವಾಗಿ ಜೀವನ ಮಾಡಲಿ ಎಂದು ಹೇಳಿ 20 ಸಾವಿರ ಮಹಿಳೆಯರಿಗೆ ಅದರಿಂದ ಅನುಕೂಲ ಆಗಬೇಕೆಂದು ಹೇಳಿ 20 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದೆ. ಏನು ಮಾಡಿದ್ದೀರಿ? ಕೆಎಂಎಫ್‌ಗೆ ಕೊಟ್ಟಿರಿ. ಹತ್ತು ಕೋಟಿ ರೂಪಾಯಿ ಕೆಎಂಎಫ್‌ಗೆ ಕೊಟ್ಟಿದ್ದೀರಿ. ನಾನು ಕೇಳುತ್ತಿದ್ದೇನೆ. ಹತ್ತು ಕೋಟಿ ರೂಪಾಯಿಯನ್ನು ಆಯಿಲ್ ಫೆಡರೇಷನ್‌ಗೆ ಕೊಟ್ಟಿರಿ. ಕೆಎಂಎಫ್‌ಗೆ ಕೊಟ್ಟಿರಿ. ಇವತ್ತಿನವರೆಗೂ ಏನೂ ಕೆಲಸ ಆಗಿಲ್ಲ. ಇನ್ಯಾಗುರೇಷನ್ ಬಿಲ್ಡಿಂಗ್‌ಗೆ ನೀವು ಗಜೇಂದ್ರನ್ ಎಂಬುವ ಒಬ್ಬ ಅಧಿಕಾರಿಯನ್ನು ತಂದು ಇಟ್ಟುಕೊಂಡಿದ್ದೀರಿ. ಅವರೇನು ಕೆಲಸ ಮಾಡುತ್ತಾರೆ ಎಂದರೆ ನೀವ್ಯಾರು ಏನು ತೆಗೆದುಕೊಂಡು ಹೋದರೂ ಸೈನ್ ಹಾಕುವುದನ್ನು ಬಿಟ್ಟು ಅನ್ಯಾಯ ಆಗುತ್ತಿರುವುದನ್ನು ನೋಡುವುದನ್ನು ಬಿಟ್ಟು, ಸೀನಿಯಾರಿಟಿ ಪ್ರಕಾರ ಎಲ್ಲಾ ಓವರ್‌ಲುಕ್ ಮಾಡಿ ತಮಗೆ ಬೇಕು ಬೇಕಾದವರಿಗೆ ಪ್ರಮೋಷನ್ ಕೊಡುತ್ತಿದ್ದಾರೆ. ಹತ್ತು ಕೋಟಿ ರೂಪಾಯಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣದಲ್ಲಿ ಇವತ್ತಿನವರೆಗೂ ಏನೂ ಕೆಲಸ ಆಗಿಲ್ಲ. ಇನ್ನೂ ಮೀನಾ ಮೇಷ ಮಾಡುತ್ತಿದ್ದಾರೆ. ಪ್ರಾಜೆಕ್ಟ್ ತೆಗೆದುಕೊಂಡು ಹೋಗಿಟ್ಟರೆ ಅಪ್ರೂವ್ ಆಗಿಲ್ಲ. ಎಂಟು ವರ್ಷದಿಂದ ಎಲ್ಲಾ ಕಡೆ ಅಪ್ರೂವ್ ಆಗಿ ಮಹಿಳೆಯರಿಗೆಲ್ಲಾ ಅನುಕೂಲ ಮಾಡುತ್ತಿದ್ದರೆ, ನಮ್ಮ ಸರ್ಕಾರಕ್ಕೆ ಹಣ ಬಂದರೂ ಹೇಗೆ ಉಪಯೋಗಿಸಬೇಕು ಎಂಬುದು ಗೊತ್ತಿಲ್ಲ. ಅದನ್ನು ಹೇಗೆ ಜನಗಳಿಗೆ ತಲುಪಿಸಬೇಕು ಎಂಬುದು ಗೊತ್ತಿಲ್ಲ. ಮಹಿಳೆಯರಿಗೆ ಕೊಟ್ಟಿದ್ದಂತಹ ಹಣ ಇದುವರೆಗೂ ಉಪಯೋಗ ಆಗಿಲ್ಲ ಎಂದು ಹೇಳಿದೆ. ಮಹಿಳೆಯರಿಗೆ ಇಲ್ಲ, ರೈತರಿಗೆ ಇಲ್ಲ. ಸರ್ಕಾರ ಈ ರೀತಿ. ಕಟ್ಟಿದ ಬಿಲ್ಡಿಂಗ್‌ಗಳು ಬಿದ್ದು ಹೋಗುತ್ತದೆ. ಹೋಗಲಿ, ಮನುಷ್ಯರಿಗಂತೂ ಏನೂ ಇಲ್ಲ. ಪ್ರಾಣಿಗಳಿಗಾದರೂ ಏನಾದರೂ ಇದೆಯಾ? ತಾವು ಇವತ್ತು ಪೇಪರ್ ನೋಡಿದ್ದೀರಿ. ಕುರಿಗಳಿಗೂ ಕೂಡ ರಕ್ಷಣೆ ಈ ಸರ್ಕಾರದಲ್ಲಿಲ್ಲ. ಕುರಿಮರಿಗಳಿಗೆ ರಕ್ಷಣೆ ಇಲ್ಲ, ಇನ್ನು ಮನುಷ್ಯರಿಗೆಲ್ಲಿ ಬಂತು? ಆದ್ದರಿಂದ ಈ ಸರ್ಕಾರ ಇನ್ನು ಒಂದು ನಿಮಿಷ ಕೂಡ ಇರಕೂಡದು ಎಂದು ತಮ್ಮ ಮುಖಾಂತರ ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಉಪಾಧ್ಯಕ್ಷರೆ, ಇವೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಏನು ಮಂಡಿಸಿದ್ದಾರೆ, ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರಾರಂಭದಲ್ಲಿ ಇದಕ್ಕೆ ಪ್ರೇರೇಪಣೆ ದೊರೆತದ್ದೇ ಭಿನ್ನಮತೀಯ ಶಾಸಕರ ಚಟುವಟಿಕೆಯಿಂದ ಎನ್ನುವ ಮಾತನ್ನು ಹೇಳಲು ಇಚ್ಛಿಸುತ್ತಾ, ಅವರು

ಅರ್ಪಿಸಿದ್ದ ಬಿನ್ನವತ್ತಳೆಯಲ್ಲಿ ಪ್ರಮುಖವಾದ ಮೂರ್ನಾಲ್ಕು ವಿಚಾರಗಳನ್ನು ಪ್ರಸ್ತಾಪಿಸಿದ್ದರು. ಅವು ಯಾವುವೆಂದರೆ, ಹಾಲಿನ ದರ ಏರಿಕೆ, ಸಾರಿಗೆ ದರ ಏರಿಕೆ, ಕುಡಿಯುವ ನೀರಿನ ದರ ಏರಿಕೆ ಹಾಗೂ ವಿದ್ಯುಚ್ಛಕ್ತಿ ದರ ಏರಿಕೆ. ಇದಕ್ಕಿಂತ ಪ್ರಾಮುಖ್ಯವಾದ ಒಂದು ವಿಚಾರವೆಂದರೆ, ಐ.ಪಿ.ಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸತಕ್ಕಂಥ ವಿಷಯ. ಇದು ಬಹಳ ಸೂಕ್ಷ್ಮವಾದ ವಿಚಾರವೆನ್ನುವುದನ್ನು ಅವರ ಪಕ್ಷದವರೇ ಅರ್ಥೈಸಿಕೊಂಡು ಇವ್ವೊತ್ತು ತಮ್ಮ ಭಿನ್ನಮತೀಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ವಿಚಾರ ಎಷ್ಟು ಸೂಕ್ಷ್ಮವಾದುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೆ.ಇ.ಬಿ. ಮಾಹಿತಿ ಪ್ರಕಾರ ಇವ್ವೊತ್ತು ರಾಜ್ಯದಲ್ಲಿ ಒಟ್ಟು 13 ಲಕ್ಷ ಐ.ಪಿ. ಸೆಟ್ಟುಗಳಿದ್ದು, ಅವುಗಲಲ್ಲಿ 11 ಲಕ್ಷ ಅಧಿಕೃತ ಹಾಗೂ 2 ಲಕ್ಷ ಅನಧಿಕೃತವಾಗಿರುವ ನೀರಾವರಿ ಪಂಪುಸೆಟ್ಟುಗಳಿವೆ. ದಿನಾಂಕ 1.1.96ರಿಂದ ಹೊಸದಾಗಿ ನೀರಾವರಿ ಪಂಪುಸೆಟ್ಟುಗಳಿಗೆ ಏನು ಸರ್ವಿಸ್ ಮಾಡುತ್ತಾರೆ, ಮೀಟರುಗಳನ್ನು ಅಳವಡಿಸುವುದಕ್ಕೆ ಕೆ.ಇ.ಬಿ.ಯವರು ರೈತರುಗಳಿಂದ ರೂ.960.00ಗಳನ್ನು ತೆಗೆದುಕೊಂಡು ಸದರಿ ಸೌಲಭ್ಯ ಒದಗಿಸುವ ವ್ಯವಸ್ಥೆಯನ್ನು ಪ್ರಾರಂಭದಲ್ಲಿ ಮಾಡಿಕೊಂಡರು. ನಂತರ ದಿನಾಂಕ 18.5.98ರಲ್ಲಿ ಒಂದು ಆದೇಶವನ್ನು ಹೊರಡಿಸುವುದರ ಮೂಲಕ ಪ್ಲಾಂಟೇಷನ್ ಏರಿಯಾ ಎನ್ನುವುದೇನಿದೆ, ಆ ಭಾಗದ ಹನ್ನೊಂದು ಕೆ.ಇ.ಬಿ. ಡಿವಿಜನ್‌ಗಳ ಮೂಲಕ ಮೀಟರುಗಳನ್ನು ಅಳವಡಿಸುವ ಕಾರ್ಯ ಪ್ರಾರಂಭಿಸಿದರು. ಇದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಂಥ ಸಮಯದಲ್ಲಿ ಐ.ಪಿ.ಸೆಟ್ಟುಗಳಿಗೆ ಅಳವಡಿಸಲಾಗಿದ್ದ ವಿದ್ಯುತ್ ಮೀಟರುಗಳನ್ನು ತೆಗೆಯತಕ್ಕಂಥ ಕೆಲಸ ಮಾಡಿದೆವು. ಎರಡನೆಯದಾಗಿ, ಮೀಟರುಗಳನ್ನು ತೆಗೆದು ಹಾಕಿದ ಬಳಿಕ ಕೃಷಿ ಉದ್ದೇಶಕ್ಕಾಗಿ ರೈತ ಹತ್ತು ಹೆಚ್.ಪಿ.ಯವರೆಗೆ ಎಷ್ಟು ವಿದ್ಯುತ್ ಸೌಲಭ್ಯ ಉಪಯೋಗಿಸಿಕೊಳ್ಳುತ್ತಾನೋ ಅದಕ್ಕೆ ಆತ ಯಾವುದೇ ಹಣವನ್ನು ಕಟ್ಟುವ ಹಾಗಿಲ್ಲವೆಂದು ಆದೇಶ ಹೊರಡಿಸುವುದರ ಮೂಲಕ ರೈತರಿಗೆ ವರದಾನ ನೀಡಿತ್ತು. ಆದರೆ, ಇವರ (ಜನತಾದಳ) ಸರ್ಕಾರ ಅಧಿಕಾರಕ್ಕೆ ಬಂದ ನಂತರ ಏನು ಮಾಡಿತೆಂದರೆ, ಹೊಸ ಬಾವಿಗಳಿಗೆ ಮೀಟರ್‌ಗಳನ್ನು ಅಳವಡಿಸಲು ಪ್ರಾರಂಭಿಸಿ, ಹಿಂದಿನ ಸರ್ಕಾರವಿದ್ದಾಗ ಮೀಟರ್‌ಗಳನ್ನು ತೆಗೆದಿದ್ದಂಥ ಹಳೆಯ ಬಾವಿಗಳಿಗೂ ಮೀಟರ್‌ಗಳನ್ನು ಅಳವಡಿಸುವುದಕ್ಕೆ ಪ್ರಾರಂಭಿಸಿದರು. ಅದೂ ವಿಶೇಷವಾಗಿ ಎಲೆಕ್ಟ್ರಾನಿಕ್ ಮೀಟರುಗಳನ್ನು ಅಳವಡಿಸಬೇಕೆಂಬ ಪ್ರಕ್ರಿಯೆ ಶುರುವಾಯಿತು. ಇವ್ವೊತ್ತು ಇದನ್ನು ಬಹಳ ಸೂಕ್ಷ್ಮವಾಗಿ ಯೋಚಿಸಬೇಕಾದ ವಿಚಾರವಾಗಿದೆ. ನಮ್ಮ ಸದಸ್ಯ ಸ್ನೇಹಿತರು ಮೀಟರುಗಳನ್ನು ಅಳವಡಿಸುವ ವಿಚಾರವಾಗಿ ಮಾತನಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನುದ್ದೇಶಿಸಿ ಹೆಡ್ ಮಾಸ್ಟರ್ ಮಾತನಾಡುವಂತೆ ಮಾತನಾಡುತ್ತಿದ್ದೀರಲ್ಲಾ ಎಂದು ಹೇಳಿದರು. ಐ.ಪಿ.ಸೆಟ್ಟುಗಳಿಗೆ ವಿದ್ಯುತ್ ಸೌಲಭ್ಯವನ್ನು ಪುಕ್ಕಟೆಯಾಗಿ ಕೊಡುವ ಪ್ರಾರಂಭದಲ್ಲಿ ನೂರು

ರೂಪಾಯಿಗಳಂತೆ ದರ ನಿಗದಿಪಡಿಸಿ, ನಂತರ ಮುನ್ನೂರು ರೂಪಾಯಿಗಳೆಂದು, ಮತ್ತೊಂದು ಹಂತದಲ್ಲಿ ಇನ್ನೊಂದು ಆದೇಶ ಹೊರಡಿಸಿ ಒಂದು ಹೆಚ್.ಪಿ.ಗೆ ಪ್ಲಾಂಟೇಷನ್ ಕ್ರಾಪ್‌ಗೆ ಐದು ನೂರು ರೂಪಾಯಿಗಳಂತೆ ದರ ನಿಗದಿಪಡಿಸಿದರು. ಇದರ ಬಗ್ಗೆ ಸ್ವಲ್ಪ ಗಲಾಟೆಯಾದ ಬಳಿಕ ನಿಗದಿಪಡಿಸಲಾಗಿದ್ದ ಐದುನೂರು ರೂಪಾಯಿಗಳನ್ನು ಕಡಿಮೆಗೊಳಿಸಿ ಒಂದು ಹೆಚ್.ಪಿ.ಗೆ ವರ್ಷಕ್ಕೆ ಮುನ್ನೂರು ರೂಪಾಯಿಗಳಂತೆ ನಿಗದಿಪಡಿಸಿದಾಗ ರೈತರಲ್ಲಿ ಒಂದು ರೀತಿಯ ಆತಂಕದ ವಾತಾವರಣ ನಿರ್ಮಾಣವಾಗಲು ಶುರುವಾಯಿತು. ಇದರ ಜೊತೆಗೆ ಐ.ಪಿ.ಸೆಟ್ಟುಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸುವ ವ್ಯವಸ್ಥೆ ಈ ಸರ್ಕಾರದಿಂದ ಪ್ರಾರಂಭವಾಯಿತೋ ರೈತರುಗಳು ತಂತಮ್ಮ ಕ್ಷೇತ್ರದ ಶಾಸಕರುಗಳ ಮೇಲೆ ಮುಗಿಬೀಳಲು ಪ್ರಾರಂಭಿಸಿದರು. ಕೆಲವು ಶಾಸಕರಿಗೆ ಅರ್ಥವಾಯಿತು. ಈ ಪ್ರಕ್ರಿಯೆ ಪ್ರಾರಂಭವಾದರೆ ಬಹುಶಃ ಮುಂದಿನ ಚುನಾವಣೆಯನ್ನು ಎದುರಿಸುವುದಕ್ಕೆ ನಮಗೆ ಕಷ್ಟವಾಗುತ್ತದೆ, ರಾಜ್ಯದಲ್ಲಿ ಒಟ್ಟು 13 ಲಕ್ಷ ಬಾವಿಗಳಿದ್ದು, ಒಂದೊಂದು ಕ್ಷೇತ್ರದಲ್ಲೂ 6-7-8-10 ಸಾವಿರದವರೆಗೆ ಐ.ಪಿ.ಸೆಟ್ಟುಗಳಿದ್ದು, ಐ.ಪಿ.ಸೆಟ್ಟುಗಳನ್ನು ಹೊಂದಿರುವ ಅಷ್ಟೂ ರೈತರುಗಳನ್ನು ವಿರೋಧ ಮಾಡಿಕೊಂಡರೆ ಮುಂದಿನ ಚುನಾವಣೆಯನ್ನು ನಿಜವಾಗಿಯೂ ಎದುರಿಸುವುದಕ್ಕೆ ಅವಕಾಶವಿದೆಯೇ ಎಂದು ಭಾವಿಸಿ ಭಿನ್ನಮತೀಯ ಶಾಸಕರುಗಳು ಅರ್ಥಮಾಡಿಕೊಳ್ಳುವುದರ ಮೂಲಕ ಇವೊತ್ತು ರಾಜ್ಯದಲ್ಲಿ ಭಿನ್ನಮತೀಯ ಚಟುವಟಿಕೆಗಳಿಗೆ ಚಾಲನೆ ನೀಡಿರುವ ಪ್ರಕ್ರಿಯೆ ಪ್ರಾರಂಭವಾಯಿತೆಂದು ಹೇಳುತ್ತೇನೆ. ಮೊನ್ನೆ ದಿವಸ ನಮ್ಮ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿರುವ ಧರ್ಮಸಿಂಗ್‌ರವರು ಸದನದಲ್ಲಿ ಮಾತನಾಡುತ್ತಾ ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಜನತಾ ದಳದವರಿಗೆ ಎಷ್ಟು ಲಕ್ಷ ವೋಟುಗಳು ಬಂತೆಂದು ಹೇಳುತ್ತಾ, ಸುಮಾರು 67 ಲಕ್ಷ ವೋಟುಗಳು ಬಂದಿದೆಯೆಂದು ಅಂಕಿ-ಅಂಶಗಳನ್ನು ಸರಿಪಡಿಸುವುದರ ಮೂಲಕ ತಿಳಿಸಿದರು. ಈಗ ರಾಜ್ಯದಲ್ಲಿರುವ 13 ಲಕ್ಷ ಬಾವಿಗಳಿಗೆ ಮೀಟರುಗಳನ್ನು ಅಳವಡಿಸುವ ವ್ಯವಸ್ಥೆ ಮಾಡಿದರೆ ಇವರ ಮೇಲೆ ಎಷ್ಟು ಪರಿಣಾಮ ಬೀರುತ್ತದೆ ಎಂದರೆ 13ಲಕ್ಷಕ್ಕೆ ಕನಿಷ್ಟ ನಾಲ್ಕು ಓಟುಗಳಂತೆ ಲೆಕ್ಕ ಹಾಕಿದರೆ ಎಷ್ಟಾಯಿತು? ಆದುದರಿಂದ ಯಾವುದೇ ಕಾರಣಕ್ಕೂ ಬಾವಿಗಳಿಗೆ ಮೀಟರುಗಳನ್ನು ಅಳವಡಿಸಿದಲ್ಲಿ ರೈತರುಗಳಿಂದ ಇವರು (ಸರ್ಕಾರ) ವೋಟು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಐ.ಪಿ.ಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸುವ ಮೂಲಕ ದರ ನಿಗದಿಪಡಿಸಿ ತಪ್ಪು ಮಾಡಿದ್ದೇವೆಂಬ ಅನಿಸಿಕೆ ಇವರಿಗೆ ಬಂದಿರಬಹುದೆಂದು ನಾನಾದರೂ ಭಾವಿಸಿದ್ದೇನೆ. ವ್ಯತ್ಯಾಸಗಳನ್ನು ರೈತ ಅರ್ಥ ಮಾಡಿಕೊಳ್ಳುವುದಕ್ಕೆ ಬಹಳ ಸುಲಭವಾದ ಮಾರ್ಗ ಇದಾಗಿದೆ. ಹಿಂದಿನ ಸರ್ಕಾರವಿದ್ದಂಥ ಕಾಲದಲ್ಲಿ ಉಚಿತವಾಗಿ ವಿದ್ಯುತ್ ಸೌಲಭ್ಯ ಕೊಡುತ್ತಿದ್ದು, ಇವೊತ್ತು ಅಧಿಕಾರದಲ್ಲಿರುವ ಸರ್ಕಾರ ಒಂದು ನೂರು ರೂಪಾಯಿಗಳಿಂದ ಮುನ್ನೂರು, ತದನಂತರ ಐದು ನೂರು ರೂಪಾಯಿಗಳಂತೆ ವಿದ್ಯುತ್ ದರ ವಿಧಿಸಿದೆ, ಅಲ್ಲದೆ, ಹಿಂದಿನ ಸರ್ಕಾರ ಅಳವಡಿಸಿದ್ದ ಮೀಟರುಗಳನ್ನು ತೆಗೆದುಹಾಕಿದ್ದರೂ ಇವೊತ್ತಿನ

ಸರ್ಕಾರ ಮತ್ತೆ ಮೀಟರುಗಳನ್ನು ಅಳವಡಿಸಿ ದರ ನಿಗದಿಪಡಿಸಿದೆ ಎಂದುಕೊಳ್ಳುತ್ತಿದ್ದಾರೆ. ಅವರು ಏನೇ ಹೇಳಲಿ ನಾವು ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡುವುದಕ್ಕೆ, ಅಕೌಂಟಬಿಲಿಟಿ ಫಿಕ್ಸ್ ಮಾಡುವುದಕ್ಕೆ ಮತ್ತು ನೀವು (ರೈತರು) ಕೃಷಿ ಉದ್ದೇಶಕ್ಕೋಸ್ಕರ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಅನ್ನು ಉಪಯೋಗಿಸಿಕೊಳ್ಳುತ್ತೀರೆಂಬುದನ್ನು ಕಂಡುಕೊಳ್ಳಲು ಮೀಟರುಗಳನ್ನು ಅಳವಡಿಸಲಾಗುತ್ತಿದೆ, ಏಕೆಂದರೆ, ಇವೊತ್ತು ಇಲಾಖೆಯವರು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಟ್ರಾನ್ಸ್‌ಮಿಷನ್ ಲಾಸ್, ವಿದ್ಯುತ್ ಕಳ್ಳತನ ಇವೆಲ್ಲವನ್ನೂ ರೈತನಿಗೆ ಹೇಳಿದರೆ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಇವೊತ್ತು ರೈತ ಕೃಷಿ ಉದ್ದೇಶಕ್ಕೋಸ್ಕರ ಶೇಕಡಾ 35 ರಿಂದ 40ರಷ್ಟು ವಿದ್ಯುತ್ ಸೌಲಭ್ಯ ಉಪಯೋಗಿಸಿಕೊಳ್ಳುತ್ತಿದ್ದಾನೆಂಬುದನ್ನು ತಪ್ಪಿಸುವುದಕ್ಕೋಸ್ಕರ ನಾವು ಮೀಟರುಗಳನ್ನು ಅಳವಡಿಸುತ್ತಿದ್ದೇವೆಂದು ಹೇಳಿದರೂ ಕೂಡ ಮೀಟರ್ ಹಾಕಿಸಿಕೊಳ್ಳಲು ಸರ್ಕಾರದ ಮೇಲೆ ಕನಿಷ್ಠ ವಿಶ್ವಾಸವನ್ನೂ ಕೂಡ ರೈತ ತೋರಿಸಲಿಲ್ಲ. ಅಷ್ಟರಮಟ್ಟಿಗೆ ರೈತನ ವಿಶ್ವಾಸವನ್ನು ಈ ಸರ್ಕಾರ ಕಳೆದುಕೊಂಡಿದೆಯೆಂಬ ವಿಚಾರವನ್ನು ಅರ್ಥಮಾಡಿಕೊಳ್ಳಬೇಕೆಂದು ಈ ಮೂಲಕ ತಮಗೆ ಮನವರಿಕೆ ಮಾಡುವುದಕ್ಕೆ ಇಚ್ಛಿಸುತ್ತಿದ್ದೇನೆ. ಆದುದರಿಂದ, ಇಂತಹ ವ್ಯತ್ಯಾಸ ಕಂಡಾಗ ನಾನು ಹೇಳಿದಂತೆ 13 ಲಕ್ಷ ಬಾವಿಗಳಿಗೆ ಕನಿಷ್ಠ ನಾಲ್ಕು ಓಟುಗಳಂತೆ ಗುಣಿಸಿದರೆ ಬರುವ ಮೊತ್ತದಲ್ಲಿ ಇವರು ಕಳೆದ ಸಾರಿಯ ಲೋಕಸಭಾ ಚುನಾವಣೆಯಲ್ಲಿ ತೆಗೆದುಕೊಂಡಿರುವ ಓಟಿನಲ್ಲಿ ಕಳೆದರೆ ಪರಿಸ್ಥಿತಿ ಎಲ್ಲಿಗೆ ಬರುತ್ತದೆ? ಬಹುಶಃ ಇದನ್ನು ಅರಿತುಕೊಂಡೇ ಭಿನ್ನಮತೀಯರು ತಮ್ಮ ಚಟುವಟಿಕೆಯನ್ನು ಪ್ರಾರಂಭಿಸಿದ್ದಾರೆಂದು ಹೇಳುತ್ತಾ, ಸದರಿ ಪ್ರಕ್ರಿಯೆ ಯಾವಾಗ ಅವರ ಪಕ್ಷದಲ್ಲಿ ಪ್ರಾರಂಭವಾಯಿತೋ ಮುಖ್ಯಮಂತ್ರಿಗಳು ಇದರ ಬಗ್ಗೆ ತೀರ್ಮಾನ ಮಾಡಿ ಅವರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಬಿ.ಎಲ್.ಶಂಕರ್‌ರವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಿ, ಸಮಿತಿಯು ರೈತರ ಐ.ಪಿ.ಸೆಟ್ಟುಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಬೇಕೆ ಬೇಡವೇ ಎಂಬ ಬಗ್ಗೆ ಅಧ್ಯಯನ ಮಾಡಿ ವರದಿ ಕೊಟ್ಟಿದೆಯೆಂಬ ವಿಷಯವನ್ನು ನಾವು ಪತ್ರಿಕೆಯಲ್ಲಿ ಓದಿದೆವು. ನಂತರ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಯಿತೆಂದೂ, ಒಂದನೇ ತಾರೀಖಿನಿಂದ ಅನುಷ್ಠಾನಕ್ಕೆ ಬರುತ್ತದೆಂಬ ವಿಚಾರವನ್ನೂ ಸಹ ತಿಳಿದುಕೊಂಡೆವು. ಆದರೆ, ಇಲ್ಲಿಯವರೆವಿಗೂ ಮಂಡಳಿಯಿಂದ ಯಾವುದೇ ಆದೇಶ ವಿದ್ಯುತ್ ಬಳಸುವ ಗ್ರಾಹಕರಿಗೆ ತಲುಪಿಲ್ಲ, ಈ ಕುರಿತು ಯಾವುದೇ ಡಿವಿಜನ್, ಸಬ್ ಡಿವಿಜನ್‌ಗಳಿಗೆ ಸುತ್ತೋಲೆಗಳು ಹೋಗಿಲ್ಲ. ಇದರ ಸೂಕ್ಷ್ಮತೆಯನ್ನು ದಯವಿಟ್ಟು ಸಚಿವರು ಅರ್ಥಮಾಡಿಕೊಳ್ಳಬೇಕು. ನಾನು ಇದರ ಬಗ್ಗೆ ಏಕೆ ಒತ್ತಿ ಹೇಳುತ್ತಿದ್ದೇನೆಂದರೆ, ಸದನದಲ್ಲಿರುವ ಸಚಿವರುಗಳಾದ ಎಂ.ಪಿ.ಪ್ರಕಾಶ್ ಮತ್ತು ಪಿ.ಜಿ.ಆರ್.ಸಿಂಧ್ಯಾರವರ ಗಮನ ಸೆಳೆಯುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ತಾವು ವಿದ್ಯುತ್ ಮೀಟರುಗಳನ್ನು ಈ ತಿಂಗಳಿನಿಂದಲೇ ಅಳವಡಿಸುತ್ತೀರಾ ಇಲ್ಲವೇ ಎಂಬುದನ್ನು ಸ್ಪಷ್ಟೀಕರಣ ಮಾಡಬೇಕಾಗಿದೆ.

ಕಾರಣವೇನೆಂದರೆ, ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ 31ನೇ ತಾರೀಖಿನವರೆವಿಗೂ ಅಂತಿಮ ಅವಕಾಶವಿರುತ್ತದೆಂದು ತಾವು ಸುತ್ತೋಲೆ ಹೊರಡಿಸಿದ್ದೀರಿ. ಈಗಾಗಲೇ ರಾಜ್ಯದಲ್ಲಿ ಸುಮಾರು 2 ಲಕ್ಷ ಅನಧಿಕೃತ ನೀರಾವರಿ ಪಂಪುಸೆಟ್ಟುಗಳಿವೆಯೆಂದು ಕೆ.ಇ.ಬಿ.ಯವರು ಮಾಹಿತಿ ಕೊಟ್ಟಿದ್ದಾರೆ. ಅಲ್ಲದೆ, ಐ.ಪಿ. ಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸಿ ನಿಗದಿಪಡಿಸಲಾದ ದರವನ್ನು ರದ್ದುಗೊಳಿಲಾಗುವುದೆಂದು ಹೇಳಿ ರಾಜ್ಯದ ರೈತರುಗಳಲ್ಲಿ ಒಂದು ರೀತಿಯ ಗೊಂದಲ ವಾತಾವರಣ ನಿರ್ಮಾಣ ಮಾಡಿದಿರಿ. ಇದರಿಂದ ಇವ್ವೊತ್ತು ಹೊಸ ಬಾವಿಗಳಿಗೆ ಅನಧಿಕೃತವಾಗಿ ಅಳವಡಿಸಿಕೊಂಡಿರುವ ಐ.ಪಿ. ಸೆಟ್ಟುಗಳನ್ನು ಸಕ್ರಮಗೊಳಿಸುವುದಕ್ಕಾಗಲಿ, ಹೊಸದಾಗಿ ಸರ್ವೀಸ್ ಕೊಡುವುದಕ್ಕಾಗಲಿ ಮತ್ತು ವಿದ್ಯುತ್ ಮೀಟರ್‌ಗಳನ್ನು ಅಳವಡಿಸುವಲ್ಲಿ ರೂ.960.00ಗಳನ್ನು ಮಂಡಳಿಯಿಂದ ತಾವು ಏನು ತೆಗೆದುಕೊಳ್ಳುತ್ತಿದ್ದೀರಿ, ಇದು ರದ್ದಾಗುತ್ತದೆಂಬ ಭಾವನೆ ರೈತರಲ್ಲಿ ಬಂದಿದೆ. 31ನೇ ತಾರೀಖು ಕೊನೆಯ ದಿನಾಂಕವಾದರೂ ಸುಮಾರು 2 ಲಕ್ಷದಷ್ಟು ಅನಧಿಕೃತವಾಗಿರುವ ಐ.ಪಿ. ಸೆಟ್ಟುಗಳಲ್ಲಿ ಕೇವಲ 40,000 ಐ.ಪಿ.ಸೆಟ್ಟುಗಳು ಮಾತ್ರ ಸಕ್ರಮಗೊಳಿಸಿದಂತಾಯಿತು. ಉಳಿದ ಅನಧಿಕೃತ ಐ.ಪಿ.ಸೆಟ್ಟುಗಳನ್ನು ಸಕ್ರಮಗೊಳಿಸುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆಂಬ ಆತಂಕದಲ್ಲಿದ್ದಾರೆ. ರೂ.960.00ಗಳನ್ನು ನಾವು ತುಂಬೇಕಾಗಿಲ್ಲ, ವಿದ್ಯುತ್ ಮೀಟರುಗಳನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ, ಅವಧಿ ವಿಸ್ತರಿಸಿರುವುದರಿಂದ ನಂತರ ಕಟ್ಟುತ್ತೇವೆಂಬ ಭಾವನೆಯಲ್ಲಿದ್ದಾರೆ. ಆದುದರಿಂದ, ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡದೇ ಹೋದರೆ, ಮತ್ತು ಪತ್ರಿಕೆಗಳಲ್ಲಿ ಈ ವಿಷಯ ಪದೇ ಪದೇ ಬರುತ್ತಿದ್ದರೆ ತಮ್ಮ ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಿಕೊಳ್ಳಲು ಎಷ್ಟು ಹಣ ತುಂಬಬೇಕೋ ಅದನ್ನು ತುಂಬುವುದಿಲ್ಲ.

4.40 ಪಿಎಂ

ತುಂಬಿದರೆ ರೈತರಿಗೆ ನಷ್ಟವಾಗುವುದಿಲ್ಲ. ರೈತರುಗಳು ಒಂದೆರಡು ವರ್ಷಗಳಿಂದ ಕಂಬ, ವೈರನ್ನು ಹಾಕಿಕೊಂಡು ಉಚಿತವಾಗಿ ವಿದ್ಯುತ್‌ನ್ನು ನಿರಂತರವಾಗಿ ಪಡೆದುಕೊಳ್ಳುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಮಂಡಳಿಯಲ್ಲಿ ಸರಿಯಾದ ಒಂದು ವ್ಯವಸ್ಥೆ ಇಲ್ಲ. ಮಂಡಳಿಯ ವ್ಯವಸ್ಥೆ ಹಳಿ ತಪ್ಪಿದೆ. ಸರಿಯಾದ ವ್ಯವಸ್ಥೆ ಇಲ್ಲಿದಿರುವ ಬಗ್ಗೆ ಒಂದು ಉದಾರಣೆ ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯ ಚೆನ್ನರಾಯಪಟ್ಟಣ ಕೆ.ಇ.ಬಿ ವಿಭಾಗದಲ್ಲಿ ಅನಧಿಕೃತ ಬಾವಿಗಳಿಂದ ಕನಿಷ್ಟ ಎರಡು ಕೋಟಿ ಮೌಲ್ಯದ ಟಿ.ಸಿ.ಗಳು ಸುಡತಕ್ಕ ಕೆಲಸವಾಗಿದೆ. ಒಂದು ವರ್ಷದಲ್ಲಿ 384 ಟಿ.ಸಿ.ಗಳು ಸುಡತಕ್ಕ ಕೆಲಸವಾಗಿದೆ. ಒಂದು ವಿಭಾಗದಲ್ಲಿ ಈ ರೀತಿಯಾದರೆ ರಾಜ್ಯದಲ್ಲಿರುವ ಎಲ್ಲಾ ವಿಭಾಗಗಳಿಂದ ವಿದ್ಯುತ್ ಮಂಡಳಿಗೆ ಯಾವ ರೀತಿಯಲ್ಲಿ ಏರುಪೇರುಗಳಾಗಿದೆ, ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಯೋಚನೆ ಮಾಡಬೇಕು.

ಟಿ.ಸಿ.ಗಳು ಸುಡುವುದರಿಂದ ರೈತರಿಗೆ ಸಮಸ್ಯೆಯಾಗಿದೆ. ಸುಟ್ಟ ಟಿ.ಸಿ.ಗಳನ್ನು ರೆಗ್ಯುಲರೈಸ್ ಮಾಡದೆ ತಾವು ರೈತರಿಗೆ ಸಮಸ್ಯೆಯನ್ನು ಉಂಟು ಮಾಡುತ್ತೀರಿ. ಇದನ್ನು ಬಗೆಹರಿಸಲು ಯೋಚನೆ ಮಾಡುತ್ತೀರಾ? ತಾವು ಮೊದಲು ಮೀಟರ್ ಇದೆಯೇ, ಇಲ್ಲವೇ ಎಂಬ ಬಗ್ಗೆ ಸ್ಪಷ್ಟ ಮಾಡಬೇಕು. ಮೀಟರ್ ಇಲ್ಲವೆಂದರೆ ರೈತರು ತಮ್ಮ ಅನಧಿಕೃತ ಬಾವಿಗಳಿಗೆ ಸಕ್ರಮೀಕರಣಕ್ಕಾಗಿ ಹಣವನ್ನು ಸರ್ಕಾರಕ್ಕೆ ಮಂಡಳಿಗೆ ತುಂಬುತ್ತಾನೆ. ಕನಿಷ್ಟ ದಂಡವಾದ ಎರಡೂವರೆ ಸಾವಿರ ರೂಪಾಯಿ ಮತ್ತು ಇತರೆ ಬಾಬ್ತನ್ನು ಸರ್ಕಾರಕ್ಕೆ ತುಂಬುವುದರಿಂದ ಸರ್ಕಾರಕ್ಕೂ, ಮಂಡಳಿಗೂ ಅನುಕೂಲವಾಗುತ್ತದೆ. ಅದನ್ನು ಮಾಡದಿದ್ದರೆ ಇದೇ ರೀತಿಯಾದ ಅವ್ಯವಹಾರ ಮುಂದುವರೆದು ಕೆ.ಇ.ಬಿ. ಯಲ್ಲಿನ ಅವ್ಯವಸ್ಥೆ ತಪ್ಪುವುದಿಲ್ಲ. ಅನಧಿಕೃತ ಬಾವಿಗಳ ಸಮಸ್ಯೆ ಏಕೆ ಉದ್ಭವಿಸುತ್ತದೆಂದರೆ, ಮಂಡಳಿಯಲ್ಲಿ ವಿದ್ಯುತ್ ಒದಗಿಸುವ ಶಕ್ತಿ ಇದೆಯೋ ಇಲ್ಲವೋ, ಇರತಕ್ಕ ವಿದ್ಯುತ್‌ನ್ನು ರೈತನೇ ಹಂಚಿಕೊಳ್ಳುವ ವ್ಯವಸ್ಥೆಗೆ ರೈತನೇ ಹೊರಟುಬಿಟ್ಟಿದ್ದಾನೆ. ವಿದ್ಯುತ್ ಸಂಪರ್ಕಕ್ಕಾಗಿ ನಾಲ್ಕೈದು ವರ್ಷಗಳಿಂದ ಹಣವನ್ನು ಕಟ್ಟಿ ಕಾದು ಕಾದು ಸಾಕಾಗಿ, ಕಡೆಗೆ ಮಂಡಳಿಗೆ ಸಕಾಲದಲ್ಲಿ ವಿದ್ಯುತ್‌ನ್ನು ಒದಗಿಸಲು ಆಗಲಿಲ್ಲವೋ ರೈತ ತಾನಾಗಿಯೇ ಅನಧಿಕೃತ ಬಾವಿಗಳನ್ನು ಪ್ರಾರಂಭ ಮಾಡಿಕೊಳ್ಳುವ ಮೂಲಕ ಇವತ್ತು ಉಚಿತವಾಗಿ ವಿದ್ಯುತ್‌ನ್ನು ಪಡೆಯತಕ್ಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ. ಕೇಂದ್ರೀಯ ವಿದ್ಯುತ್ ಅಥಾರಿಟಿಯವರ ಆದೇಶದ ಮೇರೆಗೆ ಕನಿಷ್ಟ ವಿದ್ಯುತ್ ದರವನ್ನು ನಿಗದಿ ಮಾಡಲೇಬೇಕು ಎಂಬ ಮಾತನ್ನು ಹೇಳಿದ್ದಾರೆ. ಅದರನ್ವಯ ಪ್ರತಿಯೊಂದು ಹೆಚ್.ಪಿ.ಗೆ ವರ್ಷಕ್ಕೆ 300 ರೂಪಾಯಿಗಳನ್ನು ನಿಗಧಿ ಮಾಡಿರುವುದಾಗಿ ಮಂಡಳಿಯವರು ಹೇಳುತ್ತಾರೆ. ಈ ರೀತಿ ಕನಿಷ್ಟ ದರವನ್ನೇ ನಿಗದಿ ಮಾಡದಿರುವ ಪಂಜಾಬ್, ತಮಿಳುನಾಡು ರಾಜ್ಯಗಳಿಲ್ಲವೇ? ಪಂಜಾಬ್‌ನಲ್ಲಿ ರೈತರು ಉಪಯೋಗಿಸುವ ಹತ್ತು ಹೆಚ್.ಪಿ. ಗಿಂತ ಕಡಿಮೆ ಇರುವ ಬಾವಿಗಳಿಗೆ ಇವತ್ತು ದರವಿಲ್ಲ, ತಮಿಳುನಾಡಿನಲ್ಲಿ ಸಣ್ಣ ರೈತರು ಉಪಯೋಗ ಮಾಡುವ ಬಾವಿಗಳಿಗೆ ಕನಿಷ್ಟ ದರವಿಲ್ಲ, ಸಣ್ಣ ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಒದಗಿಸುವ ಕೆಲಸ ಮಾಡುತ್ತಿದ್ದಾರೆ. ರಾಷ್ಟ್ರದಲ್ಲಿ ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಒದಗಿಸುವ ಯೋಜನೆ ಮೊದಲು ಪ್ರಾರಂಭವಾಗಿದ್ದು ಕರ್ನಾಟಕ ರಾಜ್ಯದಲ್ಲಿ. ನಮ್ಮ ರಾಜ್ಯವನ್ನು ಬೇರೆ ರಾಜ್ಯದವರು ಅನುಸರಿಸುತ್ತಿರುವಾಗ ನಮ್ಮ ರಾಜ್ಯದಲ್ಲಿ ಇದನ್ನು ರದ್ದು ಮಾಡುವುದರಿಂದ ತಮ್ಮ ಪಕ್ಷಕ್ಕೆ ಒಳ್ಳೆಯದಾಗುವುದಿಲ್ಲ, ಇದರಿಂದ ತಾವು ರೈತರ ವಿಶ್ವಾಸವನ್ನು ಕಳೆದುಕೊಳ್ಳುವ ಕೆಲಸ ಮಾಡಿದ್ದೀರಿ. ಬೇರೆ ರಾಜ್ಯಗಳಲ್ಲಿ ಉಚಿತವಾಗಿ ವಿದ್ಯುತ್ ಒದಗಿಸುವ ಕಾರ್ಯಕ್ರಮವಿರುವಾಗ ತಾವೂ ಸಹ ಅದನ್ನು ಜಾರಿಗೆ ತಂದರೆ ತೊಂದರೆಯೇನು? ಕೇಂದ್ರೀಯ ವಿದ್ಯುತ್ ಅಥಾರಿಟಿಯವರ ಒತ್ತಡವಿದೆ, ಕನಿಷ್ಟ ದರವನ್ನು ನಿಗದಿ ಮಾಡಬೇಕೆಂದು ಇದ್ದರೆ 50 ರೂಪಾಯಿಗಳನ್ನು ನಿಗದಿ ಮಾಡಿ. ರೈತ ಬಾವಿ ಮಾಡಿಕೊಂಡು ನೀರಾವರಿ ಪ್ರದೇಶವನ್ನು ಮಾಡಿಕೊಂಡಿದ್ದರೆ ಅದಕ್ಕೆ ತಮ್ಮ ಸಹಾಯವೇನಿಲ್ಲ. ರಾಜ್ಯದಲ್ಲಿ 13 ಲಕ್ಷ ಪಂಪುಸೆಟ್ಟುಗಳಿಂದ ಆಗುತ್ತಿರುವ ನೀರಾವರಿ

ಪ್ರದೇಶ 40 ಲಕ್ಷ ಎಕರೆಗಳು. ಇದರಲ್ಲಿ ತಮ್ಮ ಬಂಡವಾಳವೇನೂ ಇಲ್ಲ. ಕಾವೇರಿ ಬೇಸಿನ್‌ನ ಎಲ್ಲಾ ಕಾಮಗಾರಿಗಳನ್ನು ಮಾಡಲು ತಾವು 1.4.98ರವರೆಗೆ 2805 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿರುವುದಾಗಿ ತಮ್ಮ ಇಲಾಖೆಯ ಮಾಹಿತಿಯಲ್ಲೇ ಹೇಳಿದ್ದೀರಿ. ಇದರಿಂದ 11.2 ಲಕ್ಷ ಎಕರೆಗೆ ನೀರಾವರಿ ಮಾಡಬಹುದಾಗಿದೆ. ಹೀಗಿರುವಾಗ 40 ಲಕ್ಷ ಎಕರೆ ನೀರಾವರಿಗೆ ರೈತ ತಾನಾಗಿಯೇ ಹಣವನ್ನು ಹಾಕಿಕೊಳ್ಳುತ್ತಾನೆಂದರೆ, 13 ಲಕ್ಷ ಐ.ಪಿ. ಸೆಟ್ಟುಗಳನ್ನು ಮಾಡಿಕೊಂಡಿದ್ದಾನೆಂದರೆ ರೈತ 7 ಸಾವಿರ ಕೋಟಿ ಬಂಡವಾಳವನ್ನು ಹಾಕಿದ್ದಾನೆಂದಾಗುತ್ತದೆ. ಬಾವಿಗಳನ್ನು ತೋಡಲು, ವಿದ್ಯುತ್ ಸರ್ವಿಸ್‌ಗೆ, ಪೈಪನ್ನೂ ಹಾಕಲು ಆ ಭೂಮಿಯನ್ನು ಅಭಿವೃದ್ಧಿಪಡಿಸಲು ಕನಿಷ್ಟ 50 ಸಾವಿರ ರೂಪಾಯಿಗಳು ಒಂದು ಬಾವಿಗೆ ಆಗುತ್ತದೆಂದರೆ 13 ಲಕ್ಷ ಬಾವಿಗಳಿಗೆ ರೈತ ಸ್ವಂತ ಹಣವನ್ನು ತೊಡಗಿಸಿದ್ದಾನೆಂದರೆ ಇದರ ಬಗ್ಗೆ ಯೋಚನೆ ಮಾಡಬೇಕು. ರೈತರ ಉತ್ಪಾದನೆ ಸಹ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಹೆಚ್ಚಾಗಿದೆ. 11.2 ಲಕ್ಷ ಎಕರೆಗೆ ನೀರಾವರಿ ಒದಗಿಸಲು 2805 ಕೋಟಿ ಹಣವನ್ನು ಖರ್ಚು ಮಾಡುತ್ತಿರುವಾಗ, ರೈತರಾಗಿಯೇ ಮಾಡುತ್ತಿರುವ ಕೆಲಸಕ್ಕೆ ಸರ್ಕಾರ ಬೆನ್ನುತಟ್ಟಿ ಉಚಿತವಾಗಿ ವಿದ್ಯುತ್‌ನ್ನು ಒದಗಿಸಿದರೆ ತಪ್ಪೇನಾಗುತ್ತದೆ? ಇದರಿಂದ ಮುಂಡಳಿಗೆ 100-120 ಕೋಟಿ ಹಣ ಬರಬೇಕಾಗಿರುತ್ತದೆ. ತಾವು ವಿಶ್ವಬ್ಯಾಂಕ್‌ನಿಂದ, ನಬಾರ್ಡ್‌ನಿಂದ ಹಣವನ್ನು ತೆಗೆದುಕೊಂಡು ನೀರಾವರಿಯ ಉದ್ದೇಶಕ್ಕಾಗಿ ತೊಡಗಿಸುತ್ತಿರುವಾಗ ಅದಕ್ಕೆ ಎಷ್ಟು ಬಡ್ಡಿಯನ್ನು ಕೊಡುತ್ತಿದ್ದೀರಿ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ರೈತರುಗಳೇನು ಕಷ್ಟಪಡುತ್ತಿದ್ದಾರೆ ಅವರಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುವ ನಿರ್ಣಯ ಮಾಡಿದರೆ, ಆ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಿದರೆ ಬಹುಶಃ ರೈತರಿಂದ ತಾವು ಕಳೆದುಕೊಂಡಿರುವ ವಿಶ್ವಾಸವನ್ನು ಗಳಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಮಣ್ಣಿನ ಮಗನ ಸರ್ಕಾರ, ರೈತರ ಸರ್ಕಾರವೆಂದು ಘೋಷಣೆಗಳನ್ನು ಮಾಡಿಕೊಂಡಿದ್ದೀರಿ. ಅದೆಲ್ಲಾ ಮಣ್ಣುಪಾಲಾಗುತ್ತದೆ. ರೈತರ ವಿಶ್ವಾಸವನ್ನು ತಾವು ಖಂಡಿತವಾಗಿ ಕಳೆದುಕೊಂಡಿದ್ದೀರೆಂದು ಹೇಳಬೇಕಾಗುತ್ತದೆ. ತಮ್ಮಿಂದ ನಾನು ಎರಡು ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಕೇಳಬಯಸುತ್ತೇನೆ. ಮೀಟರ್‌ನ್ನು ಹಾಕುತ್ತಿಲ್ಲ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೂಡಲೇ ಕೊಡಬೇಕು, ಎರಡನೆಯದಾಗಿ, ತಾವು ಕಾವೇರಿ ಬೇಸಿನ್‌ನಲ್ಲಿ 11.2 ಲಕ್ಷ ಎಕರೆ ನೀರಾವರಿ ಒದಗಿಸಲು ತಮ್ಮ ಇಲಾಖೆಯ ಮಾಹಿತಿಯ ಪ್ರಕಾರವೇ 2805 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅದಕ್ಕೆ ಯಾವ್ಯಾವುದೋ ಮೂಲದಿಂದ ಹಣವನ್ನು ತಂದಿದ್ದೀರಿ. ಆದರೆ ರೈತರುಗಳು ಮಾಡಿಕೊಂಡಿರುವ ಬಾವಿಗಳಿಗೆ ತಾವು ಹಣವನ್ನೇನಾದರೂ ಕೊಟ್ಟಿದ್ದೀರಾ? ಈ ರಾಜ್ಯದ ಸಂಪನ್ಮೂಲ ಕೆಲವೇ ಭಾಗಗಳಿಗೆ ಉಪಯೋಗವಾಗುತ್ತಿರುವ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಒಂದು ಕಾವೇರಿ ಬೇಸಿನ್ ಮತ್ತೊಂದು ಭಾಗ ಕೃಷ್ಣ ಬೇಸಿನ್. ಅವುಗಳ ಅಭಿವೃದ್ಧಿಗೆ ಹೊರಗಡೆಯಿಂದ ಹಣವನ್ನು ತರುವುದಾಗಿರಬಹುದು, ಈ ರಾಜ್ಯದ ಸಂಪನ್ಮೂಲದಿಂದ

ತೊಡಗಿಸುವುದಾಗಿರಬಹುದು. ಹೆಚ್ಚು ಹಣವನ್ನು ಒಂದೇ ಭಾಗಕ್ಕೆ ಖರ್ಚು ಮಾಡುವುದರ ಮೂಲಕ ಮಳೆ ಆಶ್ರಿತ ಪ್ರದೇಶಕ್ಕೆ ಇವತ್ತು ಸರ್ಕಾರ ನಿರ್ಲಕ್ಷ್ಯವನ್ನು ತೋರಿಸತಕ್ಕ ಕೆಲಸವನ್ನು ಮಾಡುತ್ತಿದೆ. ಇದು ಶಾಸಕರಿಗೆ ಸೀಮಿತವಾದ ವಿಚಾರವಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ಈ ರಾಜ್ಯದಲ್ಲಿ ಎಷ್ಟು ಕಪ್ಪು ಪ್ರದೇಶ....

ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಸರ್ಕಾರ 13 ಲಕ್ಷ ಕೊಳವೆ ಬಾವಿಗಳಿಗೆ ಅಥವಾ ಐ.ಪಿ. ಸೆಟ್‌ಗಳಿಗೆ ಕನೆಕ್ಷನ್ ಕೊಡುವುದಾಗಿ ತಿಳಿಸಿತ್ತು ಎಂದು ಹೇಳಿದರು. ಇದರ ಜೊತೆಗೆ ಸರ್ಕಾರದವರು ಸಾವಿರಾರು ಅಥವಾ ಲಕ್ಷಾಂತರ ಜನ ರೈತರಿಗೆ ನಾವು ಎಲೆಕ್ಟ್ರಿಸಿಟಿಯನ್ನು ಒದಗಿಸಿಕೊಡುತ್ತೇವೆಂದು ಹೇಳಿ 5 ಸಾವಿರ ರಿಂದ 35 ಸಾವಿರ ರೂ.ಗಳವರೆಗೂ ದುಡ್ಡು ವಸೂಲಿ ಮಾಡಿದ್ದಾರೆ. ನೀವು ದುಡ್ಡು ತುಂಬಿರಿ, ನಾವು ಆಮೇಲೆ ಕಂಬ, ತಂತಿಗಳನ್ನು ಕಳುಹಿಸುತ್ತೇವೆಂದು ಸರ್ಕಾರ ಹೇಳಿ ಇವತ್ತಿನವರೆಗೂ ಕೂಡ ಯಾವುದೇ ಕಾರಣಕ್ಕೂ ಅದನ್ನು ಅಧಿಕೃತವಾಗಿ ಅನೌನ್ಸ್ ಮಾಡಿಲ್ಲ. ಕಾವೇರಿ ಬೇಸಿನ್ ಒಂದೇ ಅಲ್ಲ ಅಥವಾ ಕೃಷ್ಣಾ ಬೇಸಿನ್ ಒಂದರಲ್ಲೇ ಅಲ್ಲ, ಕರ್ನಾಟಕ ರಾಜ್ಯಾದ್ಯಂತ ಈ ರೀತಿ ದುಡ್ಡನ್ನು ಸರ್ಕಾರ ಕಲೆಕ್ಟ್ ಮಾಡಿದೆ. ಆದರೆ ಇವತ್ತಿನವರೆಗೂ ಆ ಒಂದು ರೈತರಿಗೆ ಯಾವುದೇ ವಿಧವಾದ ಒಂದು ಆಶ್ವಾಸನೆ ಕೊಟ್ಟಿಲ್ಲ. ನಾಳೆಯಿಂದ ಕರೆಂಟ್ ಬರುತ್ತದೆ ಅಥವಾ ಐ.ಪಿ. ಸೆಟ್‌ಗೆ ನೀವು ಕೊಟ್ಟಿರತಕ್ಕ ಹಣ ಸಾಲದು ಎಂದು ಏನೂ ಹೇಳಿಲ್ಲ. ಸೀನಿಯಾರಿಟಿ ಬೇಸಿನ್ ಎಂದು ಹೇಳಿ ಡಿಪಾಸಿಟ್ ಮಾಡಿರತಕ್ಕಂತಹ ಮುಂಚಿನವರಿಗೂ ಕೂಡ ಇವತ್ತಿನವರೆಗೂ ಯಾವುದೇ ಒಂದು ಕನೆಕ್ಷನ್ ಕೂಡ ಕೊಟ್ಟಿಲ್ಲ. ಇದರಲ್ಲಿ ನಿಮಗೆ ಬರತಕ್ಕಂತಹ ಗಂಗಾ ಕಲ್ಯಾಣ ಇರಬಹುದು, ಅಥವಾ ಸೀನಿಯಾರಿಟಿ ಬೇಸಿನ್‌ನಲ್ಲಿ ಬರತಕ್ಕಂತಹ ಯಾವುದೇ ಕಾರ್ಯಕ್ರಮ ಇರಬಹುದು, ಅದು ಅದರಲ್ಲಿ ಬಂದಿಲ್ಲ. ಈಗ ನಾವು ಬಹಳಷ್ಟು ರೈತರಿಂದ ಹಣವನ್ನು ವಸೂಲಿ ಮಾಡಬೇಕು, ಏಕೆಂದರೆ ನಾವು ಮುಂಚೆ ರೈತರಿಗೆ ಪುಗಸಟ್ಟೆ ಕರೆಂಟ್ ಅನ್ನು ಕೊಟ್ಟಿದ್ದೇವೆ, ಹಾಗಾಗಿ ಆ ಹಣವನ್ನು ಈಗ ವಸೂಲಿ ಮಾಡಬೇಕು ಎನ್ನುವುದಾದರೆ, ಇಂಡಸ್ಟ್ರೀಸ್‌ಗಳಿಂದ ಎಷ್ಟು ನಮಗೆ ಬ್ಯಾಲೆನ್ಸ್ ಇದೆ ಅಥವಾ ಇಂಡಸ್ಟ್ರೀಯಿಂದ ಎಷ್ಟು ಟ್ಯಾಪಿಂಗ್ ಆಗಿ ಇಲ್ಲೀಗಲ್ ಆಗಿ ವಿದ್ಯುತ್ ಬಳಸುತ್ತಿದ್ದಾರೆ, ಅವರಿಂದ ಮೊದಲು ಹಣ ವಸೂಲಿ ಮಾಡಿ. ಟ್ಯಾಕ್ಸ್ ಕಟ್ಟದೇ ಇಲ್ಲೀಗಲ್ ಆಗಿ ಕರೆಂಟ್ ಡೈವರ್ಟ್ ಮಾಡಿಕೊಂಡು ಕೋಟ್ಯಾಂತರ ರೂ. ಇವತ್ತಿಗೂ ಕರ್ನಾಟಕ ಸರ್ಕಾರಕ್ಕೆ ಬ್ಯಾಲೆನ್ಸ್ ಡ್ಯೂ ಇರುವುದನ್ನು ಮೊದಲು ವಸೂಲು ಮಾಡಬೇಕು. ಕರೆಂಟ್ ಎಲ್ಲೆಲ್ಲಿ ಇಲ್ಲೀಗಲ್ಲಾಗಿ ಟ್ಯಾಪ್ ಮಾಡಿಕೊಂಡು ಉಪಯೋಗಿಸುತ್ತಿದ್ದಾರೆ ಅಂತಹವರುಗಳ ವಿರುದ್ಧ ಮಂಡಳಿಯವರು ಮತ್ತು ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಶಿವರಾಂ: ಈಗ ನಾನು ಮಳೆ ಆಶ್ರಿತ ಪ್ರದೇಶಗಳ ಬಗ್ಗೆ ಈ ಸರ್ಕಾರ

ನಿರ್ಲಕ್ಷತೆಯನ್ನು ತೋರಿಸಿದೆ ಎಂಬ ಮಾತನ್ನು ಹೇಳಿದೆ. ನಾನು ಈ ಮಾತನ್ನು ಹೇಳಿದೆ ಎಂದರೆ, ಇವತ್ತು ಈ ರಾಜ್ಯದಲ್ಲಿ ಒಟ್ಟು 175 ತಾಲ್ಲೂಕುಗಳಲ್ಲಿ 72 ತಾಲ್ಲೂಕುಗಳಲ್ಲಿ ಅಂತರ್ಜಲದ ಮಟ್ಟ 50ಕ್ಕಿಂತ ಕಡಿಮೆ ಕುಸಿಯತಕ್ಕಂಥಾದ್ದು ಆಗಿದೆ. ಒಟ್ಟು 22 ತಾಲ್ಲೂಕುಗಳನ್ನು ಕಪ್ಪು ಪ್ರದೇಶ ಎಂದು ಪ್ರಕಟಣೆ ಮಾಡಿದ್ದಾರೆ. 22 ಪ್ರದೇಶಗಳನ್ನು ಬೂದಿ ಎಂದು ಪ್ರಕಟಣೆ ಮಾಡಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಸದಸ್ಯರು ಪಂಪ್‌ಸೆಟ್‌ಗಳಿಗೆ ಇಡೀ ಕಾವೇರಿ ಬೇಸಿನ್‌ಗೆ ಸರ್ಕಾರ 2800 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದು ಹೇಳಿದರು. ಪಂಪ್‌ಸೆಟ್‌ಗಳಿಗಾಗಿ ಎಷ್ಟು ರೂ.ಗಳನ್ನು ಬಂಡವಾಳವಾಗಿ ಹಾಕಲಾಗಿದೆ ಎಂಬ ಬಗ್ಗೆಯೂ ಕೂಡ ತಾವು ಹೇಳಿ.

ಶ್ರೀ ಬಿ.ಶಿವರಾಂ: ಪ್ರತಿ ಬಾವಿಗೆ 50 ಸಾವಿರ ರೂ.ಗಳಂತೆ 13 ಲಕ್ಷ ಬಾವಿಗಳಿಗೆ ರೈತರು 7 ಸಾವಿರ ಕೋಟಿ ರೂ.ಗಳನ್ನು ಪಂಪ್‌ಸೆಟ್‌ಗಾಗಿ ಬಂಡವಾಳ ಹಾಕಿದ್ದಾರೆ. ಅವನಿಗಾಗಿ ಮಂಡಳಿಗೆ ಕನಿಷ್ಟ 100-120 ಕೋಟಿ ರೂ.ಗಳನ್ನು ಭರಿಸಲಿಕ್ಕೆ ಸರ್ಕಾರಕ್ಕೆ ಏನಾಗಿದೆ ಎಂಬ ಮಾತನ್ನು ನಾನು ಕೇಳುತ್ತಿದ್ದೇನೆ. 11.2 ಲಕ್ಷ ಎಕರೆ ಪ್ರದೇಶವನ್ನು ಕಾವೇರಿ ಬೇಸಿನ್‌ನಲ್ಲಿ ನೀರಾವರಿಗೆ ಒಳಪಡಿಸಲು ಸರ್ಕಾರದವರು 2800 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ ಸರ್ಕಾರ ಬಡ್ಡಿಯನ್ನೂ ಕೂಡ ಕೊಡುತ್ತಿದ್ದಾರೆ. ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಇಲ್ಲಿ ರೈತನೇ ಬಂಡವಾಳ ಹಾಕಿಕೊಂಡಿದ್ದಾನೆ, ಅವನ ಬಂಡವಾಳದಲ್ಲಿ ಅವನು ದುಡಿಯುತ್ತಿದ್ದಾನೆ, ಇಷ್ಟೊಂದು ಉತ್ಪಾದನೆ ಮಾಡುತ್ತಿದ್ದಾನೆ, ಸ್ವಾವಲಂಬಿಯಾಗಿದ್ದಾನೆ, ಆರ್ಥಿಕವಾಗಿ ಸದೃಢವಾಗಿದ್ದಾನೆ. ಇವತ್ತು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದಂತಹ ಯುವಕರ ಪರಿಸ್ಥಿತಿ ಏನಾಗಿದೆ? ಇವತ್ತು ಆಹಾರ ಪದಾರ್ಥಗಳನ್ನು ನಿಜವಾಗಿಯೂ ಉತ್ಪಾದನೆ ಮಾಡುತ್ತಿರುವುದು ಮೇಜರ್ ಇರಿಗೇಷನ್‌ನಿಂದ ಅಲ್ಲ. ಅಲ್ಲಿ ಬರೀ ಕಬ್ಬು ಬೆಳೆಯುತ್ತಾರೆ. ತರಕಾರಿಗಳನ್ನು ಬೆಳೆಯುವುದು, ಹೈನುಗಾರಿಕೆ ಮತ್ತು ನಿಜವಾದ ಆಹಾರ ಪದಾರ್ಥಗಳು ಬೆಳೆಯುವುದು, ರೇಷ್ಮೆ ವ್ಯವಸಾಯ ಏನಾದರೂ ಇದೆ ಎಂದರೆ ಅದು ಬಾವಿ ಪಂಪ್‌ಸೆಟ್‌ಗಳಿಂದ ಮಾತ್ರ ಆಗುತ್ತಿದೆ. ಇವತ್ತು ಇಷ್ಟಾದರೂ ಕೂಡ ಆ ಬಾವಿಯವರ ಬಗ್ಗೆ ಮಾತ್ರ ನಿರ್ಲಕ್ಷ್ಯತೆ ಮಾತ್ರ ಅತಿಯಾಗಿದೆ. ರೈತನಿಗೆ ಸಕಾಲಕ್ಕೆ ಒಂದು ಕನಿಷ್ಟ ಸರ್ವೀಸ್ ಕೊಡತಕ್ಕಂತಹ ಕನಿಷ್ಟ ಚಿಂತನೆಯೂ ಕೂಡ ಇಲ್ಲ. ಸರ್ಕಾರದ ಮೇಲೆ ನನ್ನ ನೇರವಾದ ಆರೋಪವೇನೆಂದರೆ, ರೈತರ ಬಗ್ಗೆ, ಅವನ ಸಮಸ್ಯೆಗೆ, ಬೇಡಿಕೆಗೆ ಸ್ಪಂದಿಸತಕ್ಕಂತಹ ಕನಿಷ್ಟ ಕೆಲಸವನ್ನೂ ಸಹಾ ನೀವು ಮಾಡುವುದಿಲ್ಲವಲ್ಲಾ. ಎರಡು ಲಕ್ಷ ಅನಧಿಕೃತವಾದಂತಹ ಬಾವಿಗಳಿವೆ, ಸೀನಿಯಾರಿಟಿನಲ್ಲಿ ಇರತಕ್ಕಂಥದ್ದನ್ನು ರಿಜಿಸ್ಟರ್ ಮಾಡಿಕೊಂಡಿದ್ದೀರಿ ಹಿಂದೆ ನಮ್ಮ ಸರ್ಕಾರ ಇದ್ದಾಗ 5 ರೂ. ಕೊಟ್ಟು ಅರ್ಜಿ ಹಾಕಿದರೆ ಸಾಕು ರಿಜಿಸ್ಟರ್ ಮಾಡುತ್ತಿದ್ದರು. ಇವತ್ತು ಒಂದು ಹೆಚ್.ಪಿ.ಗೆ 300 ರೂ. ಡಿಪಾಸಿಟ್ ಕಟ್ಟಬೇಕು. 5 ಹೆಚ್.ಪಿ.

ತೆಗೆದುಕೊಳ್ಳಿ ಎಂದರೆ, ಒಂದೂವರೆ ಸಾವಿರ ಡಿಪಾಸಿಟ್ ಇಡಬೇಕು. ಇದರ ಜೊತೆಗೆ ಮೀಟರ್ ಕಾಸ್ಟ್ ಕೂಡ ಬೀಳುತ್ತದೆ. ಇವೆಲ್ಲವುಗಳ ಜೊತೆಗೆ ಎರಡೂವರೆ ಸಾವಿರ ರೂ. ಕಟ್ಟಿ 5-6 ವರ್ಷಗಳು ಅಥವಾ ಕನಿಷ್ಟ 3 ವರ್ಷಗಳಾದರೂ ಕಾಯಲೇಬೇಕು. ಮೂರು ವರ್ಷ ಅವನು ಕಾದ ಮೇಲೆ ರೈತ ಬಂಡವಾಳವನ್ನು ಹಾಕಿ ಸರ್ಕಾರದ ಹತ್ತಿರ ಸರ್ವೀಸ್‌ಗಾಗಿ ಮೊರೆ ಹೋಗಬೇಕು. ರೈತ ಎಷ್ಟು ದಿವಸ ಕಾಯುತ್ತಾನೆ? ಅವನೂ 3-5 ವರ್ಷ ಕಾದ. ಆಮೇಲೆ ಸರ್ಕಾರದವರು 175 ತಾಲ್ಲೂಕುಗಳಲ್ಲಿ 43 ತಾಲ್ಲೂಕುಗಳನ್ನು ಡಾರ್ಕ್ ಅಂಡ್ ಗ್ರೇ ಎಂದು ಡಿಕ್ಲೇರ್ ಮಾಡಿದ ಮೇಲೆ ಮಂಡಳಿಯವರು, ನಾವು ಆ ಪ್ರದೇಶಗಳಿಗೆ ಸರ್ವೀಸ್ ಮಾಡುವುದಿಲ್ಲ, ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ ಮೇಲೆ, ಕನೆಕ್ಷನ್‌ಗಾಗಿ ಕಾಯುತ್ತಿದ್ದಂತಹ ರೈತ ಏನು ಮಾಡಬೇಕು? ಈ ವಿದ್ಯುಚ್ಛಕ್ತಿ ಸೌಲಭ್ಯವೇ ಇಲ್ಲವೆಂದರೆ ಅವನು ಏನು ಮಾಡುತ್ತಾನೆ? ನಿಮ್ಮ ಸರ್ಕಾರದ ಸುತ್ತೋಲೆಯನ್ನೂ ರೈತ ಕೇಳಲಿಲ್ಲ, ನಿಮ್ಮ ಸರ್ಕಾರದ ಆದೇಶವನ್ನೂ ಕೂಡ ಆತ ಕೇಳಲಿಲ್ಲ. ಕಾನೂನು ಸುತ್ತೋಲೆಗಳೆಲ್ಲವನ್ನೂ ತೆಗೆದು ಬಿಸಾಕಿ ಕಂಬ ಒಯ್ದು ಅವನೇ ತಂದು ನೆಟ್ಟುಕೊಂಡು, ಎಳೆದುಕೊಂಡು ಸರ್ವೀಸೂ ಮಾಡಿಕೊಂಡ. ಈ ರೀತಿ ಆತ ಸರ್ವೀಸ್ ಮಾಡಿಕೊಂಡ ಮೇಲೆ ಸರ್ಕಾರ ಏನು ಮಾಡಿತು? ಸರ್ಕಾರ ಒಂದೆರಡು ವರ್ಷ ಕಾದ ಮೇಲೆ, ನಾನು ಆಗಲೇ ಹೇಳಿದ ಹಾಗೆ ಮಂಡಳಿಯ ವ್ಯವಸ್ಥೆಯೆಲ್ಲಾ ಅವ್ಯವಸ್ಥೆಯಾಯಿತು. ಫ್ಯೂಸ್‌ಗಳು ಸುಟ್ಟು ಹೋದವು, ಲೈನ್ ವೈರ್‌ಗಳೆಲ್ಲಾ ಸುಟ್ಟು ಹೋದವು. ಹೇಳುವವರು ಕೇಳುವವರು ಯಾರೂ ಇಲ್ಲದಂತಾಯಿತು: ಒಂದು ಹಂತದಲ್ಲಿ ನಮ್ಮ ಸಹಕಾರಿ ಸಚಿವರು ಅವರ ಕ್ಷೇತ್ರದಲ್ಲಿ ಜನರು ಅವರನ್ನು ಘೇರಾವ್ ಮಾಡಿದಾಗ ಅಧಿಕಾರಿಗಳನ್ನು ಕರೆಸಿ, ನೀವು ಸುಮ್ಮನಿರಿ, ಡಿಸ್‌ಕನೆಕ್ಟ್ ಮಾಡಬೇಡಿ ಎಂದು ಅವರು ಹೇಳುವಂತಹ ಮಟ್ಟಕ್ಕೆ ಹೋದರು. ಆ ಬಗ್ಗೆ ಪೇಪರ್‌ನಲ್ಲೆಲ್ಲಾ ಬಂದಿತ್ತು. ಇಷ್ಟೊಂದು ಸಮಸ್ಯೆ ಉಲ್ಬಣಗೊಂಡಿದ್ದರೂ ಕೂಡ ಇವತ್ತು ಕೂಡ ಸರ್ಕಾರದಲ್ಲಿ ಯಾವುದೇ ಒಂದು ಸ್ಪಷ್ಟವಾದಂತಹ ಒಂದು ಆದೇಶ ಇಲ್ಲ. ಅದನ್ನು ಬಹುಶಃ ಸಕ್ರಮ ಮಾಡಲಿಕ್ಕೆ ಎಷ್ಟು ಆದೇಶಗಳನ್ನು ಮಂಡಳಿಯವರು ಹೊರಡಿಸಿದ್ದಾರೆ ಎಂಬುದನ್ನು ಮಾನ್ಯ ಅಧ್ಯಕ್ಷರೇ, ನೀವೇ ಸ್ವತಃ ನೋಡಬೇಕು. ಒಂದು ಸಾರಿ ಕನಿಷ್ಟ 10 ಸಾವಿರ ರೂ.ಗಳು, ಅದರ ಮೇಲೆ ಅಂದಾಜು ವೆಚ್ಚ ಕಟ್ಟಿ ಎನ್ನುತ್ತಾರೆ. ಮತ್ತೊಂದು ಸಾರಿ 10 ಸಾವಿರ ರೂ.ಗಳನ್ನು ಕಟ್ಟಿ ಎನ್ನುತ್ತಾರೆ. ಇದೆಲ್ಲಾ ಗಲಾಟೆಯಾದ ಮೇಲೆ ದಿನಾಂಕ 12ನೇ ಜೂನ್ 1998ಕ್ಕೆ ಒಂದು ಆದೇಶವನ್ನು ಹೊರಡಿಸಿ ಕನಿಷ್ಟ ದಂಡ, ರಿಜಿಸ್ಟ್ರೇಷನ್ ಫೀಸ್, ಪ್ಲಸ್ ಮೀಟರ್ ಕಾಸ್ಟ್ ಕಟ್ಟಿ ಎಂದು ಹೇಳಿ 4800 ರೂ.ಗಳಿಗೆ ತಂದರು. ಅದು ಪ್ರಾರಂಭವಾದದ್ದೇ ನನ್ನ ಕ್ಷೇತ್ರದಿಂದ, ನನ್ನ ಹೋರಾಟದಿಂದ. ನಾನು ಅದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೆ. ಸ್ಪೀಕರ್ ರೂಂನಲ್ಲಿ ಇದರ ಬಗ್ಗೆ ಕರೆಸಿದ್ದರು, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಲ್ಲಿದ್ದರು. ಹಿಂದೆ ಗೋರೆ ಎಂಬುವವರು ಮಂಡಳಿಯ ಛೇರ್ಮನ್ ಆಗಿದ್ದರು. ಅವರೊಬ್ಬ ಐ.ಎ.ಎಸ್. ಅಧಿಕಾರಿ. ಈ ಐ.ಎ.ಎಸ್. ಅಧಿಕಾರಿಗಳಿಗೆ ಒಂದೊಂದು ಸಲ ಎಷ್ಟು

ಏನಾದರೂ ಭಾಷೆ ಬಳಸಿದರೆ ಬೇಜಾರಾಗುತ್ತದೆ, 'ದುರಹಂಕಾರ' ಎನ್ನುವ ಮಾತನ್ನು ರೈತರ ಬಗ್ಗೆ ಅವರು ಆಡಿದ ಮಾತಿನಿಂದ ನೊಂದು ಹೇಳಬೇಕಾಗುತ್ತದೆ. ಸ್ಪೀಕರ್ ಎದುರುಗಡೆಯೇ ಆ ಅಧಿಕಾರಿ ಒಂದು ಮಾತು ಹೇಳಿದರು. 'ಈ ತರಹ ಅನಧಿಕೃತವಾಗಿ ಸರ್ವೀಸ್ ಅನ್ನು ತೆಗೆದುಕೊಂಡಿರತಕ್ಕಂಥ ರೈತರು, They are very bad citizens ಎಂಬ ಮಾತನ್ನು ಅವರು ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆಯೇ ಹೇಳಿದರು. ಅದು ರೆಕಾರ್ಡ್‌ನಲ್ಲಿದೆ. ನಾನು ಅದನ್ನು ಇಲ್ಲಿ ಮೆನ್‌ಷನ್ ಮಾಡಿದ್ದೇನೆ. ಅವರು ಇವತ್ತು ಹಳ್ಳಿ ತಪ್ಪುವಂತಹ ವ್ಯವಸ್ಥೆಯನ್ನು ಮಾಡಿದವರೇ ಮಂಡಳಿಯವರು. ಇಲ್ಲದಿದ್ದರೆ ಯಾವತ್ತೋ ಸಕ್ರಮವಾಗಿರತಕ್ಕಂಥದ್ದು ಆಗಿರುತ್ತಿತ್ತು. ಬಹುಶಃ ಇದು ಇಷ್ಟೊಂದು ಸಮಸ್ಯೆಗೆ ಹೋಗುತ್ತಿರಲಿಲ್ಲ. ಇದಾಗದಿದ್ದರೆ ಬಹುಶಃ ಈ ಭಿನ್ನಮತೀಯ ಚಟುವಟಿಕೆಗಳೂ ಕೂಡ ಪ್ರಾರಂಭ ಆಗುತ್ತಿರಲಿಲ್ಲ. ಮಂಡಳಿಯನ್ನು ಪೂರ್ಣವಾಗಿ ಹಳ್ಳಿ ತಪ್ಪಿಸತಕ್ಕಂಥ ವ್ಯವಸ್ಥೆಯಾಗಿದೆ. ರೈತರು ಇವತ್ತು ಬೀದಿಗೆ ಇಳಿಯತಕ್ಕಂಥ ವ್ಯವಸ್ಥೆಯಾಗಿದೆ. ಅಂತಹ ಮಾತುಗಳನ್ನು ಅಧಿಕಾರಿಗಳು ಬಳಸಿದರೆ ಸರ್ಕಾರದವರು ಮೌನವಾಗಿದ್ದರು. ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆಯೇ ಅವರು ಈ ಮಾತನ್ನು ಆಡಿದ್ದರು. ನಾನು ಎದ್ದು ಗಲಾಟೆ ಮಾಡುವುದಕ್ಕೆ ಶುರು ಮಾಡಿದ ಮೇಲೆ ಅವರು ಸುಮ್ಮನಾದರು. ಆ ಸಂದರ್ಭದಲ್ಲಿ ಸ್ಪೀಕರ್ ಜೊತೆಗೆ ಮಾನ್ಯ ನಂಜೇಗೌಡರೂ ಕೂಡ ಅಲ್ಲಿದ್ದರು. ಕೊನೆಗೆ ಆ ವಿಚಾರವನ್ನು ಬಿ.ಎಸ್.ಪಾಟೀಲ್‌ಗೆ ವಹಿಸಿಬಿಟ್ಟು ಹೋದರು, ಕೊನೆಯವರೆಗೂ ಆ ವಿಚಾರದಲ್ಲಿ ತೀರ್ಮಾನವನ್ನೇ ತೆಗೆದುಕೊಳ್ಳಲಿಲ್ಲ. ಅದರ ಮೇಲೆ ಹೋರಾಟ ಮಾಡಿ ಈ ಒಂದು ಪೈಲಟ್ ಸ್ಕೀಮ್ ಎಂದು ಹೇಳಿ. ಗಂಡಸಿಯಿಂದ ವಿಶೇಷವಾಗಿ ಕಡಿಮೆ ದಂಡವನ್ನು ಹಾಕಿಸಿದರು. ಮೂಲತಃ ಸಕ್ರಮೀಕರಣದ ವ್ಯವಸ್ಥೆಯನ್ನು ಸರಳೀಕರಣಗೊಳಿಸಿದ ಮೇಲೆ, ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಈ ಯೋಜನೆಯನ್ನು ಏಕೆ ಕೇವಲ ಗಂಡಸಿಗೆ ಮಾತ್ರ ಕೊಟ್ಟಿರಿ ಎಂದು ಅವರನ್ನು ಕೇಳಬಹುದಿತ್ತು. ದೂರವಾಣಿ ಆದೇಶ ಅವರವರಿಗೂ ಬಂದಿತು. ಏಕೆಂದರೆ ಅವರು ಒಂದು ಕೆಇಬಿ ಸಬ್ ಕಮಿಟಿ ಸದಸ್ಯರಾಗಿದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಿದ್ದಾರೆ, ಬಹಳ ಸಂತೋಷ. ವಿಶೇಷವಾಗಿ ಇಡೀ ರಾಜ್ಯಕ್ಕೆ ಅವರೇ ಕೊಟ್ಟರು.

ಶ್ರೀ ಸಿದ್ಧರಾಮಯ್ಯ: ಏನು ಹೇಳುತ್ತಿದ್ದಿರಿ?

ಶ್ರೀ ಬಿ.ಶಿವರಾಂ: ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳಿಗೆ ತಾವು ಕೆಇಬಿ ಸಬ್ ಕಮಿಟಿಯಲ್ಲಿ ಇದ್ದಾಗ ಗಂಡಸಿಗೆ ಒಂದು ವಿಶೇಷ ಪೈಲಟ್ ಸ್ಕೀಮ್ ಕೊಟ್ಟು, ಅನಂತರ ಅದನ್ನು ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರಿ. ಅದರ ಬಗ್ಗೆಯೇ ನಾನು ಈಗ ಹೇಳುತ್ತಿದ್ದೆ. ಅದಕ್ಕಾಗಿ ನಿಮಗೆ ನಾನು ಕೃತಜ್ಞತೆಗಳನ್ನು ಹೇಳುತ್ತಿದ್ದೇನೆ. ಅದರ ಮುಂದಕ್ಕೆ ನೀವು ಇನ್ನೂ ಒಂದು ಮಾಡಬೇಕೆಂದು ನಾನು

ನಿಮ್ಮನ್ನು ಕೇಳುತ್ತಿದ್ದೇನೆ. ಏಕೆಂದರೆ ನಿಮಗೆ ಅದರ ಬಗ್ಗೆ ಚೆನ್ನಾಗಿ ಗೊತ್ತಾಗಿದೆ, ಯಾರು ಫೋನ್ ಮಾಡಿದರು? ಹೇಗೆ ಮಾಡಿದರು? ಏಕೆ ಆಯಿತು? ಹೇಗೆ ಆಯಿತು ಎಂಬುದೆಲ್ಲಾ ಸಾಕಷ್ಟು ನಡೆದು ಇಡೀ ರಾಜ್ಯಕ್ಕೆ ಈ ವ್ಯವಸ್ಥೆಯನ್ನು ನೀವು ನಿರ್ಮಾಣ ಮಾಡಿದ್ದೀರಿ. ಆದರೆ ಒಂದು ಮಾತನ್ನು ನಾನು ಸ್ಪಷ್ಟ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಒಳ್ಳೆಯದು ಮಾಡಿದ್ದೇನೆ ಎಂದು ಹೇಳಿ.

ಶ್ರೀ ಬಿ.ಶಿವರಾಂ: ನಾನು ನಿಮಗೆ ಆಗಲೇ ಅಭಿನಂದನೆಗಳನ್ನು ಹೇಳಿದೆ. ಆದರ ಜೊತೆಗೆ ಮುಂದೆ ನಿಮಗೆ ಇನ್ನೊಂದು ವಿಚಾರವನ್ನು ಹೇಳಬೇಕೆಂದಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರು ಅಭಿನಂದನೆಗಳನ್ನು ಬೇಕಾದರೆ ನೇರವಾಗಿ ಹೇಳಲಿ. ಹೇಳುವುದನ್ನು ಬೇಕಾದರೆ ಸುತ್ತು ಬಳಸಿ ಹೇಳಲಿ. ಅದು ನಾವು ಬೇಡ ಎನ್ನುವುದಿಲ್ಲ.

ಶ್ರೀ ಬಿ.ಶಿವರಾಂ: ನೀವು ಮಾಡಿರುವುದು ಇನ್ನೂ ಸಾಲದು. ನಾವು ಏನೋ ಸ್ವಲ್ಪ ಹೋರಾಟ ಮಾಡಿ ಅದನ್ನು ಆ ತರಹ ಒಂದು ಹಂತದಲ್ಲಿ ಮಾಡಿದರೆ ಒಂದು ಸಮಸ್ಯೆ ಬಗೆಹರಿಯಬಹುದೆಂದು ನಾವು ಮಾಡಿಸಿದ್ದೆವು. ಆದರೆ ನೀವು ಈಗಲೂ ಆ ದಂಡ ವಸೂಲಿ ರೈತನಿಗೆ ಇದೆಯಲ್ಲಾ, ಅದೆಲ್ಲವನ್ನೂ ಕೂಡ ನೀವು ತೆಗೆದು ಮನ್ನಾ ಮಾಡಬೇಕು. ನಾನು ಏಕೆ ಆ ರೀತಿ ಹೇಳುತ್ತೇನೆ ಎಂದರೆ, ಇದರಲ್ಲಿ ನೀವ್ಯಾರೂ ಕಂಬ, ವೈರು ಏನನ್ನೂ ಕೂಡ ಕೊಟ್ಟಿಲ್ಲ. ರೈತನೇ ಕಂಬಗಳನ್ನು ಕೊಂಡು ವೈರನ್ನು ತಂದು ಎಳೆದುಕೊಂಡಿದ್ದಾನೆ. ಇವತ್ತು ಎರಡು ಲಕ್ಷ ಬಾವಿಗಳಿಂದ ಮಂಡಳಿಗೆ ಎಷ್ಟು ಹಣ ಉಳಿದಿದೆ ಎಂಬುದನ್ನು ಚಿಂತನೆ ಮಾಡಿ. ಎರಡು ಲಕ್ಷ ಅನಧಿಕೃತ ಬಾವಿ ಬಂದಿದೆ ಎಂದರೆ ಆ ಬಾವಿಗಳಿಗೆ ಕೆಇಬಿಯವರು ಕಂಬ ವೈರ್ ಇತರ ಸಾಮಗ್ರಿಗಳನ್ನು ಕೊಡಬೇಕಾಗಿತ್ತು. ಅದೂ ಕೊಡಲಿಲ್ಲ. ಆ ದುಡ್ಡು ಕೆಇಬಿಗೆ ಉಳಿದಿದೆ. ಅನಧಿಕೃತ ಬಾವಿಗಳಿಂದ 200 ಕೋಟಿಗೂ ಮಿಗಿಲಾಗಿ ಹಣ ಕೆಇಬಿಗೆ ಉಳಿದಿದೆ. It is calculated in the presence of the Finance Member and the Chairman of the KEB. ಬೋರ್ಡ್‌ಗೆ ಇದರಿಂದ ಎಷ್ಟು ಹಣ ಉಳಿಯುತ್ತದೆ ಎನ್ನುವ ವಿಚಾರವನ್ನು ನಾವು ಕ್ಯಾಲ್‌ಕ್ಯೂಲೇಟ್ ಮಾಡಿದ್ದೇವೆ. ಒಂದು ವಿಚಾರ ನಾನು ಒಪ್ಪಿಕೊಳ್ಳುತ್ತೇನೆ, ಎಲ್ಲಿ ನಿಮಗೆ ಬಾವಿಗೆ ಸರ್ವಿಸ್ ಕೊಟ್ಟರೆ ಪವರ್ ಎಲ್ಲಿದೆ ಎನ್ನತಕ್ಕಂತಹ ಒಂದು ವಿಚಾರ ಹೊರತು ಪಡಿಸಿ ಬೋರ್ಡಿಗೆ ಇದರಿಂದ ಯಾವುದೂ ನಷ್ಟ ಇಲ್ಲ. ಇದಕ್ಕೋಸ್ಕರ ಉಪ ಮುಖ್ಯ ಮಂತ್ರಿಗಳಿಗೆ ಅಭಿನಂದನೆ ಹೇಳುವಾಗ ಇದರ ಜೊತೆಗೆ ಇನ್ನೊಂದು ಮಾತು ಏನು ಹೇಳುತ್ತಿದ್ದೇನೆ, ಮುಖ್ಯ ಮಂತ್ರಿಗಳೂ ಕೂಡ ಬಂದಿದ್ದಾರೆ. ಮೀಟರ್‌ಗಳ ಬಗ್ಗೆ ಬಹಳ ಸೂಕ್ಷ್ಮವಾದ ವಿಚಾರ ಇದೆ. ಮೀಟರ್‌ಗಳ ಬಗ್ಗೆ ಸ್ಪಷ್ಟೀಕರಣ ಕೇಳುವುದಕ್ಕಾಗಿ ಅವರ ಗಮನವನ್ನು ಸೆಳೆಯುತ್ತಿದ್ದೇನೆ. ಏಕೆಂದರೆ ಎರಡು ಲಕ್ಷ ಅನಧಿಕೃತ ಬಾವಿಗಳಿಗೆ ಏನು

ಸಕ್ರಮಗೊಳಿಸುತ್ತೇವೆ ಎನ್ನುವ ಮಾತನ್ನು ತಾವು ಹೇಳುತ್ತೀರಿ, ಈಗ 31ಕ್ಕೆ ಮುಗಿಯಿತು. ಎರಡು ಲಕ್ಷದಲ್ಲಿ ಕೇವಲ 40,000 ಜನ ಮಾತ್ರ ಕಟ್ಟಿದ್ದಾರೆ. ಕಾರಣವೇನೆಂದರೆ, ಈ ಸಮಿತಿ ಇಲ್ಲಿ ಬಂದ ಮೇಲೆ ಕ್ಯಾಬಿನೆಟ್‌ನಲ್ಲಿ ಮೀಟರ್ ಹಾಕುವುದನ್ನು ರದ್ದು ಮಾಡುತ್ತೇವೆ ಎಂದು ತಾವು ಹೇಳಿದ ಮೇಲೆ ರೈತ 360 ರೂಪಾಯಿ ಉಳಿಯುತ್ತದೆ ಎಂದು ಕಾಯುತ್ತಿದ್ದಾನೆ. ನೀವು ಒಂದು ತಿಂಗಳು ಮತ್ತೆ ಎಕ್ಸ್‌ಟೆಂಡ್ ಮಾಡಿದ್ದೀರಿ. ಅದು ಸದುಪಯೋಗವಾಗಬೇಕಾದರೆ ಕನಿಷ್ಟ ಮೀಟರ್ ನಾವು ಅವರಿಗೆ ಹಾಕುವುದಿಲ್ಲ ಎನ್ನತಕ್ಕಂತಹ ಮಾತನ್ನು ಸ್ಪಷ್ಟ ಮಾಡಿದರೆ 960 ರೂಪಾಯಿ ಉಳಿಯುತ್ತದೆ. ಅವನು ಕೂಡಲೇ ಆ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತಾನೆ. ಬೋರ್ಡಿನ ವ್ಯವಸ್ಥೆ ಉಳಿಯುತ್ತದೆ. ಎಲ್ಲಾ ಸರಿ ಹೋಗುತ್ತದೆ ಎಂದು ನಾನು ನಿಮಗೆ ತಿಳಿಸುತ್ತೇನೆ. ಬೋರ್ಡಿನವರು ಏನು ಹೇಳುತ್ತಾರೆಂದರೆ, ನಾವು ರೈತರ ಬಾವಿಯಿಂದ ಕಿತ್ತಂತಹ ಮೀಟರ್ ಏನಿತ್ತು ಅವುಗಳಿಗೆ ಮೀಟರ್ ಹಾಕುವುದು ಮಾಡುವುದಿಲ್ಲ, ಇತ್ತೀಚೆಗೆ ಹೊಸದಾಗಿ ಸರ್ವಿಸ್ ಕೊಡುತ್ತೇವೆ, ಅನಧಿಕೃತ ಬಾವಿಗಳನ್ನು ಸಕ್ರಮಗೊಳಿಸುತ್ತೇವೆ. ಬಾವಿಗಳಿಗೆ ಮೀಟರ್ ಹಾಕುವುದು ಮುಂದುವರೆಯುತ್ತದೆ ಅನ್ನತಕ್ಕಂತಹ ಮಾತನ್ನು ಹೇಳುತ್ತಿದ್ದಾರೆ. ಇದು ಹೌದೇ ಅಲ್ಲವೇ ಎನ್ನುವ ಸ್ಪಷ್ಟೀಕರಣ, ಎಲ್ಲಿಯವರೆಗೆ ರೈತನಿಗೆ ದೊರೆಯುವುದಿಲ್ಲ ಅಲ್ಲಿಯವರೆಗೆ ತಾವು ವಿಸ್ತರಣೆ ಮಾಡಿರತಕ್ಕಂತಹ ಯೋಚನೆ ಸಮರ್ಪಕವಾಗಿ ಅನುಷ್ಠಾನ ಆಗುವುದಿಲ್ಲ. ಅದು ಆಗಲಿಲ್ಲವೆಂದರೆ ಮಂಡಳಿಗೆ ಕೋಟಿಗಟ್ಟಲೆ ಅನಾಹುತವಾಗುತ್ತದೆ. ಒಂದು ಹೇಳಿದೆ, ಚನ್ನರಾಯಪಟ್ಟಣದ ಒಂದು ಡಿವಿಷನ್‌ನಲ್ಲಿ ಹೋದ ವರ್ಷ 384 ಟಿಸಿ ಸುಡುವುದರ ಮೂಲಕ ಮಂಡಳಿಗೆ ಎರಡು ಕೋಟಿಗೂ ಮೀರಿ ನಷ್ಟವಾಗಿದೆ. ಮಳೆ ಕುಸಿದ ರೈತ ಬೇಸಾಯ ಪ್ರಾರಂಭ ಮಾಡುತ್ತಾನೆ. ನೀರಿನ ಪಂಪ್‌ಸೆಟ್ ಆನ್ ಮಾಡುತ್ತಾರೆ, ಅನಧಿಕೃತ ಬಾವಿಗಳನ್ನು ಆನ್ ಮಾಡಿದ ಅಂದರೆ, ಟಿಸಿ ಮೇಲೆ ಓವರ್ ಲೋಡ್ ಆಗುತ್ತದೆ. ಒಂದು ಟಿಸಿಯಲ್ಲಿ 100 ಕೆವಿ ಏನಿರುತ್ತದೆ ಅದು ಹೆವಿ ಆಗುತ್ತದೆ. 200 ಹೆಚ್‌ಪಿ ಬಾವಿಗಳಿಗೆ ಕುಡಿಯುವ ನೀರಿನ ಕನ್‌ಕ್ಷನ್ ಹಾಕತಕ್ಕಂಥದ್ದು ಮಾಡುತ್ತಾರೆ. ಆಗ ಟಿಸಿ ಹೊರೆಯಾಗಿ ವೈರ್ ಸುಟ್ಟು ಹೋಗುತ್ತದೆ. ಮಂಡಳಿಗೆ ನಷ್ಟ ಹೆಚ್ಚಾಗುತ್ತದೆ. ಅದನ್ನು ತಪ್ಪಿಸತಕ್ಕಂತಹ ದೃಷ್ಟಿಯಿಂದ ದಯವಿಟ್ಟು ಗಮನ ಹರಿಸಿ ಮೀಟರ್ ಬಗ್ಗೆ ಸ್ಪಷ್ಟೀಕರಣ ಕೊಡತಕ್ಕಂಥದ್ದು ತಾವು ಮಾಡಿರುವುದು ಅಭಿನಂದಿಸುತ್ತೇನೆ. ಇನ್ನೊಂದು ಕೆಲಸ ನೀವು ಮಾಡಿ ಇನ್ನೊಂದು ಸಾರಿ ಅಭಿನಂದಿಸುತ್ತೇನೆ. ಇವತ್ತು ಆ ಬಾವಿಗಳಿಗೆ ಕಂಬ ವೈರ್ ಮತ್ತೊಂದು ಎಲ್ಲಾ ಹಾಕಿಸಿಕೊಂಡಿರತಕ್ಕಂತಹ ರೈತ ಬೋರ್ಡಿಗೆ 200 ಕೋಟಿ ರೂಪಾಯಿ ಹಣ ಉಳಿತಾಯ ಮಾಡಿದ್ದಾನೆ. ದಯವಿಟ್ಟು ನಿಮಗೆ ಎರಡೂವರೆ ಸಾವಿರ ರೂಪಾಯಿ ದಂಡ, ಮೀಟರ್ ಕಾಸ್ಟ್ ಏನೂ ಇಲ್ಲ ಮನ್ನಾ ಮಾಡಿದ್ದೇವೆ, ನೀವೆಲ್ಲಾ ರೆಗ್ಯುಲರೈಸ್ ಮಾಡಿಕೊಳ್ಳಿ ಅನ್ನತಕ್ಕಂತಹ ಮಾತನ್ನು ಹೇಳಿ ಬಿಡಿ. ಭಿನ್ನಮತೀಯ ಚಟುವಟಿಕೆ ನಿಂತು ಬಿಡುತ್ತದೆ. ರೈತರಿಗೆ ಆತ್ಮ ವಿಶ್ವಾಸ ಬರುತ್ತದೆ. ಮುಂದಿನ ಚುನಾವಣೆಗೆ ಸಹಾಯವಾಗುತ್ತದೆ. ಏರು ಪೇರುಗಳ ಚರ್ಚೆ ಎಂದರೆ

ಹಿಂದಿನ ಸರ್ಕಾರದಲ್ಲಿ ಉಚಿತವಾಗಿ ವಿದ್ಯುಚ್ಚಕ್ತಿ ಕೊಡುತ್ತಿದ್ದರು, ಮೀಟರ್ ಇರಲಿಲ್ಲ, ಹೇಗೆ ಬೇಕಾದರೂ ಹಾಕಿಕೊಳ್ಳಬಹುದಿತ್ತು. ಐದು ರೂಪಾಯಿಯಲ್ಲಿ ಒಂದು ಅರ್ಜಿ ಕೊಟ್ಟು ರಿಜಿಸ್ಟರ್ ಆದರೆ ನಿಮ್ಮ ಡಿಪಾಸಿಟ್ ಇಲ್ಲ. ಈಗ ಡಿಪಾಸಿಟ್ ಕಟ್ಟಬೇಕು; ಮೀಟರ್ ಕಾಸ್ಟ್ ಕೊಡಬೇಕು, 300 ಹೆಚ್.ಪಿ. ಕೊಡಬೇಕು. ಅದರಲ್ಲೂ ಸಮರ್ಪಕವಾದ ವಿದ್ಯುತ್ ಇಲ್ಲ. ವಿದ್ಯುಚ್ಚಕ್ತಿ ಸಮರ್ಪಕವಾಗಿ ಕೊಡತಕ್ಕಂತಹ ಶಕ್ತಿ ಇಲ್ಲದೆ ಇದ್ದ ಮೇಲೆ ಎಷ್ಟಾದರೂ ಉಳಿಸಿಕೊಳ್ಳಿ ಹೋಗಿ, ನಾವು ಏನು ನಿಮಗೆ ಬಂಡವಾಳ ಹಾಕಿಲ್ಲ, 13 ಲಕ್ಷ ಬಾವಿ, ಒಂದು ಬಾವಿಗೆ ಕನಿಷ್ಟ 50,000 ರೂಪಾಯಿ ಹಾಗೆ ಇವತ್ತು ರೈತ ಬಂಡವಾಳ ಹೂಡಿರತಕ್ಕಂಥದ್ದು ಇವತ್ತು 7,000 ಕೋಟಿ. ಸಾಧಾರಣ 40 ಲಕ್ಷ ಎಕರೆ ನೀರಾವರಿಯಾಗಿದೆ ಅನ್ನತಕ್ಕಂಥದ್ದು ತಮ್ಮ ಸರ್ಕಾರದ ಪ್ರಕಟಣೆಯಲ್ಲಿರತಕ್ಕಂಥದ್ದು. ಮೈನ್ಸ್ ಅಂಡ್ ಜಿಯಾಲಜಿ ಅದಕ್ಕೆ ಮುಖ್ಯ ಮಂತ್ರಿಗಳಿಗೆ ನಾನು ಗಮನಹರಿಸುವುದು ಮಾನ್ಯ ನಾಗೇಗೌಡರಿಗೂ ಹೇಳುತ್ತಿದ್ದೇನೆ, 11.2 ಲಕ್ಷ ಎಕರೆ ಕಾವೇರಿ ಬೇಸಿನ್‌ನಲ್ಲಿ ನೀರಾವರಿ ಪ್ರದೇಶ ಮಾಡುವುದಕ್ಕೆ 2.8 ಕೋಟಿ 1.4.98ರಲ್ಲಿ ಖರ್ಚು ಮಾಡಿದ್ದೇವೆಂದು ತಮ್ಮ ಸರ್ಕಾರದ ಅಂಕಿ ಅಂಶ ಹೇಳುತ್ತದೆ. ಇಷ್ಟೊಂದು ಬಂಡವಾಳ ಹಾಕಿ ಎಲ್ಲೆಲ್ಲೋ ಸಾಲ ತಂದು ಅವರಿಗೆ ಬಡ್ಡಿ ಕಟ್ಟಿ ಈ ಪ್ರದೇಶವನ್ನು ಮಾಡಿ ಜೊತೆಗೆ ಮೇಂಟೆನೆನ್ಸ್ ಕೂಡ ನೀವೇ ಕೊಡುತ್ತೀರಿ. ನಾನ್ ಪ್ಲಾನ್‌ನಲ್ಲಿ ಅಷ್ಟೊಂದು ಮಾಡಬೇಕಾದರೆ 41 ಲಕ್ಷ ಎಕರೆ ಇವತ್ತು ರೈತ ಬೇಸಾಯಕ್ಕೆ ಅವನ ಬಂಡವಾಳ ಹಾಕಿ ತಂದಿದ್ದಾನೆಂದರೆ ಅದರಿಂದ 300 ರೂಪಾಯಿ ಹೆಚ್‌ಪಿಗೆ ಮಂಡಳಿಗೆ ರೈತ ತುಂಬುವುದು ಮ್ಯಾಕ್ಸಿಮಮ್ 100 ರಿಂದ 150 ರವರೆಗೆ. ಎಲ್ಲಿಂದಲೋ ಸಾಲ ತಂದು ಬಂಡವಾಳ ಹಾಕಿ 150 ರೂಪಾಯಿ ಕೊಡುತ್ತಾನೆಂದು ನಿಮ್ಮ ಯಾವ ಸೆಂಟ್ರಲ್ ಬೋರ್ಡ್ ಅಥಾರಿಟಿಯವರೂ ನಿಮ್ಮ ಮೇಲೆ ಏನು ಕಡ್ಡಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಈಗಾಗಲೇ ಕೇಂದ್ರ ಸರ್ಕಾರ ಕೊಡುತ್ತಿದೆ. ತಮಿಳಾನಾಡು ಸರ್ಕಾರದಲ್ಲಿ ಕೆಟಗರಿ ಮಾಡಿ ಸಣ್ಣ ರೈತರಿಗೆ ಈ ವ್ಯವಸ್ಥೆ ನಿಂತಿದೆ. ಪಂಜಾಬ್ ಸರ್ಕಾರದಲ್ಲೂ ಇದೆ. ಯಾವ್ಯಾವುದೋ ಸಬ್ಸಿಡಿ ಕೊಡುತ್ತೇವೆ, 150 ರೂಪಾಯಿ ಯಾವ ಲೆಕ್ಕ ಒಂದುವರೆ ಪರ್ಸೆಂಟ್ ಇರುವ ಅಧಿಕಾರಿಗಳು ಸ್ಟ್ರೈಕ್ ಮಾಡುತ್ತಾರೆಂದರೆ ಡಿಎ 50 ರಿಂದ 100 ಕೋಟಿ ರೂ ಕೊಡುತ್ತೇವೆ. ಒಂದು ಸಾರಿ ನೀವು ಎಕ್ಸೈಸ್‌ನಲ್ಲಿ ಏನಾದರೂ ಟೈಟ್ ಮಾಡಿದರೆ ಸಾಕು. ಅದರ ನಾಲ್ಕರಷ್ಟು ದುಡ್ಡು ಬರುತ್ತದೆ. ಬೇಕಾದಷ್ಟು ಮೂಲಗಳಿರಬೇಕಾದರೆ, ಅಷ್ಟೊಂದು ಜನ ರೈತರ ಮೇಲೆ ಈ ಭಾರ ಹಾಕುವುದು ಉಚಿತವಾ? ವಿದ್ಯುಚ್ಚಕ್ತಿ ಇಲ್ಲ ಅನ್ನತಕ್ಕಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇರತಕ್ಕಂಥದ್ದು ಹಂಚಿಕೊಳ್ಳುವುದಕ್ಕೆ ರೈತ ತಯಾರಾಗಿದ್ದಾನೆ. ಇದರ ಜೊತೆಗೆ ಇನ್ನು ಒಂದು ವಿಚಾರ ಹೇಳುತ್ತೇನೆ. ನಬಾರ್ಡ್‌ನವರ ಆದೇಶ ಇದೆ. ಕೆಲವು ತಾಲ್ಲೂಕುಗಳನ್ನು ಡಾರ್ಕ್ ಅಂಡ್ ಗ್ರೇ ಮಾಡಿ ಪ್ರಕಟಣೆ ಮಾಡಿದ್ದಾರೆ. ಆ ಅಂತರ್‌ಜಲ ಮಟ್ಟದ ಆಧಾರದ ಮೇಲೆ ಈ ಪ್ರದೇಶಗಳಿಗೆ ಇವತ್ತು ನಬಾರ್ಡ್‌ನವರು ಯಾವುದು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಬ್ಯಾಂಕ್‌ಗಳ ಮೂಲಕ ಸಾಲ

ಕೊಡುವುದಿಲ್ಲವೆಂದು ಹೇಳಿದ್ದಾರೆ. ಆದರೂ ಕೂಡ ಬಾವಿ ಹಾಕಿಕೊಳ್ಳುತ್ತಿದ್ದಾನೆ, ನೀವು ಕೂಡ ಕೆಇಬಿಯವರು ಇವತ್ತು ಸರ್ವಿಸ್ ಕೊಡುವುದಿಲ್ಲವೆಂದು ಹೇಳಿದರೆ, ನೀರಿನ ಮಟ್ಟ ಕುಸಿಯುವುದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕಾಗಿದೆ. ಮಾನ್ಯ ಪ್ರಕಾಶ್‌ರವರೂ ಕೂಡ ಅದನ್ನೇ ಹೇಳುತ್ತಿದ್ದರು. ಬಹುಶಃ ಒಂದು ಬಿಲ್ ಕೂಡ ತರುತ್ತಿದ್ದಾರೆಂದು ಅಂದುಕೊಂಡಿದ್ದೇನೆ. "Drinking Water Monitoring Regularisation Bill" ಕುಡಿಯುವ ನೀರಿನ ಬಾವಿಯ ಪಕ್ಕದಲ್ಲಿ 500 ಮೀಟರ್ ಅಂತರದಲ್ಲಿ ರೈತ ಮತ್ತೊಂದು ಬಾವಿಯನ್ನು ಹಾಕಿಕೊಳ್ಳುವ ಹಾಗಿಲ್ಲ. ಕುಡಿಯುವ ನೀರಿನ ಬಾವಿ ಬತ್ತಿದರೆ ಸುತ್ತ ಮುತ್ತಲಿನಲ್ಲಿರತಕ್ಕಂತಹ ನೀರಾವರಿ ಬಾವಿ ಯಾವುದಾದರೂ ಇದ್ದರೆ ಅದನ್ನು ವಶಕ್ಕೆ ತೆಗೆದುಕೊಳ್ಳತಕ್ಕಂತಹ ವ್ಯವಸ್ಥೆ ನಾವು ಮಾಡುತ್ತಿದ್ದೇವೆ ಅನ್ನತಕ್ಕಂತಹ ಮಾತನ್ನು ಹೇಳಿದರು ನಾನು ಒಪ್ಪಿಕೊಂಡೆ. ಆದರೆ ಇದಕ್ಕೆ ಮೂಲಭೂತವಾಗಿ ನೀವು ತರತಕ್ಕಂಥದ್ದಕ್ಕೆ ಕಾರಣ ಏನು? ಅಂತರ್ಜಲ ಮಟ್ಟ ಕುಸಿಯುತ್ತಿದೆ ಅನ್ನತಕ್ಕಂತಹ ಒಂದೇ ದೃಷ್ಟಿಯಿಂದ ಇವತ್ತು ಸರ್ವೇ ಪ್ರಕಾರ ಈ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳಲ್ಲಿ ನೀರಿನ ಮಟ್ಟ 85 ಪರ್ಸೆಂಟ್‌ಗಿಂತ ಹೆಚ್ಚಿಗೆ ಬಳಕೆಯಾಗತಕ್ಕಂಥದ್ದು ಆಗಿದೆ. ಏನು ಅಂತರ್ಜಲದ ಸಂಪತ್ತು ಇದೆ ಅದರಲ್ಲಿ 85 ಪರ್ಸೆಂಟ್‌ಗಿಂತ ಹೆಚ್ಚಿಗೆ ಇರತಕ್ಕಂಥದ್ದು ಕಪ್ಪು ಪ್ರದೇಶ ಎಂದು ಘೋಷಣೆ ಮಾಡಿದ್ದೀರಿ. ಸಾಲ ಸೌಲಭ್ಯ ವ್ಯವಸ್ಥೆ ಇಲ್ಲ, ವಿದ್ಯುಚ್ಛಕ್ತಿ ಸೌಲಭ್ಯದ ವ್ಯವಸ್ಥೆ ಇಲ್ಲ, 22 ತಾಲ್ಲೂಕುಗಳು 65.85 ಪರ್ಸಂಟ್‌ಗೆ ಅಂತರ್ಜಲದ ವ್ಯವಸ್ಥೆ ಉಪಯೋಗವಾಗಿದೆ. ಅದನ್ನು ಗ್ರೇ ಪ್ರದೇಶ ಎಂದು ಘೋಷಣೆ ಮಾಡಿದ್ದೀರಿ. ಅಲ್ಲಿಗೂ ಯಾವುದೇ ವ್ಯವಸ್ಥೆ ಇಲ್ಲ. 29 ತಾಲ್ಲೂಕುಗಳನ್ನು 50 ರಿಂದ 65 ಪರ್ಸೆಂಟ್ ಅಂತರ್ಜಲ ನೀರಿನ ಉಪಯೋಗ ಇಲ್ಲಿ ಆಗಿದೆ. ಅದನ್ನು ಇಂಟರ್‌ಮೀಡಿಯೇಟ್ ತಾಲ್ಲೂಕು ಎಂದು ತಾವು ಪ್ರಕಟಣೆ ಮಾಡಿದ್ದೀರಿ. ಈ 175 ತಾಲ್ಲೂಕುಗಳ ಪೈಕಿ 75 ತಾಲ್ಲೂಕುಗಳ ರೈತನ ಪರಿಸ್ಥಿತಿ ಏನು, ಅಂತರ್ಜಲದ ಅಭಿವೃದ್ಧಿ ಮಾಡತಕ್ಕಂಥದ್ದಕ್ಕೆ ಯಾವ ರೀತಿಯ ಕಾರ್ಯಕ್ರಮ ಸರ್ಕಾರ ಹಮ್ಮಿಕೊಳ್ಳಬೇಕು ಅನ್ನುವುದಕ್ಕೆ ಸರ್ಕಾರದಲ್ಲಿ ಏನಾದರೂ ಪ್ರಾಮಾಣಿಕ ಚಿಂತನೆ ಪ್ರಾರಂಭ ಆಗಿದೆಯಾ? ಅದಕ್ಕೆ ಒಂದು ಪ್ರಶ್ನೆ ಸದನದಲ್ಲಿ ಹಾಕಿದ್ದಕ್ಕೆ ಉತ್ತರ ಈ ರೀತಿ ಬಂದಿದೆ. ಅಂತರ್ಜಲ ಅಭಿವೃದ್ಧಿಗಾಗಿ ಸರ್ಕಾರ ಇದುವರೆಗೆ ಹಾಕಿಕೊಂಡಿರುವ ಕಾರ್ಯಕ್ರಮಗಳು ಏನು ಎಂದು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ನೀರಾವರಿ ಸಚಿವರಿಗೆ ಕೇಳಿದರೆ ಅಂತರ್ಜಲ ಅಭಿವೃದ್ಧಿಗೆ ಭೂ ಮತ್ತು ಗಣಿ ಕೃತಕ ಮರು ನೀರು ಪೂರೈಕೆ ವ್ಯವಸ್ಥೆಯ ಯೋಜನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮ ಹಮ್ಮಿಕೊಂಡು ಪ್ರಗತಿ ಸಾಧಿಸುವಲ್ಲಿ ಕಾರ್ಯನಿರತವಾಗಿದೆ. ಈ ಕುರಿತು 98.80 ಕೋಟಿ ರೂಪಾಯಿಗಳ ಸಹಾಯಧನವನ್ನು ಕೋರಿ ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿದರು. ಮಳೆ ಆಶ್ರಿತ 175 ತಾಲ್ಲೂಕುಗಳಲ್ಲಿ 72 ತಾಲ್ಲೂಕುಗಳ ಪರಿಸ್ಥಿತಿ ಈ ರೀತಿ ಇದೆ ಎಂದರೆ

ಈ ರಾಜ್ಯದ ಸಂಪನ್ಮೂಲ ಯಾವ ಕಡೆಗೆ ಹೋಗುತ್ತಿದೆ.

5. 10 ಪಿಎಂ

ನನಗೇನೋ ಬಹಳ ಬೇಸರವಾಗಿದೆ, ನಾನು ಇರುವುದನ್ನು ಇದ್ದ ಹಾಗೆ ಹೇಳಿಬಿಡುತ್ತೇನೆ, ನಮ್ಮ ಅರಸೀಕೆರೆ ತಾಲ್ಲೂಕನ್ನು ಇವೊತ್ತು ಗ್ರೇಏರಿಯಾ ಎಂದು ಪ್ರಕಟಣೆ ಮಾಡಿದ್ದಾರೆ. ನೀವು ಇಂದು ಎಲ್ಲಿಂದಲಾದರೂ ಸಾಲವನ್ನು ತೆಗೆದುಕೊಂಡು ಬಂದರೂ ಕೂಡ ಈ ರಾಜ್ಯದ 5 ಕೋಟಿ ಜನರ ಮೇಲೆ ಅದರ ಹೊರೆ ಬೀಳುತ್ತದೆ. ಈ ರೀತಿಯ ಹೊರೆಯನ್ನು 5 ಕೋಟಿ ಜನರು ಹೊತ್ತಿರುವಾಗ ಯಾವುದೇ ಒಂದು ಭಾಗದಲ್ಲೂ ಕೂಡ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಇವೊತ್ತು ನೀರಾವರಿ ಕೆಲಸ ಹೊಳೆನರಸಿಪುರದಿಂದ ಪ್ರಾರಂಭವಾಗಿ ಅರಕಲಗೂಡು ಮತ್ತು ಚೆನ್ನರಾಯಪಟ್ಟಣದಲ್ಲಿ ಸ್ವಲ್ಪ ಭಾಗದಲ್ಲಿ ಆಗಿದೆ. ನಾನು ಏಕೆ ಈ ಮಾತನ್ನು ಒತ್ತಿ ಹೇಳುತ್ತಿದ್ದೇನೆಂದರೆ ಈ ಭಾಗಕ್ಕೆ ನೀವು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿರುವಾಗ ಮಳೆ ಇಲ್ಲದೆ ನಿರಂತರವಾಗಿ ಬರಗಾಲದಿಂದ ತೊಂದರೆಗೊಳಗಾಗಿರುವ ಅರಸೀಕೆರೆ ಮತ್ತು ಚೆನ್ನರಾಯಪಟ್ಟಣ ಭಾಗದ ರೈತರುಗಳ ಸಲುವಾಗಿ ಈ ರಾಜ್ಯದ ಸಂಪನ್ಮೂಲದಲ್ಲಿ ಎಷ್ಟು ಭಾಗವನ್ನು ನೀವು ಖರ್ಚು ಮಾಡುತ್ತಿದ್ದೀರಿ? ಈ ವಿಚಾರದಲ್ಲಿ ಅಸಮತೋಲನ ಎದ್ದು ಕಾಣುತ್ತಿರುವುದನ್ನು ಎಲ್ಲಾ ಶಾಸಕರುಗಳು ಯೋಚನೆ ಮಾಡಬೇಕಾಗಿದೆ. ಆ ಭಾಗದ 72 ತಾಲ್ಲೂಕುಗಳನ್ನು ಪ್ರತಿನಿಧಿಸತಕ್ಕಂಥ ಶಾಸಕರುಗಳಾಗಿ ನಾವೇನಿದ್ದೇವೆ ನಾವು ನಿಜವಾಗಿಯೂ ನಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತಿಲ್ಲ. ಮಾನ್ಯ ಶಿವಕುಮಾರ್‌ರವರೇ, ನೀವು ಇದನ್ನು ಗಮನಿಸಬೇಕು. ಆ 72 ತಾಲ್ಲೂಕುಗಳ ರೈತರ ಸಮಸ್ಯೆ ಇನ್ನು ಎರಡು ಮೂರು ವರ್ಷಗಳಲ್ಲಿ ಯಾವ ಮಟ್ಟಕ್ಕೆ ತಲುಪುತ್ತದೆಯೋ ಗೊತ್ತಿಲ್ಲ. ಈ ತಾಲ್ಲೂಕುಗಳಲ್ಲಿ 40 ಲಕ್ಷ ಎಕರೆ ಭೂಮಿ ನೀರಾವರಿ ಪಂಪ್‌ಸೆಟ್ ಮೂಲಕ ಏನಾಗುತ್ತಿದೆಯೋ ಅವುಗಳಿಗೆ ಇನ್ನು ಎರಡುಮೂರು ವರ್ಷಗಳಲ್ಲಿ ನೀರೇ ಸಿಗದೆ ಇರುವ ಪರಿಸ್ಥಿತಿ ಉದ್ಭವವಾಗುತ್ತದೆ. ಜಲಕ್ಷಾಮ ಪ್ರಾರಂಭವಾಗುತ್ತದೆ. ಪರಿಸರದ ವಾತಾವರಣ ಕಲುಶಿತಗೊಳ್ಳುತ್ತದೆ. ಈಗಾಗಲೇ ಏನು ಎಕಲಾಜಿಕಲ್ ಇಂಬ್ಯಾಲೆನ್ಸ್ ಪ್ರಾರಂಭವಾಗಿದೆಯೋ, ಅದು ಇನ್ನೂ ಹೆಚ್ಚಾಗುತ್ತದೆ. ಬಾವಿಗಳು ಇಂದು ಬತ್ತಿಹೋಗಿವೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವ ವಿಚಾರವನ್ನು ಈಗ ಮುಖ್ಯಮಂತ್ರಿಗಳು ಸ್ವಲ್ಪ ಕಿವಿಗೆ ಹಾಕಿಕೊಳ್ಳಬೇಕು. ನೀರಾವರಿ ಯೋಜನೆಗಳನ್ನು ತೆಗೆದುಕೊಂಡಂಥ ಕಾಲದಲ್ಲಿ ಮಾನ್ಯ ಗೋಪಾಲಗೌಡರು ಒಂದು ವಾದವನ್ನು ಮಂಡಿಸಿದ್ದರು. ಸಂಪನ್ಮೂಲವನ್ನು ಈ ರಾಜ್ಯದ ಇಡೀ ಜನರಿಂದ ನಾವು ಸಂಗ್ರಹಣೆ ಮಾಡುತ್ತೇವೆ. ಕೆಲವು ಪ್ರದೇಶಗಳಿಗೆ ಇದು ಅನುಕೂಲವಾಗುತ್ತದೆ. ಹೆಚ್ಚು ಒತ್ತನ್ನು ನಾವು ನೀರಾವರಿ ಇರುವ ಕೆಲವು ಪ್ರದೇಶಗಳಿಗೆ ಕೊಡುತ್ತೇವೆ. ಉಳಿದ

ಪ್ರದೇಶಗಳಿಗೆ ನಾವೇನು ಮಾಡುತ್ತೇವೆಂದರೆ ಎಲ್ಲಾ ಯೋಜನೆಗಳಲ್ಲಿ ಸಮಪಾಲನ್ನು ಮಾತ್ರ ಕೊಡುತ್ತೇವೆ. ನಾನು ಹೇಳುವುದೇನೆಂದರೆ ಆ ಉಳಿದ ಯೋಜನೆಗಳಲ್ಲಾದರೂ ನೀವು ಯಾವುದಾದರೂ ವಿಶೇಷ ಯೋಜನೆಯನ್ನು ಹಾಕಿಕೊಂಡು ಆ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆಯನ್ನು ಕೊಡಬೇಕು. ಇದನ್ನು ಮಾನ್ಯ ಗೋಪಾಲಗೌಡರೂ ಕೂಡ ಹೇಳಿದ್ದರು. ಈ ಮಾತನ್ನು ಬಸವಲಿಂಗಪ್ಪನವರೂ ಕೂಡ ಪದೇ ಪದೇ ಹೇಳಿದ್ದರು. ನಾವು ನೀರಾವರಿ ಆಗತಕ್ಕಂಥ ಪ್ರದೇಶದಲ್ಲಿದ್ದರೂ ಕೂಡ ಈ ವಾದವನ್ನು ಒಪ್ಪಿಕೊಂಡಿದ್ದೆವು. ಇದನ್ನು ಸರ್ಕಾರ ಕೂಡ ಅರ್ಥಮಾಡಿಕೊಂಡು ಒಪ್ಪಿಕೊಳ್ಳುತ್ತದೆ. ಆದರೆ ಜಾರಿಗೆ ತಂದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಈ ನೀರಾವರಿ ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಿಗೆ ವಿಶೇಷವಾದ ಯೋಜನೆಗಳನ್ನು ಹಾಕಿಕೊಂಡು ತಮ್ಮ ಕಾಲದಲ್ಲಿಯಾದರೂ ಅದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಆದಷ್ಟು ಬೇಗ ನೀವು ಚಿಂತನೆಯನ್ನು ಮಾಡಬೇಕಾಗಿದೆ.

ಶ್ರೀ ಬಿ.ಶಿವರಾಮು: ಉಪಾಧ್ಯಕ್ಷರೆ, ಇನ್ನು ಹೈದ್ರಾಬಾದ್-ಕರ್ನಾಟಕ ಭಾಗದ ಅಭಿವೃದ್ಧಿ ಕುಂಠಿತವಾಗಿದೆಯೆಂದು ಹೇಳಿದ್ದಾರೆ. ಇದಕ್ಕೆ ಹಣ ಹೆಚ್ಚು ಕೊಡಬೇಕೆನ್ನಲಾಗಿದೆ. ಬರಗಾಲಪೀಡಿತ ಕೆಲವು ಬಯಲು ಸೀಮೆ ಪ್ರದೇಶಗಳಿಗೆ ಹಣ ಕೊಡಬೇಕು ಎಂದಾಗ ನಮ್ಮ ಮಾನ್ಯ ನಂಜೇಗೌಡರು ಒಂದು ಮಾತನ್ನು ಹೇಳಿದರು. ಅವರು ತಮ್ಮ ಹಿರಿಯ ಅನುಭವದಲ್ಲಿ ಮಾತನಾಡುತ್ತಾ ಒಂದೊಂದು ಕ್ಷೇತ್ರದಲ್ಲೂ ಕೂಡ ಒಂದೆರಡು ತಾಲ್ಲೂಕುಗಳು ಕೂಡ ಈ ರೀತಿಯ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎನ್ನುವ ಮಾತನ್ನು ಹೇಳಿದರು. ಇಂದು ನೀವು ತರುವ ಸಾಲದ ಸಂಪನ್ಮೂಲಕ್ಕೆ ರಾಜ್ಯದ ಎಲ್ಲಾ ಜನರು ಹೊಣೆಗಾರರೇ ಆಗಿದ್ದಾರೆ. ಇದನ್ನರಿತುಕೊಂಡ ನಮ್ಮ ಕ್ಷೇತ್ರದ ಜನಗಳು ಇದರ ಬಗ್ಗೆ ಕೇಳದೇ ಸುಮ್ಮನಿದ್ದಾರೆ ನೋಡಿ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನೀರಾವರಿ ಪ್ರದೇಶಗಳಿಗೆ ವಿಶೇಷ ಯೋಜನೆಗಳಿವೆಯಾದರೂ ಉಳಿದ ಪ್ರದೇಶಗಳಿಗೆ ಆ ರೀತಿಯ ವಿಶೇಷ ಯೋಜನೆಗಳಿಲ್ಲವೆಂದು ಹೇಳಿದ್ದಾರೆ. ಆದರೆ ಈಗಾಗಲೇ ಬಂಜರು ಭೂಮಿ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾನ್ಯ ವೈಜನಾಥ್ ಪಾಟೀಲ್‌ರ ಕ್ಷೇತ್ರದ ಚಿಂಚೋಳಿಗೆ 5 ಕೋಟಿ ರೂ.ಗಳನ್ನು ಕೊಡಲಾಗಿದೆ. ಅದೇ ರೀತಿ ಮಾನ್ಯ ವೀರಭದ್ರಪ್ಪನವರ ಕ್ಷೇತ್ರಕ್ಕೆ 5 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಈ ರೀತಿ ಪ್ರತಿ ವರ್ಷಕ್ಕೂ 75 ಲಕ್ಷ ರೂ.ಗಳನ್ನು ಕೊಡುತ್ತಿದ್ದೇವೆ. ಇದಲ್ಲದೇ ನಮ್ಮ ಜೆ.ಆರ್.ವೈ ಮತ್ತು ಇ.ಎ.ಎಸ್. ಸ್ಕೀಮ್‌ನಲ್ಲಿ ಈ ಪ್ರದೇಶಗಳಿಗೆ ಹೆಚ್ಚಿನ ಹಣ ಸಿಗುತ್ತದೆ. ''ಡೆಸರ್ಟ್ ಏರಿಯಾ ಡೆವಲಪ್‌ಮೆಂಟ್'' ಯೋಜನೆಯಡಿ ಅರೆಮರಳುಗಾಡು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಲುವಾಗಿ 27 ಕೋಟಿ ರೂ.ಗಳ ವಿಶೇಷ

ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಇದನ್ನು 22 ತಾಲ್ಲೂಕುಗಳಲ್ಲಿ ಹಮ್ಮಿಕೊಂಡಿದ್ದೇವೆ. ಈ ರೀತಿಯಾಗಿ ನೀರಾವರಿ ಇಲ್ಲದ ಪ್ರದೇಶಗಳಿಗೂ ಕೂಡ ಹೆಚ್ಚಿನ ಹಣ ಬೇರೆ ಬೇರೆ ರೂಪದಲ್ಲಿ ಬರುತ್ತದೆ.

ಶ್ರೀ ಬಿ.ಶಿವರಾಮು: ಮಾನ್ಯ ಪ್ರಕಾಶ್‌ರವರು ಮಾತನಾಡಿ ಇ.ಎ.ಎಸ್., ಜೆ.ಆರ್.ವೈ ಸ್ಟೇಟ್ ವಾಟರ್‌ಶೆಡ್, ಸೆಂಟ್ರಲ್ ವಾಟರ್‌ಶೆಡ್‌ಂ ಜರ್ಮನ್ ಡೆವಲಪ್‌ಮೆಂಟ್, ಸ್ವಿಸ್ ಬ್ಯಾಂಕ್ ಆಮೌಂಟ್, ಈ ಸ್ಕೀಮ್‌ಗಳಲ್ಲಿ ಬರುವ ಹಣವನ್ನು ನೀರಾವರಿ ಭಾಗಗಳನ್ನು ಹೊರತುಪಡಿಸಿ ಉಳಿದಂಥ ಪ್ರದೇಶಗಳಿಗೆ ಕೊಡಲಾಗುತ್ತದೆ ಎಂದು ಹೇಳಿದ್ದರೆ ನಾನು ಒಪ್ಪುತ್ತಿದ್ದೆ ಇದನ್ನು. ಏಕೆಂದರೆ ಯಾವ ಪ್ರಮಾಣದಲ್ಲಿ ಈ ರಾಜ್ಯ ಸಂಪನ್ಮೂಲದ ಒಂದು ಭಾಗವನ್ನು ನೀರಾವರಿ ಪ್ರದೇಶಗಳಿಗೆ ಖರ್ಚು ಮಾಡಲಾಗುತ್ತಿದೆಯೋ ಆ ಒಂದು ಭಾಗದಲ್ಲಿ 75ರಷ್ಟನ್ನಾದರೂ ಈ ಮೂಲಗಳಿಂದ ಉಳಿದ ಬೇರೆ ಪ್ರದೇಶಗಳಿಗೆ ಖರ್ಚು ಮಾಡಬೇಕಾಗಿತ್ತು. ನಾನು ಅದಕ್ಕೆ ಪೂರಕವಾದ ಅಂಶವನ್ನು ಆಗಲೇ ಹೇಳುತ್ತಾ ಇನ್ನು ಎರಡ್ಮೂರು ವರ್ಷಗಳು ಹೋದರೆ, 4 ಲಕ್ಷ ಎಕರೆ 13 ಸಾವಿರ ಬಾವಿಗಳು ಅಂದರೆ ಪ್ರತಿವರ್ಷ ಒಂದೊಂದು ಲಕ್ಷ ಬಾವಿ ಆ್ಯಡ್ ಆಗುತ್ತಿದೆಯಲ್ಲಾ. ಆ ಪ್ರದೇಶದಲ್ಲಿ ನೀವು ಅಭಿವೃದ್ಧಿ ಮಾಡಿದ್ದರೆ ಈ ಪರಿಸ್ಥಿತಿಗೆ ನಾವು ಬರುತ್ತಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಹಾಕಿದ್ದಾರೆ ಅದು ಬಹಳ ಮುಖ್ಯವಾದುದೇ ಆಗಿದೆ. ಆದರೆ ನಾವು ಕುಡಿಯುವ ನೀರಿಗೋಸ್ಕರ ಆದ್ಯತೆ ಕೊಟ್ಟು ಪ್ರತಿ ವರ್ಷ ಅಂತರ್ಜಲ ಬತ್ತಿಹೋಗುತ್ತಿದೆ ಎನ್ನುವ ಕಾರಣಕ್ಕಾಗಿ 'ಪಾಯಿಂಟ್ ರೀಚಾರ್ಜ್' ಎಂದು ಹೇಳಿ ಕುಡಿಯುವ ನೀರಿನ ಕೊಳವೆ ಬಾವಿಗಳ ಹತ್ತಿರದಲ್ಲಿ ಮಾಡಲು 14 ಕೋಟಿ ರೂ.ಗಳ ಯೋಜನೆಯನ್ನು ಗಣಿ ಮತ್ತು ಭೂಗರ್ಭ ಇಲಾಖೆಯಿಂದ ಕೊಟ್ಟಿದ್ದೇವೆ. 72 ತಾಲ್ಲೂಕುಗಳನ್ನು ಈ ವ್ಯಾಪ್ತಿಯಲ್ಲಿ ಗುರುತಿಸಿ ಸುಮಾರು 85 ಕೋಟಿ ರೂ.ಗಳ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮಾನ್ಯ ಬಾಬಾಗೌಡ ಪಾಟೀಲ್‌ರವರು ಈ ಯೋಜನೆಯನ್ನು ಒಳ್ಳೆಯ ಯೋಜನೆಯೆಂದು ನಮಗೆ ತಿಳಿಸಿ ಖಂಡಿತವಾಗಿಯೂ ಹಣವನ್ನು ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ. ಕಳೆದ ಆರು ತಿಂಗಳುಗಳಲ್ಲಿ ಬಂಜರು ಭೂಮಿ ಅಭಿವೃದ್ಧಿಗಾಗಿ ಸುಮಾರು 35 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಬಿಜಾಪುರ, ಗುಲ್ಬರ್ಗಾ, ಬೆಳಗಾವಿ, ಚಿತ್ರದುರ್ಗ, ಬಳ್ಳಾರಿ ಮತ್ತು ಕೋಲಾರ ಜಿಲ್ಲೆಗಳಿಗೆ ಕೊಟ್ಟಿದ್ದೇವೆ. ಈ ಪ್ರದೇಶಗಳೆಲ್ಲಾ ನೀರಾವರಿ ಇರತಕ್ಕಂಥ ಪ್ರದೇಶಗಳಲ್ಲಿ. ಈ ಜಿಲ್ಲೆಗಳಿಗೆ ಭೂ ಅಂತರ್ಜಲವನ್ನು ಹೆಚ್ಚು ಮಾಡುವುದಕ್ಕೆ ಸುಮಾರು 35 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ನೀವು ಹೇಳುವುದು ಸ್ವಲ್ಪ ಮಟ್ಟಿಗೆ ನಿಜವಿರಬಹುದು. ನೀರಾವರಿ ಇರತಕ್ಕಂಥ ಪ್ರದೇಶಗಳಿಗೆ ಸ್ವಲ್ಪ ಮಟ್ಟಿಗೆ ಹೆಚ್ಚಿನ ಹಣ ಖರ್ಚು ಮಾಡಿರಬಹುದು. ಆದರೆ ನೀರಾವರಿ ಇಲ್ಲದ ಪ್ರದೇಶಗಳನ್ನು

ನಾವು ಕಡೆಗಣಿಸಿಲ್ಲ. ಆ ಪ್ರದೇಶಗಳಿಗೆ ಕೊಡಬೇಕಾದ ಯೋಜನೆಗಳನ್ನು ನಾವು ರೂಪಿಸಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜೇಗೌಡರು ಹೇಳಿದ ಮಾತು ಮುಖ್ಯಮಂತ್ರಿಗಳ ಗಮನಕ್ಕೆ ಬರಬೇಕು. ಇವೊತ್ತು ಒಟ್ಟು ನೀರಾವರಿ ಪ್ರದೇಶವಿರುವುದು ಶೇಕಡ 33 ಭಾಗ. ಇನ್ನುಳಿದ ಶೇಕಡ 77 ಭಾಗದಲ್ಲಿ ಖುಷ್ಕಿ ಭೂಮಿ ಇದ್ದು ಇವುಗಳು ಮಳೆ ಆಶ್ರಯ ಮತ್ತು ಕೆರೆಗಳ ಆಶ್ರಯದಲ್ಲಿ ಬರುತ್ತವೆ. ನಾನು ಹೇಳುವುದೇನೆಂದರೆ ಕೃಷ್ಣಾ ಬೇಸಿನ್ ಪ್ರದೇಶದಲ್ಲಿರುವ ಕೆರೆಗಳಲ್ಲಿ ಹೂಳನ್ನು ತೆಗೆದರೆ ಸುಮಾರು 23 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳಬಹುದು ಎಂದು ತಜ್ಞರುಗಳೇ ಹೇಳುತ್ತಾರೆ. ನಾನು ಈ ಮಾತನ್ನು ಹೇಳುತ್ತಿಲ್ಲ. ನಮ್ಮ ಬಜೆಟ್‌ನಲ್ಲಿ ಸಣ್ಣ ನೀರಾವರಿಗಾಗಿಯೇ ಒಂದು ಪ್ರಪೋಸಲ್ ಇದ್ದು ಅದನ್ನು ಪೂರ್ಣಮಾಡುವುದಕ್ಕೆ ಸುಮಾರು 1200 ರಿಂದ 1300 ಕೋಟಿ ರೂ.ಗಳು ಬೇಕಾಗುತ್ತದೆ. ನಾನು 'ಇದರ ಬಗ್ಗೆ ಪದೇ ಪದೇ ಹೇಳುತ್ತಲೇ ಬಂದಿದ್ದೇನೆ. ಆದರೆ ನಮ್ಮೆಲ್ಲರ ಗಮನ ನೀರಾವರಿ ಪ್ರದೇಶ ಮತ್ತು ದೊಡ್ಡ ಪ್ರಾಜೆಕ್ಟ್‌ಗಳ ಕಡೆ ಇದೆಯೇ ಹೊರತು ಕೆರೆಕಟ್ಟೆಗಳ ಹೂಳು ತೆಗೆಯುವ ಬಗ್ಗೆ ಮತ್ತು ಮಳೆಯಾಶ್ರಯದ ಖುಷ್ಕಿ ಭೂಮಿಗಳ ಬಗ್ಗೆ ಆದ್ಯತೆಯನ್ನು ಕೊಡುತ್ತಿಲ್ಲ. ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕಾಗಿದೆ.

ಶ್ರೀ ಎಂ.ಪಿ.ಪ್ರಕಾಶ್: ಇರಬಹುದು. ಆದರೆ 2000 ಇಸವಿಯೊಳಗೆ 726 ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ತೂಗು ಕತ್ತಿ ಇದೆಯಲ್ಲಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುವುದೇನೆಂದರೆ 2000 ಇಸವಿಯೊಳಗೆ ಕೃಷ್ಣಾ ಬೇಸಿನ್ ಪ್ರದೇಶಗಳಲ್ಲಿರುವ ಕೆರೆಗಳಲ್ಲಿ ಇರುವ ಹೂಳನ್ನು ತೆಗೆದರೆ ಸುಮಾರು 23 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳಬಹುದು. ಇದು ಹೌದೋ ಅಥವಾ ಅಲ್ಲವೋ ಎಂಬುದನ್ನು ಹೇಳಿ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಯಡಿಯೂರಪ್ಪನವರು ಮತ್ತು ಶಿವರಾಮ್‌ರವರು ಹೇಳತಕ್ಕಂಥ ವಾದದಲ್ಲಿ ಅರ್ಥವಿದೆ. ಅರ್ಥವಿಲ್ಲವೆಂದು ನಾನು ಹೇಳುವುದಿಲ್ಲ. ಅವರ ಮಾತನ್ನು ಪ್ರಕಾಶ್‌ರವರೂ ಕೂಡ ಒಪ್ಪಿದ್ದಾರೆ. ಆದರೆ ನಮ್ಮ ರಾಜ್ಯದ ಎರಡೂ ನದಿಗಳೂ ಕೂಡ ಅಂತರ್‌ರಾಜ್ಯ ವಿವಾದದಲ್ಲಿ ಸಿಲುಕಿಕೊಂಡಿರತಕ್ಕಂಥ ನದಿಗಳೇ ಆಗಿವೆ. ಹೀಗಿರುವಾಗ ನಾವು 2000 ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಲೇಬೇಕು ಎಂದಿರುವಾಗ ನಾವು ಅದಕ್ಕಾಗಿ ಆ ಅವಧಿಯೊಳಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ಏಕೆಂದರೆ 2000 ಇಸವಿಯ ನಂತರ ನಾವು ಹಣವನ್ನು ಇದಕ್ಕೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೃಷ್ಣಾ ಬೇಸಿನ್ ಪ್ರದೇಶಗಳಲ್ಲಿರುವ ಕೆರೆಗಳ ಹೂಳನ್ನು ತೆಗೆಯಲೂ ಕೂಡ 2000 ಇಸವಿಯೊಳಗೇ ನೀವು ಹಣವನ್ನು ಖರ್ಚು ಮಾಡಬೇಕಾಗಿದೆ.

ಶ್ರೀ ಕೆ.ಎನ್.ನಾಗೇಗೌಡ: ಅದನ್ನು ಮಾಡುತ್ತೇವೆ. 726 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ನಾವೇನು ಮಾಡುತ್ತಿದ್ದೇವೆ ಎಂಬ ಬಗ್ಗೆ ರಿಪ್ಲೈನಲ್ಲಿ ಹೇಳುತ್ತೇವೆ. ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ, ಏನೇನು ಯೋಜನೆಗಳಿವೆ, ಪೊಟೆನ್ಷಿಯಲ್ ಏನು, ಫೈನಾನ್ಷಿಯಲ್ ಪೊಸಿಷನ್ ಏನು, ಎಂಬ ಬಗ್ಗೆ ಎಲ್ಲ ವಿವರಗಳನ್ನೂ ನಾಳೆ ರಿಪ್ಲೈನಲ್ಲಿ ಕೊಡುತ್ತೇವೆ. ಆದರೆ ವಿರೋಧ ಪಕ್ಷದವರಿಗೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನೀವು ಮಾತನಾಡುತ್ತಾ ಶೇಕಡ 30ರಷ್ಟು ಹಣ ನೀರಾವರಿಗೆ ಖರ್ಚು ಮಾಡುತ್ತೀರಿ ಇನ್ನು ಶೇಕಡ 70ರಷ್ಟು ಹಣ ಒಣಭೂಮಿ ಪ್ರದೇಶಕ್ಕೆ ಹಣವನ್ನು ಸರ್ಕಾರ ಕೊಡುತ್ತಿಲ್ಲವೆಂದು ಏನು ವಾದವನ್ನು ಮಂಡಿಸಿದ್ದೀರಿ ಅದನ್ನು ನಾವು ಇವೊತ್ತು ಒಪ್ಪಿಕೊಂಡರೂ ಕೂಡ ನಮ್ಮ ರಾಜ್ಯದಲ್ಲಿರತಕ್ಕಂಥ ಜಲ ವಿವಾದ ಸಮಸ್ಯೆಯ ಬಗ್ಗೆ ನಾವು ಯೋಚನೆ ಮಾಡಿದಾಗ ನಾವು ನಮ್ಮ ನೀರಿನ ಪಾಲನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ನಾವು ಹೆಚ್ಚು ಹಣವನ್ನು ತೊಡಗಿಸಲೇಬೇಕಾದ ಅನಿವಾರ್ಯ ಬಂತು. ಅದಕ್ಕೆ ಬೇರೆ ಮಾರ್ಗವೇ ಇರಲಿಲ್ಲ. ಆ ಮಾರ್ಗಕ್ಕೋಸ್ಕರ ನಾವು ಹೆಚ್ಚಿನ ಹಣವನ್ನು ತೊಡಗಿಸಿದ್ದೇವೆಯೇ ಹೊರತು ಬೇರೆ ಅರ್ಥದಿಂದಲ್ಲ ಎನ್ನುವುದನ್ನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಬಿ.ಶಿವರಾಮು: ಉಪಾಧ್ಯಕ್ಷರೆ, ನಾಗೇಗೌಡರು ಮಾತನಾಡುತ್ತಾ ನಮ್ಮ ಪಾಲಿನ ನೀರನ್ನು ಎರಡು ಸಾವಿರ ಇಸವಿಯೊಳಗೆ ಬಳಸಿಕೊಳ್ಳಲು ಹೆಚ್ಚಿನ ಹಣವನ್ನು ತೊಡಗಿಸಿದ್ದೇವೆ ಎಂದು ಹೇಳಿದರು. ನಾವು ಆ ರೀತಿ ಹೆಚ್ಚಿನ ಹಣವನ್ನು ಅದಕ್ಕೆ ಖರ್ಚು ಮಾಡಬೇಡಿ ಎಂದು ಹೇಳಲಿಲ್ಲ. ನೀವು ಹೆಚ್ಚು ಹಣ ಖರ್ಚು ಮಾಡಿ. ಆದರ ಜೊತೆಗೆ ಈ ರೀತಿಯ ಸಮಸ್ಯೆಗಳು ಇರತಕ್ಕಂಥ ತಾಲ್ಲೂಕುಗಳ ಬಗ್ಗೆ ನೀವೇನು ಮಾಡುತ್ತೀರಿ? ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ನಿಮ್ಮಲ್ಲಿ ಕುಡಿಯುವ ನೀರಿನ ಯೋಜನೆಗಳು ಇಡೀ ರಾಜ್ಯದಲ್ಲಿ ಎಷ್ಟಿವೆ? 11,800 ಪೈಪ್ಡ್ ವಾಟರ್ ಸಪ್ಲೈ ಇದೆ, ಸುಮಾರು 12 ಸಾವಿರದಷ್ಟು ಮಿನಿ ವಾಟರ್ ಸಪ್ಲೈ ಇದೆ. ಒಂದೂವರೆ ಲಕ್ಷಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ಅಂದರೆ ಒಟ್ಟು ಸುಮಾರು ಎರಡು ಲಕ್ಷ ಬಾವಿಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿವೆ. ಅಂತರ್ಜಲಕ್ಕೆ ಏಕೆ ಆದ್ಯತೆ ನೀಡಬೇಕು ಎನ್ನುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. ರೆಗ್ಯುಲೇಟರಿ ಆಕ್ಟ್‌ಅನ್ನು ತರುತ್ತೇನೆ ಎನ್ನುವ ಮಾತನ್ನು ತಾವು ಹೇಳಿದಿರಿ. ಕುಡಿಯುವ ನೀರಿಗಷ್ಟೇ ಸೀಮಿತವಾಗಿ ವ್ಯವಸ್ಥೆಯನ್ನು ಮಾಡಿದರೆ, ಇನ್ನು 2-3 ವರ್ಷಗಳಲ್ಲಿ ಎಕಾಲಜಿಕಲ್ ಇಂಬ್ಯಾಲೆನ್ಸ್‌ನಿಂದ ಜನಜೀವನದ ವ್ಯವಸ್ಥೆಯ ಮೇಲೆ ಆಗತಕ್ಕಂಥ ಪರಿಣಾಮಕ್ಕೆ ಯಾರು ಜವಾಬ್ದಾರರು? 2000

ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳತಕ್ಕಂಥ ದೃಷ್ಟಿಯಿಂದ ಸಂಪನ್ಮೂಲವನ್ನು ಖರ್ಚು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ. ರಾಜ್ಯದ 175 ತಾಲ್ಲೂಕುಗಳ ಪೈಕಿ ಇವತ್ತು 72 ತಾಲ್ಲೂಕುಗಳು ಈ ಹಂತಕ್ಕೆ 2002, 2003ನೇ ಇಸವಿಗೆ ತಲುಪಬೇಕಾದರೆ ಅದನ್ನು ನೀವು ಹೇಗೆ ಸರಿಪಡಿಸುತ್ತೀರಿ? ನೀವು ಜವಾಬ್ದಾರಿಯನ್ನು ತೆಗೆದುಕೊಂಡು ಕುಡಿಯುವ ನೀರಿನ 2 ಲಕ್ಷ ಬಾವಿಗಳ ಸಲುವಾಗಿ ಮಾತ್ರ ಡ್ರಿಂಕಿಂಗ್ ವಾಟರ್ ಅಂಡರ್‌ಗ್ರೌಂಡ್ ರೆಗ್ಯುಲೇಷನ್ ಬಿಲ್ಲನ್ನು ತರಲು ವ್ಯವಸ್ಥೆ ಮಾಡಿಕೊಂಡಿರಿ. ಆದರೆ ರೈತರ 13 ಲಕ್ಷ ಬಾವಿಗಳಿಗೆ ಯಾರು ಜವಾಬ್ದಾರರು? ನೀವು ಕುಡಿಯುವ ನೀರಿನ ಬಾವಿಗಳ ರಕ್ಷಣೆ ಮಾಡಿದ ಹಾಗೆ ರೈತರ ಕೊಳವೆ ಬಾವಿಗಳನ್ನೂ ರಕ್ಷಣೆ ಮಾಡಬೇಕು. ಅದು ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲವೇ? ಆ 72 ತಾಲ್ಲೂಕುಗಳ ರೈತರಿಗೆ ಅನುಕೂಲವಾಗುವಂತೆ, ಇದರಲ್ಲಿ ಯಾವುದೇ ಪಕ್ಷದ ವಿಚಾರ ಅಥವಾ ಮತ್ತೊಂದು ಇಲ್ಲದೆ, ಈ ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕು. ಒಂದು ಭಾಗದಲ್ಲಿ ಇಷ್ಟೊಂದು ಸಂಪನ್ಮೂಲವನ್ನು ನಾವು ಖರ್ಚು ಮಾಡುತ್ತಿದ್ದೇವೆ ಎಂದರೆ ಅರಸೀಕೆರೆಯಲ್ಲಿ ಜನ ನನ್ನನ್ನು ಪ್ರಶ್ನೆ ಮಾಡುತ್ತಾರೆ, ಹೊಳೆನರಸೀಪುರದಲ್ಲಿ ನೀರಾವರಿಗೆ 200-300 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ, ಇಲ್ಲಿ 2 ಕೋಟಿ ರೂಪಾಯಿಯ ಒಂದು ಜಲಾನಯನ ಯೋಜನೆಯನ್ನು ಮಾಡಿಸಲು ನಿಮಗೆ ಆಗುವುದಿಲ್ಲವೇ? ಇವತ್ತು ನಮ್ಮಲ್ಲಿ ಮಳೆ ಇಲ್ಲ, ಕುಡಿಯಲು ನೀರಿಲ್ಲ ಎಂದು ನನ್ನನ್ನು ಪ್ರಶ್ನೆ ಮಾಡಿದರೆ, ಚುನಾಯಿತ ಪ್ರತಿನಿಧಿಯಾಗಿ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ನನಗೆ ರೈತನ ಮೇಲೆ ನಿಜವಾಗಿ ಕಾಳಜಿ, ಅನುಕಂಪ ಇದ್ದರೆ ನಾನು ಏನು ಉತ್ತರ ಕೊಡಬೇಕು.

ಶ್ರೀ ಕೆ.ಎನ್.ನಾಗೇಗೌಡ: ನದಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ, ಮಳೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬೇರೆಬೇರೆ ವಿಧಾನಗಳಿವೆ. ಕೋಲಾರದಲ್ಲಿ ನದಿ ಹರಿದರೆ ಅಲ್ಲೂ ಉಪಯೋಗಿಸಿಕೊಳ್ಳಬಹುದಾಗಿತ್ತು, ಗಂಡಸಿಯಲ್ಲಿ ನೀರು ಹರಿದರೆ ಅಲ್ಲೂ ಉಪಯೋಗಿಸಿಕೊಳ್ಳಬಹುದು, ಅದು ನೇಚರ್.

ಶ್ರೀ ಬಿ.ಶಿವರಾಮು: ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನೇಚರ್ ಅನ್ನು ಸರಿಪಡಿಸಲು ಅವಕಾಶವಿದೆಯೋ, ಇಲ್ಲವೋ? ನೀರಾವರಿ ಇಲ್ಲದ ಕಡೆ ನೀವು ನೀರನ್ನು ಹರಿಸಿ ಎಂದು ನಾನು ಕೇಳುತ್ತಿಲ್ಲ. ಅಂತರ್‌ಜಲವನ್ನು ಅಭಿವೃದ್ಧಿ ಪಡಿಸಲು ಬೇರೆ ಮಾರ್ಗಗಳಿವೆಯೇ ಎನ್ನುವುದೇ ನನ್ನ ಪ್ರಶ್ನೆ. ಬೇರೆ ಮಾರ್ಗಗಳಿವೆ. ಅದನ್ನು ಚಿಂತನೆ ಮಾಡಿ, ಆ ದಿಕ್ಕಿನಲ್ಲಿ ಕೆಲಸವನ್ನು ಮಾಡಿ ಆ 72 ತಾಲ್ಲೂಕುಗಳನ್ನು ಉಳಿಸುವಂಥ ವ್ಯವಸ್ಥೆಯನ್ನು ನಿರ್ಮಾಣ ಮಾಡಿಲ್ಲ. ಕುಡಿಯುವ ನೀರಿನ ಅಂತರ್ ಜಲವನ್ನು ಉಳಿಸಲು 2 ಲಕ್ಷ ಬಾವಿಗಳಿಗೆ ಮಾನ್ಯ ಪ್ರಕಾಶ್‌ರವರು ಏನು ಚಿಂತನೆಯನ್ನು ಮಾಡಿದ್ದಾರೆ, ಅದೇ ರೀತಿಯ ಚಿಂತನೆಯನ್ನು 72 ತಾಲ್ಲೂಕುಗಳ ಸಲುವಾಗಿಯೂ ಮಾಡಬೇಕು. ಅಲ್ಲಿ ಇನ್ನು 2-3 ವರ್ಷಗಳಲ್ಲಿ ಜನಜೀವನದ ವ್ಯವಸ್ಥೆ

ಅಸ್ತವ್ಯಸ್ತವಾಗುತ್ತದೆ. ಅಲ್ಲಿ ನಾವು ಈಗಾಗಲೇ 400-500 ಅಡಿಗಳಷ್ಟು ಕೆಳಗೆ ಹೋಗಿದ್ದೇವೆ, ಶೇ.85ಕ್ಕಿಂತ ಹೆಚ್ಚು ಹೋಗಿದ್ದೇವೆ, 72 ತಾಲ್ಲೂಕುಗಳ ಪೈಕಿ 7 ತಾಲ್ಲೂಕುಗಳಲ್ಲಿ ಶೇ. 100ಕ್ಕಿಂತ ಮೀರಿ ಹೋಗಿದ್ದೇವೆ. ಆ 7 ತಾಲ್ಲೂಕುಗಳಲ್ಲಿ ಸ್ಯಾಚುರೇಷನ್ ರೀಚ್ ಆಗಿದ್ದೇವೆ. ಮುಂದೆ ಏನಾಗುತ್ತದೆ ಎನ್ನುವ ಚಿಂತನೆ ನಮ್ಮಲ್ಲಿ ಇನ್ನೂ ಪ್ರಾರಂಭವಾಗಿಲ್ಲ. ಆದಕ್ಕಾಗಿ 2 ಲಕ್ಷ ಬಾವಿಗಳ ಕುಡಿಯುವ ನೀರಿನ ಜೊತೆಗೆ ಈ 13 ಲಕ್ಷ ಬಾವಿಗಳ ಅಂತರ್ ಜಲ ಮಟ್ಟವನ್ನೂ ಏರಿಸುವುದಕ್ಕೆ ನಾವು ಇವತ್ತು ಯಾವ ದಿಕ್ಕಿನಲ್ಲಿ ಕೆಲಸವನ್ನು ಪ್ರಾರಂಭಿಸಿದರೆ ಅವರನ್ನು ಉಳಿಸಲು ಸಾಧ್ಯವಿದೆ ಎನ್ನುವ ಚಿಂತನೆಯಾಗಬೇಕು. ಒಂದು ಕಡೆ ನೀರನ್ನು ಒದಗಿಸಿ ಅವರನ್ನು ಸಂಪತ್‌ಭರಿತರನ್ನಾಗಿ ಮಾಡತಕ್ಕಂಥಾದ್ದು, ಇನ್ನೊಂದು ಕಡೆ ಇದ್ದ ಸಂಪತ್ತು ಹಾಳು ಮಾಡಿ ಅವರನ್ನು ನಿರ್ಗತಿಕರನ್ನಾಗಿ ಮಾಡಿ ಜಲಕ್ಷಾಮವನ್ನು ತಂದು ಅವರನ್ನು ಬೀದಿಗೆ ಬಿಡತಕ್ಕಂಥಾದ್ದು ಆಗುತ್ತಿದೆ. ಇದು ಸಸ್ಯಗಳ ಮೇಲೆ, ಪ್ರಾಣಿಗಳ ಮೇಲೆ, ಜನರ ಮೇಲೆ, ಸಂಸ್ಥೆಗಳ ಮೇಲೆ ಎಷ್ಟು ಪರಿಣಾಮ ಬೀರುತ್ತದೆ ಎಂದು ಯೋಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ನಾವು ಉತ್ತರ ಕೊಡುವಾಗ ಎಲ್ಲಾ ವಿವರಗಳನ್ನು ಕೊಡಬೇಕು ಎಂದು ಅಂದುಕೊಂಡಿದ್ದೆವು. ಆದರೆ ಅವರು 2-3 ಬಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರಿಂದ ಹೇಳುತ್ತಿದ್ದೇನೆ. ಅವರು ಬಹಳ ಮುಖ್ಯವಾದಂಥ, ಮೂಲಭೂತವಾದಂಥ ಪ್ರಶ್ನೆಯನ್ನು ಎತ್ತುತ್ತಿದ್ದಾರೆ. ಅಂತರ್‌ಜಲದ ದುರ್ಬಳಕೆ ಎನ್ನುವ ಶಬ್ದವನ್ನು ಕೂಡ ನಾನು ಬಳಸುತ್ತೇನೆ. ನಾವು ಕೈಗಾರಿಕೆಗಾಗಿ ಮತ್ತು ಕೃಷಿಗಾಗಿ ನಮ್ಮ ಮಿತಿಯನ್ನು ಮೀರಿ ಅಂತರ್‌ಜಲದ ಶಕ್ತಿಯನ್ನು, ಅದರ ಪ್ರಮಾಣವನ್ನು ಅರ್ಥಮಾಡಿಕೊಳ್ಳಲಾರದಷ್ಟು ದುರ್ಬಳಕೆ ಮಾಡುತ್ತಿರುವುದರಿಂದ ಅದನ್ನು ನಿಯಂತ್ರಣಗೊಳಿಸತಕ್ಕಂಥ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು. ನಮ್ಮ ಈ ಯೋಜನೆಗಳ ಕೆಳಗೆ 85 ಕೋಟಿ ರೂಪಾಯಿಯ ಯೋಜನೆ ಮತ್ತು 14 ಕೋಟಿ ರೂಪಾಯಿಯ ಯೋಜನೆಗಳನ್ನು ಕುಡಿಯುವ ನೀರಿನ ಪುನಶ್ಚೇತನಕ್ಕಾಗಿ ನಾವು ಮಾಡುತ್ತಿದ್ದೇವೆ. ಹನುಮಂತರಾವ್ ಸಮಿತಿಯವರು ಕೊಟ್ಟಿರತಕ್ಕಂಥ ವರದಿ ಏನೆಂದು ತಮಗೆ ಗೊತ್ತಿದೆ. ನಮ್ಮಲ್ಲಿರತಕ್ಕಂಥ ಉದ್ಯೋಗ ಭರವಸೆ ಯೋಜನೆಯ (ಇ.ಎ.ಎಸ್.) ಹಣದಲ್ಲಿ ಶೇ.50ರಷ್ಟು ಹಣವನ್ನು ನಾವು ಈ ರೀತಿಯ ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿ ಮಾಡಲು, ಸಮಾಜ ಅರಣ್ಯ ಯೋಜನೆಗಳನ್ನು ಮಾಡಲು, ಪಾಂಡ್‌ಗಳನ್ನು ಮಾಡಲು ಖರ್ಚು ಮಾಡಬೇಕು ಎಂದು ಇದೆ. ಆದರೆ ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ ಈ ಇ.ಎ.ಎಸ್. ಹಣವನ್ನು ರಸ್ತೆ, ಶಾಲೆ ಮತ್ತು ಅಂಗನವಾಡಿ ಕಟ್ಟಡಗಳಿಗೆ ಬಳಸತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆಯೇ ವಿನಃ ಈ ಭೂ ಸಂರಕ್ಷಣೆ ಮಾಡತಕ್ಕಂಥಾದ್ದರ ಕಡೆಗೆ ಮತ್ತು ಅಂತರ್‌ಜಲವನ್ನು ಪುನಶ್ಚೇತನಗೊಳಿಸತಕ್ಕಂಥಾದ್ದರ ಕಡೆಗೆ ಹೆಚ್ಚು ಗಮನವನ್ನು ಕೊಡುವುದಿಲ್ಲ. ಚುನಾಯಿತ ಪ್ರತಿನಿಧಿಗಳಿಗೆ, ತಕ್ಷಣದಲ್ಲಿ ನಾವು ಜನರಿಗೆ ಕೆಲಸ

ಮಾಡಿರುವುದನ್ನು ತೋರಿಸಬೇಕು ಎನ್ನುವ ಆಸೆ ಇರುತ್ತದೆ. ಒಂದು ಕಟ್ಟಡವನ್ನು ನೋಡಿದಾಗ ಜನ ಅವರು ಕೆಲಸ ಮಾಡಿದ್ದಾರೆ ಎಂದು ಭಾವಿಸುತ್ತಾರೆಯೇ ವಿನಃ ಬಹಳ ವರ್ಷಗಳ ನಂತರ ಪ್ರತಿಫಲವನ್ನು ಕೊಡತಕ್ಕಂಥ ಭೂ ಸಂರಕ್ಷಣೆಯ ಅಥವಾ ಮಳೆಯ ನೀರನ್ನು ಇಂಗಿಸುವ ಪ್ರಯತ್ನದ ಕೆಲಸಕಾರ್ಯಗಳನ್ನು ಮತದಾರ ನೋಡಲಾರ ಎನ್ನುವ ಕಾರಣಕ್ಕಾಗಿ ನಾವು ಅವುಗಳನ್ನು ಮಾಡದೇ, ಕಟ್ಟಡಗಳಂಥ ಸಣ್ಣಸಣ್ಣ ಕೆಲಸಗಳನ್ನು ಮಾಡುತ್ತೇವೆ. ಜಲಾನಯನ ಪ್ರದೇಶಗಳ ಅಭಿವೃದ್ಧಿಗಾಗಿ ನಾವು 100 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಕೊಡುತ್ತಿದ್ದೇವೆ. ಅದನ್ನು ನಾವು ಸರಿಯಾಗಿ ಬಳಸಿದರೆ ಪ್ರಾಯಶಃ ನಮ್ಮ ಅಂತರ್‌ಜಲದ ಪ್ರಮಾಣವನ್ನು ಉಕ್ಕಿಸಲು ಸಾಧ್ಯವಾಗುತ್ತದೆ. ಆದರೆ ಅದರ ಪ್ರತಿಫಲ ಅದೇ ವರ್ಷದಲ್ಲಿ ಬರುವುದಿಲ್ಲ. ಹೆಚ್ಚು ಕಡಿಮೆ ನಾಲ್ಕಾರು ವರ್ಷಗಳ ಅವಧಿಯನ್ನು ಇದು ತೆಗೆದುಕೊಳ್ಳುತ್ತದೆ. ತಾವು ಅದನ್ನು ಮಾಡಬೇಕಾಗುತ್ತದೆ.

ಶ್ರೀ ಬಿ.ಶಿವರಾಮು: ನಾನು ಅದನ್ನೇ ಹೇಳಲು ಇಚ್ಛಿಪಡುತ್ತಿರತಕ್ಕಂಥಾದ್ದು. 72 ತಾಲ್ಲೂಕುಗಳವರು ಯಾವ ಮಟ್ಟಕ್ಕೆ ತಲುಪಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಸ್ವಲ್ಪ ಹಣವನ್ನು ಖರ್ಚು ಮಾಡುತ್ತಿದ್ದೀರಿ ಎನ್ನುವ ಮಾತನ್ನು ತಾವು ಹೇಳಿದಿರಿ. ಅದು ನಿಜ. ನಾನು ಆಗಲೇ ಹೇಳಿದೆ, ನಿಮ್ಮ ಸ್ಟೇಟ್ ವಾಟರ್ ಶೆಡ್, ಸೆಂಟ್ರಲ್ ವಾಟರ್ ಶೆಡ್, ಜಿ.ಆರ್.ವೈ., ಇ.ಎ.ಎಸ್ ಮತ್ತು ಜರ್ಮನ್ ಅಭಿವೃದ್ಧಿ ಯೋಜನೆಗಳ ಮೂಲಕವಾಗಿ ಸಾಕಷ್ಟು ಹಣವನ್ನು ತಾವು ಖರ್ಚು ಮಾಡುತ್ತಿದ್ದೀರಿ. ಆದರೆ ಆ ಹಣವನ್ನು ಖರ್ಚು ಮಾಡತಕ್ಕಂಥಾದ್ದಕ್ಕೆ ನೀವು ಒಂದು ಮಾನಿಟರಿಂಗ್ ಸೆಲ್‌ಅನ್ನು ಮಾಡಿಲ್ಲ. You try to obtain technical knowhow from the Mines & Geology Department as to how it should be implemented and monitored. ಸಾಯಿಲ್ ಕನ್‌ಸರ್ವೇಷನ್ ಅವರು ಎಲ್ಲೋ ಮಾಡುವುದು, ಮೂರು ವರ್ಷಗಳಲ್ಲಿ ಮಾಡಿದಂಥ ಸ್ಟ್ರಕ್ಚರ್‌ಗಳು ಇವತ್ತು ಇಲ್ಲ, ಎಲ್ಲಿ ಮಾಡಿದ್ದಾರೆ, ಏನು ಮಾಡಿದ್ದಾರೆ ಎನ್ನತಕ್ಕಂಥದ್ದು ಇಲ್ಲ. ಆ ಹಣವನ್ನು ನೀವು ಎಲ್ಲಾ ಕಡೆಗೆ ಸ್ಪೆಡ್ ಓವರ್ ಮಾಡಬಾರದು. ಹೆಚ್ಚು ಪ್ರಮಾಣದ ಹಣವನ್ನು ಒಂದು ಕಡೆ ಖರ್ಚು ಮಾಡುತ್ತಿದ್ದೇವೆ ಎಂದರೆ ಆ ಹಣವನ್ನು ತಾವು ಈ ರೀತಿಯ ಪ್ರದೇಶಗಳಿಗೆ ಸೀಮಿತವಾಗಿ ಸಮಾಜ ಅರಣ್ಯೀಕರಣ, ತೋಟಗಾರಿಕೆ ಮತ್ತು ಭೂ ಸಂರಕ್ಷಣಾ ಇಲಾಖೆಯವರು ಇವೆಲ್ಲವೂ ಸೇರಿ ಆ ಅನುಷ್ಠಾನದ ವ್ಯವಸ್ಥೆಯನ್ನು ಮೈನ್ಸ್ ಅಂಡ್ ಜಿಯಾಲಜಿಯವರ ಸೈಂಟಿಫಿಕ್ ಇನ್‌ಪುಟ್ಸ್‌ಅನ್ನು ಅವೈಲ್ ಮಾಡಿಕೊಂಡು ಇಂಪ್ಲಿಮೆಂಟ್ ಮಾಡಿದರೆ ಬಹುಶಃ ಅಂತರ್‌ಜಲದ ಮಟ್ಟವನ್ನು ಏರಿಸಲು ಮತ್ತು ಅದನ್ನು ಸುಧಾರಣೆ ಮಾಡಲು ಸಾಧ್ಯವಿದೆ. ಇಲ್ಲದಿದ್ದರೆ ಆ ಭಾಗದ ರೈತರ ಪರಿಸ್ಥಿತಿ ಬಹಳ ಕಷ್ಟವಾಗುತ್ತದೆ. ಜೊತೆಗೆ, ಇನ್ನೂ ಹೆಚ್ಚು ಹಣವನ್ನು ಪಡೆಯಲು ನಿಮಗೆ ಅವಕಾಶವಿದೆ. ಇವತ್ತು ತಾವು ಕೇವಲ

98 ಕೋಟಿಗೆ ಮಾತ್ರ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ. ನಬಾರ್ಡ್‌ನವರು ರಸ್ತೆ ಮಾಡಲು ಕೊಡುತ್ತಾರೆ, ಈ ಕೆಲಸಕ್ಕೆ ಕೊಡುವುದಿಲ್ಲವೇ? ಅವರೇ ಸರ್ವೆ ಮಾಡಿಸಿದ್ದಾರೆ. ಜಿಯಾಲಜಿ ಸರ್ವೇ ಆಫ್ ಇಂಡಿಯಾದವರು ಕಮಿಟಿ ಮಾಡಿದ್ದಾರೆ. ಕಮಿಟಿಯ ಮೂಲಕ ನಬಾರ್ಡ್‌ನವರು ಒತ್ತಾಯದಿಂದ ಬಹಳಷ್ಟು ಗುರುತಿಸಿರತಕ್ಕಂಥದ್ದನ್ನು ಮಾಡಿದ್ದಾರೆ. NABARD is prepared to give. Where is our proposal? ಆದರೆ ಆ ಪ್ರಪೋಸಲ್ ಎಲ್ಲಿ ಇರುತ್ತವೆ ಎಂದರೆ ಅವು ನೀರಾವರಿ ಇರುವ ಪ್ರದೇಶಗಳಿಗೇ ಹೋಗುತ್ತವೆ.

ಶ್ರೀ ಎಂ.ಪಿ.ಪ್ರಕಾಶ್: ನಬಾರ್ಡ್‌ಗೆ ಕಳುಹಿಸಿದ್ದೇವೆ.

ಶ್ರೀ ಬಿ.ಶಿವರಾಮು: ಎಲ್ಲಿಯದು ಕಳುಹಿಸಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಏಕೆಂದರೆ ಇವು ಒಂದೇ ಕಡೆಗೆ ಕಾನ್ಸೆಂಟ್ರೇಟ್ ಆಗತಕ್ಕಂಥಾದ್ದು ಆಗಬಾರದು. We are all abandoned people to-day. ನಮ್ಮನ್ನು ಪೂರ್ಣವಾಗಿ ಉದಾಸೀನ ಮಾಡಿರತಕ್ಕಂಥ ವ್ಯವಸ್ಥೆ ನಿರ್ಮಾಣವಾಗಿದೆ. ಗುರುತಿಸಿರತಕ್ಕಂಥ ಕ್ಷೇತ್ರಗಳಲ್ಲಿ ನಿಮ್ಮಿಂದ ಏನು ವರದಿ ಇದೆ, ಆ 72 ತಾಲ್ಲೂಕುಗಳಲ್ಲಿ ಕೆಲಸವನ್ನು ತೆಗೆದುಕೊಳ್ಳತಕ್ಕಂಥಾದ್ದನ್ನು ನೀವು ಮಾಡಿ. ಇ.ಎ.ಎಸ್. ಯೋಜನೆಯ ಹಣವನ್ನು ನೀರಾವರಿ ಇರುವಂಥ ಮಂಡ್ಯಕ್ಕೂ ಕೊಡುವುದು, ಅರಸೀಕೆರೆಗೂ ಕೊಡುವುದಾ? ಯಾವ ಭಾಗದಲ್ಲಿ ನೀರಾವರಿ ಇಲ್ಲ, ಅಲ್ಲಿಗೆ ಕೊಡಬೇಕು. 100 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದಿರಿ. ಅದನ್ನು ಮಾನಿಟರ್ ಮಾಡಿ. Properly it should be monitored. With the technical knowhow, it should be implemented. ಮಾನ್ಯ ಯಡಿಯೂರಪ್ಪನವರು ನೀರಾವರಿ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತಿದ್ದರು, ಮೇಜರ್ ಇರಿಗೇಷನ್‌ಗೆ ಎಷ್ಟು ದುಡ್ಡು ಇದೆ, ಮೈನರ್ ಇರಿಗೇಷನ್‌ಗೆ ಎಷ್ಟು ದುಡ್ಡು ಇದೆ ಎಂದು. ನಮ್ಮ ರಾಜ್ಯದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಮತ್ತು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂಥ 36,661 ಕೆರೆ ಕಾಮಗಾರಿಗಳಿವೆ. ಅದರಿಂದ ವಾರ್ಷಿಕವಾಗಿ ನೀರಾವರಿಗೆ ಲಭ್ಯವಾಗಬೇಕಾಗಿರತಕ್ಕಂಥ ಭೂಮಿ 6.8 ಲಕ್ಷ ಹೆಕ್ಟೇರ್. ಆದರೆ ರಿಯಲ್ ಕಾಂಟ್ರಿಬ್ಯೂಷನ್ ಏನಿದೆ ಎಂದರೆ ಸಣ್ಣ ನೀರಾವರಿಯಿಂದ 15 ಲಕ್ಷ, ಪಂಪ್‌ಸೆಟ್ ಬಾವಿಗಳಿಂದ 40 ಲಕ್ಷ, 55 ಲಕ್ಷ ನೀರಾವರಿ ಪ್ರದೇಶ ಇರತಕ್ಕಂಥ ರೈತರಿಗೆ ಕೊಟ್ಟಿರತಕ್ಕಂಥ ಹಣದ ಪ್ರಮಾಣವೆಷ್ಟು? ಅದೇ 11.2 ಲಕ್ಷಕ್ಕೆ ಒದಗಿಸಿರತಕ್ಕಂಥ ಹಣ 2800 ಕೋಟಿ ರೂಪಾಯಿಗಳು. ನಾನು ಅಸಮತೋಲನದ ಚಿತ್ರವನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ಯು.ಕೆ.ಪಿ. ಮತ್ತು ಕೃಷ್ಣ ಬೇಸಿನ್‌ಗೆ ಈಗಾಗಲೇ 5423 ಕೋಟಿ ರೂಪಾಯಿಗಳು ಖರ್ಚು ಆಗಿದ್ದು ಇವತ್ತಿನ ಅಂದಾಜಿನ ಪ್ರಕಾರ ಇನ್ನೂ 6491 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಲ್ಲವನ್ನೂ ಸಮರ್ಪಕವಾಗಿ ಅನುಷ್ಠಾನ ಮಾಡಿದರೆ 59 ಲಕ್ಷ ಎಕರೆ ಪ್ರದೇಶಕ್ಕೆ ನೀರು ತಲುಪುತ್ತದೆ.

ಇನ್ನು ಅಂತರಜಲ ಅಭಿವೃದ್ಧಿ ಪಡಿಸುವುದಕ್ಕೆ ನಬಾರ್ಡ್‌ನಿಂದ, ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಳ್ಳಬೇಕು. ವಿಶ್ವಬ್ಯಾಂಕ್‌ನವರು ಹಣ ಕೊಡುವುದಕ್ಕೆ ತಯಾರಿದ್ದು, ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ರೂಪಿಸಲಿ. ಯುದ್ಧಸಮರೋಪಾದಿಯಲ್ಲಿ ಕೆಲಸವನ್ನು ಮಾಡಿ ಇನ್ನು 3-4 ವರ್ಷಗಳಲ್ಲಿ ಈ ಮಟ್ಟವನ್ನು ಕನಿಷ್ಟ 50 ಪರ್ಸಂಟ್‌ಗೆ ತರತಕ್ಕಂಥದ್ದನ್ನು ಮಾಡದೇ ಹೋದರೆ, 2 ಸಾವಿರ ಇಸವಿಗೆ ಯು.ಕೆ.ಪಿ. ಕೆಲಸವನ್ನು ಮುಗಿಸುತ್ತೇವೆ ಎನ್ನತಕ್ಕಂಥ ಛಲ ಇದೆ ಎಂದಾದರೆ when you have that much of conviction, why don't you have the same conviction for these 72 talukas? ಆ ಕನ್‌ವಿಕ್ಷನ್ ಮೊದಲು ಇವರ ಮೇಲೆ ಬರಬೇಕು. ನಾವು ಚುನಾಯಿತ ಪ್ರತಿನಿಧಿ ಆ ಕ್ಷೇತ್ರದಿಂದ ಬಂದಿರತಕ್ಕಂಥವರಲ್ಲಿ ಯಾರಿಗೆ ಜವಾಬ್ದಾರಿ ಇದೆ ಅವರು ಇದನ್ನು ಒತ್ತಾಯ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಆ ಮೂಲಕ ಮಾತ್ರ ಏನಾದರೂ ಪರಿಹಾರ ಸಿಗಲಿಕ್ಕೆ ಸಾಧ್ಯ ಇದೆಯೇ ವಿನಃ ಇಲ್ಲವೆಂದರೆ ನೀರಾವರಿ ಬಾಬ್ತಿನಲ್ಲಿ ಕೆಲಸ, ಕಂಟ್ರಾಕ್ಟ್‌ರ್‌ದಾರರಿಗೆ ಕೈತುಂಬಾ ದುಡ್ಡು ಸಿಕ್ಕಿ ಅವರು ಆರಾಮವಾಗಿ ಇರುತ್ತಾರೆ, ಶ್ರೀಮತಿ ಪ್ರಮಿಳಾ ನೇಸರ್ಗಿಯವರು ಮಾತನಾಡುತ್ತಾ '5 ವರ್ಷದ ಹಿಂದೆ ಏನೂ ಇರಲಿಲ್ಲ, 5 ವರ್ಷ ಮುಗಿಯುವ ಹೊತ್ತಿಗೆ ಆದಾಯ ತೆರಿಗೆ ಎಂದು ಎಷ್ಟು ಕೋಟಿ ರೂಪಾಯಿಗಳನ್ನು ಡಿಕ್ಲೇರ್ ಮಾಡಿಕೊಂಡರು' ಎಂದು ಹೇಳಿದರು. ಆದ್ದರಿಂದ ಸರ್ಕಾರದ, ಸಾರ್ವಜನಿಕರ ಹಣವನ್ನು ಕಂಟ್ರಾಕ್ಟರುಗಳು ದುರುಪಯೋಗ ಪಡಿಸಿಕೊಳ್ಳುವಂಥ ಕೆಲಸ ಆಗುವುದು ಬೇಡ. ಅಂಡರ್‌ಗ್ರೌಂಡ್ ವಾಟರ್ ಡೆವಲಪ್‌ಮೆಂಟ್‌ಗೆ ಪ್ರತ್ಯೇಕ ವಿಭಾಗವನ್ನು ಮಾಡಬೇಕು. ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ತಾಂತ್ರಿಕ ಪರಿಣತರನ್ನು ತೆಗೆದುಕೊಂಡು ಒಂದು ಮಾನಿಟರಿಂಗ್ ಸೆಲ್ ಮಾಡಿ, ಮೈಕ್ರೋ ವಾಟರ್‌ಶೆಡ್‌ಗಳನ್ನು ಮಾಡುವುದರ ಮೂಲಕ ಮಾಡಿರತಕ್ಕಂಥ ಕೆಲಸವನ್ನು ಮೆಯಿಂಟೇನ್ ಮಾಡತಕ್ಕಂಥದ್ದು ಕೂಡ ವ್ಯವಸ್ಥೆ ಆಗಬೇಕು. If you don't maintain, it serves no purpose. ಮೇಜರ್ ಇರಿಗೇಷನ್ ಕೆಲಸಕ್ಕೆ ನಾನ್ ಪ್ಲಾನ್‌ನಲ್ಲಿ ಮೆಯಿಂಟೇನೆನ್ಸ್ ಮಾಡುತ್ತೀರಿ. ನೀವು ಅಂತರಜಲದ ಕೆಲಸವನ್ನು ಮೆಯಿಂಟೇನ್ ಮಾಡಿಕೊಂಡು ಹೋದರೆ ಮಾತ್ರ ಕುಡಿಯುವ ನೀರು, ಸಸ್ಯಗಳು, ಪ್ರಾಣಿಗಳು, ಪರಿಸರ ಉಳಿಯತಕ್ಕಂಥದ್ದು, ರೈತನ ಜನಜೀವನ ಹಸನವಾಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಸಣ್ಣ ನೀರಾವರಿ, ರೈತರ ಬಾವಿಗಳ ವಿಚಾರದಲ್ಲಿ ಏನು 55 ಲಕ್ಷ ಎಕರೆ ನೀರಾವರಿ ಬರುತ್ತಿದೆ, ಅದಕ್ಕೆ ಸರ್ಕಾರ ಆದ್ಯತೆ ಕೊಡಬೇಕು. ಇನ್ನು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ 'ಬಾಗೂರು ನವಿಲೆ ರೈತರ ಮುಗಿಯದ ಗೋಳು' ಎನ್ನುವ ತಲೆಬರಹದಡಿ ಬಾಗೂರು ನವಿಲೆ ವಿಚಾರ ಬಂದಿದ್ದು ಆದರ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಆ ಭಾಗದ ರೈತರು ಕೊಟ್ಟಂಥ ಮನವಿ ಮೇಲೆ ಒಂದು ವರದಿ ಬಂದಿದೆ. ಅದನ್ನು ಇಲ್ಲಿ ಓದುವ ಅವಶ್ಯಕತೆಯಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಆ ವರದಿ ಮಾನ್ಯ

ಮುಖ್ಯಮಂತ್ರಿಗಳಿಗೆ ಮತ್ತು ನೀರಾವರಿ ಸಚಿವರಿಗೆ ಕೂಡ ತಲುಪಿದೆ. ಆ ಭಾಗದಲ್ಲಿ ಎಷ್ಟು ಜನ ರೈತರಿಗೆ ತೊಂದರೆಯಾಗಿದೆ? ಅಲ್ಲಿ ಎಷ್ಟು ಹಳ್ಳಿಗಳು ಬರುತ್ತವೆ? ಎಷ್ಟು ಮರಗಳು ಹೋಗುತ್ತವೆ? ಎ ಲ್ಯಾಂಡ್ ಎಷ್ಟು? ಬಿ ಲ್ಯಾಂಡ್ ಎಷ್ಟು? ನಾಫ್ತಾ ಎಷ್ಟು? ಇವೆಲ್ಲದರ ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ವಿಚಾರ ಎಲ್ಲರಿಗೂ ಗೊತ್ತಿದೆ. ಪ್ರತಿನಿತ್ಯ ಈ ವಿಚಾರ ಚರ್ಚೆಗೆ ಬರುತ್ತಲೇ ಇದೆ. ಮಾಧ್ಯಮದವರೂ ಸಹ ಇದಕ್ಕೆ ಸಾಕಷ್ಟು ಪ್ರಚಾರವನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿ ನಿಜವಾಗಿ ಸಮಸ್ಯೆ ಇದೆಯೇ ಅಥವಾ ಇಲ್ಲವೇ ಎನ್ನುವಂಥದ್ದನ್ನು ಪರಿಶೀಲನೆ ಮಾಡುವವರು ಯಾರು? 96 ದಿವಸ ಈ ಸಮಸ್ಯೆ ಮೇಲೆ ರೈತರು ನೀರಾವರಿ ಕಾಲುವೆ ಮೇಲೆ ಮನೆ ಕಟ್ಟಿ ಮುಷ್ಕರ ಮಾಡಿದರು. ಈ ರೈತರು 96 ದಿವಸ ಮುಷ್ಕರ ಕುಳಿತಿದ್ದರೂ ಸಹ ಏತಕ್ಕೆ ಕುಳಿತಿದ್ದಾರೆ ಎಂದು ಕೇಳುವ ಕನಿಷ್ಟ ಸೌಜನ್ಯವನ್ನು ಸರ್ಕಾರದ ವತಿಯಿಂದ ಯಾರೂ ಕೂಡ ತೋರಿಸಲಿಲ್ಲ. ಕೊನೆಗೆ ಯಾವುದೋ ಒಂದು ರೀತಿಯ ತೀರ್ಮಾನವಾಗಿ ರೈತರೇ ಒಪ್ಪಿಕೊಂಡು ಮುಷ್ಕರವನ್ನು ಅಂತಿಮಗೊಳಿಸಿದರು. 96 ದಿವಸ ನಡೆದಂಥ ಮುಷ್ಕರದಲ್ಲಿ ಸರ್ಕಾರದ ಪ್ರತಿನಿಧಿಗಳನ್ನು ಅವರು ಏನೇನೋ ಬೈದರು ಎನ್ನುವ ಸಿಟ್ಟಿನಿಂದ ಅವರು ಈಚೆಗೆ ಬಂದಮೇಲೆ 4 ದಿವಸದಲ್ಲಿ ಅವರಿಗೆಲ್ಲಾ ದನಕ್ಕೆ ಬಡಿದ ಹಾಗೆ ಬಡಿದು ಸಿಟ್ಟನ್ನು ತೀರಿಸಿಕೊಂಡರು ಎಂದು ನಾನು ಹೇಳುತ್ತಿಲ್ಲ, ಇದನ್ನು ಪತ್ರಿಕೆಯವರು ಹೇಳುತ್ತಿದ್ದಾರೆ. ಅಲ್ಲಿ ಏತ ನೀರಾವರಿಗೋಸ್ಕರ 7 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಈ ಹಣದಿಂದ ಅಲ್ಲಿ ಏನಾದರೂ ಮೂರು ಕಾಸಿನ ಕೆಲಸ ಆಗಿದೆಯೇ ಎಂಬುದನ್ನು ಸಂಬಂಧಪಟ್ಟವರು ಹೇಳಿದರೆ ಸಾಕು. ರೈತರೆಲ್ಲಾ ಧರಣ ಮಾಡುವುದಕ್ಕೆ, ಬಂದ್‌ಗೆ ಕರೆ ನೀಡುವ ಕಾರ್ಯಕ್ರಮ ಇಟ್ಟುಕೊಂಡಾಗ, ಡಿ.ಸಿ.ಯವರು ನೀರಾವರಿ ಸಚಿವರ ಜೊತೆ ಮಾತನಾಡಿ ನಂತರ ಇಲ್ಲಿಗೆ ಬಂದು, ಲಿಫ್ಟ್ ಇರಿಗೇಷನ್ ಪ್ರಾರಂಭವಾಯಿತು ನೀವೆಲ್ಲಾ ಮನೆಗಳಿಗೆ ಹೋಗಿ ಎಂದು ಹೇಳಿದರು. ನಾನು ಈಚೆಗೆ ಬಂದು ಏನು ಹೇಳಿದೆ ಎಂದರೆ 'ನಾಗೇಗೌಡರು ಕೆಲಸಗಾರರು ಎನ್ನುವಂಥದ್ದರಲ್ಲಿ ಎರಡನೇ ಪ್ರಶ್ನೆ ಇಲ್ಲ, ಆದರೆ ಕೆಲಸಗಾರರು ಎನ್ನತಕ್ಕಂಥ ಮಾತು ಹಾಸನ ಜಿಲ್ಲೆಗೆ ಅಲ್ಲ' ಎಂದು ಹೇಳಿದೆ. ಸರ್ಕಾರದಲ್ಲಿ ನೀರಾವರಿ ಸಚಿವರಾಗಿ ಕೆಲಸ ಮಾಡತಕ್ಕಂಥ ಮಾನ್ಯ ನಾಗೇಗೌಡರಿಗೆ ಹಾಸನ ಜಿಲ್ಲೆಯಲ್ಲಿ ಕೆಲಸ ಮಾಡಿಸುವುದಕ್ಕೆ ತೀರ್ಮಾನ ತೆಗೆದುಕೊಳ್ಳತಕ್ಕಂಥ ಶಕ್ತಿ ಇಲ್ಲ. ಅಷ್ಟೇ ಅಲ್ಲದೆ ಏನಾದರೂ ಕನಿಷ್ಟ ಸೌಜನ್ಯ ಎನ್ನತಕ್ಕಂಥದ್ದು ಇದ್ದಿದ್ದರೆ, ಮತ್ತು ಆ ಕೆಲಸಕ್ಕೆ ಅಡ್ಡಬರುವಂಥವರು ಯಾರು ಇದ್ದಾರೆ ಅವರು ಅಡ್ಡ ಬರದೇ ಇದ್ದಿದ್ದರೆ ಬಹುಶಃ ಈ ಸಮಸ್ಯೆ ಬಗೆಹರಿದು ಬಹಳ ದಿವಸಗಳು ಆಗುತ್ತಿದ್ದವು. ಇದು ಪರಿಹಾರದ ಪ್ರಶ್ನೆ ಅಲ್ಲ. ಹಾಸನ ಜಿಲ್ಲೆಗೆ ಅದರ ಬೌಂಡರಿ ದಾಟಿ ಒಳಗೆ ಹೋಗಬೇಕಾದರೆ ಚಿಂತನೆ ಮಾಡುತ್ತಾರೆ. ಈ ರೀತಿಯ ಒಂದು ವಾತಾವರಣ ಅಲ್ಲಿ ನಿರ್ಮಾಣವಾಗಿದೆ. 4-5 ದಿವಸ ಆ ರೈತರನ್ನು ಹೊಡೆದಿದ್ದಾರೆ, ಜವಾಬ್ದಾರಿ ಸರ್ಕಾರದ ವತಿಯಿಂದ, ಪಾರ್ಲಿಮೆಂಟರಿ

ಸದಸ್ಯರಿರಬಹುದು, ಉಸ್ತುವಾರಿ ಸಚಿವರು ಇರಬಹುದು-''ನಿಮ್ಮ ಸಮಸ್ಯೆ ಏನು? ಅವರ ಸಮಸ್ಯೆಗೆ, ಬೇಡಿಕೆಗೆ ಕನಿಷ್ಟ ಸ್ಪಂದಿಸತಕ್ಕಂಥ ಧೋರಣೆ'' ಕೂಡ ಇವರಲ್ಲಿ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಆ ಬಾಗೂರು ನವಿಲೆ ಸುರಂಗ ಮಾರ್ಗವನ್ನು ಯಾವಾಗ ಪ್ರಾರಂಭ ಮಾಡಿದರು?

ಶ್ರೀ ಬಿ.ಶಿವರಾಮು: ಈ ಬಾಗೂರು ನವಿಲೆ ಸುರಂಗ ಮಾರ್ಗವನ್ನು 1974ರಲ್ಲಿ ದಿವಂಗತ ಶ್ರೀ ದೇವರಾಜ ಅರಸು ಅವರು ಉದ್ಘಾಟನೆ ಮಾಡಿದರು. ಈ ಸಮಸ್ಯೆ ಮುಂದಕ್ಕೆ ಏನು ಬರುತ್ತದೆ ಎನ್ನತಕ್ಕಂಥ ವಿಚಾರವನ್ನು ಕೂಡ ಅವರು ಆವಾಗಲೇ ಹೇಳಿದ್ದರು. ನಾವು ಯಾವುದನ್ನೂ ಅಲ್ಲಗಳೆಯುತ್ತಿಲ್ಲ. ನಿಮ್ಮ ಕಾಲದಲ್ಲಿ ಏನು ಮಾಡಿದಿರಿ ಎಂದು ನಾವು ಕೇಳಬಹುದು. ನಮ್ಮ ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಏನು ಮಾಡಿದ್ದೇವೆ ಎನ್ನುವುದನ್ನು ಹೇಳಲಿಕ್ಕೆ ಕೂಡ ತಯಾರಾಗಿದ್ದೇನೆ. ನಮ್ಮ ಸರ್ಕಾರ ಇದ್ದಾಗ ಏತ ನೀರಾವರಿಗೆ 3 ಕೋಟಿ ರೂ.ಗಳನ್ನು ಖರ್ಚು ಮಾಡಲಾಯಿತು. ಇದಕ್ಕೆ ಬೇಕಾದಂಥ ಜಾಕ್‌ವೆಲ್‌ಗಳನ್ನು ಪರ್‌ಚೇಸ್ ಮಾಡಿ ಈಗ ಅವು ಎಲ್ಲೋ ಬಿದ್ದಿವೆ. ಆ ಸುರಂಗದಲ್ಲಿ ಇತ್ತೀಚೆಗೆ ನೀರು ಬಿಟ್ಟ ಮೇಲೆ ರೈತನ ಸಮಸ್ಯೆ ಯಾವಾಗ ಉಲ್ಬಣವಾಯಿತು ಎಂಬುದನ್ನು ಹೇಳುತ್ತೇನೆ. ಈಗ ಸರ್ಕಾರಕ್ಕೆ ಒಂದು ಅಂಕಿಅಂಶವನ್ನು ಕೊಡಬಯಸುತ್ತೇನೆ. ಚನ್ನರಾಯಪಟ್ಟಣದಲ್ಲಿ ಅಂತರಜಲದ ಮಟ್ಟ ಎಲ್ಲಿಗೆ ತಲುಪಿದೆ ಎಂದರೆ ಈ 7 ತಾಲ್ಲೂಕುಗಳಲ್ಲಿ 100 ಪರ್ಸಂಟ್‌ಗಿಂತ ಹೆಚ್ಚು ಸ್ಯಾಚ್ಯುರೇಷನ್ ಆಗಿದೆ. ಚನ್ನರಾಯಪಟ್ಟಣದಲ್ಲಿ ಆ ಮಟ್ಟಕ್ಕೆ ತಲುಪಲಿಕ್ಕೆ ಈ ಸುರಂಗವೆ ಕಾರಣವಾಗಿದೆ. It is declared as dark area. ಅದರ ಮೂಲಕ ಇವತ್ತು 4-5 ಸಾವಿರ ಪಂಪುಸೆಟ್ಟುಗಳು ಇದ್ದು ನೀರು ಸಮರ್ಪಕವಾಗಿ ಇಲ್ಲ. ನಾವು ಕೇಳುವುದೇನೆಂದರೆ ಅಲ್ಲಿಯ ರೈತರ ಸಮಸ್ಯೆಗೆ ಸರ್ಕಾರ ಸ್ಪಂದಿಸಿಲ್ಲ. ರೈತರ ಸಮಸ್ಯೆ ಏನು ಎಂದು ಕೇಳುವ ಸೌಜನ್ಯ ಕೂಡ ಸರ್ಕಾರದಲ್ಲಿ ಇಲ್ಲ ಎಂದರೆ ಹೇಗೆ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಬಾಗೂರು ನವಿಲೆ ರೈತರು ಮುಷ್ಕರ ಮಾಡುತ್ತಿದ್ದಾಗ ಸರ್ಕಾರ ಸ್ಪಂದಿಸಲಿಲ್ಲ ಎನ್ನತಕ್ಕಂಥ ಮಾತನ್ನು ನಮ್ಮ ಸ್ನೇಹಿತರಾದ ಶ್ರೀ ಶಿವರಾಮುರವರು ಹೇಳಿದರು. ಶ್ರೀ ಗೋಪಾಲ್‌ರವರು, ಆ ರೈತರ ಎಲ್ಲಾ ಪ್ರತಿನಿಧಿಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ರೇವಣ್ಣನವರು, ಮಾನ್ಯ ಪುಟ್ಟೇಗೌಡರು, ಮಾಜಿ ಶಾಸಕರಾದ ಶ್ರೀ ನಂಜಪ್ಪನವರು ಇವರೆಲ್ಲಾ ಸೇರಿ ಇಡೀ ಒಂದು ದಿವಸದಲ್ಲಿ ಸುಮಾರು 6-7 ಗಂಟೆಗಳ ಕಾಲ ಕುಳಿತು ಚರ್ಚೆ ಮಾಡಿದ್ದೇವೆ.

5.40 ಪಿ.ಎಂ

ಬಾಗೂರು - ನವಿಲೆ ಟನೆಲ್ ಬಗ್ಗೆ ಒಂದೇ ಅಲ್ಲ ಕರ್ನಾಟಕ ರಾಜ್ಯದಲ್ಲಿ ಅನೇಕ

ಟನೆಲ್‌ಗಳಿವೆ. ಈಗಾಗಲೇ ಇದಕ್ಕೆ ಲೈನಿಂಗ್ ಆಗಿದೆ. ಇವತ್ತು ಉದ್ಭವಿಸಿರುವ ಸಮಸ್ಯೆ ಅಲ್ಲ. ಈ ಟನೆಲ್‌ನಿಂದಲೇ ರೈತರಿಗೆ ತೊಂದರೆಯಾಗಿದ್ದರೆ ಇದಕೆ ನಮ್ಮ ಅಭ್ಯಂತರ ಏನೂ ಇಲ್ಲ. ಇದಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಹೇಳಬೇಕಾಗುತ್ತದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕೊಟ್ಟಿರುವ ವರದಿ ಇದೆ, ಇದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಜೊತೆಯಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಮಾನ್ಯ ಸದಸ್ಯರಾದ ಶಿವರಾಮ್‌ರವರಿಗೆ ನಾನು ಈ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ, ಏತ ನೀರಾವರಿ ಯಾವಾಗ ತೆಗೆದುಕೊಂಡಿದ್ದೇವೆ? ಇದಕ್ಕೆ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ವಿವರವನ್ನು ನಾನು ಉತ್ತರ ಕೊಡುವಾಗ ಹೇಳುತ್ತೇನೆ. ಆದರೆ, ತಾವು ಮಾತನಾಡುವಾಗ ರೈತರ ಬಗ್ಗೆ ಗಮನಿಸಲಿಲ್ಲವೆಂದು ಹೇಳಿದಿರಿ, ಈ ಬಗ್ಗೆ ಹೇಳುವುದಾದರೆ, ಟನೆಲ್‌ನಲ್ಲಿ ಚಳುವಳಿ ಮಾಡಿದ ರೈತರು ಕೇವಲ ರಾಜಕೀಯ ಮಾಡಿದರೆ ಹೊರತು ಪರಿಹಾರ ಕೇಳುವುದಕ್ಕೆ ಮಾಡಲಿಲ್ಲ. ನಾನು ಈ ಮಾತನ್ನು ಎಲ್ಲಿ ಬೇಕಾದರೂ ಘಂಟಾಘೋಷವಾಗಿ ಹೇಳುತ್ತೇನೆ. ಏಕೆಂದರೆ, ಇದು ರೈತರ ಸಮಸ್ಯೆಯಲ್ಲ. ನಾವು ಅಲ್ಲಿ ಚಳುವಳಿ ಮಾಡುತ್ತಿರುವ ರೈತರಿಗೆ ಏನು ಹೇಳಿದೆನೆಂದರೆ, ಟನೆಲ್‌ನ ಎರಡೂ ಕಡೆ ನೂರು ಮೀಟರ್ ಲ್ಯಾಂಡ್‌ನ್ನು ನಾವು ಸ್ವಾಧೀನಪಡಿಸಿಕೊಳ್ಳುತ್ತೇವೆಂದು ಹೇಳಿದೆ. ಈ ಸಲಹೆ ಕೊಟ್ಟವರು ಬೇರೆ ಯಾರೂ ಅಲ್ಲ, ನಮಗೂ ಮತ್ತು ನಿಮಗೂ ನೀರಾವರಿಯನ್ನು ಕಲಿಸಿಕೊಟ್ಟಂಥ ಮಾನ್ಯ ನಂಜೇಗೌಡರ ಸಲಹೆ. ಟನೆಲ್‌ನ ಎರಡು ಬದಿಯಲ್ಲಿ ಅಂದರೆ ಎಡಗಡೆ ನೂರು ಮೀಟರ್ ಮತ್ತು ಬಲಗಡೆ ನೂರು ಮೀಟರ್ ಭೂಮಿಯನ್ನು ನಾವು ಸ್ವಾಧೀನಪಡಿಸಿಕೊಂಡು ಹಾರ್ಟಿಕಲ್ಚರ್ ಡೆವಲೆಪ್‌ಮೆಂಟ್ ಮಾಡುತ್ತೇವೆಂದು ಹೇಳಿದೆವು. ಈಗಾಗಲೇ ಟನೆಲ್‌ನಲ್ಲಿ ಲೈನಿಂಗ್ ಆಗಿದೆ ಸೀಪೇಜ್ ಎಲ್ಲೂ ಬರುತ್ತಿಲ್ಲ, ನಮ್ಮ ಲಿಂಕ್ ಟನೆಲ್ ಅನ್ನು ಮಾನ್ಯ ಪುಟ್ಟಣ್ಣಯ್ಯನವರು ಇದನ್ನು ಗಮನಿಸಿದ್ದಾರೆ. ಎಷ್ಟು ಸೀಪೇಜ್ ಬರುತ್ತಿದೆ ಎಂಬುದನ್ನು ಕೂಡ ಲೆಕ್ಕ ಹಾಕಿದ್ದಾರೆ. ಬೆಳಗಾವಿಯಲ್ಲಿರುವ ಕಡಬ ಟನೆಲ್ ಅಲ್ಲದೇ ಇತರೆ ದೊಡ್ಡ ದೊಡ್ಡ ಎಲ್ಲಾ ಟನೆಲ್‌ಗಳನ್ನು ನೋಡಿಕೊಂಡು ಬಂದಿದ್ದೇವೆ. ಇದರ ಬಗ್ಗೆ ಮುಖ್ಯ ಕಾರ್ಯದರ್ಶಿಗಳ ಜೊತೆಗೆ ಮೀಟಿಂಗ್ ಮಾಡಿದ್ದೇವೆ, ಮಾನ್ಯ ಗೋಪಾಲ್‌ರವರನ್ನು ಕರೆದು ಮೀಟಿಂಗ್ ಮಾಡಿದ್ದೇವೆ, ಟನೆಲ್ ಮುಗಿಸುತ್ತೇವೆ, ಏತ ನೀರಾವರಿ ಮುಗಿಸುತ್ತೇವೆಂದು ಹೇಳಿದ್ದೇವೆ, ಇಲ್ಲಿ ಆ ಭಾಗದ ಶಾಸಕರು, ರೈತರು ಮತ್ತು ಜಿಲ್ಲಾ ಮಂತ್ರಿಗಳೂ ಕೂಡ ಮೀಟಿಂಗ್‌ನಲ್ಲಿದ್ದರು. ಇಷ್ಟಲ್ಲದೆ, ಮಾಜಿ ಶಾಸಕರು ಹಾಗೂ ರಾಜಕೀಯ ಪಕ್ಷದ ಮುಖಂಡರು ಇದ್ದರು, ಅವತ್ತು ಎಲ್ಲರೂ ಒಪ್ಪಿಕೊಂಡು ಹೋಗಿ ಪುನಃ ಅಲ್ಲಿಗೆ ಹೋಗಿ ಧ್ವಜ ಹಿಡಿದು ಮುಷ್ಕರ ಆರಂಭಿಸಿದರೆ ಇದಕ್ಕೆ ನಾವು ಜವಾಬ್ದಾರರಲ್ಲ. ನಿಮ್ಮ ಪಕ್ಷದ ವೈ.ಕೆ.ರಾಮಯ್ಯನವರ ನೇತೃತ್ವದಲ್ಲಿ ತುಮಕೂರಿಗೆ ನೀರು ಕೊಡುವುದಕ್ಕೆ ಈ ಸರ್ಕಾರ ಸಿದ್ದವಿಲ್ಲ ಎಂದು ರಸ್ತೆ ಬಂದ್ ಮಾಡಿದರು. ಇಲ್ಲಿ ನಿಮ್ಮ ಪಾರ್ಟಿಯವರು

ರಸ್ತೆ ಬಂದ್ ಮಾಡುತ್ತಾರೆ, ಪುನಃ ಅಲ್ಲಿಗೆ ಹೋಗಿ ರೈತರನ್ನು ಎತ್ತಿ ಕಟ್ಟಿ ಮುಷ್ಕರ ಮಾಡುತ್ತಾರೆ. ಇದು ಯಾವ ನ್ಯಾಯ? ಇದು ರೈತರ ವಿಚಾರವಲ್ಲ, ಇದು ರಾಜಕೀಯ ವಿಚಾರವಾಗಿದೆ.

ಶ್ರೀ ಬಿ.ಶಿವರಾಮ್: ಅಲ್ಲಿ ದೌರ್ಜನ್ಯವಾಗಿದೆಯೋ, ಸರಿ ಇದೆಯೋ ಸರಿಯಿಲ್ಲವೋ... ಆದರೆ ಇವರು ಸರಿ ಇದೆ ಎಂದು ಹೇಳುತ್ತಾರೆ. ಎಲ್ಲಾ ಪಕ್ಷದ ಮುಖಂಡರನ್ನು ನೋಡಿ ನಾವೂ ಕೂಡ ಸರಿ ಎಂದು ಹೇಳಿದೆವು. ಈಗ ಒಂದು ಕೆಲಸ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ''ಶಿರಾ'' ಘಟನೆಯ ಬಗ್ಗೆ ಪರಿಶೀಲಿಸಲು ಹೇಗೋ ಒಂದು ಸದನ ಸಮಿತಿ ಮಾಡಿದ್ದೀರಿ, ಈ ಸಮಿತಿಯಲ್ಲಿ ಸರ್ವ ಪಕ್ಷದವರು ಇರುತ್ತೇವೆ. ಆ ಸಮಿತಿಯವರು ಸ್ಥಳಕ್ಕೆ ಭೇಟಿ ನೀಡಿ ರೈತರನ್ನು ಕಂಡು ಸಭೆ ನಡೆಸಿ ಒಂದು ತೀರ್ಮಾನಕ್ಕೆ ಬರೋಣ, ಇದಕ್ಕೆ ತಮ್ಮ ಒಪ್ಪಿಗೆ ಇದೆಯೇ? ತಾವು ಹೇಳಬೇಕು...

ಉಪಾಧ್ಯಕ್ಷರು: ಉತ್ತರ ಹೇಳುವಾಗ ಅವರು ಹೇಳುತ್ತಾರೆ.

ಶ್ರೀ ಕೆ.ಎನ್.ನಾಗೇಗೌಡ: ಈ ಬಾಗೂರು-ನವಿಲೆ ಟನೆಲ್‌ಗೆ ಸಂಬಂಧಪಟ್ಟಹಾಗೆ ಸುಮಾರು ಆರೂವರೆ ವರ್ಷಗಳ ಹಿಂದೆ, ಎಲ್ಲೆಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತೋ ಇದಕ್ಕೆ ಈಗಾಗಲೇ ರೈತರು ಪರಿಹಾರವನ್ನು ಪಡೆದುಕೊಂಡಿದ್ದಾರೆ. ಟನೆಲ್ ತೆಗೆದು ಸುಮಾರು ಆರೇಳು ವರ್ಷಗಳಾಗಿವೆ, ಈ ಟನೆಲ್‌ಗೆ ಈಗಾಗಲೇ ಲೈನಿಂಗ್ ಮಾಡಿದ್ದೇವೆ, ಎಲ್ಲೆಲ್ಲಿ ಸೀಪೇಜ್ ಆಗುತ್ತದೆ ಅದನ್ನು ತಡೆಗಟ್ಟಲು ನಾವು ಸೀಮೆಂಟ್ ಕಾಂಕ್ರೀಟ್ ಮಾಡಿದ್ದೇವೆ. ಕೊನೆಗೆ ಟನೆಲ್‌ನ ಆಜೂಬಾಜು 100 ಮೀಟರ್ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ರೈತರಿಗೆ ಪರಿಹಾರ ಕೊಡುತ್ತೇವೆಂದು ಒಂದು ಪ್ರಸ್ತಾವನೆಯನ್ನೂ ಕೂಡ ಮಾಡಿದ್ದೆ... ಮಾನ್ಯ ಶಿವರಾಮ್‌ರವರೆ, ಒಂದು ನಿಮಿಷ ನಾನು ಹೇಳುವುದನ್ನು ತಾವು ಕೇಳಬೇಕು. ನೀರು ಹೊರಗೆ ಮತ್ತು ಒಳಗೆ ಹೋಗತಕ್ಕಂಥ ಜಾಗದಲ್ಲಿ ಏತ ನೀರಾವರಿ ಆಗಬೇಕೆಂದು ಹೇಳಿದರು. ಇದಕ್ಕೆ ನಾವೊಂದು ಶೆಡ್ಯೂಲ್ ಕೊಟ್ಟಿದ್ದೇವೆ, 1999 ಮತ್ತು 2000ನೇ ಇಸವಿಯಲ್ಲಿ ಈ ಏತ ನೀರಾವರಿ ಯೋಜನೆಯನ್ನು ಮುಗಿಸುತ್ತೇವೆಂದೂ, ಹಾಗೂ ಹಣವನ್ನು ಕೂಡ ಕೊಟ್ಟಿದ್ದೇವೆ. ಕೊನೆಗೆ ಅಲ್ಲಿರತಕ್ಕಂಥ ಮಾಜಿ ಶಾಸಕರಾದ ಮಾನ್ಯ ನಂಜಪ್ಪನವರು ಒಂದು ಸಲಹೆ ಕೊಟ್ಟರು. ಏನೆಂದರೆ, ಪಕ್ಕದಲ್ಲಿರುವ ಹಳ್ಳಿಗಳಿಗೆ ವಿದ್ಯುತ್ ಕೊಡಿ ಏಕೆಂದರೆ ಅಲ್ಲಿ ಸಬ್ ಸ್ಟೇಷನ್ ಇದೆ ಎಂದು ಹೇಳಿದರು. ಮಾನ್ಯ ನಂಜಪ್ಪನವರ ಸಲಹೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ಸುಮಾರು ಐದಾರು ಕಿ.ಮೀ.ವರೆಗೆ ಪರಿಹಾರ ಕೊಡಿ ಎಂದರೆ ಏನರ್ಥ? 40 ಕೋಟಿ ರೂಪಾಯಿ ಪರಿಹಾರ ಕೊಡಬೇಕು ಎಂದು ಕೇಳಿದರೆ, ಇದಕ್ಕೇನು ಹೇಳಬೇಕು? ರಾಜ್ಯದಲ್ಲಿ ಎಷ್ಟು ಟನೆಲ್ ಇದೆ? ಪರಿಹಾರ ಕೊಡಿ ಎಂದು ಕೇಳಿದರೆ ಎಷ್ಟು ಹಣವನ್ನು ಸರ್ಕಾರ

ಕೊಡುವುದಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ನೀವು ಯೋಚನೆ ಮಾಡಬೇಕು. 8-10 ಕಿ.ಮೀ.ವರೆಗೆ ಪರಿಹಾರ ಕೊಡಿ ಎಂದು ಕೇಳುವುದಾದರೆ ಹೇಗೆ? ಇದಕ್ಕಾಕೆ ಸದನ ಸಮಿತಿ ಬೇಕು?

ಶ್ರೀ ಬಿ.ಶಿವರಾಮ್: ಅಂದರೆ ನಿಮಗೆ ಸದನ ಸಮಿತಿ ಮಾಡುವುದಕ್ಕೆ ಒಪ್ಪಿಗೆಯಿಲ್ಲ. ನೋಡಿ ಎಷ್ಟು ಬೇಗ ತಾವು ಬದಲಾಗುತ್ತೀರಿ? ಹಾಸನ ಜಿಲ್ಲೆಯ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಧೈರ್ಯವಿಲ್ಲವೆಂಬುದು ನನಗೆ ಗೊತ್ತಿತ್ತು. ಧೈರ್ಯ ಇದ್ದರೆ ಈ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ ನೋಡೋಣ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ನಾನು ಈ ಮಾತನ್ನು ಬಹಳ ಹಗುರವಾಗಿ ತೆಗೆದುಕೊಂಡು ಮಾತನಾಡುತ್ತೇನೆಂದು ತಾವು ಭಾವಿಸಬೇಡಿ. ಶಿರಾ ಸಮಸ್ಯೆಗೆ ಸಂಬಂಧಪಟ್ಟಂತೆ ಒಂದು ಸದನ ಸಮಿತಿಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು, ಬಾಗೂರು-ನವಿಲೆಗೆ ಒಂದು ಸಮಿತಿ ಮಾಡಿ ಎಂದು ಹೇಳುತ್ತಾರೆ, ಮಾನ್ಯ ತಿಮ್ಮಪ್ಪನವರೂ ಕೂಡ ಶರಾವತಿಗೆ ಸಂಬಂಧಪಟ್ಟಂತೆ ಒಂದು ಸದನ ಸಮಿತಿ ಮಾಡಿ ಎಂದು ಹೇಳಬಹುದು. ಹೀಗೆ ಇಡೀ ರಾಜ್ಯದ ತುಂಬ ಸದನ ಸಮಿತಿಗಳನ್ನು ನೇಮಿಸುವುದಕ್ಕಾಗುತ್ತದೆಯೇ? ಟಿನೆಲ್ ತೆಗೆದಿರುವ ಕಡೆ ಅಂತರ್‌ಜಲ ಕಡಿಮೆಯಾಗಿರುವುದು ನಿಜ. ಈ ಸಮಸ್ಯೆ ಬರುತ್ತದೆಂದು ಮೊದಲಿನಿಂದಲೂ ಗೊತ್ತಿತ್ತು. ಈಗ ಅದನ್ನೇ ದೊಡ್ಡ ಸಮಸ್ಯೆಯನ್ನಾಗಿ ಮಾಡಬಾರದಾಗಿತ್ತು, ಆದರೂ ಸಮಸ್ಯೆಯನ್ನಾಗಿ ಮಾಡಿದರು.

ಶ್ರೀ ಬಿ.ಶಿವರಾಮ್: ತಾವು ಹೇಳುವುದನ್ನು ನಾನು ಒಪ್ಪುತ್ತೇನೆ, ಮಾನ್ಯ ಮಂತ್ರಿಗಳು ಹೇಳಿರುವುದು ಸರಿಯಾಗಿದೆ. ಪರಿಹಾರ ಕೊಡಬೇಕೇಬೇಡವೇ ಎನ್ನುವ ಜಿಜ್ಞಾಸೆಯಲ್ಲಿ ಹೇಳುವುದಾದರೆ, ನಾನು ಪರಿಹಾರ ಕೊಡಿ ಎಂದು ಹೇಳುವುದಿಲ್ಲ, ಆದರೆ ಅಲ್ಲಿ ಪೋಲಿಸ್ ದೌರ್ಜನ್ಯ ಆಗಿದೆಯೇ ಇಲ್ಲವೇ, ಅಂತರ್ ಜಲ ಕಡಿಮೆಯಾಗಿದಿಯೆ ಇಲ್ಲವೆ? ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದು, ಬೇರೆ ಹಾರ್ಟಿಕಲ್ಚರ್ ಡೆವಲೆಪ್‌ಮೆಂಟ್ ಮಾಡುವ ಬಗ್ಗೆ ಅಥವಾ ಕೆ.ಇ.ಬಿ.ಯಿಂದ ವಿದ್ಯುತ್ ಸರಬರಾಜು ಮಾಡುವುದರ ಬಗ್ಗೆಯಾಗಲಿ ಇವುಗಳ ಬಗ್ಗೆ ತಾವು ಗಮನ ಕೊಡುವುದಕ್ಕೆ ಏನಾಗಿದೆ? ಸರ್ಕಾರದವತಿಯಿಂದ ಯಾರಾದರೊಬ್ಬರು ಹೋಗಿ ಸ್ಥಳಕ್ಕೆ ಭೇಟಿ ಕೊಟ್ಟಿದ್ದೀರೋ?.. ಸ್ಥಳಕ್ಕೆ ಹೋಗಿ ರೈತರ ಜೊತೆ ಏಕೆ ಮಾತನಾಡುತ್ತಿಲ್ಲ? ಏಕೆ ಈ ರೀತಿ ಹಠ ಮಾಡುತ್ತೀರಿ? ಹೇಗೋ ಸಮಿತಿ ಮಾಡಿದ್ದಿರಲ್ಲಾ ಒಂದೇ ಒಂದು ಸಾರಿ ಸ್ಥಳಕ್ಕೆ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಕೇಳಬಹುದಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ಪರಿಹಾರ ಒಂದನ್ನು ಬಿಟ್ಟು ತಾವು ಹೇಳಿರುವ ಐದು ಅಂಶಗಳನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಬಿ.ಶಿವರಾಮ್: ಯಾವುದಾದರೂ ಒಂದು ಕಾರಣವನ್ನು ಹೇಳಿ ಆ ಜಿಲ್ಲೆಗೆ ಸಮಿತಿಯನ್ನು ಕಳುಹಿಸಿಕೊಡುವುದಕ್ಕೆ ತಯರಾಗಿಲ್ಲ. ಎಲ್ಲಿಯವರೆಗೆ ನಡೆಯುತ್ತದೆ ನಡೆಯಲಿ ನಾವು ನೋಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಹಾಸನ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದೀರಿ, ಸರಿಯಾಗಿ ನಡೆದುಕೊಂಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು): ನಿಮ್ಮ ಸರ್ಕಾರ ಐದು ವರ್ಷ ಅಧಿಕಾರಾವಧಿಯಲ್ಲಿ ಇದ್ದಾಗ ಈ ಬಗ್ಗೆ ತೀರ್ಮಾನ ಮಾಡುವುದಕ್ಕೆ ಸಂಪೂರ್ಣ ಬೆಂಬಲ ಕೊಟ್ಟಿದ್ದರೂ ನೀವು ಏಕೆ ಮಾಡಲಿಲ್ಲ?

ಶ್ರೀ ಬಿ.ಶಿವರಾಮ್: ನಾವು ಇದ್ದಾಗ ಕೂಡ ಏನು ಮಾಡಲಿಲ್ಲ ಎನ್ನುವ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಇದಕ್ಕೆ ಅಂತಿಮ ತೀರ್ಮಾನ ಏನು ಮಾಡಬೇಕು?

ಶ್ರೀ ಹೆಚ್.ಡಿ.ರೇವಣ್ಣ: ಈ ಸಂಬಂಧವಾಗಿ ಮಾನ್ಯ ನಾಗೇಗೌಡರ ಅಧ್ಯಕ್ಷತೆಯಲ್ಲಿ ಸ್ಥಳಕ್ಕೆ ಹೋಗಿ ಅಲ್ಲಿನ ರೈತರಿಗೆ ಕಾನೂನುಬಾಹಿರವಾಗಿಯಾದರೂ ಕೂಡ ಹಸಿರು ಕಾರ್ಡು ವಿತರಣೆ ಮಾಡೋಣ, ವಿದ್ಯುತ್ತಿನ ತೊಂದರೆ ಏನಾದರೂ ಇದ್ದರೆ ಅದನ್ನು ಪರಿಹರಿಸೋಣ, ಕುಡಿಯುವ ನೀರಿನ ವ್ಯವಸ್ಥೆ ಬೇಕಾದರೆ ಮಾಡೋಣ ಹೀಗೆ ಐದು ಅಂಶಗಳನ್ನು ನಾವು ಒಪ್ಪಿಕೊಂಡಿದ್ದೇವೆ... ಪರಿಹಾರ ಕೊಡಲಿಲ್ಲ, ಸ್ಥಳಕ್ಕೆ ಭೇಟಿ ನೀಡಲಿಲ್ಲವೆಂದರೆ ಏನರ್ಥ? ನಾಳೆ ರಾಮಸ್ವಾಮಿಯವರೂ ಕೂಡ ಈ ಬಗ್ಗೆ ಸಮಿತಿ ಕಳುಹಿಸಿಕೊಡಿ ಎಂದು ಕೇಳಬಹುದು, ರಾಜ್ಯದಲ್ಲಿ ಈ ರೀತಿ ಪರಿಹಾರವನ್ನು ಕೊಟ್ಟುಕೊಂಡು ಹೋದರೆ ಮಾನ್ಯ ನಾಗೇಗೌಡರು ಹೇಳಿದಂತೆ ಸುಮಾರು ಹದಿನಾರು ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು. ಪ್ರಾಮಾಣಿಕವಾಗಿ ಹೇಳಬೇಕು ಇದರಲ್ಲಿ ರಾಜಕೀಯ ಚರ್ಚೆ ಬೇಡ.....

ಶ್ರೀ ಬಿ.ಶಿವರಾಮ್: ಕೇವಲ ಪರಿಹಾರಕ್ಕೋಸ್ಕರವಲ್ಲ ಈ ಸಮಸ್ಯೆಗೆ ಏನಾದರೊಂದು ಅಂತಿಮ ತೀರ್ಮಾನ ಏನು ಮಾಡುತ್ತೀರಿ ಅದನ್ನು ಹೇಳಿ... ಇದು ಒಂದು ರೀತಿಯಲ್ಲಿ ಹಠಸಾಧನೆಗಾಗಿ ಈ ರೀತಿ ನಡೆಯುತ್ತಿದೆಯೇ ಹೊರತು ಬೇರೆ ಯಾವುದೂ ಇಲ್ಲ... ಸರ್ಕಾರದವರು ಈ ಬಗ್ಗೆ ಇರುವ ಸಮಸ್ಯೆಯನ್ನು ನೀವು ಅರ್ಥಮಾಡಿಕೊಳ್ಳುತ್ತಿಲ್ಲ....

ಉಪಾಧ್ಯಕ್ಷರು: ಮಾನ್ಯ ಶಿವರಾಮ್‌ರವರೇ, ಮಾನ್ಯ ಸಚಿವರು ಉತ್ತರಿಸುವಾಗ ನೀವು ಈ ರೀತಿ ಮಧ್ಯೆ ಮಾತನಾಡಿದರೆ ಹೇಗೆ?....

ಶ್ರೀ ಎ.ಟಿ.ರಾಮಸ್ವಾಮಿ: ಬಾಗೂರು-ನವಿಲೆ ಸುರಂಗ ಮಾರ್ಗದ ಸಮಸ್ಯೆ ಇಷ್ಟೊಂದು ಬೃಹದಾಕಾರವಾಗಿ ಬೆಳೆಯುವುದಕ್ಕೆ ಸರ್ಕಾರವೇ ಜವಾಬ್ದಾರಿ. ಅದರಲ್ಲೂ ವಿಶೇಷವಾಗಿ ಮಾನ್ಯ ನಾಗೇಗೌಡರು ಕಾರಣರು. ಏಕೆಂದರೆ, ಆ ಟೆನೆಲ್ ಮೇಲೆ ತೊಂಬತ್ತಾರು ದಿನಗಳ ಕಾಲ ಮುಚ್ಚಿ ಅದರ ಮೇಲೆ ಮನೆಕಟ್ಟಿಕೊಂಡು ಪ್ರತಿಭಟನೆ ಮಾಡಿದರೂ ಕೂಡ, ನೀವು ಸ್ಥಳಕ್ಕೆ ಹೋಗಿ ರೈತರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಹೇಗೆ? ಆದ್ದರಿಂದ ಈ ಸಮಸ್ಯೆ ಇಷ್ಟೊಂದು ಉಲ್ಬಣವಾಗಲು ನೀವೇ ಕಾರಣರು ಎಂದು ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ತೊಂಬತ್ತಾರು ದಿನಗಳ ಕಾಲ ತಾವು ಏಕೆ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿದ್ದಿರಿ? ಇದರಿಂದಾಗಿ ಅಲ್ಲಿ ರಸ್ತೆ ಬಂದ್ ಆಯಿತು. ಮಾನ್ಯ ಸದಸ್ಯರು ಮತ್ತೊಂದು ಮಾತನ್ನು ಹೇಳಿದರು, ಏನೆಂದರೆ, ಇದರಲ್ಲಿ ರಾಜಕೀಯ ಮಾಡುತ್ತಾರೆಂದರು. ಖಂಡಿತವಾಗಿ ನಾವು ರಾಜಕೀಯ ಮಾಡುತ್ತಿಲ್ಲ. ರೈತರ ಸಮಸ್ಯೆ ಬಂದಾಗ, ನ್ಯಾಯಯುತವಾದ ಬೇಡಿಕೆ ಬಂದಾಗ ನಾವು ಅವರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ಒಂದು ವೇಳೆ ನೀವೇನಾದರು ವಿರೋಧಪಕ್ಷದಲ್ಲಿದ್ದರೆ ಒಂದು ದೊಡ್ಡ ಟವಲನ್ನು ಹಾಕಿಕೊಂಡು ಗ್ಲಿಸರಿನ್ ಹಾಕಿಕೊಂಡು ಆ ಟವಲ್ ನೆನೆಯುವವರೆಗೆ ನೀವು ಅಳುತ್ತಿದ್ದಿರಿ. ನಿಮ್ಮ ಪಾರ್ಟಿಯವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ನಾವು ಇಂಥ ನೀಚ ರಾಜಕೀಯವನ್ನು ಈ ವಿಷಯದಲ್ಲಿ ಮಾಡುವುದಕ್ಕೆ ಹೋಗಿಲ್ಲ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಏನೆಂದರೆ, ಇಲ್ಲಿ ಪೊಲೀಸ್ ದೌರ್ಜನ್ಯ ಜಾಸ್ತಿಯಾಗಿದೆಯೆಂದು ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ದಯಮಾಡಿ, ಇವತ್ತಾದರೂ ಅಲ್ಲಿನ ರೈತರಹತ್ತಿರ ಮಾತುಕತೆ ಮಾಡಿ ಅವರ ಸಮಸ್ಯೆಗೆ ಸ್ಪಂದಿಸಿ, ಸರ್ಕಾರ ಇದೆ ಎಂದು ತೋರಿಸಿ. ಈಗಾಗಲೇ ಒಂದು ಸಾರಿ ಮಾತನಾಡಿದ್ದೇವೆ, ಅದು ಫಲಪ್ರದವಾಗಲಿಲ್ಲವೆಂದು ಮತ್ತೆ ಮಾತುಕತೆ ಮಾಡದೇ ಇರತಕ್ಕಂಥದ್ದು ನಿಮ್ಮ ಜವಾಬ್ದಾರಿಕೆಯನ್ನು ತೋರಿಸುವುದಿಲ್ಲ.

ಶ್ರೀ ಹೆಚ್.ಎಸ್.ಪ್ರಕಾಶ (ಹಾಸನ): ಸನ್ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ಮಾನ್ಯ ನಾಗೇಗೌಡರು ಮತ್ತು ಮಾನ್ಯ ಪುಟ್ಟಣ್ಣಯ್ಯನವರೂ ಸಹ ಅಲ್ಲಿದ್ದರು. ಆ ದಿನ ರೈತರು ಜಾಸ್ತಿ ಜನ ಬಂದಿರಲಿಲ್ಲ, ಅವತ್ತು ರಾಜಕಾರಣಿಗಳು ಜಾಸ್ತಿ ಬಂದಿದ್ದರು. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ, ಇಂಥದ್ದು ರಾಜ್ಯದಲ್ಲಿ 108 ಕಡೆ ಇದೆ, ಆದ್ದರಿಂದ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಬೇರೆ ಏನೇ ಸೌಕರ್ಯ ಬೇಕಾದರೂ ಕೇಳಿ ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಏತ ನೀರಾವರಿಗೆ ಪೂರ್ಣ ಹಣವನ್ನು ಬಿಡುಗಡೆ ಬಗೆಯಾಗಲಿ ಮತ್ತು ವಿದ್ಯುತ್‌ಚ್ಛಕ್ತಿ ಬಗ್ಗೆ ಆಗಲಿ ಇವರು ಕೇಳಲಿಲ್ಲ, ಮೊದಲು ಪರಿಹಾರ ಬೇಕೆಂದು ಒತ್ತಾಯ ಮಾಡಿದರು. ಅಲ್ಲಿ ಬಂದಂತಹ ಪ್ರತಿನಿಧಿಗಳು ರೈತರ ಪರವಾಗಿದ್ದು

ಸೌಜನ್ಯವಾಗಿ ನ್ಯಾಯವನ್ನು ಕೇಳುವುದು ಸಹಜ. ಅದನ್ನು ಬಿಟ್ಟು ಇಲ್ಲಿ ನೀರನ್ನು ನಿಲ್ಲಿಸಿದವರು ಅವರೇ ಮತ್ತು ರಸ್ತೆ ಚಳುವಳಿಯನ್ನು ಸಹ ಮಾಡಿದ್ದಾರೆ ಇದರಲ್ಲಿ ರಾಜಕೀಯ ಇಲ್ಲವಾ? ನಂತರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಭಾಷಣ ಮಾಡಿ ಧರಣಿಯನ್ನು ಸಹ ಮಾಡಿದ್ದಾರೆ. ಒಂದು ಸಮಸ್ಯೆ ತೀಕ್ಷ್ಣವಾಗಿದ್ದಾಗ ಅದಕ್ಕೆ ಎಲ್ಲಿಂದಲೋ ರಾಜಕೀಯ ಮಾಡಬಾರದು. ಮಾನ್ಯ ನಾಗೇಗೌಡರು ನಮ್ಮ ಜಿಲ್ಲೆಗೆ ಬರದ ಹಾಗೆ ಏನೂ ವ್ಯವಸ್ಥೆಯನ್ನು ಮಾಡಿಲ್ಲ. ಮಾನ್ಯ ನಾಗೇಗೌಡರ ಮೇಲೆ ನೀವು ಇಟ್ಟಿರತಕ್ಕಂಥ ಗೌರವಕ್ಕಿಂತ ನಾವು ಇನ್ನು ಹೆಚ್ಚಿನ ಪಾಲು ವಿಶ್ವಾಸ ಇಟ್ಟಿದ್ದೇವೆ. ಮಾನ್ಯ ಶಿವರಾಮುರವರು ಐದು ವರ್ಷ ರಾಜಕೀಯ ಮಾಡಿದ್ದೀರಿ, ನೀರಾವರಿ ಇಲಾಖೆಗೆ ಇವರ ಸರ್ಕಾರ ಎಷ್ಟು ಖರ್ಚು ಮಾಡಿದೆ ಎಂದು ಪ್ರಾಮಾಣಿಕವಾಗಿ ಲೆಕ್ಕವನ್ನು ತೋರಿಸಲಿ ಮತ್ತು ನಮ್ಮ ಸರ್ಕಾರ ಏನು ಮಾಡಿದೆ ಎಂಬುದನ್ನು ಈ ಸದನದಲ್ಲಿಡುತ್ತೇವೆ. ತಪ್ಪೇನಾದರು ಆಗಿದ್ದರೆ ಕ್ಷಮೆ ಕೇಳುತ್ತೇವೆ.

ಶ್ರೀ ಎ.ಟಿ.ರಾಮಸ್ವಾಮಿ: ನೀರಿನ ಹೆಸರಿನಲ್ಲಿ ರಾಜಕೀಯವನ್ನು ಯಾರ್ಯಾರು ಮಾಡಿದರೆಂಬುದು ಇಡೀ ದೇಶಕ್ಕೆ ಗೊತ್ತು.

ಶ್ರೀ ಬಿ.ಶಿವರಾಮು: ರಾಜಕಾರಣ ಮಾಡಿದ್ದೇವೆಂದು ಇಲ್ಲಿನ ಜನರಿಗೆ ಪೊಲೀಸ್ ಬಿಟ್ಟು ಹೊಡಿಸಿದ್ದೀರಾ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆದು ಮಾತನಾಡುವಾಗ ನಾನು ಅಲ್ಲಿ ಇದ್ದೆ. ಬಹಳ ಆಳವಾಗಿ ಕಾಲುವೆಯನ್ನು ತೆಗೆದರೆ ಅಂತರ್ಜಲ ಬತ್ತಿ ಹೋಗುತ್ತದೆ, ಇದು ಎಲ್ಲರಿಗೂ ಗೊತ್ತಿರುವ ವಿಷಯ. ಇದರಿಂದ ಅನಾನುಕೂಲವಾಗಿದೆ, ಇದೇ ರೀತಿ ರಾಜ್ಯದಲ್ಲಿ 300 ಕಡೆ ಇದೆ, ಆದ್ದರಿಂದ ಎಲ್ಲರಿಗೂ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಮುಖ್ಯಮಂತ್ರಿಗಳು ಹೇಳಿದರು. ಇಂಥ ಒಂದು ಸಮಸ್ಯೆ ಇರತಕ್ಕಂಥ ಜಾಗದಲ್ಲಿ ಏತ ನೀರಾವರಿ ಮತ್ತು ನೀರಾವರಿ ಯೋಜನೆಗಳನ್ನು 10 ವರ್ಷಗಳ ಕಾಲ ವಿಳಂಬ ಮಾಡಿ ಅನಾನುಕೂಲ ಮಾಡಿರುವುದು ಸತ್ಯವೆಂದು ತಾವು ಒಪ್ಪಿಕೊಂಡಿದ್ದೀರಿ. ಇದು ಆದ ಮೇಲೆ 90 ದಿನಗಳ ಕಾಲ ಚಳುವಳಿಯನ್ನು ಮಾಡಿದರು. ಕೆಲವು ಸಮಯದಲ್ಲಿ ಸಮಸ್ಯೆಯನ್ನು ಸ್ಪಂದಿಸುವುದಕೋಸ್ಕರ ಅಹಿಂಸಾತ್ಮಕವಾಗಿ ಚಳುವಳಿಯನ್ನು ಮಾಡಿ ಎಂದು ನೀವೇ ಕೆಲವು ಸಲ ಹೇಳಿದ್ದೀರಿ. ಆದ್ದರಿಂದ, ಇವರನ್ನು ಮಧ್ಯದಲ್ಲಿ ಕರೆದು ಮಾತುಕತೆ ಮಾಡಿ ಏನಾದರೂ ಒಂದು ಪರಿಹಾರವನ್ನು ತಾವು ಕಂಡುಹಿಡಿಯಲಿಲ್ಲ. 90 ದಿನಗಳ ಕಾಲವನ್ನು ಚಳುವಳಿಯನ್ನು ಮಾಡುವುದಕ್ಕೆ ಬಿಟ್ಟರೆ ಏನು ಅರ್ಥ ಎಂದರೆ, ಇದು ಜಿನಿಯಸ್ ಕೇಸ್ ನೀವು ಮಾಡುತ್ತಿರುವುದು ಸರಿ ಎನ್ನುವ ಭಾವನೆ ಬರುತ್ತದೆ. ಇದು ಆದಮೇಲೆ ಚಳುವಳಿದಾರರ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅದನ್ನು ಮಾಡದೇ, ಅಲ್ಲಿ ಪೊಲೀಸರ

ದೌರ್ಜನ್ಯ ಹೇಳಲಾರದಷ್ಟು ನಡೆದಿದೆ. ಈಗ ಮಾನ್ಯ ನಾಗೇಗೌಡರಲ್ಲಿ ವಿನಂತಿ ಮಾಡುವುದೇನೆಂದರೆ, ಈಗಲೂ 9 ದಿವಸಗಳಿಂದ ಧರಣಿ ಮಾಡುತ್ತಿದ್ದಾರೆ, ಇದರಲ್ಲಿ ರಾಜಕಾರಣ ಇದೆಯೋ ಅಥವಾ ಇಲ್ಲವೋ ಅದೆಲ್ಲಾ ಈಗ ಬೇಡ. ಅವರ ಸಮಸ್ಯೆಗೆ ಸರ್ಕಾರ ಸ್ಪಂದಿಸಬೇಕಾಗಿರುವುದು ನಿಮ್ಮ ಕರ್ತವ್ಯ, ಈಗಲೂ ಅವರನ್ನು ಮಾತುಕತೆಗೆ ಕರೆದು ಮಾತುಕತೆ ಆಡುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಬಹುದೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): 90 ದಿವಸಗಳ ಕಾಲ ಮುಷ್ಕರ ಮಾಡಲು ಬಿಟ್ಟರತಕ್ಕಂಥ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದು ಮಾನ್ಯ ರಾಮಸ್ವಾಮಿಯವರು ಹೇಳಿದರು. ಆಫ್ ಸೀಜನ್ ಆದ್ದರಿಂದ ನೀರು ಹರಿಯುತ್ತಿರಲಿಲ್ಲ ಮತ್ತು ಆ ಕಾಲದಲ್ಲಿ ತುಮಕೂರಿಗೆ ನೀರು ಕೊಡತಕ್ಕಂಥದ್ದು ಇರಲಿಲ್ಲ. ಮೊದಲನೆ ಸಾರಿಯೇ ರೈತರ ಮೇಲೆ ಪೊಲೀಸ್‌ನವರು ಕ್ರಮ ತೆಗೆದುಕೊಳ್ಳುವುದು ಸರಿಯಿಲ್ಲವೆಂದು, ಮುಖ್ಯ ಅಭಿಯಂತರರ ಸಭೆ ಮತ್ತು ರಾಜಕಾರಣಿಗಳ ಸಭೆ ಹಾಗೂ ಮುಖ್ಯಮಂತ್ರಿಗಳ ಸಭೆ ಮಾಡಿ ನೀರು ಬಿಡುವುದಕ್ಕೆ ಅವಕಾಶ ಮಾಡಿಕೊಡೋಣ ಮತ್ತು ರೈತರೇ ಅರ್ಥ ಮಾಡಿಕೊಳ್ಳಲಿ ಹಾಗೂ ಸರ್ಕಾರ ನೇರವಾಗಿ ಪೊಲೀಸ್ ಕ್ರಮ ತೆಗೆದುಕೊಳ್ಳಬಾರದೆಂಬ ಹಿನ್ನೆಲೆಯಲ್ಲಿ ನಾವು ಸಹಿಸಿಕೊಂಡು ಇದ್ದೆವು. 96 ದಿವಸ ಚಳುವಳಿ ಮಾಡತಕ್ಕಂಥ ರೈತರ ಮೇಲೆ ಕ್ರಮತೆಗೆದುಕೊಳ್ಳುವುದು ದೊಡ್ಡ ವಿಚಾರವಾಗಿರಲಿಲ್ಲ. ಆದರೆ, ತುಮಕೂರು ಬ್ರಾಂಚ್‌ಗೆ ನೀರು ಬಿಡಲೇ ಬೇಕಾದ ಪರಿಸ್ಥಿತಿ ಬಂದಾಗ ನಾವು ಕ್ರಮ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂತು. ಅಲ್ಲಿಯವರೆಗೆ ತುಮಕೂರಿಗೆ ನೀರನ್ನು ಬಿಟ್ಟರಲಿಲ್ಲ. ಮಾನ್ಯ ಶಿವರಾಮುರವರು ಮಾತನಾಡುವಾಗ, ಅಲ್ಲಿನ ರೈತರು ಪರಿಹಾರವನ್ನು ಒತ್ತಾಯ ಮಾಡುವುದಿಲ್ಲವೆಂದು ಹೇಳಿದರು; ಆ ಮಾತನ್ನು ಅವರು ಹೇಳಿದರೆ, ಅವರಿಗೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಚೀಫ್ ಇಂಜಿನಿಯರ್ ಕಮಿಟಿಯವರು ಒಪ್ಪಿಕೊಂಡಿರುವಂತೆ ಎಲ್ಲವನ್ನು ಬಗೆಹರಿಸಿ ಕೊಡುತ್ತೇವೆ. ನಾಳೆ ದಿವಸ ನೀವು ಸರ್ಕಾರ ನಡೆಸಿದಾಗ ಇದೇ ರೀತಿ ಮಾಡುತ್ತೀರಾ? 10 ಸಾರಿ ಮಾತುಕತೆ ಕರೆದರೂ ಒಪ್ಪುವುದಿಲ್ಲವೆಂದರೆ ನಾವು ಏನು ಮಾಡುವುದು? ರಾಜಕೀಯ ಮಾಡುತ್ತಾ ಹೋದರೆ ನಾವು ಎಷ್ಟು ಸಲ ಮಾತುಕತೆಗೆ ಕರೆಯುವುದು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತೋಟಗಾರಿಕೆ ಇಲಾಖೆಯವರು ಇಲ್ಲಿ ನಷ್ಟವಾಗಿದೆ ಎಂದು ಒಂದು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಬಿ.ಶಿವರಾಮು: ರೈತರನ್ನು 96 ದಿವಸಗಳ ಕಾಲ, ಕಾಲುವೆಯ ಮೇಲೆ ಧರಣಿ ಮಾಡಲು ಬಿಟ್ಟು ನೀವು ಬಹಳ ನಿಷ್ಕ್ರಿಯವಾಗಿ ನಡೆದುಕೊಂಡಿದ್ದೀರಿ. ರಾಜಕಾರಣ

ನಾವು ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ, ಆದರೆ ಪೊಲೀಸ್‌ನವರು ಸಾಮಾನ್ಯ ಮನುಷ್ಯರ ಮೇಲೆ ಮತ್ತು ಹೆಣ್ಣು ಮಕ್ಕಳಿಗೆ ಪೊಲೀಸ್‌ನವರು 3-4 ದಿವಸ ಹೊಡದಿದ್ದಾರೆ, ಇದೆಲ್ಲಾ ಎಷ್ಟರಮಟ್ಟಿಗೆ ಸರಿ? ಇಲ್ಲಿ ಆಗಿರತಕ್ಕಂಥ ಪರಿಣಾಮವನ್ನು ನೀವೇ ಅರ್ಥಮಾಡಿಕೊಳ್ಳಿ, ನೀವು ಮಾಡುತ್ತೀರೋ ಅಥವಾ ಬಿಡುತ್ತೀರೋ ಮತ್ತು ನಾವು ಬಂದ ಮೇಲೆ ಮಾಡುತ್ತೀವೋ ಅದು ಬೇರೆ ವಿಚಾರ. ಆದರೆ, ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂಥದ್ದನ್ನು ಒಪ್ಪಿಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ರೈತ ಪಕ್ಷದಿಂದ ಬಂದಿರತಕ್ಕಂಥವರು ಮತ್ತು ಇವರು ಬೇರೆ ಯಾವ ಪಕ್ಷದ ಕಡೆಯೂ ಇಲ್ಲ. ಆದ್ದರಿಂದ, ಮಾನ್ಯ ಪುಟ್ಟಣ್ಣಯ್ಯನವರೇ, ಅಲ್ಲಿನ ರೈತರನ್ನು ಕರೆಸಿ ಎರಡೂ ಕಡೆ ತೀರ್ಮಾನ ಮಾಡಲಿ, ನಮ್ಮದೇನೂ ಆಭ್ಯಂತರ ಇಲ್ಲ. ನಮಗೆ ರೈತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶ ಕೂಡ ಇಲ್ಲ. ಮಾನ್ಯ ರಾಮಸ್ವಾಮಿಯವರೂ ಸಹ ಮಾಡುತ್ತಿರುವುದು ತಪ್ಪೆಂದು ನನ್ನ ಹತ್ತಿರ ಹೇಳಿದ್ದಾರೆ. ಅವರ ಜೊತೆ ಮಾತುಕತೆಗೆ ಮಾನ್ಯ ಪುಟ್ಟಣ್ಣಯ್ಯನವರು ಮತ್ತು ಮಾನ್ಯ ರಾಮಸ್ವಾಮಿಯವರು ಕುಳಿತುಕೊಳ್ಳಲಿ, ನೇರವಾಗಿ ರೈತನಿಗೆ ಅನುಕೂಲವಾಗುವಂಥ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತೇವೆ. ಅದನ್ನು ಬಿಟ್ಟು ಇದರಲ್ಲಿ ರಾಜಕೀಯ ಬೆರಸುತ್ತೇವೆಂದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ, ನಾವೂ ಸಹ ರಾಜಕೀಯವಾಗಿಯೇ ಎದುರಿಸಬೇಕಾಗುತ್ತದೆ.

ಶ್ರೀ ಬಿ.ಶಿವರಾಮು: ಹಾಗಾದರೆ ನಾವು ರಾಜಕೀಯ ಮಾಡುತ್ತಿದ್ದೇವೆಯೇ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವರಾಮು ಮತ್ತು ಮಾನ್ಯ ರಾಮಸ್ವಾಮಿಯವರು ಹೇಳಿದ್ದನ್ನು ನಾನು ಕೇಳುವುದಿಲ್ಲ. ನಾನು ಇವತ್ತು ಹೇಳುವುದೇನೆಂದರೆ, ಈ ಸಮಸ್ಯೆಯನ್ನು ಇವರೇ ಬಗೆಹರಿಸಲಿ, ನಾನು ಮುಖ್ಯಮಂತ್ರಿಗಳ ಪರವಾಗಿ ಉತ್ತರ ಹೇಳುತ್ತೇನೆ; ಅವರಿಗೆ ಪರಿಹಾರ ಬಿಟ್ಟು ಬೇರೆ ಯಾವುದೇ ಸಲಹೆ ಕೊಟ್ಟರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎ.ಟಿ.ರಾಮಸ್ವಾಮಿ: ನೀವು ಮಾತುಕತೆಗೆ ಕರೆಯಬೇಕು.

ಶ್ರೀ ಕೆ.ಎನ್.ನಾಗೇಗೌಡ: ನೀವು ಮತ್ತು ಮಾನ್ಯ ಶಿವರಾಮು ಹಾಗೂ ಮಾನ್ಯ ಪುಟ್ಟಣ್ಣಯ್ಯನವರನ್ನು ಕರೆದುಕೊಳ್ಳಿ, ಇಲ್ಲಿಗೆ ಪರಿಹಾರ ಒಂದು ಬಿಟ್ಟು, 1.5 ಕೋಟಿ ರೂಪಾಯಿಗಳನ್ನು ನಾಲ್ಕು ತಿಂಗಳಲ್ಲಿ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ನೀವೇ ತೀರ್ಮಾನ ಮಾಡಿ ಸಲಹೆ ಕೊಟ್ಟರೆ ಸರ್ಕಾರ ಒಪ್ಪಿಕೊಳ್ಳುತ್ತದೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾತುಕತೆಗೆ ಕರೆಯದೇ ತೀರ್ಮಾನ ಹೇಗೆ

ಮಾಡುವುದು? ಆದ್ದರಿಂದ, ಮೊದಲು ನೀವು ಮಾತುಕತೆಗೆ ಕರೆಯಬೇಕು.

ಉಪಾಧ್ಯಕ್ಷರು: ಶಿವರಾಮುರವರೇ, ನೀವು ಬೇಗ ನಿಮ್ಮ ಭಾಷಣವನ್ನು ಮುಗಿಸಬೇಕು. ಏಕೆಂದರೆ, ಇನ್ನು ಬಹಳ ಜನ ಮಾತನಾಡಬೇಕಾಗಿದೆ.

ಶ್ರೀ ಬಿ.ಶಿವರಾಮು: ಮಾನ್ಯ ಉಪಾಧ್ಯಕ್ಷರೆ, ಇವತ್ತು ಅಂತರ್ಜಲ ಮತ್ತು ಪಂಪ್‌ಸೆಟ್, ನೀರಾವರಿ ವಿಚಾರದಲ್ಲಿ ರೈತರಿಗೆ ಯಾವ್ಯಾವ ರೀತಿಯಲ್ಲಿ ಅನಾನುಕೂಲ ಈ ಸರ್ಕಾರದಿಂದ ಆಗಿದೆ ಎಂಬುದನ್ನು ಮತ್ತು ಅವರಿಂದಲೇ ಪ್ರಾರಂಭವಾದಂತಹ ಭಿನ್ನಮತದಿಂದ ಸರ್ಕಾರ ಎಷ್ಟು ನಿಷ್ಕ್ರಿಯವಾಗಿದೆ ಎನ್ನತಕ್ಕಂಥ ಬಗ್ಗೆ ನಾನು ಮಾತನಾಡಿದ್ದೇನೆ. ಇವತ್ತು ರೈತರಿಗೆ ಅಲ್ಲದೆ, ಕಾರ್ಮಿಕರಿಗೂ ಕೂಡ ತೊಂದರೆ ಆಗುತ್ತಿದೆ ಎನ್ನತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮೈಸೂರು ಮಿನರಲ್ಸ್ ಸಂಸ್ಥೆಯಲ್ಲಿ 5000 ಜನ ಕಾರ್ಮಿಕರು ಇದ್ದಾರೆ. ಮೈಸೂರು ಮಿನರಲ್ಸ್ ಸಂಸ್ಥೆಯ ಕಾರ್ಮಿಕರಿಗೆ ಮೂರು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಕೆಲವು ಭಾಗದಲ್ಲಿ ಗಣಿ ಚಟುವಟಿಕೆಗೆ ಲೇ ಆಫ್ ಇಂಟ್ರೊಡ್ಯೂಸ್ ಮಾಡಿದ್ದಾರೆ. ಅಲ್ಲಿನ ಕಾರ್ಮಿಕರಿಗೆ, ನಾವು ಉಳಿದುಕೊಳ್ಳುತ್ತೀವೊ, ಅಥವಾ ಇಲ್ಲವೋ ಎನ್ನತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಮುಚ್ಚುವ ಭೀತಿಯಲ್ಲಿ ಮೈಸೂರು ಮಿನರಲ್ಸ್ ಎಂದು ಈಗಾಗಲೇ ಪತ್ರಿಕೆಯಲ್ಲಿ ನಾವು ಹೇಳುವುದಕ್ಕಿಂತ ಮುಂಚೆಯೇ ಬಂದಿದೆ. ಇಲ್ಲಿಗೆ ಒಬ್ಬ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ. ಇವತ್ತು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ನಡುವಿನ ಜಗಳದಿಂದ ಕಾರ್ಮಿಕರು ಬೀದಿಪಾಲಾಗಿದ್ದಾರೆ. 12 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಾರೆ, ಇದನ್ನು ಬೇರೆ ಯಾರೇ ಹೇಳಿದ್ದರೂ ಸುಳ್ಳು ಆಗಬಹುದು, ಆದರೆ ಆಡಿಟ್ ರಿಪೋರ್ಟ್ ಕಾಪಿಯನ್ನು ತಮಗೆ ಕೊಡುತ್ತೇನೆ. ಇದರಲ್ಲಿ 21-8-98 ರಿಂದ ಎಷ್ಟೆಷ್ಟು ಕೋಟಿ ರೂಪಾಯಿ ಹಣ ದುರುಪಯೋಗ ಆಗಿದೆ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಸಾರ್ವಜನಿಕ ಲೆಕ್ಕಪತ್ರಿಕೆಗಳ ಸಮಿತಿಯಿಂದ ರಿಪೋರ್ಟ್ ಕೊಟ್ಟಿದ್ದಾರೆ. ಒಂದು ಸಾರಿ 150 ಲಕ್ಷ ಮತ್ತು 1-2-96ರಲ್ಲಿ 44.33 ಲಕ್ಷ ದುರುಪಯೋಗ ಆಗಿದೆ. ನಾನು ಒಂದೆರಡು ಉದಾಹರಣೆಗಳನ್ನು ಮಾತ್ರ ಹೇಳುತ್ತಿದ್ದೇನೆ. ಆದರೆ, ಸಾಧಾರಣವಾಗಿ 13 ಕೋಟಿ ರೂಪಾಯಿ ಅಕೌಂಟ್‌ನಲ್ಲಿಯೇ ಇಲ್ಲ. ಮೈಸೂರು ಮಿನರಲ್ಸ್ ಸಂಸ್ಥೆಗೆ ಲೆಕ್ಕತನಿಖೆ ಮಾಡಲು ಹೋದಾಗ ಓಚರ್‌ಗಳನ್ನೇ ಕೊಡಲಿಲ್ಲವೆಂದು ಹೇಳಿದ್ದಾರೆ. ಇಲ್ಲಿಯವರೆಗೂ ಇದು ಲಾಸ್ ಆಗಿರಲಿಲ್ಲ. ಹೋದ ವರ್ಷದಿಂದ ಈ ಲಾಸು ಪ್ರಾರಂಭವಾಯಿತು. ಇಲ್ಲಿಯವರೆಗೆ ಈ ಮೈಸೂರು ಮಿನರಲ್ಸ್ ಕಾರ್ಖಾನೆಯು ಸುಮಾರು 50 ಲಕ್ಷದ ಆದಾಯದ ರೇಂಜ್‌ನಲ್ಲಿ ಹೋಗುತ್ತಿದ್ದ ಈ ಕಾರ್ಖಾನೆಯು ಇವತ್ತು ಈ ಮಟ್ಟಕ್ಕೆ ತಲುಪಿದೆ ಎಂದರೆ ಇದಕ್ಕೆ ಮೂಲ ಕಾರಣರು ಯಾರು? ಸರ್ಕಾರ ಇದರ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುವ ಮೂಲಕ, ಇವತ್ತು ಬೀದಿಗೆ ಹೋಗುತ್ತಿರುವ 5 ಸಾವಿರ ಕಾರ್ಮಿಕರ ಬಗ್ಗೆ ಪರಿಹಾರವನ್ನು ಒದಗಿಸಲಿಕ್ಕೆ

ಸಾಧ್ಯವಿದೆಯಾ? ಇದು ಹಾಸನ ಜಿಲ್ಲೆಯಿಂದಲೇ ಪ್ರಾರಂಭವಾಗಿದೆ. ಇವತ್ತು ಸರ್ಕಾರಿ ಭೂಮಿಯನ್ನು ದುರುಪಯೋಗಪಡಿಸಿಕೊಂಡಿರುವರೆಲ್ಲಾ ಮೇಲಿನ ಹಿರಿಯ ಅಧಿಕಾರಿಗಳು. ಇದರ ಬಗ್ಗೆ ವಿಚಾರಣೆ ಮಾಡಿಸಿ ಎಷ್ಟು ಲೋಪದೋಷವಾಗಿದೆ ಎಂಬುದನ್ನು ತಿಳಿದುಕೊಳ್ಳಿ. ನಾನು ಒಂದೇ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಬಹುಶಃ ಮಾನ್ಯ ನಾಗೇಗೌಡರು ಹೊರಗೆ ಹೋದರು ಎಂದು ಕಾಣಿಸುತ್ತದೆ. ಈ ಸದನದಲ್ಲಿ ಮಾನ್ಯ ನಾಗೇಗೌಡರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆಗ ಮುಖ್ಯಮಂತ್ರಿಗಳೂ ಸಹ ಸದನದಲ್ಲಿದ್ದರು. ಲಿಫ್ಟ್ ಇರಿಗೇಷನ್ ಮಂಜೂರಾತಿಯನ್ನು ಎರಡು ತಿಂಗಳೊಳಗಾಗಿ ಕೊಡುತ್ತೇನೆಂಬ ಮಾತನ್ನು ಹೇಳಿದ್ದರು. ಸರ್ಕಾರದವರು ಈ ಆಶ್ವಾಸನೆಯನ್ನು ಕೊಟ್ಟರೂ ಸಹ ನಡೆದುಕೊಳ್ಳುತ್ತಾ ಇಲ್ಲವೆಂದು ನಿಮ್ಮ ಗಮನಕ್ಕೆ ತರುತ್ತಿದ್ದೇವೆ.

ಉಪಾಧ್ಯಕ್ಷರು: ಮಾನ್ಯ ಮುನಿಯಪ್ಪನವರೇ ತಾವು ಮಾತನಾಡಿ. ಮಾನ್ಯ ಶಿವರಾಮುರವರೇ ತಾವು ಈ ರೀತಿ ಮಾಡುವುದು ಒಳ್ಳೆಯದಲ್ಲ. ನೀವು ಪದೇಪದೇ ಮಾತನಾಡುತ್ತಿದ್ದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಆದಷ್ಟು ಬೇಗನೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಬಿ.ಶಿವರಾಮು: ಈ ಅವಿಶ್ವಾಸ ನಿರ್ಣಯಕ್ಕೆ ನಮ್ಮ ಭಿನ್ನಮತೀಯ ಶಾಸಕರು, ಅವರಿಗೆ ನಿಜವಾಗಿಯೂ, ಛಲ, ಧೈರ್ಯ, ಎದೆಗಾರಿಕೆಯಿದ್ದರೆ ನಮ್ಮ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿದರೆ, ರೈತರು ಬಹುಶಃ ಮುಂದಿನ ಚುನಾವಣೆಯಲ್ಲಿ ತಮಗೆ ಓಟನ್ನು ಹಾಕುತ್ತಾರೆ. ಇವತ್ತು ನಾನು ಹೇಳಿದ್ದೇನೆಂದರೆ ಈ ಪಂಪ್‌ಸೆಟ್ ವಿಚಾರದಲ್ಲಿ, ಅಂತರ್‌ಜಲದ ವಿಚಾರದಲ್ಲಿ ಸರ್ಕಾರದವರು ದಿಟ್ಟವಾದ ನಿಲುವನ್ನು ತಾಳಿದ್ದರೆ ನಾನು ಸಂತೋಷಪಡುತ್ತಿದ್ದೆ. ತಾವು ಮುಂದಿನ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಅವಕಾಶವಿಲ್ಲದಿದ್ದರೆ 1989ರ ಚುನಾವಣೆಯ ರೀತಿಯಾಗುತ್ತದೆ ಎಂಬುದನ್ನು ತಿಳಿಸುತ್ತೇನೆ. ಈ 13ನೇ ತಾರೀಖು ಸೀಕ್ರೇಟ್ ಬ್ಯಾಲೆಟ್ ಎಂದು ಮಾಡಿದ್ದೀರಿ, ಅದರ ಬದಲು ಅದಕ್ಕೆ ಇಲ್ಲೇ ಅವಕಾಶವನ್ನು ಮಾಡಿದರೆ ಇಷ್ಟೊಂದು ಚರ್ಚೆ ಮತ್ತು ಗೊಂದಲವಿರುವುದಿಲ್ಲ. ಅದಕ್ಕೋಸ್ಕರ ನಾಳೇ ಓಟು ಹಾಕುವ ಸಮಯದಲ್ಲಿ ಸದಸ್ಯರು ಛಲ ಮತ್ತು ಧೈರ್ಯವನ್ನು ಪ್ರದರ್ಶನ ಮಾಡಿದರೆ ಬಹುಶಃ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳುತ್ತಾ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಭಿನ್ನಮತೀಯರ ಚಟುವಟಿಕೆಯು ಹಾಸನ ಜಿಲ್ಲೆಯಿಂದಲೇ ಪ್ರಾರಂಭವಾಗುತ್ತದೆ.

ಶ್ರೀ ಬಿ.ಶಿವರಾಮ್: ಅದಕ್ಕೆ ನಾನು ಹೇಳುತ್ತಿದ್ದೇನೆ. ಎದೆಗಾರಿಕೆ, ಧೈರ್ಯ, ರಾಜಕೀಯ ಚಟುವಟಿಕೆ ಏನಾದರೂ ಇದ್ದರೆ ಅದು ಹಾಸನ ಜಿಲ್ಲೆಯಿಂದ ಪ್ರಾರಂಭವಾಗುತ್ತದೆ. ಅದನ್ನು ಎಲ್ಲಾ ಶಾಸಕರು ತೋರಿಸಬೇಕು.

+ ಶ್ರೀ ಬಿ.ಮುನಿಯಪ್ಪ (ಗಾಂಧಿನಗರ): ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಕಾಂಗ್ರೆಸ್ ಪಕ್ಷದ ಮಿತ್ರರುಗಳು, ಬಿಜೆಪಿ ಪಕ್ಷದ ಮಿತ್ರರುಗಳು, ಸನ್ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಆ ನಿರ್ಣಯದ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ನನಗೂ ಕೂಡ ಮಾತನಾಡುವಂತಹ ಅವಕಾಶವನ್ನು ತಾವು ಕೊಟ್ಟಿದ್ದೀರಿ. 1994ರಲ್ಲಿ ಜನತಾದಳದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಸನ್ಮಾನ್ಯ ದೇವೇಗೌಡರ ಸರ್ಕಾರದ ಮೇಲೆ ಮತ್ತು ಸನ್ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರದ ಮೇಲೆ ಇದು ಎರಡನೆಯ ಬಾರಿಗೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ಕಳೆದ ಎರಡು ಬಾರಿ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಹ ಸಂದರ್ಭ, ಸನ್ನಿವೇಶ ಬೇರೆ, ಈ ಬಾರಿ ಮಂಡಿಸಿರುವಂತಹ ವಿಚಾರವೇ ಬೇರೆಯಾಗಿದೆ. ಕರ್ನಾಟಕದಲ್ಲಿ ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರ ಕಳೆದ ಎರಡು ತಿಂಗಳಿಗಿಂತ ಮುಂಚೆ ರಾಜ್ಯದ ಉದ್ದಗಲದಲ್ಲಿ ನಿಗಮಗಳನ್ನೆಲ್ಲಾ ರಚಿಸಿ ಸುಮಾರು 600 ಜನ ಕಾರ್ಯಕರ್ತರುಗಳಿಗೆ ನಿಗಮಗಳಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿರುವಂತಹ ವಿಚಾರ. ಕರ್ನಾಟಕ ರಾಜ್ಯದಲ್ಲಿ ಹಲವಾರು ಜನಗಳಿಂದ ಟೀಕೆಗೆ ಒಳಗಾದಂತಹ 45 ಜನ ಮಂತ್ರಿಗಳನ್ನು ಮಾಡಿರುವ ವಿಚಾರ ಹಾಗೂ ಸುಮಾರು 25-30 ಶಾಸಕರುಗಳಿಗೆ ಹಲವಾರು ನಿಗಮಗಳಲ್ಲಿ ಅಧ್ಯಕ್ಷಗಿರಿ ಮತ್ತು ಸದಸ್ಯರ ಸ್ಥಾನವನ್ನು ದೊರಕಿಸಿಕೊಟ್ಟಿದ್ದೀರಿ. ತಮ್ಮ ಆಡಳಿತ ಪಕ್ಷದಲ್ಲಿರತಕ್ಕಂತಹ ಆಂತರಿಕವಾಗಿರತಕ್ಕಂಥ ಸಮಸ್ಯೆಯು ರಾಜ್ಯದ ಜನರ ಮುಂದೆ ಬಂದು ಅದು ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಿದೆ. ಇವತ್ತು ವಿರೋಧ ಪಕ್ಷಗಳು ಆಡಳಿತ ಪಕ್ಷದಲ್ಲಿ ಒಳಕಚ್ಚಾಟಗಳು ಇರುವ ಕಾರಣ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಈ ಸರ್ಕಾರ ಬಿದ್ದು ಹೋಗುತ್ತದೆ ಎನ್ನುವ ಭಾವನೆಯಲ್ಲಿ ಇವತ್ತು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ನಾನು ಆಡಳಿತಪಕ್ಷದ ಆಂತರಿಕ ವಿಚಾರಗಳನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಪ್ರತಿಯೊಂದು ರಾಜಕೀಯ ಪಕ್ಷಗಳಲ್ಲೂ ತನ್ನದೇ ಆದಂತಹ ಸಮಸ್ಯೆಗಳು, ಭಿನ್ನಮತಗಳು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇರುವುದು ಸಹಜ. ಆದರೆ ಇದು ಶಾಸನಸಭೆಯವರೆಗೂ ಇದು ಚರ್ಚೆಗೆ ಬಂದ ಮೇಲೆ ಕೆಲವು ಸಂದರ್ಭಗಳಲ್ಲಿ ಪಕ್ಷದಲ್ಲಿರುವಂತಹ ವಿಚಾರಗಳನ್ನು, ನಿಮ್ಮ ಮಂತ್ರಿಮಂಡಲದಲ್ಲಿ 45 ಜನರಲ್ಲಿ ಇಬ್ಬರು-ಮೂವರನ್ನು ಬಿಟ್ಟರೆ ಉಳಿದ 42 ಮಂತ್ರಿಗಳಿಗೆ ಯಾವುದೇ ಕೆಲಸ ಮಾಡುವುದಕ್ಕೆ ದಿನನಿತ್ಯ ತೊಂದರೆಯನ್ನು ಕೊಟ್ಟು, ಅವರು ಹಸ್ತಕ್ಷೇಪವನ್ನು ಮಾಡಿದ್ದಾರಾ ಅಥವಾ 600 ಜನ ಕಾರ್ಯಕರ್ತರುಗಳಿಗೆ ನಿಗಮಗಳಲ್ಲಿ ಅವಕಾಶವನ್ನು ಒದಗಿಸಿಕೊಟ್ಟಿರುವುದರಲ್ಲಿ ಏನಾದರೂ ಅತೃಪ್ತಿ ಉಂಟಾಗಿದೆಯೇ, ಅಥವಾ ಈ ಸರ್ಕಾರದ ಮೇಲೆ ಮೂರನೇ ಬಾರಿಗೆ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ಅದಕ್ಕೆ ಕಾರಣಗಳೇನು? ಅದರಲ್ಲಿ ಇವರ ಪಾಲುಗಳೇನು ಎನ್ನುವ ಪ್ರಶ್ನೆಗಳು ಬರುವಾಗ ಈ ಸದನದಲ್ಲಿ ನಿನ್ನೆ ದಿನ ಮಾತನಾಡುವಂತಹ ಸಂದರ್ಭಗಳಲ್ಲಿ ಹಲವಾರು ಜನರು ಪಕ್ಷದಲ್ಲಿ ಅತ್ಯಯ

ಕಾಟವೆಂದು ಕೆಲವರು ಹೇಳಿದರು. ಇನ್ನು ಕೆಲವರು ಸಭೆಯಲ್ಲಿ ಇಲ್ಲದಿರುವ ವ್ಯಕ್ತಿಯನ್ನಿಟ್ಟು ಆತ್ಮೆಯ ಕಾಟವಲ್ಲ, ಇದು ಮಾವನ ಕಾಟವೆಂದು ಹೇಳಿ ಸಭೆಯಲ್ಲಿ ಸಂತೋಷ ಪಟ್ಟರುವುದು ಉಂಟು. ನಾನು ತಮ್ಮನ್ನು ನೋಡಿ ಈ ರೀತಿ ಹೇಳುತ್ತಿದ್ದೇನೆ. ಕಾರಣವೇನೆಂದರೆ..

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಳೆದ 4 ವರ್ಷಗಳಿಂದ ಈ ಸರ್ಕಾರ ಇನ್ನು 5 ವರ್ಷಗಳ ಕಾಲ ಉಳಿಯಬೇಕು. ಜನರು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ 5 ವರ್ಷಗಳ ಕಾಲ ಆಡಳಿತವನ್ನು ನಡೆಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಇನ್ನು 5 ವರ್ಷಗಳ ಕಾಲ ಈ ಸರ್ಕಾರವಿರಬೇಕೆಂದು, ನಾನು ಸರ್ಕಾರದ ಒಳಗೂ ಮತ್ತು ಹೊರಗೂ ಬೆಂಬಲವನ್ನು ಕೊಡುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಸರ್ಕಾರ ಜನವಿರೋಧಿ ಕೆಲಸ, ಬಡವರ ವಿರೋಧಿ ಕೆಲಸ, ಮತ್ತು ಬೆಲೆ ಏರಿಕೆಯಂತಹ ಕೆಲಸವನ್ನು ಮಾಡುವಾಗ ಸರ್ಕಾರದ ವಿರುದ್ಧ ಧ್ವನಿಯನ್ನು ಶಾಸನ ಸಭೆಯಲ್ಲಿ ಎತ್ತುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, 1994ರ ಶಾಸನ ಸಭೆಯ ಚುನಾವಣೆಗೆ ಹೋದ ಸಂದರ್ಭದಲ್ಲಿ ನಾನು ಆಡಳಿತ ಪಕ್ಷದ ಶಾಸಕರನ್ನು ಹಳೆಯ ವಿಚಾರಗಳನ್ನು ಮೆಲುಕು ಹಾಕುವಂತೆ ಒತ್ತಾಯ ಮಾಡುತ್ತಿದ್ದೇನೆ. ಜನತಾದಳದ ನಾಯಕರುಗಳು ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡುವಾಗ ನಾವು ಇನ್ನು ಮೇಲೆ ಜಗಳ ಮಾಡಿಕೊಳ್ಳುವುದಿಲ್ಲ. ನಾವೆಲ್ಲರೂ ಒಗ್ಗಟ್ಟಿನಿಂದ, ಐಕ್ಯಮತ್ಯತೆಯಿಂದ ಇರುತ್ತೇವೆ, ಯಾವುದೇ ಕಾರಣಕ್ಕೂ ಜಗಳ ಮಾಡಿಕೊಳ್ಳುವುದಿಲ್ಲವೆಂದು ಚುನಾವಣೆಯ ಬಹಿರಂಗ ಸಭೆಗಳಲ್ಲಿ ಜನರಿಗೆ ಆಶ್ವಾಸನೆಯನ್ನು ಕೊಟ್ಟು ಮತವನ್ನು ಕೇಳಿದ್ದು ಈ ನಾಡಿನ ಜನ ಮರೆಯಲಿಕ್ಕೆ ಸಾಧ್ಯವಿಲ್ಲ. ಬರುವ ಡಿಸೆಂಬರ್‌ನಲ್ಲಿ ಕರ್ನಾಟಕ ಶಾಸನಸಭಾ ಚುನಾವಣೆ ನಡೆಯಲಿದೆ. ಕರ್ನಾಟಕ ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನವೆಂಬರ್-ಡಿಸೆಂಬರ್‌ನಲ್ಲಿ ನಡೆಯಬೇಕಾಗಿದೆ. ಈ ದೇಶದ ನಾಲ್ಕೂ ರಾಜ್ಯದ ಚುನಾವಣೆಗಳು ನಡೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ ನಿಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ಇಂತಹ ಸಂದರ್ಭದಲ್ಲಿ ಸರ್ಕಾರವನ್ನು ಉಳಿಸಿಕೊಳ್ಳಲು ಆಡಳಿತ ಪಕ್ಷದವರೆಲ್ಲರೂ ಸೇರಿ, ನಾಳೆ ಮತ ಚಲಾಯಿಸುವಾಗ ಸರ್ಕಾರವನ್ನು ಕಾಪಾಡಿಕೊಳ್ಳಬಹುದು. ಆದರೆ ಈ ಎಲ್ಲಾ ಘಟನೆಗಳನ್ನು ಪ್ರಜಾಪ್ರಭುತ್ವದಲ್ಲಿ ನಮಗೆ ಪ್ರಭುಗಳಾಗಿರತಕ್ಕಂತಹ ಜನ ಕೂತೂಹಲದಿಂದ ನೋಡುತ್ತಿದ್ದಾರೆ.

6-10 ಪಿ.ಎಂ

ನಾವು ಯಾರಾದರೂ ಎಲ್ಲೇ ಓಡಾಡಿದರೂ ನಮ್ಮ ಕ್ಷೇತ್ರಗಳಲ್ಲಿ ಜನ ಕೇಳುವುದು ಏನು ಕೆಲಸ ಮಾಡಿದ್ದೀರಿ ಎಂದು ಕೇಳುವುದಿಲ್ಲ. ಈ ಸರ್ಕಾರ ಇರುತ್ತದೋ ಹೋಗುತ್ತದೋ ಎಂದು ಕೇಳುತ್ತಾರೆ. ಆ ಮಟ್ಟಕ್ಕೆ ಮಾರ್ಕೆಟ್‌ಗಳಲ್ಲಿ ಬಸ್

ನಿರ್ಮಾಣದಲ್ಲಿ, ರೈಲ್ವೆಸ್ಟೇಷನ್‌ನಲ್ಲಿ ಮಾತನಾಡುವ ವಸ್ತುವಾಗಿ ನೀವು ಈ ಸರ್ಕಾರದ ಭವಿಷ್ಯದ ಬಗ್ಗೆ ವಸ್ತು ವಿಚಾರವನ್ನಾಗಿ ಮಾಡಿದ್ದೀರಿ. ಆವೊತ್ತಿನ ದಿವಸ 1989ರಲ್ಲಿ ಮಾನ್ಯ ಬೊಮ್ಮಾಯಿಯವರ ಸರ್ಕಾರವಿತ್ತು. ಆವೊತ್ತು ನಿಮ್ಮಲ್ಲಿದ್ದ ಸಮಸ್ಯೆಯಿಂದ ಆ ಸರ್ಕಾರವನ್ನು ಕಳೆದುಕೊಂಡಿರಿ. ರಾಜ್ಯಪಾಲರ ಬಳಿ ಹೋಗಿ ಒಂದು ಅವಕಾಶ ಬಯಸುವ ಸಂದರ್ಭದಲ್ಲಿ ಸರ್ಕಾರಕ್ಕೆ ಬಹುಮತವಿದೆಯೆಂದು ಹೇಳುವಷ್ಟರಲ್ಲಿಯೇ ಬಿದ್ದುಹೋಯಿತು. ನಂತರ ನ್ಯಾಯಾಲಯ ರಾಜ್ಯಪಾಲರನ್ನು ಟೀಕೆ ಮಾಡಿ ಅಲ್ಲಿ ತೀರ್ಪನ್ನು ಕೊಟ್ಟದ್ದು ಇತಿಹಾಸದ ಪುಟಗಳಲ್ಲಿದೆ. ಇಷ್ಟೊಂದು ವಿಚಾರ ನಿಮ್ಮ ಹತ್ತಿರ ಇರಬೇಕಾದರೆ ನಿಮಗೆ ಯಾವುದೋ ಒಂದು ಶಾಪವೋ ಏನೋ ವಿಚಾರವಂತರು, ಬುದ್ಧಿಜೀವಿಗಳು ನಿಮ್ಮ ಪಕ್ಷದಲ್ಲಿ ಹೆಚ್ಚುಜನರು ಇರುವಾಗ ಏಕೆ ಹೀಗೆ ಮಾಡುತ್ತೀರಿ? ಐದು ವರ್ಷ ಅಧಿಕಾರ ಮಾಡಲಿಯೆಂದು ಜನರು ಆಯ್ಕೆ ಮಾಡಿದರೆ ಎರಡುವರ್ಷ ಎರಡೂವರೆ ವರ್ಷಗಳಲ್ಲಿಯೇ ಜಗಳ ಪ್ರಾರಂಭ ಮಾಡುತ್ತೀರಿ. 1977ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ತುರ್ತುಪರಿಸ್ಥಿತಿ ಬಂದಂತಹ ದಿನಗಳಲ್ಲಿ ಆ ಸಂದರ್ಭದಲ್ಲಿ ಚುನಾವಣೆ ನಡೆದಾಗ ಈ ದೇಶದ ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ಮೂರನೆಯ ಎರಡರಷ್ಟು ಬಹುಮತ 350ಕ್ಕೂ ಹೆಚ್ಚು ಸ್ಥಾನವನ್ನು ಈ ದೇಶದ ಜನ ನಿಮಗೆ ಕೊಟ್ಟರು. ನೀವುಗಳೆಲ್ಲಾ ಸೆರೆಮನೆಯಲ್ಲಿ ಇದ್ದಂತಹ ಸಂದರ್ಭ ಆವೊತ್ತಿನ ಜನಸಂಘದ ನಾಯಕರು ತಮ್ಮ ಪಕ್ಷದ ಜೊತೆಯಲ್ಲಿ ಸೇರಿ ಬೆಂಗಳೂರಿನ ಸೆರೆಮನೆಯಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಸೆರೆಮನೆಗಳಿವೆಯೋ ಅಲ್ಲೆಲ್ಲಾ ಇದ್ದಿರಿ. ನಿಮ್ಮ ಪಕ್ಷದ ಪ್ರಣಾಳಿಕೆಯನ್ನು ಕೂಡ ಹೇಳಿಕೊಳ್ಳಲಿಕ್ಕೆ ಅವಕಾಶವಿಲ್ಲದ ರೀತಿಯಲ್ಲಿ 33 ದಿವಸಗಳಲ್ಲಿ ತಾವು ಸೆರೆಮನೆಯಲ್ಲಿದ್ದಾಗ ಚುನಾವಣೆಯನ್ನು ಘೋಷಿಸಲಾಗಿತ್ತು. 350 ಜನರನ್ನು ಸಂಸತ್‌ಗೆ ಆಯ್ಕೆ ಮಾಡಿದರು. ಆಯ್ಕೆಯಾದ ಮೇಲೆ, ಇದೆಲ್ಲಾ ಏತಕ್ಕೆ ಹೇಳುತ್ತೇನೆಂದರೆ, ರಾಜಕೀಯದಲ್ಲಿ ಪ್ರತಿಯೊಬ್ಬರೂ ತಪ್ಪು ಮಾಡುತ್ತಾರೆ ಅದು ಸಹಜ. ಹಿಂದೆ ಏನಾಯಿತು ಮುಂದೆ ಏನಾಗುತ್ತದೆನ್ನುವ ತಿಳುವಳಿಕೆ ನಮಗೆ ಇರಬೇಕು. 350 ಜನರನ್ನು ಆಯ್ಕೆ ಮಾಡಿದಾಗ ಮೊರಾರ್ಜಿದೇಸಾಯಿಯವರು ಪ್ರಧಾನಮಂತ್ರಿಗಳಾದರು. 2.50 ಪೈಸೆಗೆ ಒಂದು ಕೆ.ಜಿ. ಸಕ್ಕರೆ ಓಪನ್ ಮಾರ್ಕೆಟ್‌ನಲ್ಲಿ ಧಾರಾಳವಾಗಿ ದೊರಕುತ್ತಿದ್ದಂತಹ ದಿನಗಳು ಆವೊತ್ತು ಇತ್ತು. ನಂತರ ಏನಾಯಿತು ಅಂದರೆ, ಚಿಕ್ಕಮಗಳೂರಿನಿಂದ ಶ್ರೀಮತಿ ಇಂದಿರಾಗಾಂದಿಯವರನ್ನು ಅಲ್ಲಿನ ಜನ ಆಯ್ಕೆಮಾಡಿ ಸಂಸತ್‌ಗೆ ಕಳುಹಿಸಿದರು. ಕಳುಹಿಸಿದಾಗ ಏನಾಯಿತು ಅಂದರೆ ದಿನನಿತ್ಯ ಇಂದಿರಾಗಾಂಧಿಯವರನ್ನು ಮತ್ತು ಸಂಜಯಗಾಂಧಿಯವರನ್ನು ಬಂಧಿಸುವುದು ದಿನನಿತ್ಯದ ಕಾರ್ಯವಾಯಿತು. ಜನ ಆಯ್ಕೆ ಮಾಡಿದ ಮೇಲೆ ಹಕ್ಕುಬಾಧ್ಯತಾ ಸಮಿತಿಯ ಮುಂದೆ ಕರೆಸಲಾಗುತ್ತಿತ್ತು. ಹಕ್ಕುಬಾಧ್ಯತಾ ಸಮಿತಿಯಲ್ಲಿ ಏಳೆಂಟು ಜನ ಸದಸ್ಯರು ಇದ್ದರು. ಚಿಕ್ಕಮಗಳೂರಿನಿಂದ ಜನ ಬಹುಮತದಿಂದ ಆಯ್ಕೆ ಮಾಡಿದ ಮೇಲೆ ಏಳೆಂಟು ಜನ ಹಕ್ಕುಬಾಧ್ಯತಾ ಸಮಿತಿಯ ಸದಸ್ಯರು ಕರೆಸಿ ಪ್ರಶ್ನೆ ಮಾಡಲಾಗುತ್ತಿತ್ತು. ಅವರು ಈ ದೇಶದ ಪ್ರಧಾನಮಂತ್ರಿಗಳಾಗಿದ್ದಾಗ

ಪ್ರಪಂಚದಲ್ಲಿಯೇ ಮೂರನೆಯ ಶಕ್ತಿಯನ್ನು ಸೃಷ್ಟಿ ಮಾಡುವಂತಹ ವಿಚಾರವನ್ನು ಹೊಂದಿದ್ದರು. ಅಂತಹವರನ್ನು ಹಕ್ಕುಬಾಧ್ಯತಾ ಸಮಿತಿಯ ಮುಂದೆ ಕರೆಸಿ ಅವರಿಗೆ ಕುರ್ಚಿಯನ್ನು ಕೊಡದೆ ಪ್ರಶ್ನೆಗಳನ್ನು ಕೇಳಿದರು. ನಂತರ 1979-80ರ ವೇಳೆಯಲ್ಲಿ ಚರಣಸಿಂಗ್‌ರವರು ಈ ದೇಶದ ಪ್ರಧಾನಮಂತ್ರಿಗಳಾದರು. ಆ ಮಂತ್ರಿಮಂಡಲದಲ್ಲಿ ನಮ್ಮ ಪಕ್ಷದ ಇಬ್ಬರು ಮಂತ್ರಿಗಳಾಗಿದ್ದರು. ನಂತರ 1980ರಲ್ಲಿ ಚುನಾವಣೆಯಾಯಿತು. ಆ ಚುನಾವಣೆಯಲ್ಲಿ 350ಜನರನ್ನು ಆಯ್ಕೆ ಮಾಡಿದಂತಹ ಜನ 50ಜನರನ್ನು ಕೂಡ ಆಯ್ಕೆ ಮಾಡಲಿಲ್ಲ. ಇದು ಇತಿಹಾಸ. ಇದು ಆದಮೇಲೆ 1989ರಲ್ಲಿ ಕರ್ನಾಟಕದಲ್ಲಿ ಶಾಸನಸಭೆಗೆ ಚುನಾವಣೆ ನಡೆಯಿತು. ವೀರೇಂದ್ರಪಾಟೀಲ್‌ರವರ ನೇತೃತ್ವದಲ್ಲಿ 180ಕ್ಕೂ ಹೆಚ್ಚು ಸ್ಥಾನವನ್ನು ಕರ್ನಾಟಕದ ಜನ ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟರು. ಕೊಟ್ಟಮೇಲೆ ಇಲ್ಲಿ ಶಾಸನಸಭೆಯ ನಡವಳಿಕೆಯ ಪುಟಗಳನ್ನು ತಿರುವಿ ಹಾಕುವಾಗ ಯಾವ ವಿರೋಧ ಪಕ್ಷವೂ ಸಹ ಇರಲಿಲ್ಲ. ಆಡಳಿತ ಪಕ್ಷದ ಸದಸ್ಯರುಗಳೇ ಸರ್ಕಾರದ ಮೇಲೆ ಟೀಕೆ ಮಾಡಿ ಪ್ರತಿನಿತ್ಯ ದೆಹಲಿ ಬೆಂಗಳೂರಿಗೆ ಪ್ರವಾಸ ಮಾಡಿ 180ಜನರಲ್ಲಿ ಬಹುಪಾಲು ಶಾಸಕರು ಮಂತ್ರಿಗಳಾಗಬೇಕೆಂದು ಕನಸನ್ನು ಇಟ್ಟುಕೊಂಡವರು ಇದ್ದರು. ಇಷ್ಟೆಲ್ಲಾ ಆದಮೇಲೆ ವೀರೇಂದ್ರಪಾಟೀಲರು ಹೋಗಿ, ಬಂಗಾರಪ್ಪನವರು ಬಂದರು. ಬಂಗಾರಪ್ಪನವರು ಹೋದ ಮೇಲೆ ವೀರಪ್ಪಮೊಯಿಲಿಯವರು ಬಂದ ನಂತರ 1994ರಲ್ಲಿ ಚುನಾವಣೆಗೆ ಹೋದಂತಹ ಸಂದರ್ಭದಲ್ಲಿ ಕಾಂಗ್ರೆಸ್‌ನವರು 36 ಸ್ಥಾನಗಳಿಗೆ ಸೀಮಿತವಾದರು. ಯಾರಿಗೆ ಕರ್ನಾಟಕದ ಜನ 180ಸ್ಥಾನಗಳನ್ನು ಕೊಟ್ಟಿತ್ತು ಅವರನ್ನು 36ಸ್ಥಾನಗಳಿಗೆ ನಿಲ್ಲಿಸಿದರು. ಜನ ನಿಮಗೆ 1983ರಲ್ಲಿ ಅಧಿಕಾರ ಕೊಟ್ಟಿದ್ದರು. 1985ರಲ್ಲಿ ಪಾರ್ಲಿಮೆಂಟಿನ ಜೊತೆ ಚುನಾವಣೆ ನಡೆದಾಗ 1990ರವರೆಗೆ ಇರಬೇಕಾದವರು 1989ಕ್ಕೆ ಚುನಾವಣೆ ಬರುವುದಕ್ಕೆ ತಾವೆಲ್ಲರೂ ಕಾರಣಕರ್ತರಾಗಿದ್ದೀರಿ. ಇವತ್ತು, ಈ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿದೆ ಎನ್ನುವುದಕ್ಕೆ ನೀವೇ ಕಾರಣಕರ್ತರು ಮತ್ತು ನಿಮ್ಮ ಆಡಳಿತ ಪಕ್ಷದವರೆಂದರೆ ತಪ್ಪಾಗಲಾರದು. ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವ ಸಂದರ್ಭದಲ್ಲಿ 1980ರ ನಂತರ ಇಲ್ಲಿ ನಾನೇ ಮಾತನಾಡುವಾಗ ಬಹುಪಾಲು ಜನರು ಮೊದಲು ಶಾಸನಸಭೆಯ ಬಗ್ಗೆ ಇದ್ದಂತಹ ಉತ್ಸಾಹ ಮತ್ತು ನಂಬಿಕೆಯನ್ನು ಕಳೆದುಕೊಂಡಿದ್ದೇವೆ. ಬಹುಪಾಲು ನಮ್ಮ ಸಮಯವನ್ನು ನಮ್ಮ ನಮ್ಮ ಕ್ಷೇತ್ರಗಳ ಅಭಿವೃದ್ಧಿಯ ವಿಷಯಗಳನ್ನು ಬಿಟ್ಟು ಹೆಚ್ಚು ಪಾಲು ಬೇರೆ ವಿಷಯಗಳಿಗೆ ನಾವು ಚರ್ಚೆ ಮಾಡುವುದನ್ನು ನೋಡುತ್ತಿದ್ದೇವೆ. ನಾನು ಮೊದಲು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಶಾಂತವೇರಿ ಗೋಪಾಲಗೌಡ ಇನ್ನು ಅನೇಕರ ಭಾಷಣಗಳನ್ನು ಕೇಳಿದ್ದೇನೆ. ಶಾಸನಸಭೆಯ ನಡವಳಿಕೆಗಳನ್ನು ಓದಿದ್ದೇನೆ. ಆವೊತ್ತಿಗೂ ಈವೊತ್ತಿಗೂ ಭಿನ್ನವಾಗಿದೆ. ನಿನ್ನೆ ಮೊನ್ನೆ ಮಾತನಾಡುವಾಗ ಭಾರತೀಯ ಜನತಾ ಪಕ್ಷದವರನ್ನು ಮತ್ತೊಂದು ಪಕ್ಷದವರು ಅವರು ಇನ್ನೊಂದು ಪಕ್ಷದವರನ್ನು ಟೀಕೆ ಮಾಡುವಂತಹದ್ದನ್ನು ನೋಡಿದ್ದೇವೆ. ಒಂದನ್ನು ನಾನು ತೆರೆದ ಮನಸ್ಸಿನಿಂದ ಪ್ರಸ್ತಾಪ ಮಾಡುತ್ತೇನೆ. ಈ

ದೇಶದಲ್ಲಿ ಭಾರತೀಯ ಜನತಾ ಪಕ್ಷ ಬೆಳೆಯುತ್ತಿದೆ ಅದು ಬೆಳೆಯುವುದಕ್ಕೆ ಕಾರಣ ಕಾಂಗ್ರೆಸ್‌ನವರು ಮತ್ತು ಜನತಾದಳದವರು. ಆ ಪಕ್ಷವನ್ನು ವಿರೋಧಿಸುವಂತಹವರೇ ಕಾರಣವೆಂದು ನನ್ನ ಅಚಲವಾದ ನಂಬಿಕೆ. ದಿನನಿತ್ಯ ಮಾತನಾಡುವಾಗ 1984ರಲ್ಲಿ ಭಾರತೀಯ ಜನತಾ ಪಕ್ಷ ವಿಧಾನಸಭೆಯಲ್ಲಿ ಕೇವಲ ಎರಡು ಸ್ಥಾನಗಳನ್ನು ಪಡೆದಿತ್ತು. ಇವತ್ತು ಭಾರತೀಯ ಜನತಾ ಪಕ್ಷ ದೇಶವನ್ನು ಆಳುವಂತಹ ಮಟ್ಟಕ್ಕೆ ತನ್ನ ಶಕ್ತಿಯನ್ನು ವೃದ್ಧಿಸಿಕೊಂಡಿದೆ. ಅದಕ್ಕೆ ಕಾರಣ ಎಲ್ಲಾ ನಾಯಕರು ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷ ಬೆಳೆಯಬಾರದು ಅಧಿಕಾರಕ್ಕೆ ಬರಬಾರದು ರಾಜ್ಯದಲ್ಲಿಯೂ ಸಹ ಬರಬಾರದೆಂದು ಹೇಳುವಂತಹ ನಾಯಕರು ಇವತ್ತು ಕಾಂಗ್ರೆಸ್‌ಪಕ್ಷದಲ್ಲಿ ಹಾಗೂ ದಳದಲ್ಲಿದ್ದಾರೆ. ಲಲ್ಲೂಪ್ರಸಾದ್ ಯಾದವ್, ಮುಲಾಯಂಸಿಂಗ್ ಯಾದವ್, ಸಿಪಿಎಂನವರು ಸಿಪಿಐನವರು, ದ್ರಾವಿಡ ಮುಕದವರು ಇರಬಹುದು, ಬಿಎಸ್‌ಪಿಯ ಕಾನ್ಸಿರಾಂ, ದಳದ ಶರದ್‌ಯಾದವ್ ಇರಬಹುದು. ಈ ದೇಶದಲ್ಲಿ ಚುನಾವಣೆ ಬರುವಾಗ ಎಲ್ಲಾ ಪಕ್ಷಗಳವರು ಭಾರತೀಯ ಜನತಾ ಪಕ್ಷ ಆಡಳಿತಕ್ಕೆ ಬರಬಾರದೆಂದು ಹೇಳುವವರು ಒಂದೇ ವೇದಿಕೆಯಲ್ಲಿ ನಿಲ್ಲುವಂತಹ ಹೃದಯ ಪರಿವರ್ತನೆಯಾಗಿಲ್ಲ. ಈ ದೇಶದ ಉನ್ನತ ನಾಯಕರು ಘರ್ಷಣೆಗಳಿಂದ ಹೊರಗೆ ಬರಲಿಕ್ಕೆ ಸಾಧ್ಯವಾಗಿಲ್ಲ. ನಾನಂತೂ 40 ವರ್ಷಗಳಿಂದ ಆರ್‌ಎಸ್‌ಎಸ್ ಸಂಘಟನೆ, ರಾಮರಾಜ್ಯ ಪರಿಷತ್, ಹಿಂದೂಮಹಾಸಭಾ ಇರಬಹುದು ಬಜರಂಗಬಲಿ ಇರಬಹುದು ಇಲ್ಲಿಂದ ಬಂದಂತಹ ದೀನದಯಾಳ್ ಉಪಾಧ್ಯಾಯರು, ಶ್ಯಾಮಪ್ರಕಾಶ್ ಮುಖರ್ಜಿಯವರು, ದೇವರಸ್‌ರವರು, ವೊಳಲ್ಕರ್‌ರವರು ಇವರು ಯಾರೂ ಕೂಡ ಮೂಲಭೂತ ವಿಚಾರದಿಂದ ವಿಭಿನ್ನವಾಗಿಲ್ಲ. 40 ವರ್ಷಗಳಿಂದ ಯಾವ ವಿಚಾರವನ್ನು ಪ್ರಸ್ತಾಪ ಮಾಡಿದ್ದರೋ ಯಾವುದನ್ನು ಪ್ರತಿಪಾದನೆ ಮಾಡಿದರೋ ಅದೇ ವಿಚಾರದಲ್ಲಿ ಆ ಸಂಘಟನೆಗಳಿವೆ. ಅದು ಬೆಳೆಯುತ್ತಿದೆ ಎನ್ನುವಾಗ ಅದನ್ನು ಬೆಳೆಸುವಂತಹ ವ್ಯಕ್ತಿಗಳು ಕಳೆದ ಲೋಕಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಸೋತ ನಂತರ ಮಾತನಾಡಿದರು. ವೀರಪ್ಪಮೊಯಿಲಿಯವರು ಸಾಧಾರಣ ವ್ಯಕ್ತಿಗಳಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ಹಲವಾರು ವರ್ಷಗಳಿಂದ ಮಂತ್ರಿಗಳಾಗಿದ್ದವರು. ಅರಸ್‌ರವರ ಮಂತ್ರಿಮಂಡಲದಲ್ಲಿ ಕೆಲಸ ಮಾಡಿದವರು ಅವರು ಹೇಳಿದರು, ಭಾರತೀಯ ಜನತಾ ಪಕ್ಷ ಜಾತೀಯ ಪಕ್ಷವಲ್ಲ. ನಾವು ಇಷ್ಟು ವರ್ಷ ಹೇಳಿದ್ದು ತಪ್ಪಾಯಿತು. ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಈ ಪರಿಸ್ಥಿತಿ ಇದೆಯೆಂದು ನೊಂದು ಹೇಳಿದರು. ಇವತ್ತು ಸದನದಲ್ಲಿ ನಾವು ಮಾತನಾಡುವಾಗ ಭಾರತೀಯ ಜನತಾ ಪಕ್ಷದ ಬಗ್ಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಒಬ್ಬರನ್ನೊಬ್ಬರು ಟೀಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ ನಮ್ಮದೇಶದ ಸಮಸ್ಯೆಗಳನ್ನು ಹೋಗಲಾಡಿಸುವುದಕ್ಕೆ ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ರಾಜ್ಯದಲ್ಲಿರತಕ್ಕ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ರಾಜ್ಯದಲ್ಲಿರತಕ್ಕ ಹಿಂದುಳಿದ ಜನಾಂಗದವರ ಪರಿಸ್ಥಿತಿಯ ಬಗ್ಗೆ ಹೆಚ್ಚು ಚರ್ಚೆಮಾಡಿ

ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇವತ್ತಿನ ದಿವಸ ಕಾರ್ಮಿಕರ ಸಮಸ್ಯೆಗಳನ್ನು ತೆಗೆದುಕೊಳ್ಳುವಾಗ, ನಮ್ಮ ಪಕ್ಷದ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಎಂ.ಜಿ.ರಾಮಚಂದ್ರನ್‌ರವರು ಎರಡು ವಿಚಾರವನ್ನು ಬಹಳ ದೀರ್ಘ ಅನುಭವದಿಂದ ಹೇಳಿದ್ದಾರೆ. ನಾನು ಆ ವಿಚಾರದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಕಾರ್ಮಿಕರ ಸಂಘಟನೆ ಇದ್ದರೆ ಆ ಸಂಘಟನೆಯ ನಾಯಕರಾಗುವವರು ಕಾರ್ಮಿಕರಾಗಿ ಕೆಲಸ ಮಾಡುವವರು ಆ ಸಂಘಟನೆಯ ನಾಯಕರಾಗಬೇಕು ಎನ್ನುವ ವಿಚಾರವನ್ನು ಎಂ.ಜಿ.ರಾಮಚಂದ್ರನ್‌ರವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಕಾರಣ ಏನೆಂದು ಕೇಳುವಾಗ, ಯಾವುದೇ ರಾಜಕೀಯ ಪಕ್ಷದ ವ್ಯಕ್ತಿಗಳು ಒಂದು ಕಾರ್ಮಿಕರ ಸಂಘಟನೆಯ ನಾಯಕರಾಗಿ ಹೋಗುವಾಗ ತನ್ನ ಪಕ್ಷವನ್ನು ಬೆಳೆಸಿಕೊಂಡು ಆ ಉದ್ದೇಶವನ್ನಿಟ್ಟುಕೊಂಡು ಕಾರ್ಮಿಕರಿಗೆ ಇಲ್ಲಸಲ್ಲದ ಬೇಡಿಕೆಗಳನ್ನು ಆಸೆಗಳನ್ನು ತೋರಿಸಿ ತನ್ನ ಪಕ್ಷವನ್ನು ಬೆಳೆಸಿಕೊಳ್ಳಲು ಸಂಘಟನೆಯ ಮುಖಾಂತರ ಆಶ್ವಾಸನೆ ಕೊಡುತ್ತಾನೆ. ಆ ಕಾರ್ಖಾನೆಯ ಕಾರ್ಮಿಕ ನಾಯಕನಾಗಿದ್ದರೆ ಅದು ಕಿರ್ಲೋಸ್ಕರ್ ಆಗಿರಬಹುದು, ಮೈಕೊ ಆಗಿರಬಹುದು, ಬನ್ನಿಮಿಲ್ ಆಗಿರಬಹುದು ಅಲ್ಲಿ ಕೆಲಸ ಮಾಡುವವನೇ ನಾಯಕನಾಗಿದ್ದರೆ ಅವನು ಅವರ ಸಮಸ್ಯೆಗಳ ಬಗ್ಗೆ ಗಮನವನ್ನು ಸಲ್ಲಿಸಿ ಅವನು ಆಡಳಿತ ವರ್ಗದ ಜತೆಯಲ್ಲಿ ಸಂಪರ್ಕ ಇಟ್ಟುಕೊಂಡು ಸಮಸ್ಯೆಗಳನ್ನು ಬಗೆಹರಿಸಲು ಕೆಲಸ ಮಾಡುತ್ತಾನೆ. ಈ ಒಂದು ವಿಚಾರವನ್ನು ನಾನೂ ಕೂಡ ಪ್ರಸ್ತಾಪ ಮಾಡುತ್ತೇನೆ. ನಂತರ ಹಿಂದುಳಿದವರು ಎನ್ನುವ ವಿಚಾರದಲ್ಲೂ ಕೂಡ ಎಂ.ಜಿ.ಆರ್. ಅವರು ಒಂದು ಒಳ್ಳೆಯ ವಿಚಾರವನ್ನು ಹೇಳಿದರು. ಈ ದೇಶದಲ್ಲಿ ಜಾತಿಯ ಆಧಾರದ ಮೇಲೆ ಹಿಂದುಳಿದವರು ಮುಂದುವರೆದವರು ಎನ್ನುವುದನ್ನು ನಾವೇನು ಇಟ್ಟುಕೊಂಡಿದ್ದೇವೆ ಅದರಲ್ಲಿ ನಿಜವಾಗಿಯೂ ಸಾಮಾಜಿಕ ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಇಟ್ಟುಕೊಂಡಿಲ್ಲ. ಕಾರಣ, ಇವತ್ತು ನಮ್ಮಲ್ಲಿ ಹಾವನೂರು ವರದಿ ಇರಬಹುದು, ಚಿನ್ನಪ್ಪರೆಡ್ಡಿ ಆಯೋಗ ಇರಬಹುದು ಅಥವಾ ಮತ್ತೊಂದು ಯಾವುದೇ ಆಯೋಗ ಇದ್ದರೂ ಕೂಡ ಇವತ್ತು ಪ್ರತಿಯೊಂದು ಜಾತಿಯಲ್ಲಿ ಶ್ರೀಮಂತರು ಇದ್ದಾರೆ ಮತ್ತು ಪ್ರತಿಯೊಂದು ಜಾತಿಯಲ್ಲೂ ಕೂಡ ಕಡುಬಡವರು ಇದ್ದಾರೆ. ಸಮಾಜದಲ್ಲಿ ಬ್ರಾಹ್ಮಣರನ್ನು ಮುಂದುವರೆದವರು ಎಂದು ಎಲ್ಲಾ ಆಯೋಗಗಳೂ ಹೇಳುತ್ತವೆ. ಇವತ್ತು ಸಾವಿರಾರು ಜನ ಬ್ರಾಹ್ಮಣರು ಒಂದು ಹೊತ್ತು ಊಟ ಕೂಡ ಇಲ್ಲದೇ ಇರುವವರನ್ನು ನಾವು ಸಮಾಜದಲ್ಲಿ ನೋಡುವುದಕ್ಕೆ ಸಾಧ್ಯವಿದೆ. ಸಾವಿರಾರು ವರ್ಷಗಳ ಹಿಂದೆ ವಿದ್ಯೆ ಕಲಿತು ಯಾರೋ ಮುಂದುವರೆಯುತ್ತಾರೆ ಎಂದರೆ ಇವತ್ತು ಹೊಟ್ಟೆಗಿಲ್ಲದಿರುವಂಥ ಬ್ರಾಹ್ಮಣರನ್ನು ನಾವು ಮುಂದುವರೆದವರು ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅದೇ ರೀತಿಯಲ್ಲಿ ಲಿಂಗಾಯಿತರು ಮತ್ತು ವೀರಶೈವ ಎನ್ನುವವರು ಅವರಲ್ಲಿ ಕಡುಬಡವರು, ಒಂದು ಹೊತ್ತು ಊಟ ಇಲ್ಲದಂಥವರು, ಕಡುಬಡವರೂ

ಕೂಡ ಆ ಜಾತಿಯಲ್ಲಿ ಇದ್ದಾರೆ. ಅದೇ ರೀತಿ ಒಕ್ಕಲಿಗರಲ್ಲಿ ಶ್ರೀಮಂತರಿದ್ದಾರೆ, ವೈಭವ ಜೀವನ ನಡೆಸುವವರೂ ಇದ್ದಾರೆ. ಒಂದು ಹೊತ್ತು ಊಟಕ್ಕಾಗಿ ಬೇರೆಯವರ ಮನೆಯ ಪಾತ್ರೆ ತೊಳೆದು ಅವರು ಕೊಡುವ ತಂಗಳನ್ನವನ್ನು ತಿಂದು ಜೀವನ ಮಾಡುವಂಥ ಒಕ್ಕಲಿಗರೂ ಇದ್ದಾರೆ. ಅದೇ ರೀತಿ ಕುರುಬ ಜನಾಂಗದಲ್ಲಿ ಶ್ರೀಮಂತರಿದ್ದಾರೆ, ಕಡು ಬಡವರೂ ಇದ್ದಾರೆ. ಹಾಗೆಯೇ ಪರಿಶಿಷ್ಟ ಜನಾಂಗದಲ್ಲಿ ಕೂಡ ಎಷ್ಟೋ ಜನ ಶ್ರೀಮಂತರು, ವೈಭವ ಜೀವನ ನಡೆಸುವವರು ಇದ್ದಾರೆ. ಒಂದು ಹೊತ್ತು ಕೂಳಿಗೂ ಕೂಡ ನರಳುವಂಥ ಜನ ಆ ಜನಾಂಗದಲ್ಲಿ ಇದ್ದಾರೆ. ಸಾಮಾಜಿಕ ನ್ಯಾಯವನ್ನು ಮಾತನಾಡತಕ್ಕಂಥ ನಾವು, 21 ನೇ ಶತಮಾನಕ್ಕೆ ಕಾಲಿಡಲು ಬಯಸುವಂಥ ನಾವು ಒಬ್ಬ ಮನುಷ್ಯನ ಆರ್ಥಿಕ ಆಧಾರದ ಮೇಲೆ ಅವನು ಹಿಂದುಳಿದವನು, ಮುಂದುವರಿದವನು ಎನ್ನುವ ತೀರ್ಮಾನಕ್ಕೆ ಬರುವುದಾದರೆ ಈ ದೇಶದಲ್ಲಿ ನಿಜವಾಗಿಯೂ ಸಾಮಾಜಿಕ ನ್ಯಾಯ ದೊರೆಯುತ್ತದೆ ಎಂದು ನಾನು ಅಚಲವಾಗಿ ನಂಬಿದ್ದೇನೆ ಮತ್ತು ಸರ್ಕಾರದ ಗಮನವನ್ನು ಕೂಡ ಇದರ ಬಗ್ಗೆ ಸೆಳೆಯುತ್ತೇನೆ. ನಂತರ ಇಲ್ಲಿ ನಾವು ಎಷ್ಟೋ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ನನ್ನ ಕ್ಷೇತ್ರ ಗಾಂಧಿನಗರ, ಬೆಂಗಳೂರು ರೈಲ್ವೆ ನಿಲ್ದಾಣ, ಬಸ್ಸು ನಿಲ್ದಾಣ, ಬೆಂಗಳೂರು ನಗರದಲ್ಲಿರುವಂಥ ಎಲ್ಲಾ ಚಲನಚಿತ್ರಮಂದಿರಗಳು, ಎಲ್ಲ ವೈನ್ ಶಾಪುಗಳು, ಎಲ್ಲಾ ಬಾರ್‌ಗಳು ಇದ್ದು ಇಲ್ಲಿ ಕಳ್ಳತನ ಮಾಡಿ ಬಸ್ಸನ್ನು, ರೈಲನ್ನು ಹತ್ತುವಂಥ ಪ್ರದೇಶ ಇದು. ಇವತ್ತು ನನಗೆ ಬಹಳ ದುಃಖವಾಗುತ್ತದೆ. ನಾವು ಇಲ್ಲಿ ಎಷ್ಟೋ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಆದರೆ ರೈಲು ನಿಲ್ದಾಣಕ್ಕೆ ಒಂದು ಕಿಲೋಮೀಟರ್ ದೂರದಲ್ಲಿ ಇವತ್ತೂ ಕೂಡ ಕುಡಿಯುವ ನೀರಿಗೆ ಪೈಪ್ ಇಲ್ಲ, ಒಳಚರಂಡಿಗೆ ಪೈಪ್ ಇಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೂಡ ಬೆಂಗಳೂರು ರಾಜ್ಯದ ರಾಜಧಾನಿಯಾಗಿದ್ದು, ಇಲ್ಲಿಯ ರೈಲ್ವೆ ನಿಲ್ದಾಣದ ಒಂದು ಕಿಲೋಮೀಟರ್ ದೂರದಲ್ಲಿ ಕೂಡ ಇವತ್ತಿಗೂ ಸಹ ಕುಡಿಯುವ ನೀರಿನ ಪೈಪ್ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ. ಈ ಪರಿಸ್ಥಿತಿ ರಾಜಧಾನಿಯಲ್ಲೇ ಇರುವುದಾದರೆ ಇಲ್ಲಿಂದ ಐನೂರು-ಆರುನೂರು ಕಿಲೋಮೀಟರ್ ದೂರದಿಂದ ಬರುವಂಥ ಶಾಸಕರ ಪರಿಸ್ಥಿತಿ ಏನು ಇರಬಹುದು ಎಂದು ನನ್ನಿಂದ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಇವತ್ತು ಈ ಪರಿಸ್ಥಿತಿ ಬದಲಾವಣೆ ಆಗಬೇಕು. ಈದೇಶಕ್ಕೆ ಸ್ವಾತಂತ್ರ ಬಂದು 51 ವರ್ಷವಾಯಿತು. ಆದರೂ ದೇಶದ ಅಭಿವೃದ್ಧಿಯಾಗಿಲ್ಲ. ಎಷ್ಟೋ ವಿದೇಶಗಳನ್ನು ನೋಡುವಾಗ ಎರಡನೇ ಪ್ರಪಂಚ ಮಹಾಯುದ್ಧದಲ್ಲಿ ಸಂಪೂರ್ಣವಾಗಿ ನಿರ್ನಾಮವಾದಂಥ ಹಿರೋಶಿಮಾ, ನಾಗಾಸಾಕಿ ನಗರಗಳಲ್ಲಿ ಅಳಿದುಳಿದ ಕಟ್ಟಡಗಳನ್ನು ಹಾಗೆಯೇ ಉಳಿಸಿ ಅವರು ಮಾರ್ಗದರ್ಶನಕ್ಕೆ ಇಟ್ಟುಕೊಂಡಿದ್ದಾರೆ. ಆ ದೇಶಗಳಲ್ಲಿ ಭೂಮಿ ಇಲ್ಲದಿದ್ದರೂ ಸಮುದ್ರವನ್ನು ಮುಚ್ಚಿ ಮುಚ್ಚಿ ದೇಶವನ್ನು ಕಟ್ಟುತ್ತಿದ್ದಾರೆ. ಆದರೆ ನಮ್ಮಲ್ಲಿ ಖನಿಜಸಂಪತ್ತು ಇದೆ, ಜಲ ಸಂಪತ್ತು ಇದೆ, ಭೂಸಂಪತ್ತು ಇದೆ, ಬಂಗಾರ ಬೆಳೆದರೂ ಕೂಡ ನಮ್ಮಲ್ಲಿ ದಾರಿದ್ರ್ಯ ಇದೆ. ಇದು ಏತಕ್ಕೆ ಎಂದು ಅಂಕಿಅಂಶಗಳನ್ನು ತೆಗೆಯುವಾಗ

ಶೇಕಡಾ 3 ಪರ್ಸೆಂಟ್ ಇರುವಂಥ ಸರ್ಕಾರಿ ನೌಕರರಿಗೆ ಅಂಕಿಅಂಶ ಪ್ರಕಾರ 65ರಿಂದ 70 ಪರ್ಸೆಂಟ್ ಸರ್ಕಾರದ ಖಜಾನೆಯಿಂದ ಹಣ ಖರ್ಚಾಗುತ್ತಿದೆ ಎನ್ನುವುದಾದರೆ ಈ ಪರಿಸ್ಥಿತಿ ಎಲ್ಲಿಯವರೆಗೆ ಮುಂದುವರೆಯುವುದಕ್ಕೆ ಸಾಧ್ಯ ಎನ್ನುವಂಥ ಪ್ರಶ್ನೆ ನನ್ನ ಮುಂದೆ ಇದೆ. ಇವತ್ತು ಹಳ್ಳಿಗಾಡಿನಲ್ಲಿ ಇರತಕ್ಕಂಥ ಜನ ಏನು ಪಟ್ಟಣದಲ್ಲಿ ಇರತಕ್ಕಂಥವರು, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು, ಬ್ಯಾಂಕ್‌ಗಳಲ್ಲಿ ಕೆಲಸ ಮಾಡುವವರು, ಎಲ್.ಐ.ಸಿ.ಯಲ್ಲಿ ಕೆಲಸ ಮಾಡುವವರು, ಮಹಾನಗರ ಪಾಲಿಕೆಗಳಲ್ಲಿ ಕೆಲಸ ಮಾಡುವಂಥ ಜನರು, ಸರ್ಕಾರಿ ನೌಕರರು ಕೇವಲ 3 ಪರ್ಸೆಂಟ್ ಇರತಕ್ಕಂಥ ಜನರಿಗೆ ಈ ದೇಶದ ಒಟ್ಟು ಹಣದಲ್ಲಿ 65 ರಿಂದ 70 ಪರ್ಸೆಂಟ್ ಖರ್ಚಾಗುತ್ತದೆ ಎನ್ನುವುದಾದರೆ, ಈ ವಿಚಾರ ನಮಗೆಲ್ಲರಿಗೂ ಅನ್ನಕೊಡುವ ಅನ್ನದಾತ ರೈತನಿಗೆ ಗೊತ್ತಾದರೆ ಅವನು ಹಳ್ಳಿಯಿಂದ ಬಂದು ನಮ್ಮೆಲ್ಲರನ್ನು ಒದೆಯುತ್ತಾನೆ ಎನ್ನುವ ಕಾಲ ಬಹಳ ದೂರದಲ್ಲಿ ಇಲ್ಲವೆಂದು ನಾನು ನಂಬಿದ್ದೇನೆ. ಈ ಪರಿಸ್ಥಿತಿ ಇವತ್ತು ಬದಲಾವಣೆ ಆಗಬೇಕಾಗಿದೆ. ಇಲ್ಲದೇ ಹೋದರೆ ಇನ್ನು ಸಾವಿರ ವರ್ಷ ಹೋದರೂ ಕೂಡ ಕೊಟ್ಟವನಿಗೇ ಸೌಲಭ್ಯವನ್ನು ಕೊಟ್ಟು, ಕೊಟ್ಟವನಿಗೇ ಸವಲತ್ತನ್ನು ಕೊಟ್ಟು, ಕೊಟ್ಟವನಿಗೇ ವೈಭವದ ಜೀವನ ನಡೆಸುವುದಕ್ಕೆ ಅವಕಾಶ ಕೊಡುವುದಾದರೆ ಕಾರ್ಲ್‌ಮಾರ್ಕ್ಸ್ ಆರ್ಥಿಕ ನೀತಿಯನ್ನು, ಎಂಜೆಲ್ಸ್‌ದ್ದು ಅಥವಾ ಮಾವುತ್ಸೇತುಂಗ್ ವಿಚಾರ ಓದಬೇಕಾಗಿಲ್ಲ. ಒಮ್ಮೆ ದೇವರಾಜು ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ನಗರದಲ್ಲಿ ರೇಷನ್ ಅಂಗಡಿಯಲ್ಲಿ ಸಾವಿರಾರು ಜನರು ಕ್ಯೂ ನಿಂತಿದ್ದರು. ಆ ರೇಷನ್ ಅಂಗಡಿ ಮಾಲೀಕ ಸ್ವಲ್ಪವೂ ದವಸಧಾನ್ಯ ಕೊಡುವುದಿಲ್ಲ. ಜನ ಅಂಗಡಿಯನ್ನು ಲೂಟಿ ಮಾಡಿಕೊಂಡು ಅವರೇ ಹಂಚಿಕೊಳ್ಳುತ್ತಾರೆ. ಈ ಪರಿಸ್ಥಿತಿ ಬರುವ ಮುಂಚೆ ಈ ಏರುಪೇರನ್ನು ಬದಲಾವಣೆ ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಇವತ್ತು ಪ್ರತಿವರ್ಷ ವಿಶ್ವವಿದ್ಯಾನಿಲಯಗಳಲ್ಲಿ ಲಕ್ಷಾಂತರ ಜನ ಯುವಕರು ಪದವಿ ಪಡೆದು ಹೊರಬರುತ್ತಿದ್ದಾರೆ. ಅವರನ್ನು ಹಡೆದಂಥ ತಂದೆತಾಯಿಗಳು ತಮ್ಮ ಮಕ್ಕಳು ವಿದ್ಯಾವಂತರಾದ ಮೇಲೆ ತಮಗೆ ವಯಸ್ಸಾದ ಕಾಲದಲ್ಲಿ ಸುಖವಾಗಿ ನಮ್ಮನ್ನು ನೋಡಿಕೊಳ್ಳುತ್ತಾರೆ ಎಂದು ಹೇಳಿ ಮನೆಯನ್ನು ಅಡಮಾನ ಇಟ್ಟು ಅಥವಾ ಆಸ್ತಿಪಾಸ್ತಿಯನ್ನು ಮಾರಿ ಅವರನ್ನು ಓದಿಸಿ ಡಿಗ್ರಿ ಕೊಡಿಸುತ್ತಾರೆ. ಪ್ರತಿವರ್ಷ ಲಕ್ಷಾಂತರ ಪದವೀಧರರು ಹೊರಗೆ ಬರುತ್ತಾರೆ. ಹೀಗೆ ಅವರು ಹೊರಗೆ ಬಂದಮೇಲೆ ಯಾವ ಸರ್ಕಾರ ಕೂಡ ಅವರಿಗೆ ಕೆಲಸ ಕೊಡುವುದಕ್ಕೆ ಆಗಿಲ್ಲ. ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಯೋಜನೆಗಳನ್ನು ರೂಪಿಸುತ್ತವೆ. ಜವಾಹರಲಾಲ್‌ನೆಹರೂ ರೋಜಗಾರ್ ಯೋಜನೆ, ಪರಿಶಿಷ್ಟ ನಿಗಮದಿಂದ ಸಾಲ, ಹಿಂದುಳಿದವರ್ಗದವರು ಮತ್ತು ಅಲ್ಪಸಂಖ್ಯಾತರು ಈ ರೀತಿ ಹಲವಾರು ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರ ಯೋಜನೆಗಳನ್ನು ತಯಾರು ಮಾಡಿದರೂ ಕೂಡ, ಯಾವ ಬ್ಯಾಂಕಿಗೆ ಹೋದರೂ ಕೂಡ ಯಾರಿಗೂ ಸಾಲ ಕೊಡುವ ರೀತಿಯಲ್ಲಿ ಬ್ಯಾಂಕುಗಳು ಇಲ್ಲ. ಯಾರಾದರೂ

ಪದವೀಧರ ಬ್ಯಾಂಕಿಗೆ ಹೋಗಿ ಕೇಳಿದರೆ ನಿನಗೆ ಆಸ್ತಿ ಏನಾದರೂ ಅಡಮಾನ ಇಡುವುದಕ್ಕೆ ಇದೆಯೇ ಎಂದು ಕೇಳುತ್ತಾರೆ. ಆಸ್ತಿ ಅಡಮಾನ ಇಡುವಷ್ಟು ಸೌಕರ್ಯ ಒಬ್ಬ ಪದವೀಧರನಿಗೆ ಇದ್ದರೆ ಅವನು ಸಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಬ್ಯಾಂಕಿನವರ ಪರಿಸ್ಥಿತಿ ಇವತ್ತೂ ಕೂಡ ಪರಿವರ್ತನೆಯಾಗಿಲ್ಲ. ಅದಕ್ಕೆ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರಗಳ ಗಮನ ಸೆಳೆಯುತ್ತಾ ಹೇಳುವುದಾದರೆ ಕಳೆದ ಎರಡು-ಮೂರು ವರ್ಷಗಳಿಗೆ ಹಿಂದೆ ತಮಿಳುನಾಡಿನ ಗುಡಿಯಾಟಂ ನಗರದಲ್ಲಿ ಕೆನರಾಬ್ಯಾಂಕ್‌ನ ಮ್ಯಾನೇಜರ್ ಅವರಿಗೆ ಸಾರ್ವಜನಿಕರು ಧಾಳಿಮಾಡಿ ಅವರನ್ನು ಕೊಲೆ ಮಾಡಿದರು. ಆ ಪರಿಸ್ಥಿತಿ ಹಸಿದ ಜನ ಇರುವ ದೇಶದಲ್ಲಿ ಏಲ್ಲಿ ಬೇಕಾದರೂ ಆಗಬಹುದು. ಆ ಪರಿಸ್ಥಿತಿಯನ್ನು ತಡೆದು ಇವತ್ತು ಲಕ್ಷಾಂತರ ಯುವಕರಿಗೆ ಕೆಲಸ ಕೊಡುವಂಥ ಕೆಲಸವನ್ನು ಕೇಂದ್ರಸರ್ಕಾರ, ರಾಜ್ಯಸರ್ಕಾರ ಮಾಡಬೇಕಾಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಂತರ ಇವತ್ತು ನಮ್ಮಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಿದೆ. ಒಂದು ಕಾಲದಲ್ಲಿ ಮಹಾತ್ಮಾಗಾಂಧಿಯವರ ನಾಯಕತ್ವದಲ್ಲಿ ಇಡೀ ದೇಶದ ಜನ ಜಾತಿ ಮತ್ತು ಮತವನ್ನು ಮರೆತು, ಭಾಷೆಯನ್ನು ಮರೆತು 'ಬ್ರಿಟಿಷರೇ ಭಾರತದಿಂದ ಕಾಲ್ತೆಗೆಯಿರಿ' ಎನ್ನುವ ಘೋಷಣೆಯನ್ನು ಮಾಡಿ ವಿದ್ಯಾರ್ಥಿಗಳು ಶಾಲೆಗೆ ಹೋಗದೆ, ವ್ಯಾಪಾರಿಗಳು ವ್ಯಾಪಾರವನ್ನು ಮಾಡದೆ, ಸಾಹಿತಿಗಳು ಕಾಂತ್ರಿಕಾರಿ ಸಾಹಿತ್ಯವನ್ನು ಸೃಷ್ಟಿಮಾಡಿ 'ಬ್ರಿಟಿಷರೇ ಭಾರತದಿಂದ ಕಾಲುತೆಗೆಯಿರಿ' ಎನ್ನುವ ಘೋಷಣೆಯನ್ನು ಇಟ್ಟರು. ಒಂದು ಕಾಲನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಮತ್ತೊಂದು ಕಾಲನ್ನು ಕರ್ನಾಟಕ ಏಕೀಕರಣ ಆಗಬೇಕು ಎನ್ನುವಂಥ ಬಯಕೆ ಹೊಂದಿದಂಥ ನಮ್ಮ ಅನೇಕ ಹಿರಿಯರು ಭಾಷಾವಾರು ಪ್ರಾಂತ್ಯದಲ್ಲಿ ಯಾವ ಭಾಷೆಯನ್ನು ಆಲ್ಲಿ ಹೆಚ್ಚು ಆಡುತ್ತಾರೋ ಅದು ಆಡಳಿತ ಭಾಷೆಯಾಗಬೇಕೆಂದು ಮಹಾತ್ಮಗಾಂಧಿಯವರೂ ಕೂಡ ಹೇಳಿದ್ದಾರೆ. ಈ ಒಂದು ಹಿನ್ನಲೆಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಆಳಿಯ ರಾಮರಾಯರ ನಂತರ ದಿಕ್ಕಾಪಾಲಾಗಿ ಚದುರಿದಂಥ ಸಹೋದರರು ಈ ಪ್ರದೇಶ ಒಂದಾಗಬೇಕೆಂದು ಅದು ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನಿಂದ ಒಂದುಗೂಡಬೇಕೆಂಬ ಬಹುದಿವಸ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ 'ಉದಯವಾಗಲಿ ಚೆಲುವ ಕನ್ನಡ ನಾಡು' ಎನ್ನುವ ಹಾಡನ್ನು ಬರೆದು ಹಾಡಿ ಆ ಕನ್ನಡಿಗರ ನರನಾಡಿಗಳಲ್ಲಿ ಸ್ಫೂರ್ತಿ ನೀಡಿದಂಥ ಹುಯಿಲುಗೋಳ ನಾರಾಯಣರಂಥ ಮಹಾವ್ಯಕ್ತಿಗಳು ಹಾಡನ್ನು ಬರೆದು ಹಾಡಿದರು. ಆದರೆ ಕನ್ನಡ ನಾಡು ಉದಯವಾಯಿತು. ಉದಯವಾದರೂ ಕೂಡ ಈ ನಾಡಿನ ಭಾಷೆಯಾದಂಥ ಕನ್ನಡಕ್ಕೆ ಕುಗ್ರಾಮದಿಂದ ನ್ಯಾಯಾಲಯದ ವರೆಗೆ ಆಡಳಿತ ಭಾಷೆಯ ಸ್ಥಾನ ಅದಕ್ಕೆ ಇನ್ನೂ ಕೂಡ ದೊರೆತಿಲ್ಲ ಇದಕ್ಕಾಗಿ ಹೋರಾಟ ಮಾಡಬೇಕಾಗಿದೆ. ನಮ್ಮಲ್ಲಿ ಬಹುಪಾಲು ಜನ ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳಿಂದ ಅದಕ್ಕೆ ಸಹಕಾರ ಆಗಿಲ್ಲ. ಅವರು ಸಹಕಾರ ಕೊಟ್ಟರೆ ಮಾತ್ರ ಇದು ಸಾಧ್ಯವಾಗುತ್ತದೆ. ವಿಧಾನಸೌಧದಲ್ಲಿ ಆಂಗ್ಲಪತ್ರಗಳು ಬರುವುದನ್ನು ದಿನನಿತ್ಯ ನಾವು ನೋಡುತ್ತಿದ್ದೇವೆ. ಕೇಳಿದರೆ ಏನಾದರೂ ಒಂದು

ಕುಂಟುನೆಪ ಹೇಳುತ್ತಾರೆ. ನ್ಯಾಯಾಲಯದಲ್ಲಿ ಯಾರೋ ನಾಲ್ಕು ಗುಂಟೆ ಭೂಮಿ ವಿವಾದಕ್ಕೆ ಅಣ್ಣತಮ್ಮಂದಿರು ನ್ಯಾಯಾಲಯಕ್ಕೆ ಹೋಗುತ್ತಾರೆ. ಲಾಯರ್ ಮುಖಾಂತರ ವಾದ ಅಲ್ಲಿ ನಡೆಯುವಾಗ, ಅವರು ಇಂಗ್ಲೀಷಿನಲ್ಲಿ ವಾದ ಮಾಡುತ್ತಾರೆ. ನಾಲ್ಕು ಅಥವಾ ನಲ್ವತ್ತು ಗುಂಟೆ ಜಮೀನಿಗಾಗಿ ಹೋರಾಡುವವರಿಗೆ ಅವರು ಏನು ವಾದ ಮಾಡುತ್ತಿದ್ದಾರೆ ಎಂದು ಅವರಿಗೆ ಅರ್ಥವಾಗುವುದಿಲ್ಲ. ಅವರು ಏನು ಹೇಳುತ್ತಾರೋ ಅದನ್ನು ಲಾಯರ್ ಕೇಳುವ ಪರಿಸ್ಥಿತಿ. ಇದು ಇವತ್ತು ಈ ಭಾಷೆಯ ವಿಚಾರದಲ್ಲಿ, ಎಲ್ಲಾ ಹಂತಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಬೇಕು. ಸರ್ಕಾರ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದಕ್ಕೆ ವಿರೋಧವಾಗಿರತಕ್ಕ ವ್ಯಕ್ತಿಗಳು ಯಾರೇ ಆಗಿದ್ದರೂ, ಅವರ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಸ್ವಾತಂತ್ರ್ಯ ಎಂದು ಹೇಳುವಂಥ, ಒಂದು ಮಹಾ ದೊಡ್ಡ ಪ್ರಜಾಪ್ರಭುತ್ವದ ನಿಧಿ ಏನಿದೆ ಆ ನಿಧಿ ಬಹಳ ಮಹತ್ವವಾದದ್ದು. ನಮ್ಮ ಹಿರಿಯರು ಅನೇಕರು ಅದಕ್ಕಾಗಿ ತ್ಯಾಗ ಮಾಡಿದ್ದಾರೆ. ಮಹಾತ್ಮಗಾಂಧಿಯವರು ಹೋರಾಟ ಮಾಡುವಂಥ ದಿನಗಳಲ್ಲಿ ಅವರು ಎಷ್ಟೋ ಸಂದರ್ಭಗಳಲ್ಲಿ ಸ್ಫೂರ್ತಿಯನ್ನು ಕಳೆದುಕೊಂಡ ಕಾಲದಲ್ಲಿ, ಕರ್ನಾಟಕ ರಾಜ್ಯದಲ್ಲಿರತಕ್ಕ ಒಂದು ಮೂಲೆಯಲ್ಲಿ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಈಸೂರು ಎನ್ನತಕ್ಕ ಒಂದು ಸಣ್ಣ ಗ್ರಾಮ. ಆ ಈಸೂರು ಗ್ರಾಮಕ್ಕೆ ಆಂಗ್ಲ ಅಧಿಕಾರಿಗಳು ಬರುವಂಥ ಸಂದರ್ಭದಲ್ಲಿ ಆ ಗ್ರಾಮದ ಜನ ಆಂಗ್ಲ ಅಧಿಕಾರಿಗಳನ್ನು ಈಸೂರು ಗ್ರಾಮಕ್ಕೆ ಬಿಡುವುದಿಲ್ಲ. ಈಸೂರು ಗ್ರಾಮ ಸ್ವತಂತ್ರ ರಾಷ್ಟ್ರವಾಗಿ ಘೋಷಣೆ ಮಾಡಿಕೊಂಡಿದೆ. ನಿಮಗೆ ಯಾರಿಗೂ ಇಲ್ಲಿ ಸ್ಥಾನವಿಲ್ಲವೆಂದು ಹೋರಾಟವಾಗುತ್ತದೆ. ಆಂಗ್ಲ ಅಧಿಕಾರಿಗಳು ಹಲವಾರು ಜನ ಸಾಯುತ್ತಾರೆ. ನಾವು ಉಸಿರನ್ನು ಬಿಟ್ಟರೂ ಬಿಡುವೆವು, ಈಸೂರಿಗೆ ಆಂಗ್ಲ ಅಧಿಕಾರಿಗಳನ್ನು ಬಿಡುವುದಿಲ್ಲವೆಂದು ಘರ್ಷಣೆ ಏರ್ಪಟ್ಟು ಗ್ರಾಮದ ಜನ ಮತ್ತು ಆಂಗ್ಲ ಅಧಿಕಾರಿಗಳು ಸಾಯುತ್ತಾರೆ. ಈ ಸುದ್ದಿ ಮಹಾತ್ಮಗಾಂಧಿಯವರಿಗೆ ತಲುಪುತ್ತದೆ. ಮಹಾತ್ಮಗಾಂಧಿಯವರು, ಕರ್ನಾಟಕ ಎನ್ನುವಂಥ ಒಂದು ಪ್ರದೇಶ, ಅಲ್ಲಿ ಸೌಮ್ಯ ಮನೋಭಾವ ಇರತಕ್ಕಂಥ ಜನ. ಅಂತಹ ಸ್ಥಳದಲ್ಲಿ ಇಂತಹ ಹೋರಾಟವಾಗಿದೆ ಎಂದು, ಇನ್ನೂ ಹೆಚ್ಚು ಸ್ಫೂರ್ತಿಗೊಂಡು ಆ ಇತಿಹಾಸದ ಪುಟಗಳನ್ನು ತಿರುವಿ ಹಾಕುವಾಗ, ಇಂತಹ ಒಂದು ಸ್ವಾತಂತ್ರ್ಯದ ಹಿನ್ನೆಲೆಯನ್ನು ಈ ನಾಡು ಪಡೆದುಕೊಂಡಿದೆ. ಅದನ್ನು ನಾವು ಇವತ್ತು ಉಳಿಸಿಕೊಂಡು ಹೋಗಬೇಕಾಗಿದೆ. ಇವತ್ತು ಶಾಸನಸಭೆಗಳಲ್ಲಿ ಹೆಚ್ಚು ಮಾತನಾಡುವಂಥ ಸಂದರ್ಭಗಳಲ್ಲಿ, ವಿರೋಧಪಕ್ಷದವರು ಮತ್ತು ನಾವು ಪ್ರತಿಯೊಬ್ಬರೂ ಹೇಳುತ್ತೇವೆ. ಯಾವುದೇ ಒಂದು ಆಪಾದನೆ ಬಂತು ಎಂದರೆ, ಆ ಆಪಾದನೆ ಬಂದತಕ್ಷಣ ಹೇಳುತ್ತೇವೆ. ಒಂದು ಕಾಲದಲ್ಲಿ ಸಿಓಡಿ ಎಂದು ಹೇಳುತ್ತಾ ಇದ್ದೆವು, ಲೋಕಾಯುಕ್ತ ಎಂದು ಹೇಳುತ್ತಾ ಇದ್ದೆವು. ಇವತ್ತು ಲೋಕಾಯುಕ್ತ ಬಿಟ್ಟಿದ್ದೇವೆ. ಸಿಓಡಿ ಯನ್ನೂ ಬಿಟ್ಟಿದ್ದೇವೆ. ಈಗ ಸಿಬಿಐಗೆ ಬಂದಿದ್ದೇವೆ. ಅಧ್ಯಕ್ಷರೇ, ನನಗಿರತಕ್ಕ ಒಂದೇಒಂದು ಸಂಶಯ. ಈ

ದೇಶದಲ್ಲಿ ಎಷ್ಟೋ ವಿಚಾರಣೆಗಳು ಆಗಿಬಿಟ್ಟಿವೆ. ಎಷ್ಟೋ ವಿಚಾರಣಾ ಆಯೋಗಗಳು ನೇಮಕವಾಗಿವೆ. ಯಾರಿಗಾದರೂ ದಂಡನೆ ಕೊಟ್ಟಂಥ ಘಟನೆ ಇದೆಯೇ ಎಂದು ಇವತ್ತಿನವರೆಗೂ ನನಗೆ ಗೊತ್ತಿಲ್ಲ. ಒಬ್ಬರು ಮಹಾನ್ ವ್ಯಕ್ತಿ ಒರಿಸ್ಸಾ ರಾಜ್ಯದಲ್ಲಿ, ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಕಣ್ಮರೆಯಾಗಿದ್ದಾರೆ. ಸತ್ತವರ ಬಗ್ಗೆ ಟೀಕೆ ಮಾಡುವುದು ಒಳ್ಳೆಯದಲ್ಲ. ಅವರು ಒರಿಸ್ಸಾದಲ್ಲಿ ಮಹಾನ್ ವ್ಯಕ್ತಿಯಾಗಿದ್ದರು. ಆ ಸಂದರ್ಭದಲ್ಲಿ ಅವರ ಮೇಲೆ ಹಲವಾರು ಟೀಕೆಗಳು ಬಂತು. ಟೀಕೆಗಳು ಬಂದಾಗ ವಿಚಾರಣಾ ಆಯೋಗ ನೇಮಿಸಲ್ಪಟ್ಟಿತು. ಸರ್ಕಾರದಲ್ಲಿ ಯಾರೇ ವಿಮಾನದ ಟಿಕೆಟ್ ಪಡೆಯಬೇಕಾಗಿದ್ದರೂ ಕೂಡ ಸ್ವಂತ ಕಳಿಂಗ್ ಏರ್ ಲೈನ್ಸ್ ಎಂದು ಇಟ್ಟಿದ್ದರು. ಸರ್ಕಾರದಲ್ಲಿ ಯಾವುದೇ ಒಂದು ಗುಂಡುಪಿನ್ ಅನ್ನು ತೆಗೆದುಕೊಳ್ಳಬೇಕಾದರೂ ಕೂಡ ಅವರ ಮಡದಿ ಹೆಸರಿನಲ್ಲಿರತಕ್ಕ ಎಟಿಲ್ ಬೇಸಸ್‌ನಿಂದ ಪರ್ಚೇಸ್ ಮಾಡಬೇಕಾಗಿತ್ತು. ಅವರ ಮೇಲೆ ವಿಚಾರಣಾ ಆಯೋಗ ಬಂತು. ಅವರು ತಪ್ಪು ಮಾಡಿದ್ದಾರೆಂದು ತೀರ್ಪು ಕೂಡ ಕೊಡಲ್ಪಟ್ಟಿತು. ಈ ರೀತಿ ಕೊಟ್ಟಮೇಲೆ, ಅವರು ಈ ದೇಶದ ಕೇಂದ್ರದ ಮಂತ್ರಿಗಳಾದರು. ಈ ರೀತಿಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದಿನನಿತ್ಯ ಸಿಓಡಿ, ಲೋಕಾಯುಕ್ತ, ಸಿಬಿಐ ಎಂದು ಮಾಡುವಾಗ ಜನಸಾಮಾನ್ಯರ ಹಣದಲ್ಲಿ, ಆಗಿರತಕ್ಕ ತಪ್ಪುಗಳಿಗೆ ಮತ್ತೆ ಜನರ ಹಣವನ್ನೇ ಉಪಯೋಗಿಸಿಕೊಂಡು ಮತ್ತೆ ತಪ್ಪು ಮಾಡುವಂಥ ವಿಚಾರವನ್ನು ನಾವು ದಿನನಿತ್ಯ ಮಾಡುತ್ತಿದ್ದೇವೆ. ನಾನೂ ಸೇರಿದಂತೆ, ಪ್ರತಿಯೊಬ್ಬರೂ ನಾವು ಮನಸಾಕ್ಷಿಯನ್ನು ಇಟ್ಟುಕೊಂಡು, ಶಾಸಕರಾಗಿರಲಿ, ಮಂತ್ರಿಗಳಾಗಿರಲಿ, ಪತ್ರಕರ್ತರಾಗಿರಲಿ, ಅವರು ಯಾರೇ ಆಗಿರಬಹುದು. ನಾವು ಮಾಡುವಂಥ ವಿಚಾರ, ಇದು ಮನಸ್ಸಾಕ್ಷಿಗೆ ಕರೆಕ್ಟಾಗಿದೆ. ಈ ಕೆಲಸವನ್ನು ಮಾಡಬೇಕೆಂದು ನಾವು ಪ್ರತಿಯೊಬ್ಬರೂ ತಿಳಿದುಕೊಂಡರೆ, ಯಾವ ಸಿಬಿಐ, ಯಾವ ಲೋಕಾಯುಕ್ತ, ಸಿಓಡಿ ಕೂಡ ಬೇಕಾಗಲಾರದು. ಇವತ್ತು ನಾವು ಆ ವಿಷಯವನ್ನೂ ಕೂಡ ವಿಚಾರ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿಗಳು ನಮ್ಮ ಮಧ್ಯದಲ್ಲಿ ಇದೆ ಎನ್ನುವುದಾದರೆ, ಅದು ತಪ್ಪಾಗಲಾರದು. ಇವತ್ತು ಮಾತನಾಡುವಾಗ, ಇವತ್ತು ಕೂಡ ದೀರ್ಘವಾದ ಚರ್ಚೆ ಇಲ್ಲಿ ನಡೆಯಿತು. ಮಹಾನಗರ ಪಾಲಿಕೆ ಬಗ್ಗೆ ನಮ್ಮ ಸಹೋದರಿ ಪ್ರಮೀಳಾ ನೇಸರ್ಗಿ ಮಾತನಾಡುವಾಗ ಹೇಳಿದರು. ಇವತ್ತು ಬಹಳ ದುಃಖದ ಸಂಗತಿ ಎಂದು ಹೇಳಿದರೆ, ಮೊನ್ನೆ ನಂಜೇಗೌಡರು ಮಾತನಾಡುವಾಗ ಕೂಡ ಹೇಳಿದರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ' ರಾಜ್ಯಕ್ಕೆ ಒಬ್ಬ ಚೀಫ್ ಇಂಜಿನಿಯರ್ ಇದ್ದರು. ಇವತ್ತು ಬೆಂಗಳೂರು ಮಹಾನಗರ ಪಾಲಿಕೆಗೇ ಮೂರು ಚೀಫ್ ಇಂಜಿನಿಯರ್ ಇದ್ದಾರೆ. ಮೂರು ಚೀಫ್ ಇಂಜಿನಿಯರ್ ಇದ್ದರೂ ಕೂಡ, ನೀವು ಬೆಂಗಳೂರು ಸುತ್ತಿದರೆ, ಇಲ್ಲಿನ ಪರಿಸ್ಥಿತಿ ಅರ್ಥವಾಗುತ್ತದೆ. ಈ ಬಾರಿ ಹೆಚ್ಚು ಮಳೆಯಾಗಿದೆ, ಆ ಕಾಲದಲ್ಲಿ ರಸ್ತೆಗಳಿಗೆ ಠಾರ್ ಹಾಕುವುದಿಲ್ಲವೆಂಬುದು ನಮಗೂ ಅರ್ಥವಾಗುತ್ತದೆ. ಆದರೆ, ಮಹಾನಗರ ಪಾಲಿಕೆ ಕಟ್ಟುವಂಥ ಕಟ್ಟಡಗಳು, ನಮ್ಮ

ಸರ್ಕಾರದಿಂದ ಕಟ್ಟುವಂಥ ಕಟ್ಟಡಗಳು ಬಿದ್ದುಹೋಗುತ್ತಿರುವುದು ಇವತ್ತು ದಿನನಿತ್ಯದ ಸುದ್ದಿಯಾಗಿದೆ. ಇವತ್ತು ಹಳ್ಳಿಗಾಡಿನಲ್ಲಿ ನೂರು ವರ್ಷದ ಮಣ್ಣಿನ ಗೋಡೆಗಳು ಇವತ್ತು ದೇಶದಲ್ಲಿ ಎಲ್ಲಿಯೂ ಬೀಳುತ್ತಾ ಇಲ್ಲ. ಆದರೆ, ಸಿಮೆಂಟ್ ಹಾಕಿ, ಇಟ್ಟಿಗೆ ಉಪಯೋಗಿಸಿ, ಮರಳನ್ನು ಮತ್ತು ಕಂಬಿಯನ್ನು ಉಪಯೋಗಿಸಿ ಕಟ್ಟುವಂಥ ಕಟ್ಟಡಗಳು ಇವತ್ತು ಬಿದ್ದುಹೋಗುತ್ತಿವೆ ಎನ್ನುವುದಾದರೆ, ಸರ್ಕಾರದ ಮತ್ತು ಮಹಾನಗರ ಪಾಲಿಕೆಯ ಇಂಜಿನಿಯರುಗಳ ಗುಣಮಟ್ಟ ಯಾವರೀತಿ ಇದೆ ಎಂಬುದನ್ನು ತಿಳಿಯಬೇಕು. ಇದೇ ಸಂದರ್ಭದಲ್ಲಿ ನಮ್ಮ ಇಂಜಿನಿಯರುಗಳು ಕಟ್ಟತಕ್ಕ ಮನೆಗಳನ್ನು ಪರೀಕ್ಷೆ ಮಾಡಿದಾಗ, ಯಾವ ಇಂಜಿನಿಯರ್ ಕಟ್ಟಿರತಕ್ಕ ಸ್ವಂತ ಮನೆ ಇವತ್ತಿನವರೆಗೂ ಬಿದ್ದಿರುವ ಇತಿಹಾಸ ಇಲ್ಲ. ಇದನ್ನು ಯಾರೂ ಕೇಳಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ, ಸಾರ್ವಜನಿಕರ ಹಣದಲ್ಲಿ ಕಟ್ಟುವಂಥ ಮಹಾನಗರ ಪಾಲಿಕೆಯ ಕಟ್ಟಡಗಳು, ಸರ್ಕಾರಿ ಕಟ್ಟಡಗಳು ಮತ್ತು ಸೇತುವೆಗಳು ಅಥವಾ ಸುರಂಗ ಮಾರ್ಗಗಳು ಬಿದ್ದುಹೋಗುತ್ತವೆ ಎನ್ನುವುದಾದರೆ, ಅಂತಹ ಅಧಿಕಾರಿಗಳ ಮೇಲೆ, ಅಂತಹ ಇಂಜಿನಿಯರುಗಳ ಮೇಲೆ ಸೂಕ್ತವಾದ, ತೀವ್ರವಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ನಾವೆಲ್ಲೋ ತಪ್ಪು ಮಾಡುತ್ತೇವೆ ಎನ್ನುವುದನ್ನು ಮರೆಯಬಾರದು. ನಂತರ, ಬಹಳ ಮುಖ್ಯವಾದಂಥ ವಿಚಾರ. 1924ರಲ್ಲಿ ಅಂದಿನ ರಾಜಮಹಾರಾಜರ ಕಾಲದಲ್ಲಿ ಪಕ್ಕದ ನಾಡಿನ ತಮಿಳುನಾಡಿಗೂ ಮತ್ತು ಕರ್ನಾಟಕಕ್ಕೂ ಕಾವೇರಿ ಒಪ್ಪಂದ ಏರ್ಪಟ್ಟಿತು. ಇದು 50 ವರ್ಷದ ಒಪ್ಪಂದ, 1974ರಲ್ಲಿ ಮುಕ್ತಾಯವಾಯಿತು. 1974ರಿಂದ ತಮಿಳುನಾಡಿನಲ್ಲಿ ಹಲವಾರು ಸರ್ಕಾರಗಳು ಬದಲಾವಣೆಯಾದವು. ಕರ್ನಾಟಕ ಸರ್ಕಾರದಲ್ಲಿ ಹಲವಾರು ಸರ್ಕಾರಗಳು ಬದಲಾವಣೆಯಾದವು. ಕೇಂದ್ರದಲ್ಲಿಯೂ ಕೂಡ ಹಲವಾರು ಸರ್ಕಾರಗಳು ಬದಲಾವಣೆಯಾದರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ಕಾರಣ, ತೆರೆದ ಮನಸ್ಸಿನಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಮನಸ್ಸು ಇರಲಿಲ್ಲವೋ ಏನೋ, ಬಗೆಹರಿಯದೇ ಉಳಿದಿತ್ತು. ಆದರೆ, ಸಮೀಪದಲ್ಲಿಯೇ, ತಮ್ಮ ನಾಯಕತ್ವದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಸರ್ವಪಕ್ಷಗಳ ನಿಯೋಗ ಕೇಂದ್ರಕ್ಕೆ ಹೋಗಿ, ಅದಕ್ಕೆ ಕೇಂದ್ರಸರ್ಕಾರ ಕೂಡ ಸ್ಪಂದಿಸಿ, 2-3 ದಿವಸಗಳ ಕಾಲ ಸಭೆಯನ್ನು ಮಾಡಿ, ಚರ್ಚೆಯನ್ನು ಮಾಡಿ, ವಿವರವಾದ ವರದಿಯನ್ನು ತಾವು ನಮಗೆ ಕೊಟ್ಟಿದ್ದೀರಿ. ಇವತ್ತು ಪಕ್ಕದ ತಮಿಳುನಾಡಿಗೂ ಮತ್ತು ಕರ್ನಾಟಕಕ್ಕೂ ಇದ್ದ ಕಾವೇರಿ ನೀರಿನ ಸಮಸ್ಯೆ ಇವತ್ತು ಬಗೆಹರಿದಿದೆ. ಅದಕ್ಕಾಗಿ ನಾನು ಸನ್ಮಾನ್ಯ ಜೆ.ಹೆಚ್.ಪಟೇಲರಿಗೂ ಮತ್ತು ಈ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ವಾಜಪೇಯಿ ಅವರಿಗೂ ಮುಕ್ತ ಕಂಠದಿಂದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಸಮಸ್ಯೆಯನ್ನು ತಾವು ಬಗೆಹರಿಸಿದ್ದೀರಿ, ಇತಿಹಾಸದ ಪುಟಗಳಲ್ಲಿ, ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ಅಧ್ಯಾಯವನ್ನು ಪ್ರಾರಂಭ ಮಾಡಿದ್ದೀರಿ, ಈ ಕೆಲಸ ತಮ್ಮಿಂದ ಮುಂದುವರಿಯಲಿ ಎಂದು ಹೇಳುತ್ತೇನೆ. ಇದನ್ನು ಯಾರು, ಏನೇ ಟೀಕೆ ಮಾಡಿದರೂ ಕೂಡ, ಕಾವೇರಿ ಗಲಭೆಗಳು ನಡೆದಂಥ

ಸಂದರ್ಭಗಳಲ್ಲಿ ಬೆಂಗಳೂರು ನಗರದಲ್ಲಿರತಕ್ಕಂಥ ನಾವು ಎಷ್ಟು ಸಮಸ್ಯೆಯನ್ನು ಕಂಡೆವು. ಎಷ್ಟೋ ಜನ ಕೂಲಿ ಕೆಲಸ ಮಾಡುವವರು, ಬೆಂಗಳೂರು ಬಿಟ್ಟವರು ಇನ್ನೂ ಸಹ ಅವರು ತಮ್ಮ ಮನೆಗಳನ್ನು ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ಎಲ್ಲೋ ಒಂದು ಗಡಿ ಪ್ರದೇಶದಲ್ಲಿ ಮನೆಯಲ್ಲಿ ಕುಳಿತುಕೊಂಡು, ಕೂಲಿ ಕೆಲಸ ಮಾಡಿ 20-30ರಲ್ಲಿ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರು, ಅಲ್ಲಿರತಕ್ಕ ಪರಿಸ್ಥಿತಿಯಲ್ಲಿ ಆ ಮನೆಗಳನ್ನು ಬೇರೆಯವರಿಗೆ ಮಾರುವುದಕ್ಕೂ ಸಾಧ್ಯವಾಗಲಿಲ್ಲ. ಅವರು ಅಲ್ಲಿಯೇ ಇರುವುದಕ್ಕೆ ಪ್ರಾಣದ ಭಯ. ಅಂತಹ ಸಾವಿರಾರು ಕುಟುಂಬಗಳು ಬೆಂಗಳೂರಿನಲ್ಲಿದೆ. ಆ ಸಮಸ್ಯೆಯನ್ನು ತಾವು ಬಗೆಹರಿಸಿದ್ದೀರಿ, ತುಂಬಾ ಸಂತೋಷದ ವಿಚಾರ. ಅದೇರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕ ಬಹುಭಾಗದಲ್ಲಿ, ಒಂದು ಕಾಲದಲ್ಲಿ ಕರ್ನಾಟಕ ಏಕೀಕರಣ ಆಗುವ ಮುನ್ನ ಕೊಡಗು ''ಸಿ'' ದರ್ಜೆಯ ರಾಜ್ಯವಾಗಿತ್ತು. ಅಲ್ಲಿ ಕೊಡಚಾರ್‌ರವರು ಮುಖ್ಯಮಂತ್ರಿಗಳಾಗಿದ್ದರು. ಇವತ್ತು ಆ ಸಮಸ್ಯೆ ಬಗೆಹರಿದಿದೆ ಎನ್ನುವಾಗ, ಇತ್ತೀಚಿನ ದಿನಗಳಲ್ಲಿ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆನ್ನುವ ಕೂಗು ಬಂದಿದೆ. ನಂತರ ಬೆಳಗಾಂನಿಂದ ಸತತವಾಗಿ ಗೆದ್ದುಬರುವಂಥ ಎಂ ಇ ಎಸ್ ಸದಸ್ಯರುಗಳು ಮತ್ತು ಅವರ ಭಾವನೆಗಳು ಮತ್ತು ಹೈದರಾಬಾದ್ ಕರ್ನಾಟಕದ ಜನ, ಈ ಜನರಿಗೆ ಆಗಿರತಕ್ಕ ನೋವು, ಅವರಿಗೆ ಅನ್ಯಾಯವಾಗಿದೆ ಎನ್ನುವ ಭಾವನೆ ಇದೆ. ಆ ಭಾವನೆಯನ್ನು ಹೋಗಲಾಡಿಸಬೇಕಾದುದು ಸರ್ಕಾರದ ಕರ್ತವ್ಯ. ಅವರು ಕೊಡಗನ್ನು ಪ್ರತ್ಯೇಕವಾಗಿ ಕೇಳಬೇಕಾದರೆ, ಅವರಿಗೆ ಆಗಿರತಕ್ಕ ತೊಂದರೆಗಳೇನು, ಅದನ್ನು ಬಗೆಹರಿಸಿ, ಅವರೂ ಕೂಡ ವಿಶಾಲ ಕರ್ನಾಟಕದಲ್ಲಿ ಒಬ್ಬರು, ಒಂದು ಜಿಲ್ಲೆ ಎನ್ನುವ ಭಾವನೆ ಬರುವಂತೆ ಮಾಡಬೇಕು. ಅವರಿಗೆ ಆಗಿರತಕ್ಕ ಅಸಮತೋಲನ ಇರಬಹುದು, ಅಥವಾ ಬೇರೆ ಯಾವುದೇ ಇರಬಹುದು. ಅದನ್ನು ಸರಿಪಡಿಸತಕ್ಕ ಜವಾಬ್ದಾರಿ ತಮ್ಮ ಮೇಲಿದೆ ಎಂದು ನಾನು ತಿಳಿದಿದ್ದೇನೆ. ನಂತರ, ಬಹಳ ದುಃಖದ ಸಮಾಚಾರ ಎಂದರೆ, ಇಲ್ಲಿ ಮಾತನಾಡುವಾಗ ಬಯಲು ಸೀಮೆಯಿಂದ ಬಂದಂಥ ಜನ ಬಯಲುಸೀಮೆ ವಿಚಾರ, ಗಡಿನಾಡು, ಮಲೆನಾಡು ಅಭಿವೃದ್ಧಿ ಹೈದರಾಬಾದ್ ಅಭಿವೃದ್ಧಿ. ಇವತ್ತು ಹೊಸದಾಗಿ ಒಂದು ವಿಚಾರ ಕೇಳಿದೆ, ಇದು ನನಗೆ ಗೊತ್ತಿರಲಿಲ್ಲ. ಬಂಜರು ಭೂಮಿಗೂ ಅಭಿವೃದ್ಧಿ ಮಂಡಳಿ ಇದೆ ಎಂದು ನಾನು ಕೇಳಿರಲಿಲ್ಲ. ಇಷ್ಟೆಲ್ಲಾ ಇದ್ದರೂ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಾರೆ. ಆದರೆ, ಬೆಂಗಳೂರು ಮಹಾನಗರದಲ್ಲಿರತಕ್ಕಂಥ ಶಾಸಕರುಗಳು, ನಮಗೆ ಬಂಜರು ಭೂಮಿಯೂ ಇಲ್ಲ, ಹೈದರಾಬಾದ್ ಅಭಿವೃದ್ಧಿ ಮಂಡಳಿಯೂ ಇಲ್ಲ, ಏನೂ ಇಲ್ಲ. ಒಂದು ಗುಂಡುಪಿನ್ ಅನ್ನು ಬೆಂಗಳೂರಿನಲ್ಲಿರತಕ್ಕ ಶಾಸಕರು ಏನಾದರೂ ಕೇಳಿದರೆ, ಅವರ ಸ್ವಂತ ದುಡ್ಡಿನಲ್ಲೇ ಗುಂಡುಪಿನ್ ಅನ್ನು ತೆಗೆದುಕೊಳ್ಳಬೇಕು. ಒಂದು ರೂಪಾಯಿ ನಮಗೆ ಎಂದು ಯಾವುದೇ ಫಂಡ್ ಇಲ್ಲ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲದಕ್ಕೂ ಹಣವನ್ನು ಖರ್ಚು ಮಾಡುತ್ತಾರೆ. ಅಲ್ಲಿ ಮಹಾನಗರ ಪಾಲಿಕೆ ಇದೆ, ಮೇಯರ್ ಇದ್ದಾರೆ, ಉಪ

ಮೇಯರ್ ಇದ್ದಾರೆ. ಸ್ಥಾಯಿ ಸಮಿತಿಗಳು ಇವೆ. ಆದರೆ, ಬೆಂಗಳೂರು ಶಾಸಕರಿಗೆ ಯಾವುದೇ ಪಿ ಡಬ್ಲ್ಯು ಡಿ ಇಲ್ಲ, ಆರೋಗ್ಯ ಇಲಾಖೆ ಇಲ್ಲ ನಮಗೆ ಯಾವುದೂ ಇಲ್ಲ. ನಮ್ಮನ್ನೂ ಜನ ಆಯ್ಕೆ ಮಾಡಿದ್ದಾರೆ, ನಾವು ಯಾವುದೇ ಪಕ್ಷ ಇರಬಹುದು. ನಾವು ಯಾವ ಹಣದಲ್ಲಿ ಖರ್ಚು ಮಾಡುವುದು, ಜನರಿಗೆ ಏನು ಅನುಕೂಲ ಮಾಡುವುದು. ಸಾರ್ವಜನಿಕರು ಫೋನ್ ಮಾಡುತ್ತಾರೆ, ಈಗ ಹೆಣ್ಣುಮಕ್ಕಳೂ ಕೂಡ ಫೋನ್ ಮಾಡುತ್ತಾರೆ. ನೀರು ನಿಂತು ಹೋಗಿದೆ ಎಂದು ಹೇಳುತ್ತಾರೆ. ನಾವು ಯಾವ ಲಾರಿಯಲ್ಲಿ ತರಿಸುವುದು. ನಾವು ಕಳೆದ ವರ್ಷ ಮುಖ್ಯಮಂತ್ರಿಗಳನ್ನು ಸಂಧಿಸಿದ್ದೆವು. ಬೆಂಗಳೂರು ನಗರದ ಶಾಸಕರುಗಳಿಗೆ, ಅದೇರೀತಿ ಮೈಸೂರು ನಗರ ಮತ್ತು ಹುಬ್ಬಳ್ಳಿ ಧಾರವಾಡದ ಶಾಸಕರುಗಳು, ಮಂಗಳೂರು ಶಾಸಕರು, ಇವರುಗಳಿಗೆ ಯಾವುದೇ ಹಣ ಇಲ್ಲ. ಪಕ್ಕದ ಮಹಾರಾಷ್ಟ್ರದಲ್ಲಿ, ತಮಿಳುನಾಡಿನಲ್ಲಿ 25-30 ಲಕ್ಷ ಹಣವನ್ನು ಶಾಸಕರುಗಳಿಗೆ ಒದಗಿಸಿ ಕೊಡುತ್ತಿದ್ದಾರೆ.

6.40 ಪಿಎಂ

ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ 25-30 ಲಕ್ಷ ಹಣವನ್ನು ನಗರ ಪ್ರದೇಶದ ಶಾಸಕರುಗಳಿಗೆ ಒದಗಿಸಿಕೊಡುತ್ತಾರೆಂದು ತಿಳಿದುಬಂದಿದೆ. ಅದೇ ರೀತಿಯಲ್ಲಿ ಬೆಂಗಳೂರು ನಗರದ ಮತ್ತು ರಾಜ್ಯದ ನಗರ ಪಟ್ಟಣಗಳಲ್ಲಿರುವ ಶಾಸಕರುಗಳಿಗೆ ಅವಕಾಶವನ್ನು ಮಾಡಿಕೊಟ್ಟರೆ ಸಹಾಯವಾಗುತ್ತದೆಂದು ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಬೆಂಗಳೂರು ನಗರಕ್ಕೆ ಒಬ್ಬರು ಸಚಿವರು ಇದ್ದಾರೆ. ಸಚಿವರನ್ನೇ ನೇಮಕ ಮಾಡಿದ ಮೇಲೆ ಶಾಸಕರಿಗೆ ಕೆಲಸವಿಲ್ಲವೆಂದರೆ ಹೇಗೆ?

ಶ್ರೀ ಬಿ.ಮುನಿಯಪ್ಪ: ಸಚಿವರು ಹಣವನ್ನು ಕೊಡಲು ಆಗುವುದಿಲ್ಲ, ಜನಸಾಮಾನ್ಯರು ನಮಗೆ ಯಾವುದಾದರೂ ಕೆಲಸವನ್ನು ಕೇಳಿದರೆ ನಾವು ಯಾವ ಹಣದಲ್ಲಿ ಕೆಲಸ ಮಾಡಬೇಕು? ಬೆಂಗಳೂರು ಮಹಾನಗರ ಪಾಲಿಕೆಯಿಂದ ಎಲ್ಲಾ ಕೆಲಸಗಳನ್ನು ಮಾಡುತ್ತಾರೆ, ಅಲ್ಲಿ ಬಜೆಟ್ ಮಾಡುತ್ತಾರೆ, ಅದರ ಮೂಲಕ ಖರ್ಚು ಮಾಡುತ್ತಾರೆ. ವೀರಪ್ಪಮೊಯ್ಲಿರವರ ಕಾಲದಲ್ಲಿ ಶಾಸಕರುಗಳಿಗೆ ನಗರಪಾಲಿಕೆಯಲ್ಲಿ ಓಟಿಂಗ್ ಹಕ್ಕನ್ನು ಕೊಟ್ಟುಬಿಟ್ಟಿದ್ದಾರೆ. ನಾವು ಅಲ್ಲಿಗೆ ಹೋದರೆ ಕಾರ್ಪೊರೇಟರ್‌ಗಳು ಎಂಎಲ್‌ಎಗಳು ಬಂದು ನಮ್ಮ ಮರ್ಯಾದೆ ತೆಗೆಯುತ್ತಾರೆ, ಇವರೇಕೆ ಇಲ್ಲಿ ಬರುತ್ತಾರೆಂದು ಹೇಳುತ್ತಾರೆ. ನಾವುಗಳು ಅಲ್ಲಿ ಸಹ ಅನ್‌ಟಚಬಲ್‌ಟಿ ರೀತಿಯಾಗಿಬಿಟ್ಟಿದ್ದೇವೆ. ನಾವು ಅಲ್ಲಿ ಹೋಗುವುದೂ ತಪ್ಪೇ. ಕಾರ್ಪೊರೇಟರ್ಸ್‌ಗಳೇ ಸುಪ್ರೀಮ್ ಆಗಿರಬೇಕೆಂದು ಅವರ ಉದ್ದೇಶ. ಒಟ್ಟಾರೆ ನಗರಪಾಲಿಕೆಗಳಲ್ಲಿ ನಮಗೆ ಮತದಾನ ಹಕ್ಕನ್ನು ಕೊಟ್ಟಿದ್ದೇ ಮೊದಲನೆಯ ತಪ್ಪು. ಅದರ ಬಗ್ಗೆ ಇಲ್ಲಿ ಚರ್ಚೆಯೇ ಆಗಿಲ್ಲ. ಆದ್ದರಿಂದ ನಮಗೂ ಸಹ 25-30 ಲಕ್ಷ ರೂಪಾಯಿಗಳನ್ನು ಒದಗಿಸುವ

ಯೋಜನೆ ಮಾಡಿದರೆ ರಾಜ್ಯದ ಎಲ್ಲಾ ನಗರ ಮತ್ತು ಪಟ್ಟಣ ಪ್ರದೇಶದ ಶಾಸಕರುಗಳಿಗೆ ಕೆಲಸ ಮಾಡಲು ಅನುಕೂಲವಾಗುತ್ತದೆ.

ಶ್ರೀ ಎನ್.ಯೋಗೇಶ್ ಭಟ್: ಮಾನ್ಯ ಅಧ್ಯಕ್ಷರೆ, ಹಳ್ಳಿಗಳಲ್ಲಾದರೆ ಏಜಿಎಂಸಿ ಗ್ರಾಂಟ್ ಆದರೂ ಸಿಗುತ್ತದೆ. ಆದರೆ ನಗರ ಪ್ರದೇಶಗಳಿಗೆ ನಬಾರ್ಡ್‌ನಿಂದ ಸಾಲವೂ ಇಲ್ಲ. ಯಾವುದೇ ರೀತಿಯಾದ ಅಭಿವೃದ್ಧಿ ಚಟುವಟಿಕೆಗಳಿಗೆ ಹಣವು ಸಿಗದಿರುವುದರಿಂದ ಶಾಸಕರಾದ ನಾವು ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಬಹುಶಃ ನಗರ ಪ್ರದೇಶಗಳ ಶಾಸಕರ ಯೂನಿಯನ್ ಮಾಡುವ ಅಗತ್ಯವಿದೆಯೆಂದು ನನಗನ್ನಿಸುತ್ತದೆ. ನಮಗೆ ಸರ್ಕಾರ ಯಾವುದೇ ರೀತಿಯಾದ ಪ್ರತಿಕ್ರಿಯೆ ಕೊಡುತ್ತಿಲ್ಲ. ಮಾನ್ಯ ಮುನಿಯಪ್ಪನವರೇನು ನಗರ ಪ್ರದೇಶದ ಬಗ್ಗೆ ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ ಅದು ಸತ್ಯವಾದ ಸಂಗತಿ.

ಶ್ರೀ ಬಿ.ಮುನಿಯಪ್ಪ: ಬಂಗಾರದ ಬಯಲಾದ ಕೋಲಾರದ ಶಾಸಕರಾದ ರಾಜೇಂದ್ರನ್‌ರವರು ಇಲ್ಲಿದ್ದಾರೆ. ಕೋಲಾರದ ವಿಚಾರ ಸ್ವಲ್ಪ ಗೊತ್ತಿದೆ. ಶ್ರೀ ಆರ್ಮುಗುಂರವರ ಕಾಲದಿಂದ ಇಲ್ಲಿಯವರೆಗೆ ಕೋಲಾರದಲ್ಲಿ ಹಲವಾರು ಶಾಸಕರುಗಳು ಬಂದರೂ ಸಹ ಸಮಸ್ಯೆ ಪರಿಹಾರವಾಗಿಲ್ಲ. ಬಂಗಾರದ ಮೈನ್‌ನಲ್ಲಿ ಒಂದು ಕಾಲದಲ್ಲಿ 22 ಸಾವಿರ ಅಡಿಗಳ ಕೆಳಗೆ ಹೋಗಿ ಬಂಗಾರವನ್ನು ತೆಗೆಯುವಂಥ ಕಠಿಣವಾಗಿ ಕೆಲಸ ಮಾಡಬೇಕಾಗಿದ್ದಂಥ ಗಣಿ ಕಾರ್ಮಿಕರು ಅಲ್ಲಿದ್ದರು. ಇವತ್ತು ಅವರ ಸಂಖ್ಯೆ ಮೂರ್ನಾಕು ಸಾವಿರಕ್ಕೆ ಬಂದಿದೆ. ಕೋಲಾರ ಬಂಗಾರದ ಮೈನ್‌ನಲ್ಲಿ 25-30 ಸಾವಿರ ಜನರು ಕೆಲಸವಿಲ್ಲದೆ ಇದ್ದಾರೆ. ಎಲ್ಲಾದರೂ ಕಬ್ಬಿಣ, ವೈರು ಸಿಕ್ಕಿದರೆ ಅದನ್ನು ಕಳ್ಳತನ ಮಾಡಬೇಕಾದ ಕಠಿಣವಾದ ಸ್ಥಿತಿ ಅವರುಗಳಿಗೆ ಒದಗಿಬಂದಿದೆ. ಅವರುಗಳಿಗೆ ಯಾವುದೇ ವಿಧವಾದ ಉದ್ಯೋಗಾವಕಾಶವಿಲ್ಲ. ಅವರಲ್ಲಿ ನೂರಕ್ಕೆ ಎಪ್ಪತ್ತು, ಎಂಭತ್ತು ಭಾಗ ಯುವಕರು ಪರಿಶಿಷ್ಟ ಜಾತಿಗೆ ಸೇರಿರುವವರು. ಅವರಲ್ಲಿ ಬಹುಪಾಲು ಪರಿಶಿಷ್ಟರು ಮತ್ತು ತಮಿಳು ತಾಯಿ ಭಾಷೆಯಾಗಿರತಕ್ಕವರು, ಅವರ ಹೆಸರನ್ನು ನೋಡಿದ ಕೂಡಲೇ ಉದ್ಯೋಗ ವಿನಿಮಯ ಕಛೇರಿಯಿಂದ ಕೆಲಸಕ್ಕೆ ಸಂದರ್ಶನಕ್ಕೆ ಬರುವುದಿಲ್ಲ. ಅವರು ತಮಿಳರು, ಪರಿಶಿಷ್ಟಜಾತಿಯವರು ಎಂದು ತಿಳಿದ ತಕ್ಷಣ ಅವರಿಗೆ ಕೆಲಸಕ್ಕೆ ಸಂದರ್ಶನವೇ ಬರುವುದಿಲ್ಲ. ಇಂಥ ಯುವಕರ ಸಲುವಾಗಿ ರಾಜ್ಯ ಸರ್ಕಾರ ಯಾವುದಾದರೂ ಸಣ್ಣ ಕೈಗಾರಿಕಾ ಯೂನಿಟ್‌ನ್ನು ತೆರೆಯದಿದ್ದರೆ ಬಹಳ ಅನಾಹುತವಾಗುತ್ತದೆ. ಈ ಯುವಕರು ಕರ್ನಾಟಕದ ಯಾವುದೋ ಒಂದು ಭಾಗದಲ್ಲಿದ್ದಾರೆ ಎನ್ನುವುದಾದರೆ ತಾವು ಏನಾದರೂ ಪರಿಹಾರವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಅಲಸೂರು ಕೆರೆಯ ಪಕ್ಕದಲ್ಲಿ ತಮಿಳು ಕವಿ ತಿರುವಳ್ಳವರ್‌ರವರ ಪ್ರತಿಮೆಯನ್ನು ಸ್ಥಾಪನೆ ಮಾಡಲು ಅಂದಿನ ಮಹಾನಗರ ಪಾಲಿಕೆ ಅನುಮತಿಯನ್ನು ಕೊಟ್ಟಿತ್ತು. ಮರುದಿನ ಬೆಳಿಗ್ಗೆ ಪ್ರತಿಮೆಯ ಅನಾವರಣಕ್ಕೆ ಮುಖ್ಯಮಂತ್ರಿಯವರು

ಹೋಗಬೇಕೆಂದಿರುವಾಗ ಹಲವಾರು ಜನರ ವಿರೋಧ ಬಂದು ಅದು ತಡೆಹಿಡಿಯಲ್ಪಟ್ಟಿತು. ಕಳೆದ ಆರೇಳು ವರ್ಷಗಳಿಂದ ಆ ಪ್ರತಿಮೆಯ ಬಳಿ ಪೋಲೀಸರನ್ನಿಟ್ಟು ಪ್ರತಿಮೆಯನ್ನು ಮುಚ್ಚಲಾಗಿದೆ. ಅಂದು ಪ್ರತಿಮೆಗೆ ಅನುಮತಿ ನೀಡಿದ್ದ ಮಹಾನಗರ ಪಾಲಿಕೆಯ ತೀರ್ಮಾನವನ್ನು ಅಂದಿನ ಕಮೀಷನರ್‌ವರು ವಾಪಸ್ ಪಡೆದರು. ಅನಂತರ ಬಹಳ ಘರ್ಷಣೆಗಳಾಯಿತು. ಇತ್ತೀಚಿನ ಮಾಹಿತಿಯಂತೆ ಮದ್ರಾಸ್ ಸರ್ಕಾರದವರು ಮದ್ರಾಸ್ ನಗರದಲ್ಲಿ ಸರ್ವಜ್ಞರ ಪ್ರತಿಮೆ ಅನಾವರಣ ಮಾಡಲು ಅನುಮತಿಯನ್ನು ಕೊಟ್ಟು ಒಂದೆರಡು ವರ್ಷಗಳಾಗಿದೆ. ಅದೇ ರೀತಿ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಕ ಅಲಸೂರು ಕೆರೆಯ ಪಕ್ಕದಲ್ಲಿರುವ ತಿರುವಳ್ಳವರ್ ಪ್ರತಿಮೆಯನ್ನು ಮದ್ರಾಸ್ ಸರ್ಕಾರದ ಯಾರಾದರೂ ಸಚಿವರನ್ನು ಕರೆಸಿ ಅನಾವರಣಗೊಳಿಸಬೇಕು. ನಮ್ಮ ಸಚಿವರ್ಯಾರಾದರೂ ಮದ್ರಾಸ್‌ಗೆ ಹೋಗಿ ಸರ್ವಜ್ಞರ ಪ್ರತಿಮೆಯನ್ನು ಅನಾವರಣಗೊಳಿಸಿದರೆ ಎರಡೂ ರಾಜ್ಯಗಳ ನಡುವಿನ ಸಂಬಂಧ, ಮಧುರ ಬಾಂಧವ್ಯ ಹೆಚ್ಚಾಗುತ್ತದೆ. ಈ ಕೆಲಸವನ್ನು ದಯವಿಟ್ಟು ಮಾಡಬೇಕಾಗಿ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಿದ್ದೀರಿ, ನನ್ನ ಅಭಿಪ್ರಾಯದಂತೆ ಮಾನ್ಯ ಜೆ.ಹೆಚ್.ಪಟೇಲರ ಜನತಾದಳ ಸರ್ಕಾರವು ಸಂಪೂರ್ಣವಾಗಿ ಐದು ವರ್ಷಗಳನ್ನು ಪೂರೈಸಬೇಕು. ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡಬಯಸುತ್ತೇನೆ. ಈ ನಾಡಿನ ಜನರು ತಮ್ಮಿಂದ ಬಹಳಷ್ಟು ನಿರೀಕ್ಷೆ ಮಾಡಿದ್ದಾರೆ, ಆಡಳಿತ ಪಕ್ಷದವರು ತಮ್ಮಲ್ಲಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿಕೊಳ್ಳಬೇಕು, ಅದರಲ್ಲಿ ತಾವೇನಾದರೂ ವಿಫಲವಾದರೆ 1989ರಲ್ಲಿ ಕಾಂಗ್ರೆಸ್ ಪಕ್ಷವೇನು 180 ಸೀಟುಗಳನ್ನು ಪಡೆದುಕೊಂಡು ಅನಂತರ 34ಕ್ಕೆ ಇಳಿಯಿತೋ ಅದೇ ಪ್ರಸಂಗವನ್ನು ತಾವು ಎದುರಿಸಬೇಕಾಗುತ್ತದೆ. ಆ ಪಾಠವನ್ನು ಕರ್ನಾಟಕ ಜನರು ತಮಗೂ ಕೊಡುತ್ತಾರೆಂದು ಎಚ್ಚರಿಕೆ ನೀಡಬಯಸುತ್ತೇನೆ. ಈ ಅವಿಶ್ವಾಸ ನಿರ್ಣಯದ ಗೊತ್ತುವಳಿಯಲ್ಲಿ ಮುಖ್ಯಮಂತ್ರಿಯವರಿಗೆ ಬೆಂಬಲವನ್ನು ಸೂಚಿಸಿ ನನ್ನೆರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೇ, ಬಿಜೆಪಿ ಮತ್ತು ಮಿತ್ರ ಪಕ್ಷವಾದ ಕಾಂಗ್ರೆಸ್‌ಗಳೆರಡೂ ಸೇರಿ ತಂದಿರುವ ಅವಿಶ್ವಾಸ ನಿರ್ಣಯದ ಪರವಾಗಿ ಕೆಲವು ವಿಚಾರಗಳನ್ನು ಹೇಳಬೇಕೆನ್ನಿಸಿದರೂ, ಈ ಚರ್ಚೆಯು ಸಂಜೆಯಲ್ಲಿದೆ, ಹಾಗೆಯೇ ಸರ್ಕಾರವೂ ತನ್ನ ಕೊನೆಯ ಉಸಿರನ್ನೆಳೆಯುತ್ತ ಜೀವನದ ಸಂಜೆಯಲ್ಲಿ ಇರುವ ಸಂದರ್ಭದಲ್ಲಿ, ನಮ್ಮ ಧರ್ಮದಲ್ಲಿ ಹೇಳಿರುವಂತೆ, ಮನುಷ್ಯ ಯಾವಾಗಲೂ ತನ್ನ ಕೊನೆಯ ಉಸಿರನ್ನೆಳೆಯುವಾಗ ಅವನ ಜೀವನದ ಎರಡು ಒಳ್ಳೆಯ ವಿಚಾರಗಳನ್ನು ಹೇಳು ಎನ್ನುತ್ತದೆ. ನಾನೂ ಕೂಡ ಸರ್ಕಾರದ ಮೇಲೆ ಯಾವುದೇ ಆರೋಪ ಮಾಡಬಾರದೆಂದು ಇದ್ದರೂ, ಸಾವನ್ನು ಅಪ್ಪುವ ಮೊದಲು ಜೀವನದಲ್ಲಾಗಿರುವ

ತಪ್ಪುಗಳನ್ನು ಕೊನೆಯಲ್ಲಾದರೂ ಒಪ್ಪಿಕೊಂಡು ನಾನು ತಪ್ಪು ಮಾಡಿದ್ದೇನೆಂದು ಹೇಳಿದಾಗ ಆ ವ್ಯಕ್ತಿಗೆ ಮುಕ್ತಿ ಇದೆಯೆಂದು ನಮ್ಮ ಧರ್ಮದಲ್ಲಿ ಹೇಳುತ್ತದೆ. ಹಾಗೆ ಸರ್ಕಾರ ಈಗಲಾದರೂ ತನ್ನೆಲ್ಲಾ ತಪ್ಪುಗಳನ್ನು ಒಪ್ಪಿಕೊಳ್ಳುತ್ತದೆ ಎನ್ನುವ ವಿಚಾರವನ್ನಿಟ್ಟುಕೊಂಡು ಸರ್ಕಾರದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಹಿಂದೆ ರಾಜಮಹಾರಾಜರು ದರ್ಬಾರ್‌ನಲ್ಲಿ ಕುಳಿತಂಥ ಸಮಯದಲ್ಲಿ ರಾಜ್ಯದ ಆಡಳಿತದ ವಿಶ್ಲೇಷಣೆ ಮಾಡತಕ್ಕಂಥ ಸಂದರ್ಭದಲ್ಲಿ, ರಾಜ್ಯದಲ್ಲಿ ವಾಸ ಮಾಡುವಂಥ ಮನುಷ್ಯರ ಸುಭಿಕ್ಷತೆ, ಪ್ರಾಣಿಗಳ ಕ್ಷೇಮ, ದೇವಾಲಯಗಳು ಮತ್ತು ಧರ್ಮದ ರಕ್ಷಣೆ ಇಂಥ ಆಧಾರದ ಮೇಲೆ ಆ ರಾಜ ಯಾವ ರೀತಿಯಲ್ಲಿ ರಾಜ್ಯವನ್ನಾಳಿದ್ದಾನೆ ಎಂಬ ಬಗ್ಗೆ ರೆವ್ಯೂ ಮಾಡಿರುವುದನ್ನು ಇತಿಹಾಸದಲ್ಲಿ ನಾವು ನೋಡಿದ್ದೇವೆ. ಅದರ ಆಧಾರದ ಮೇಲೆ ನಾಲ್ಕು ವರ್ಷಗಳ ತಮ್ಮ ಸರ್ಕಾರದ ಅವಧಿಯಲ್ಲಿ ರಾಜ್ಯದ ಜನರಿಗೆ ಯಾವ ರೀತಿಯಾಗಿ ಉಪಕಾರವಾಗಿದೆ, ತಪ್ಪುಒಪ್ಪುಗಳಾಗಿದೆ, ರಾಜ್ಯದಲ್ಲಿರುವ ಪ್ರಾಣಿಗಳ ಭವಿಷ್ಯ ಯಾವ ರೀತಿಯಾಗಿದೆ, ದೇವಾಲಯಗಳ ಪರಿಸ್ಥಿತಿ, ಜನರ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ಹೇಳಬಯಸುತ್ತೇನೆ. ಕಳೆದ ಎರಡು ವರ್ಷಗಳ ಹಿಂದೆ, ಯಾವ ನೇಕಾರ ಈ ರಾಜ್ಯದ ಮನುಷ್ಯನ ಮಾನವನ್ನು ಬಹಳ ವರ್ಷಗಳ ಕಾಲದಿಂದ ಮುಚ್ಚುವುದಕೋಸ್ಕರವಾಗಿ ತನ್ನ ದುಡಿಮೆಯನ್ನು ಮುಡಿಪಾಗಿಟ್ಟು ತನ್ನದೇ ಆದಂಥ ಕಸುಬಿನಲ್ಲಿದ್ದಂಥ ನೇಕಾರರ ಬಗ್ಗೆ ಇದೇ ಸದನದಲ್ಲಿ ಹೇಳಿದ್ದೆ. 1995-96ರಲ್ಲಿ 18 ಕೋಟಿ ವೆಚ್ಚದಲ್ಲಿ ನೇಕಾರರನ್ನು ಉಳಿಸುತ್ತಿದ್ದರೆ ಇವತ್ತು ಸರ್ಕಾರದ ವತಿಯಿಂದ ಕೇವಲ ನಾಲ್ಕು ಸಾವಿರ ಕಾರ್ಮಿಕರು ಕೆಲಸ ಮಾಡುವಂಥ, ಕೇವಲ ಮೂರು ಕೋಟಿ ವೆಚ್ಚ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಯಾವ ಹಂತಕ್ಕೆ ಹೋಗುತ್ತಾ ಇದೆ ಎಂಬುದನ್ನು ಒಂದು ರೀತಿಯಲ್ಲಿ ಕನ್ನಡಿಯನ್ನು ಇಟ್ಟ ಹಾಗೆ ಇದೆ ಎನ್ನುವುದನ್ನು ಹೇಳುತ್ತಾ ಇವೊತ್ತು ಕೆಳದರ್ಜೆಯಲ್ಲಿರುವಂಥ ಜನಗಳ, ಅವರಿಗೋಸ್ಕರ ಕೊಡುವಂಥ ಜನತಾ ಸೀರೆಗಳು. ಆ ಸೀರೆಗಳನ್ನು ನೇಯುವುದಕ್ಕೋಸ್ಕರವಾಗಿ ರಾಜ್ಯದಲ್ಲಿರುವಂಥ ಬೇರೆ ಬೇರೆಯವರಿಗೆ ಕೊಟ್ಟು, ಅದನ್ನು ಪ್ರೋಸೆಸಿಂಗ್‌ಗೆ ಕೊಡುವಾಗ ಆ ಕೆಲಸವನ್ನು ಮಾಡುವ ರಾಜ್ಯದಲ್ಲಿನ ಪ್ರೋಸೆಸಿಂಗ್ ಮಾಡುವ ಜನರಿಗೆ ಕೊಡುವುದನ್ನು ನಾವು ನೋಡಿದ್ದೇವೆ. ಆದರೆ ತಮ್ಮ ಸರಕಾರದಲ್ಲಿ ಏನಾಗಿದೆ? ರಾಜ್ಯದಲ್ಲಿ 13 ರೂಪಾಯಿಗಳನ್ನು ಕೊಟ್ಟು ಒಂದು ಸೀರೆಯನ್ನು ಪ್ರೋಸೆಸಿಂಗ್‌ನ್ನು ಮಾಡುತ್ತಿದ್ದರೆ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿನ ಯುನಿಟ್‌ಗಳಿಗೆ 27 ರೂಪಾಯಿಗಳನ್ನು ಕೊಟ್ಟು ಇದರ ಮೂಲಕ 8 ರೂಪಾಯಿಗಳ ಕಮಿಷನ್‌ನ್ನು ಯಾವ ಅಧಿಕಾರಿಗಳು ತೆಗೆದುಕೊಳ್ಳುತ್ತಿದ್ದಾರೆ ಎಂಬ ವಿಚಾರವು ಮಾನ್ಯ ಸಚಿವರಿಗೆ ಇವೊತ್ತಿಗೂ ಗೊತ್ತಾಗಿದೆಯೋ ಇಲ್ಲವೋ ಎಂಬುದನ್ನು ದಯಮಾಡಿ ಹೇಳಬೇಕು. ಇವೊತ್ತು ಮಾನ್ಯ ಸಚಿವರು ಅವರ ಗೋಡೌನ್‌ಗೆ ಒಮ್ಮೆ ಭೇಟಿ ಕೊಟ್ಟರೆ 5 ಲಕ್ಷ ಮೀಟರ್ ಬಟ್ಟೆಗಳನ್ನು ನೇಯ್ದು ಇಟ್ಟಿದ್ದಾರೆ, ಅದನ್ನು ಪೂರ್ಣವಾಗಿ ಪ್ರೋಸೆಸಿಂಗ್‌ಗೆ ಕಳುಹಿಸದೇ

ಇರತಕ್ಕಂಥ ಒಂದು ಪರಿಸ್ಥಿತಿಯು ಇದೆ. ಹಾಗಾದರೆ ಇದಕ್ಕೆ ಕಾರಣ ಏನು? ರಾಜ್ಯದಲ್ಲಿ ಯಾರೂ ಪ್ರೋಸೆಸಿಂಗ್ ಕೆಲಸವನ್ನು ಮಾಡುವವರು ಇಲ್ಲವೇ? ಇಲ್ಲಿ ಡೈಯಿಂಗ್ ಕೆಲಸವನ್ನು ಮಾಡುವಂತಹವರು ಯಾರೂ ಇಲ್ಲವೇ? ಆದರೆ ನಿಜ ಪರಿಸ್ಥಿತಿ ಅಂದರೆ ನಿಗಮದಲ್ಲಿ ಯಾರು ಒಬ್ಬ ಅಧಿಕಾರಿ ಇದ್ದಾನೆ, ಅವನ ಸಂಬಂಧಿಕರಿಗೆ ಈ ಕೆಲಸವನ್ನು ಕೊಡಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ಕಳೆದ ಎರಡು ವರ್ಷಗಳಿಂದ 5 ಲಕ್ಷ ಮೀಟರ್ ಬಟ್ಟೆಗಳನ್ನು ಇನ್ನೂ ಗೋಡೌನ್‌ನಲ್ಲಿ ಇಟ್ಟುಕೊಳ್ಳುವಂಥ ಪರಿಸ್ಥಿತಿಯು ನಿರ್ಮಾಣವಾದುದು ಸಚಿವರಿಗೆ ತಿಳಿದಿರುವಂಥ ವಿಚಾರ ಎಂದು ನಾನು ಅಂದುಕೊಂಡಿದ್ದೇನೆ. ಹಾಗೆಯೇ ಕಳೆದ ಎರಡು ವರ್ಷಗಳಲ್ಲಿ 1996-97, 1997-98ರಲ್ಲಿ ಶಾಲಾ ಮಕ್ಕಳಿಗೆ ಬಟ್ಟೆಯನ್ನು ಕೊಡಬೇಕೆಂಬ ವಿಚಾರ ಏನು ಇದೆ, ಹಾಗೆ ನೇಯ್ದಂಥ ಬಟ್ಟೆಯನ್ನು ತಾವು ಡೈಯಿಂಗ್‌ಗೆ ಕಳುಹಿಸುವಂಥ ಸಂದರ್ಭದಲ್ಲಿ ಎರಡು ಸಂಸ್ಥೆಗಳಿಗೆ ತಾವುಗಳು ಕಳುಹಿಸಿಕೊಟ್ಟಿದ್ದೀರಿ. ಆ ಸಂಸ್ಥೆಗಳು ಇವೊತ್ತು ಬಣ್ಣವನ್ನು ಹಾಕಿಕೊಡುವಂಥ ಸಂದರ್ಭದಲ್ಲಿ ಸುಂದರ್ ಸಿಲ್ಕ್ ಮಿಲ್ಸ್ ಹೈದರಾಬಾದ್, - ಇವರಿಗೆ ಎರಡು ಲಕ್ಷ ಮೀಟರ್ ಬಟ್ಟೆಗಳನ್ನು ಕಳುಹಿಸಿಕೊಟ್ಟಿದ್ದೀರಿ. 1996-97ರಲ್ಲಿಯೇ ಗೌತಮಿ ಟೆಕ್ಸ್‌ಟೈಲ್ಸ್ ರಾಜಮಹೇಂದ್ರಿ - ಇವರುಗಳಿಗೆ ಕಳುಹಿಸಿದಂಥ ಬಟ್ಟೆಗಳು ರಿಜೆಕ್ಟ್ ಆಗಿ ಬಂದಮೇಲೆಯೂ ಕೂಡ ಅದೇ ಬಟ್ಟೆಯನ್ನು ಒಂದು ವರ್ಷದ ನಂತರದಲ್ಲಿ ತಾವು ಅಕ್ಸೆಪ್ಟ್ ಮಾಡಿ ಬಿಲ್‌ನ್ನು ಕೊಟ್ಟಿರುವಂತಾದ್ದು-ಮುಂತಾದ ಬಗ್ಗೆ, ಇದರ ಹಿಂದಿರುವ ವ್ಯಕ್ತಿ ಯಾರು ಎಂಬ ವಿಚಾರವನ್ನು ನಾನು ಈ ಸದನಕ್ಕೆ ಹೇಳಬೇಕಾಗಿಲ್ಲ ಎಂದು ಅಂದುಕೊಂಡಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ಇದೇ ಸ್ಥಳದಲ್ಲಿ ನಿಂತು ಒಂದು ಮಾತನ್ನು ಹೇಳಿದಾಗ ತಾವುಗಳು ಒಂದು ಮಾತನ್ನು ಹೇಳಿದ್ದೀರಿ. ನಾನು ಅವ್ಯವಹಾರಗಳ ಬಗ್ಗೆ ಹೇಳಿದಾಗ ಒಂದು ನ್ಯಾಯಾಂಗ ತನಿಖೆ ಆಗಬೇಕು, ಎಂಬ ಬಗ್ಗೆ ತಮ್ಮಲ್ಲಿ ಒತ್ತಾಯವನ್ನು ಮಾಡಿದಾಗ ನನ್ನನ್ನು ತಾವುಗಳು ತಮ್ಮ ಚೇಂಬರ್‌ಗೆ ಕರೆಸಿ ಒಂದು ಕಿವಿ ಮಾತನ್ನು ಹೇಳಿದ್ದೀರಿ. ಅಂತೆಯೇ ತಾವುಗಳು ಸದನದಲ್ಲಿಯೂ ಒಂದು ವಿಚಾರವನ್ನು ಹೇಳಿದ್ದೀರಿ. ಯಾವುದೇ ನ್ಯಾಯಾಂಗ ತನಿಖೆಯಿಂದ ಏನೂ ಆಗುವುದಿಲ್ಲ, ಸಿಒಡಿ ತನಿಖೆಯಿಂದಲೂ ಏನೂ ಆಗುವುದಿಲ್ಲ. ಆಗಿರುವಂಥಾದ್ದನ್ನೆಲ್ಲಾ ನಾವು ನೋಡಿದ್ದೇವೆ, ಎಂಬ ವಿಚಾರವನ್ನು ಹೇಳಿದ್ದೀರಿ. ಈ ಸರಕಾರವು ಬಂದ ನಂತರದಲ್ಲಿ 11 ಆಯೋಗಗಳನ್ನು ರಚನೆ ಮಾಡಿ ಹಣವನ್ನು ಖರ್ಚು ಮಾಡಿರುವಂಥದ್ದು ಎಷ್ಟು ಅಂದರೆ 1 ಕೋಟಿ 38 ಲಕ್ಷಗಳಷ್ಟು ರೂಪಾಯಿಗಳನ್ನು ಬೇರೆ ಬೇರೆ ನ್ಯಾಯಾಂಗ ತನಿಖೆಗಳಿಗೆ ಕೊಟ್ಟು ಅದರಿಂದ ಯಾವ ಉಪಯೋಗವೂ ಆಗಿಲ್ಲ ಎಂಬ ವಿಚಾರವು ನನಗೂ ಕೂಡ ಬಂದ ನಂತರದಲ್ಲಿ ನಿಮ್ಮ ಮಾತನ್ನು ನಾನು ಒಪ್ಪಿಕೊಂಡೆ. ಈ ಸದನದಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಏನಿದೆ, ಅದಕ್ಕೆ ಈ ಅವ್ಯವಹಾರಗಳನ್ನು ತನಿಖೆ ಮಾಡುವುದಕ್ಕೋಸ್ಕರವಾಗಿ ಒಪ್ಪಿಸುವುದಕ್ಕೆ ಇಡೀ ಸದನವು ತನ್ನ ಒಪ್ಪಿಗೆಯನ್ನು ಕೊಟ್ಟಿತು. ಅದರ ಪ್ರಕಾರ ಈ ಒಂದು ಸದನದ ಮುಖಾಂತರದಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಯಾವ ವರದಿಯನ್ನು ಸರಕಾರಕ್ಕೆ

ಕೊಟ್ಟಿದೆ, ಆ ವರದಿಯು ಇಂದೂ ಕೂಡ ಕೋಲ್ಡ್ ಸ್ಟೋರೇಜ್‌ನಲ್ಲಿ ಉಳಿಯುವಂಥ ಒಂದು ಪರಿಸ್ಥಿತಿಯು ನಿರ್ಮಾಣವಾಯಿತು. ಆ ನಂತರದಲ್ಲಿ ತಮಗೆ ಬರೆದಂಥ ಪತ್ರದ ಆಧಾರದ ಮೇಲೆ ಒಂದು ವಿಚಾರ ನಮ್ಮ ಮುಂದಕ್ಕೆ ಬಂತು. ಇವೊತ್ತು ರಾಜಕಾರಣದಲ್ಲಿ ಪರವಾದವರು ಮತ್ತು ವಿರುದ್ಧವಾದವರು ಎಂದು ಹೇಗೆ ಹೇಳುತ್ತೇವೆ, ಹಾಗೆಯೇ ಬ್ಯೂರೋಕ್ರಾಟ್ಸ್ ಯಾರಿದ್ದಾರೆ ಅವರಲ್ಲಿ ಕೂಡ ಎರಡು ಭಾಗಗಳ ವ್ಯವಸ್ಥೆಯನ್ನು ನಾವು ಕಾಣುತ್ತೇವೆ. ಐಎಎಸ್ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಈ ಒಂದು ತನಿಖಾ ಆಯೋಗವು ವರದಿಯನ್ನು ಕೊಟ್ಟ ಮೇಲೆ, ಅಲ್ಲಿಂದ ಕೆಳಮಟ್ಟದ ಅಧಿಕಾರಿಗಳ ಮೇಲೆ ಇವೊತ್ತು ಚಾರ್ಜ್‌ಶೀಟ್‌ನ್ನು ಫೈಲ್ ಮಾಡಲಾಗಿದೆ. ಆದರೆ ಈ ವ್ಯವಹಾರದಲ್ಲಿ ಯಾವ ಐಎಎಸ್ ಅಧಿಕಾರಿಯು ಇನ್‌ವಾಲ್ವ್ ಆಗಿದ್ದಾರೆ ಎಂದು ವರದಿಯನ್ನು ಕೊಟ್ಟಿದ್ದರೋ ಆ ಐಎಎಸ್ ಅಧಿಕಾರಿಯ ಮೇಲೆ ಚಾರ್ಜ್‌ಶೀಟ್‌ನ್ನು ಫೈಲ್ ಮಾಡುವಂಥ ಸಂದರ್ಭವು ಬಂದಾಗ ಅಂದರೆ ನನಗೆ ಈ ವಿಚಾರದಲ್ಲಿನ ಹಿಂದಿನ ವಿಚಾರಗಳು ಅರಿವಿಲ್ಲ. ಆದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ವರದಿಯನ್ನು ಕೊಟ್ಟ ಮೇಲೆ, ಇನ್ನೊಬ್ಬ ಐಎಎಸ್ ನಿವೃತ್ತ ಅಧಿಕಾರಿಯನ್ನು ಪುನಃ ತನಿಖಾ ಆಯೋಗವನ್ನಾಗಿ ನೇಮಿಸುವ ವ್ಯವಸ್ಥೆಯು ಎಲ್ಲಿಯಾದರೂ ಇದ್ದರೆ, ಅದು ನಿಮ್ಮ ಸರಕಾರದಲ್ಲಿ ಮಾತ್ರ ಇದೆ ಎಂದು ನನಗೆ ಅನ್ನಿಸುತ್ತದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಏನು ತನ್ನ ವರದಿಯನ್ನು ಕೊಟ್ಟಿದೆ, ಅದನ್ನು ಎನ್‌ಕ್ವೈರಿ ಮಾಡುವುದಕ್ಕೋಸ್ಕರವಾಗಿ ಚಂದ್ರಕೀರ್ತಿ ಎನ್ನುವ ಒಬ್ಬ ನಿವೃತ್ತಿ ಐಎಎಸ್ ಅಧಿಕಾರಿಯನ್ನು ನೇಮಕ ಮಾಡಿರುವ ಒಂದು ವ್ಯವಸ್ಥೆ ಯಾವ ರೀತಿಯದು ಎಂಬುದನ್ನು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ. ಸರಕಾರವು ಸದನದ ಸಮಿತಿಯು ಕೊಟ್ಟಂಥ ವರದಿಗೂ ಬೆಲೆ ಇಲ್ಲವೆನ್ನುವುದಾದರೆ ಸರಕಾರಕ್ಕೆ ಇನ್ನಾವ ರೀತಿಯ ವರದಿಗಳ ಅವಶ್ಯಕತೆ ಇದೆ ಎನ್ನುವುದನ್ನು ಹೇಳಬೇಕು. ಇದಕ್ಕೆಲ್ಲಾ ಪ್ರಮುಖವಾದಂಥ ಒಂದು ಕಾರಣ ಇದೆ. ಯಾವ ಐಎಎಸ್ ಅಧಿಕಾರಿಯ ನೇರವಾದಂಥ ಇನ್‌ವಾಲ್ವ್‌ಮೆಂಟ್ ಇದೆ ಎನ್ನುವಂಥ ವಿಚಾರವು ವರದಿಯಲ್ಲಿ ಏನು ಕೊಟ್ಟಿದ್ದಾರೆ, ದೆಹಲಿಯ ಕರೋಲ್ ಭಾಗ್‌ನಲ್ಲಿರುವಂಥ ಮಳಿಗೆಯನ್ನು ಖಾಲಿ ಮಾಡುವುದಕ್ಕೋಸ್ಕರವಾಗಿ ಕೋಟ್ಯಾಂತರ ರೂಪಾಯಿಗಳ ಕೈ ಬದಲಾವಣೆಯಾಗಿರುವುದರ ಬಗ್ಗೆ ಹಾಗೂ ಬೇರೆ ಬೇರೆ ಶೋ-ರೂಂಗಳಲ್ಲಿ ರಿಪೇರಿ ಮುಂತಾದ ಕೆಲಸಗಳನ್ನು ಮಾಡುವ ಬಗ್ಗೆ ಕಾನೂನು ಬಾಹಿರವಾಗಿ 38 ಲಕ್ಷ ರೂಪಾಯಿಗಳನ್ನು ಪಡೆದಿರುವಂಥ ವ್ಯವಸ್ಥೆ ಇರಬಹುದು, ಅಂತೆಯೇ ಒಂದು ಆಶ್ಚರ್ಯದ ಸಂಗತಿ ಏನೆಂದರೆ, ಒಂದು ಬೇನಾಮಿ ಕಂಪನಿಗೆ ಪ್ರಿಯದರ್ಶಿನಿ ಬಟ್ಟೆಯನ್ನು ಮಾರಾಟ ಮಾಡಲು ಕೊಟ್ಟು 60 ಸಾವಿರ ರೂಪಾಯಿಗಳ ಬಟ್ಟೆಯನ್ನು ಮಾರಿ 4 ಲಕ್ಷದ 25 ಸಾವಿರ ರೂಪಾಯಿಗಳ ಕಮಿಷನ್‌ನ್ನು ಪಡೆದಂಥ ವ್ಯವಸ್ಥೆ ಕೂಡ ಸನ್ಮಾನ್ಯ ಸಚಿವರಿಗೆ ಗೊತ್ತಿದೆ. ಇಂಥ ಅವ್ಯವಹಾರಗಳ ಆಗರವಾಗಿರುವಂಥ ಆ ಒಂದು ಸಂಸ್ಥೆಯಲ್ಲಿ ಐಎಎಸ್ ಅಧಿಕಾರಿಗಳು ಯಾರಿದ್ದಾರೆ, ಅವರನ್ನು ಶೆಲ್ಟರ್ ಮಾಡುವಂಥ

ವ್ಯವಸ್ಥೆಯು ಈ ಸರಕಾರದಿಂದ ಆಗಿದೆಯಲ್ಲಾ ಎಂಬ ಒಂದು ನೋವು ನಮ್ಮ ಮುಂದೆ ಇದೆ. ಒಂದು ವಿಚಾರವನ್ನು ಬಹಳ ನೋವಿನಿಂದ ತಾವುಗಳು ತಮ್ಮ ಸ್ಥಾನದಿಂದ ಹೇಳಿದ್ದೀರಿ. ನಮ್ಮ ಹಣವನ್ನು ಹಾಕಿಕೊಂಡು ಶಾಸಕರುಗಳು ತಮ್ಮದೇ ಆದಂಥ ವ್ಯವಸ್ಥೆಯ ಒಳಗಡೆ...

ಶ್ರೀ ಎಂ.ಎಸ್.ಪಾಟೀಲ್ (ಜವುಳಿ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಪ್ರಸ್ತಾವವು ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಬೇಕೆಂದು ಬಂದಾಗ ಅದನ್ನು ಸಮಿತಿಗೆ ಒಪ್ಪಿಸಿ ಅವರ ವರದಿಯು ಬಂದ ಮೇಲೆ ಇಲಾಖೆಯಿಂದ ಸಂಪೂರ್ಣವಾಗಿ ಕ್ರಮವನ್ನು ತೆಗೆದುಕೊಂಡು ಆಪಾದಿತರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ನಿರ್ಧರಿಸಲಾಗಿದೆ. ಈ ಸರಕಾರದಿಂದ ಯಾರಿಗೇ ರಕ್ಷಣೆ ಕೊಡಬೇಕಾದಂಥ ಅವಶ್ಯಕತೆಯು ಇಲ್ಲ. ಆದರೆ ನಾವು ಮಾಡಿದಂಥ ಕಾನೂನಿನ ವ್ಯಾಪ್ತಿಯಲ್ಲಿ ಯಾವುದೇ ಅಧಿಕಾರಿಯ ಮೇಲೆ ನಾವು ಕ್ರಮ ತೆಗೆದುಕೊಳ್ಳುವುದಕ್ಕಿಂತ ಮೊದಲು ಅವರಿಗೆ ನೋಟೀಸ್ ಕೊಡತಕ್ಕಂಥಾದ್ದು, ಅವರಿಂದ ಉತ್ತರವನ್ನು ಪಡೆಯಕ್ಕಂಥಾದ್ದು, ಮುಂತಾಗಿ ಕ್ರಮನಿಯಮಗಳನ್ನು ಪಾಲಿಸದೆ ನೇರವಾಗಿ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯು ನಮ್ಮಲ್ಲಿಲ್ಲ. ಆ ಒಂದು ಕ್ರಮ ನಡೆದಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಎ.ರಾಮದಾಸ್: ಶಾಸಕರುಗಳು ತಮ್ಮದೇ ಆದಂಥ ಹಣವನ್ನು ಹಾಕಿಕೊಂಡು ವಿದೇಶಕ್ಕೆ ಹೋಗಿ ಬಂದಂಥ ಸಮಯದಲ್ಲಿ ಯಾವ ರೀತಿಯಾದ ವರದಿಯಾಯಿತು ಎಂಬ ಬಗ್ಗೆ ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಬ್ಬ ಚುನಾಯಿತ ಪ್ರತಿನಿಧಿಯು ವಿದೇಶಕ್ಕೆ ಹೋಗಿಬಂದರೆ ಸುದ್ದಿಯಾಗುತ್ತದೆಯೇ ಹೊರತು ಹಿರಿಯ ಅಧಿಕಾರಿಗಳು ವಿದೇಶಕ್ಕೆ ಯಾವುದೇ ಕೆಲಸವಿಲ್ಲದಿದ್ದರೂ ಹೋಗಿ ಬಂದರೆ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಯಾವುದೇ ಸುದ್ದಿಯಾಗುವುದಿಲ್ಲ. ಯಾಕೆ ಹೋಗಿ ಬಂದರು ಎಂಬ ವಿಚಾರವೂ ಗೊತ್ತಾಗುವುದಿಲ್ಲ. ಅಂಥ ಐ.ಎ.ಎಸ್. ಅಧಿಕಾರಿಯೊಬ್ಬರು, ಯಾವ ಬೋರ್ಡ್‌ನ ಎಂ.ಡಿ.ಯಾಗಿ ವಿದೇಶಕ್ಕೆ ಹೋಗಿ ಬಂದಿದ್ದಕ್ಕೆ 3 ಲಕ್ಷದ 4 ಸಾವಿರದ 673 ರೂಪಾಯಿಗಳನ್ನು ಖರ್ಚು ಮಾಡಿ ಬಹಳ ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ನ್ಯಾಸ್ಸಿ ಫೇರ್‌ಗೆ ಹೋದಂಥ ಸಂದರ್ಭದಲ್ಲಿ ಇಲ್ಲಿಂದ ಎರಡೂವರೆ ಲಕ್ಷ ರೂಪಾಯಿ ಮೌಲ್ಯದ ಪದಾರ್ಥಗಳನ್ನು ಸ್ಯಾಂಪಲ್ ಆಗಿ ತೆಗೆದುಕೊಂಡು ಹೋಗಿದ್ದರು. ಅದಕ್ಕೆ ವಿಮೆ ಮಾಡಲಾಗಿತ್ತು. ಅಲ್ಲಿಂದ ವಾಪಸ್ ಬರುವಾಗ ಆ ಪದಾರ್ಥಗಳು ಕಳ್ಳತನವಾಗಿದೆಯೆಂದು ವರದಿಯನ್ನು ಕೊಟ್ಟು ಅದನ್ನು ಅಲ್ಲಿ ಮಾರಾಟ ಮಾಡಿ ಬಂದರು. ಅನಂತರ ಕಾನೂನಿನ ಪ್ರಕಾರ ವಿಮೆಯನ್ನು ಕ್ಲೈಮ್ ಮಾಡುವಂಥ ಸಂದರ್ಭದಲ್ಲಿ ಆ ಅಧಿಕಾರಿ ಅದನ್ನು ವಿಮಾ ಕಂಪನಿಗೆ ಕೊಡಲಿಲ್ಲ. ಕಳ್ಳತನವಾಗಿರುವುದಕ್ಕೆ ಎಲ್ಲೂ ದಾಖಲೆ ಇಲ್ಲದಿರುವುದರಿಂದ ಇದನ್ನು ಮುಚ್ಚಿಹಾಕುವ

ಪ್ರಯತ್ನ ಈ ಇಲಾಖೆಯಲ್ಲಾಗಿದೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದಾಸ್‌ರವರು ಹೇಳಿದ್ದನ್ನು ಗಮನಿಸಿದಿರಾ? ಹೊರದೇಶಕ್ಕೆ ಸ್ಯಾಂಪಲ್ ಪದಾರ್ಥವೆಂದು ತೆಗೆದುಕೊಂಡು ಹೋಗುತ್ತಾರೆ. ಅದಕ್ಕೆ ವಿಮೆಯನ್ನು ಮಾಡಿರುತ್ತಾರೆ. ಅಲ್ಲಿ ಆರ್ಡರ್ ಎಷ್ಟು ಮಾಡಿದರು, ಬಿಸಿನೆಸ್ ಎಷ್ಟು ಆಯಿತು ಎಂಬುದು ನಮಗೆ ಗೊತ್ತಿರುವುದಿಲ್ಲ. ಅವರು ವಾಪಸ್ ಬರುತ್ತಾರೆ, ಆದರೆ ಸ್ಯಾಂಪಲ್ ಪದಾರ್ಥಗಳಿಲ್ಲದೆ ಬರುತ್ತಾರೆ. ಕಳ್ಳತನವಾಯಿತು ಎಂದು ಹೇಳುತ್ತಾರೆ. ವಿಮೆಯನ್ನು ಕ್ಲೈಮ್ ಮಾಡಿದರೆ ಕಳ್ಳತನವಾಗಿದ್ದಕ್ಕೆ ದಾಖಲೆ ಇರುವುದಿಲ್ಲ. ಸರ್ಕಾರ ಸುಮ್ಮನೆ ಕುಳಿತುಕೊಳ್ಳಕೊಳ್ಳುವುದೇ? ಈ ವಿಚಾರದಲ್ಲಿ ಏನು ಮಾಡಿದ್ದೀರಿ? ಇದರ ಬಗ್ಗೆ ವಿಚಾರಣೆಯಾಗಿರಬೇಕು ಇಲ್ಲವೇ ಸಂಬಂಧಪಟ್ಟ ಅಧಿಕಾರಿ ಯಾರು ಹೋಗಿದ್ದರೋ ಅವರ ಬೇಜವಾಬ್ದಾರಿಯೆಂದು ಅವರನ್ನೇ ಇದಕ್ಕೆ ಜವಾಬ್ದಾರಿಯನ್ನಾಗಿ ಮಾಡಬೇಕು. ಸರ್ಕಾರವೇನು ಮಾಡುತ್ತದೆ? ದಯಮಾಡಿ ಏನು ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು): ಇದನ್ನು ನಾನು ಮೊದಲ ಸಲ ಕೇಳುತ್ತಿದ್ದೇನೆ, ಇದು ಕೆ.ಹೆಚ್.ಡಿ.ಸಿ.ಗೆ ಸಂಬಂಧಪಟ್ಟಿರುವುದು ಇದೆ. ಇದರ ಬಗ್ಗೆ ಪರಿಶೀಲನೆ ಮಾಡಿಸಿ ನಾಳೆಯೇ ಉತ್ತರವನ್ನು ಕೊಡುತ್ತೇನೆ.

ಶ್ರೀ ಎ.ರಾಮದಾಸ್: ವಿಜ್ಞಾನಿಗಳು 20-25 ವರ್ಷ ಲ್ಯಾಬೋರೇಟರಿಗಳಲ್ಲಿ ಸಂಶೋಧನೆ ಮಾಡುತ್ತಾರೆ, ಅದಕ್ಕಾಗಿ ಒಂದು ಎರಡು ಲಕ್ಷ ಹಣ ಕೊಡುತ್ತೇವೆ. ಇವರ ಇಲಾಖೆ ಡೆಮ್ಕೊ ಎಂಬ ಸಂಸ್ಥೆಗೆ ಸರ್ವೆಗಾಗಿ ಕೊಟ್ಟಿದ್ದರು. ಅವರು ಮಾರ್ಕೆಟ್ ಸರ್ವೆ ಮಾಡಿ ಒಂದೇ ಸಾಲಿನ ವರದಿ ಕೊಟ್ಟಿದ್ದಾರೆ. ನಿಗಮದಲ್ಲಿ ಮಾರಾಟವಾಗದೇ ಉಳಿದಿರುವ ಸರಕಿನ ಬೆಲೆ ಹೆಚ್ಚಿಸುವುದರಿಂದ ನಿಗಮದ ನಷ್ಟವನ್ನು ಕಡಿಮೆ ಮಾಡಬಹುದು ಎಂದು. ಅದಕ್ಕೆ 1.80 ಲಕ್ಷ ಚಾರ್ಜ್ ಮಾಡಿ ಇಲಾಖೆಯಿಂದ ಪಡೆದುಕೊಂಡಿದ್ದಾರೆ. ಎಷ್ಟು ಶ್ರೀಮಂತ ರಾಜ್ಯ ನಮ್ಮದು ಒಂದೊಂದು ಸಲ ಅನಿಸುತ್ತದೆ, ರಾಜ್ಯಕ್ಕಾಗಿ ಕೇಂದ್ರದಿಂದ ಅಥವಾ ಬೇರೆ ಕಡೆಯಿಂದ ಹಣದ ನೆರವು ಕೇಳಬೇಕಾಗಿಲ್ಲ ಎಂದು. ಸ್ವತಹ ನೇಕಾರರ ಹಣವನ್ನು ದುರುಪಯೋಗಮಾಡುವ ಇಂತಹ ವ್ಯವಸ್ಥೆ ಇದ್ದರೂ ಸಚಿವರು ಏತಕ್ಕಾಗಿ ಕಣ್ಣುಮುಚ್ಚಿ ಕುಳಿತಿದ್ದಾರೆ, ಆ ಅಧಿಕಾರಿ ಮೇಲೆ ವರದಿ ಕೊಟ್ಟು 20 ತಿಂಗಳಾಗಿದೆ, ಸದನದಲ್ಲಿ ಕೊಟ್ಟ ವರದಿ ಆಧಾರದ ಮೇಲೆ ಕ್ರಮ ಜರುಗಿಸುವ ಧೈರ್ಯ ಮಾಡಲಿಲ್ಲ ಎನ್ನುವುದು ಇವರು ಹೋಗುವ ಸಂದರ್ಭದಲ್ಲಾದರೂ ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸಿದ್ದೇನೆ. ಎರಡನೆಯದು, ಒಂದು ವಿಷಯ ಎತ್ತಿದರೆ ಅಧ್ಯಕ್ಷರಿಗೆ ಅನ್ನಿಸಬಹುದು. ಕಳೆದ ಮೂರು ವರ್ಷದಿಂದಲೂ ರಾಮದಾಸ್ ವೈದ್ಯಕೀಯ ಶಿಕ್ಷಣದ ಮೇಲೇ ಮಾತನಾಡುತ್ತಾನಲ್ಲಾ

ಯಾಕೆ ಎಂದು. ನಾಳೆ ಸರ್ಕಾರ ಹೋಗಿಬಿಟ್ಟರೆ, ಅದಕ್ಕಾಗಿ ನನ್ನ ಮನಸಿನ ನೋವನ್ನು ಹೇಳಿಬಿಡಬೇಕು ಎಂದು ಅಂದುಕೊಂಡಿದ್ದೇನೆ. ಹಿಂದೆ ಇಲ್ಲಿ ಈ ವಿಚಾರ ಪ್ರಸ್ತಾಪಿಸಿದಾಗ ಸಭಾನಾಯಕರು ಒಂದು ಅಮೂಲ್ಯ ಮಾತನ್ನು ಹೇಳಿದ್ದನ್ನು ಡೈರಿಯಲ್ಲಿ ಬರೆದಿಟ್ಟುಕೊಂಡೆ. ಯಾವುದೇ ಸದಸ್ಯ ಹೊಸಬ ಒಂದು ವಿಚಾರ ಸದನದಲ್ಲಿ ಹೇಳಿದಾಗ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನೂ ಇಟ್ಟಾಗ ನಾವೆಲ್ಲಾ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಅದರಲ್ಲಿ ನಿಜಾಂಶವಿದ್ದಾಗ ಕ್ರಮವನ್ನೂ ತೆಗೆದುಕೊಳ್ಳಬೇಕಾಗಿದೆ. ಆಗ ಅಂತಹ ಸದಸ್ಯನಿಗೂ ಜೀವನದಲ್ಲಿ ಒಳ್ಳೆಯದು ಮಾಡಬೇಕು ಎನ್ನುವುದು ಬರುತ್ತದೆ ಎಂದು. ತಾವೂ ಚೇರ್‌ನಿಂದ ಒಂದು ವಿಚಾರ ಹೇಳಿದ್ದಿರಿ. ಯಾವುದೇ ವಿಚಾರವನ್ನು ಇಟ್ಟುಕೊಂಡಾಗಲೂ ಅದಕ್ಕೆ ಅಂತಿಮವಾಗಿ ತೆರೆಯನ್ನು ಹಾಕುವ ವ್ಯವಸ್ಥೆ ಇಂದಿನ ರಾಜಕಾರಣದಿಂದ ಹೋಗಿದೆ. ಅಂತಹ ವ್ಯವಸ್ಥೆ ಇರಕೂಡದು ಎಂಬ ಕಿವಿಮಾತನ್ನು ಹೇಳಿದ್ದಿರಿ. ಅದರ ಆಧಾರದ ಮೇಲೆ ಮೂರು ವರ್ಷಗಳಿಂದ ರಾಜ್ಯ ವೈದ್ಯಕೀಯ ಶಿಕ್ಷಣದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಿರಂತರವಾಗಿ ಸದನದ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ನನಗೆ ವಿಶ್ವಾಸ ಇದೆ. ಅಂದು ಏನು ಮುಖ್ಯಮಂತ್ರಿಗಳು ಹೇಳಿದ್ದರೋ ಅದರಂತೆ ಇದರಲ್ಲಿ ಸತ್ಯಾಂಶ ಇದೆ ಎಂದಾದರೆ ಎಂತಹ ತನಿಖೆ ಮಾಡಿಸುತ್ತಾರೆ ಎಂದು ಹೇಳುತ್ತಾರೆಂದು ನಾನು ಭಾವಿಸಿ, ಈ ಸರ್ಕಾರ ಬಂದಾಗಿನಿಂದ ಇವತ್ತಿನವರಗೆ 4120 ಎಂಬಿಎಸ್, ಎಂಡಿ, ಎಂಎಸ್ ಮತ್ತು ಡಿಪ್ಲೊಮಾಗಳಲ್ಲಿ ಹೆಚ್ಚುವರಿ ಸೀಟುಗಳನ್ನು ಇಲ್ಲೀಗಲ್ಲಾಗಿ ಕೊಟ್ಟಿರುವ ದಾಖಲೆಗಳನ್ನು ಈಗಾಗಲೇ ತಮ್ಮ ಮುಂದೆ ಇಟ್ಟಿದ್ದೆ ಜೊತೆಗೆ ನ್ಯಾಯಾಲಯದಲ್ಲೂ ಇದು ಪ್ರಸ್ತಾಪವಾಗಿ ರಾಜ್ಯ ಹೈಕೋರ್ಟ್ ತೀರ್ಪು ಕೊಟ್ಟಿದೆ. ಅದು ಇಡೀ ರಾಜ್ಯಕ್ಕೆ ಗೊತ್ತಿದೆ. ಈ ಬಗ್ಗೆ ಡಾ॥ ಶಂಕರನಾಯಕರು ಒಂದು ವಿಚಾರ ಹೇಳಿದ್ದರು. ನಾನು ಬಂದನಂತರ, ಪಟೇಲರು ಮುಖ್ಯಮಂತ್ರಿಗಳಾದ ನಂತರ ಒಂದೇ ಒಂದು ಸೀಟುವೈದ್ಯಕೀಯ ಶಿಕ್ಷಣದಲ್ಲಿ ನೀಡಿದ್ದೇ ಆಗಿದ್ದರೆ ನಾನು ರಾಜೀನಾಮೆ ಕೊಟ್ಟುಹೋಗುತ್ತೇನೆ ಎಂದು. ಅದು ದಾಖಲೆಯಲ್ಲಿದೆ. ಶಂಕರನಾಯಕರು ಸಚಿವರಾದ ಮೇಲೆ 1996ರಲ್ಲಿ ನಡೆದ 18 ಸೀಟುಗಳ ಅವ್ಯವಹಾರವನ್ನು ಸದನದಲ್ಲಿ ಎತ್ತಿದೆ. ದಾಖಲೆಗಳನ್ನು ತಾವು ನೋಡಿದ ಮೇಲೆ ಇದರ ಬಗ್ಗೆ ಕೂಲಂಕಷವಾಗಿ ತನಿಖೆಯಾಗಬೇಕೆಂದು ಅಡಿಷನಲ್ ಮುಖ್ಯಕಾರ್ಯದರ್ಶಿಗಳ ಒಂದು ಏಕ ಸದಸ್ಯ ಆಯೋಗವನ್ನು ನೇಮಿಸಿದಿರಿ. ಜುಲೈ 10ರಂದು ಸರ್ಕಾರಿ ಆಜ್ಞೆಯನ್ನೂ ಹೊರಡಿಸಿ ಒಂದು ತಿಂಗಳೊಳಗಾಗಿ ವರದಿ ಕೊಡಬೇಕೆಂದೂ ಹೇಳಿದಿರಿ. ಆದರೆ ಇವತ್ತಿನವರೆಗೂ ಯಾವುದೇ ವರದಿ ಬರಲಿಲ್ಲ. ತನಿಖೆಗಾಗಿ ಯಾವುದೇ ದಾಖಲೆಗಳನ್ನೂ ನನ್ನ ಹತ್ತಿರ ಕೇಳಲಿಲ್ಲ. ಕೇಳಿದ್ದರೆ ನಾನು ಒದಗಿಸುತ್ತಿದ್ದೆ, ಕೇಳದಿರುವುದರಿಂದ ಸದನದ ಮೂಲಕ ಸಲ್ಲಿಸುತ್ತಿದ್ದೇನೆ. ಇವರು ಕೊಟ್ಟಿರುವ 18 ಸೀಟುಗಳಲ್ಲಿ ಸಂಪುಟಸಚಿವರ ಮಕ್ಕಳು, ಸಮಾಜದಲ್ಲಿ ಹಿರಿಯರು ಎಂದು ನಾವು ಯಾರನ್ನು ತಿಳಿದುಕೊಂಡಿದ್ದೇವೆ ಅವರ ಸಂಬಂಧಿಗಳು ಮಾತ್ರವಲ್ಲ 18 ಸೀಟುಗಳ ಪ್ರವೇಶವನ್ನು ವಿವಿಯವರು

ಖಾಯಂಗೊಳಿಸದಿದ್ದಾಗ ಪ್ರವೇಶಪತ್ರವನ್ನು ಸಿದ್ಧಮಾಡಲಾಗಿದೆ. ಜೆರಾಕ್ಸ್ ಪ್ರಶ್ನೆಪತ್ರಿಕೆಗಳನ್ನು ಕೊಡಲಾಗಿದೆ. ಉತ್ತರಪತ್ರಿಕೆಗಳ ಡೂಪ್ಲಿಕೇಟ್ ಮಾಡಿ ಕೊಡಲಾಗಿದೆ. ಇದೆಲ್ಲ ಗೊತ್ತಾಗಿ ನ್ಯಾಯಾಲಯ ಯಾರದ್ದು ಡೂಪ್ಲಿಕೇಷನ್ಸ್ ಆಗಿದೆ ಅಂಥವರ ಫಲಿತಾಂಶ ಪ್ರಕಟಿಸಬಾರದೆಂದು ಹೇಳಿದ ಮೇಲೂ ಸರ್ಕಾರ ಲಾ ಸೆಕ್ರೆಟರಿಯವರ ಬಳಿ ಒಂದು ಒಪೀನಿಯನ್‌ಗಾಗಿ ಕೇಳಿತು. ಅವರು ಸ್ಪಷ್ಟವಾಗಿ ಹೇಳಿದರು. ಇದು ಇಲ್ಲೀಗಲ್ ಸೀಟುಗಳಾಗಿರುವುದರಿಂದ ವಿವಿಯವರು ಹೇಳಿದ ರೀತೀನೆ ನಡೆಯಬೇಕೆಂದು. ಅದರಿಂದ ಸಮಾಧಾನವಾಗದ ಸಚಿವರು ಅಡ್ವೊಕೇಟ್ ಜನರಲ್ ವಿಜಯಶಂಕರ್‌ರಿಂದ ಒಂದು ವರದಿ ಪಡೆದು ಅದರ ಆಧಾರದ ಮೇಲೆ 18 ಜನರನ್ನೂ ಪಾಸ್ ಮಾಡಿಸಿ ಎರಡನೇ ವರ್ಷಕ್ಕೆ ಕಳುಹಿಸುವ ವ್ಯವಸ್ಥೆ ಸರ್ಕಾರದ ಸಂಪುಟಸಚಿವರಿಂದ ನಡೆದಿದೆ ಅನ್ನುವುದಾದರೆ ಇನ್ನು ಯಾವರೀತಿಯ ತನಿಖೆ ಅವಶ್ಯಕತೆ ಇದೆ ಎಂದು ನನಗನ್ನಿಸುತ್ತಿಲ್ಲ. ಆದ್ದರಿಂದ ಎಲ್ಲಾ ವಿಚಾರವನ್ನೂ ಸದನದ ಮುಂದೆ ಇಡುತ್ತಿದ್ದೇನೆ. ಇದು ಕಳೆದವರ್ಷಕ್ಕೇ ನಿಲ್ಲಲಿಲ್ಲ, ಇದನ್ನು ಯಾಕೆ ಕೊನೆಮುಟ್ಟಿಸಬಾರದೆಂದು ಸರ್ಕಾರ ಸವಾಲು ತೆಗೆದುಕೊಂಡಿದೆಯೋ ಏನೋ ಗೊತ್ತಿಲ್ಲ; ಈ ವರ್ಷವೂ ಸಂಪುಟದಲ್ಲಿರುವ ಬೆಂಗಳೂರು ಮಹಾನಗರವನ್ನು ಪ್ರತಿನಿಧಿಸುವಂತಹ ಹಿರಿಯರಿಗೂ ಪಾಠ ಹೇಳಿಕೊಡುವಂತಹ ಸಚಿವರ ಮಗ ಎಂಎಸ್‌ರಾಮಯ್ಯನವರ 8 ಎಕ್ಸ್‌ಸ್ ಮೆಡಿಕಲ್ ಸೀಟುಗಳ ಪೈಕಿ ಒಬ್ಬರಾಗಿದ್ದಾರೆ. ಕೆ.ಹರೀಶ್ ಎಂಬ ಹುಡುಗ ಎಂ.ಸಿ.ಐ.ನವರು ಹೇಳಿದಂಥ ಯಾವುದೇ ವಿದ್ಯಾರ್ಹತೆ ಇಲ್ಲದೆ ಪ್ರವೇಶ ಪಡೆದ. ದುರ್ದೈವದಿಂದ, ಮೆರಿಟ್‌ಮೇಲೆ ಬಂದ ಒಂದು ಹುಡುಗಿಯ ರೋಲ್ ನಂ. 150 ಆಗಿತ್ತು, ಹರೀಶನದ್ದು 153 ಆಗಿತ್ತು, 153ನೇ ವಿದ್ಯಾರ್ಥಿಯನ್ನು ಪರೀಕ್ಷೆಗೆ ಕೂರಿಸುವುದಿಲ್ಲ ಎಂಬ ಒಂದೇ ಕಾರಣಕ್ಕಾಗಿ ಅರುಣ ಎಂಬ ಹುಡುಗಿಯ ರೋಲ್ ನಂಬರನ್ನು 153 ಮಾಡಿ ಹರೀಶನದ್ದನ್ನು 150 ಮಾಡಿ ತಿದ್ದಿ ರಾಜೀವಗಾಂಧಿ ವಿವಿಯ ಉಪಕುಲಪತಿಗಳಿಂದ ಫಾಲ್ಸ್ ಅಫಿಡವಿಟ್ ಹಾಕಿಸಿ ಅವರಿಗೆ ಪ್ರವೇಶಪತ್ರ ಕೊಡಲಾಯಿತು. ಆದರೆ ನ್ಯಾಯಲಯ ಅಕ್ಟೋಬರ್ 20ರಂದು ಒಂದು ತಾತ್ಕಾಲಿಕ ಆಜ್ಞೆ ಕೊಟ್ಟು ಅರುಣ ಎಂಬ ಹುಡುಗಿಯ ಹೆಸರಿನ ಮುಂದೆ ಹಾಕಿರುವ ನಂಬರ್ ಇಲ್ಲೀಗಲ್ ಎಂದು ಹೇಳಿತು. ಹರೀಶನ ಅಡ್ಮಿಷನ್ ಕ್ಯಾನ್ಸಲ್ ಮಾಡಲಾಗಿದೆ ಎನ್ನುವಂತಹ ಇಂಟರಿಮ್ ಆರ್ಡರ್ ಅನ್ನು ಕೊಟ್ಟಂತಹ ಸಂದರ್ಭವನ್ನು ನಾವು ನೋಡುತ್ತಿದ್ದೇವೆ.

7.10 ಪಿಎಂ

ಇದರಲ್ಲೂ ಕೂಡ ಈ ಸಚಿವಸಂಪುಟದಲ್ಲಿರುವ ಒಬ್ಬ ಮಂತ್ರಿಯವರ ಮಕ್ಕಳ ಇನ್‌ವಾಲ್ವ್‌ಮೆಂಟ್ ಇದೆ ಎನ್ನುವುದು ಎಲ್ಲರಿಗೂ ಕೂಡ ಗೊತ್ತಿರುವ ವಿಚಾರ. ಇಂಥ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸಹಿಸಿಕೊಳ್ಳುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಕಾರಣ ಏನೆಂದರೆ ಪ್ರಾಮಾಣಿಕವಾದ ಒಂದು ಆಡಳಿತವನ್ನು

ಕೊಡಬೇಕೆನ್ನುವಂಥ ವಿಚಾರ ಹೃದಯದಲ್ಲಿ ಇಟ್ಟುಕೊಂಡಂಥವರು ಇದ್ದಾರೆ. ಮಂತ್ರಿಗಳು ಯಾರೇ ಇರಲಿ, ಕ್ಯಾಬಿನೆಟ್ ಸಚಿವರು ಇರಬಹುದು...

ಶ್ರೀ ಎಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಮುಖ್ಯಮಂತ್ರಿಗಳೇ, ಈ ಹೆಣ್ಣು ಮಗುವಿನ ಹೆಸರನ್ನು ಮಾನ್ಯ ಸದಸ್ಯರು ಹೇಳಿದರಲ್ಲಾ, ಅದು ನನ್ನ ಕ್ಷೇತ್ರದ ಹುಡುಗಿ; ಬಸವಗುಡಿ ಕ್ಷೇತ್ರದ್ದು. ಸೀಟನ್ನು ಕೊಟ್ಟರು. ಆ ವರ್ಷ ಇಕ್ಕಟ್ಟು ಬಂತು. ಒಂದು ವರ್ಷ ಆ ಹುಡುಗಿ ಓದಿತು. ಅಮ್ಮಾ, ಈ ವರ್ಷ ದಯವಿಟ್ಟು ಬೇಡ ಮತ್ತು ಅವರ ತಂದೆತಾಯಿಗಳನ್ನು ಕರೆಸಿಕೊಂಡು ನಮ್ಮ ಮರ್ಯಾದೆ ಹೋಗುತ್ತದೆ. ಭಾರಿ ಒತ್ತಡ ಬಂದಿದೆ. ಈ ವರ್ಷ ನಿಮ್ಮ ಹುಡುಗಿಯನ್ನು ಪರೀಕ್ಷೆಗೆ ಕೂಡಿಸಬೇಡಿ. ಮುಂದಿನ ವರ್ಷ ಅನುವು ಮಾಡಿಕೊಡುತ್ತೇವೆ, ಇದು ಭರವಸೆ ಎಂದರು. ಮುಂದಿನ ವರ್ಷ ಬಂತು. ಯಾರೋ ಒಬ್ಬ ಹುಡುಗ ಹುಟ್ಟಿಕೊಂಡ. ಏನು ಮಾಡುವುದು, ಅದನ್ನು ತಿದ್ದಿಬಿಟ್ಟರು. ವೈಸ್‌ಛಾನ್ಸಲರ್‌ಗೆ ಕೇಳಿದರೆ ಡೈರೆಕ್ಟರ್ ಮೇಲೆ ಹೇಳುವುದು, ಡೈರೆಕ್ಟರನ್ನು ಕೇಳಿದರೆ ಸಾರ್, ನಾನು ಏಕೆ ಇಂಥ ಆರ್ಡರ್ ಮಾಡುವುದಕ್ಕೆ ಹೋಗುತ್ತೇನೆ ಎಂದು ಅವರು ಹೇಳುತ್ತಾರೆ. ಸರ್ಕಾರದ ಕಾರ್ಯದರ್ಶಿಗಳಿಗೆ ಕೇಳಿದರೆ ಇದು ನಮ್ಮ ಗಮನಕ್ಕೆ ಬಂದಿಲ್ಲ, ನಾನು ರಜಾ ಇದ್ದದಿನ ಆಗಿದೆ ಎಂದು ಅವರು ಹೇಳುತ್ತಾರೆ. ಆಡಳಿತ ಎಲ್ಲಿಯವರೆಗೆ ಹದಗೆಡಬಹುದು? ನಾನು ಇದರ ಬಗ್ಗೆ ತಲೆಕಡಿಸಿಕೊಂಡು ನಮ್ಮ ಕ್ಷೇತ್ರದ ಹುಡುಗಿಯಲ್ಲಾ ಎಂದು ಈ ಎಲ್ಲಾ ವಿಚಾರ ಮಾಡಿದ್ದು. ಇಲ್ಲಿ ಬಲಿಷ್ಠರು ಏನು ಬೇಕೆಂದರೂ ಮಾಡಿಕೊಂಡು ಹೋಗಬಹುದು. ಯಾವುದು ಬೇಕಾದರೂ ತಿದ್ದಬಹುದು. ಯಾರಿಗೂ ಶಿಕ್ಷೆ ಇಲ್ಲ. ವೈಸ್‌ಛಾನ್ಸಲರ್ ಇದಕ್ಕೆ ಒಂದು ಸುಳ್ಳು ಅಫಿಡವಿಟ್ ಅನ್ನು ಹಾಕುತ್ತಾರೆ. ಎಲ್ಲಿಯವರೆಗೂ ನಾವು ತಲುಪುತ್ತಿದ್ದೇವೆ? ಇವು ಸಣ್ಣ ವಿಚಾರಗಳು ಎಂದರೆ ಇದರಲ್ಲೇ ನಮ್ಮದು ರೂಲ್ ಆಫ್ ಲಾ ಹಾಳಾಗುತ್ತಿರುವುದು. ಇದನ್ನು ತಾವು ಸ್ವಲ್ಪ ತಹಬಂದಿಗೆ ತರಬೇಕಾಗುತ್ತದೆ. ಇದಕ್ಕೆ ಯಾರ್ಯಾರು ಜವಾಬ್ದಾರರು ಎಂದು ನೋಡಿ ವಿಚಾರ ಮಾಡಿ. ಆ ಹೆಣ್ಣುಮಗು ಹೋಗಿ ಕಾಲು ಕಾಲು ಹಿಡಿದುಕೊಳ್ಳುವುದಂತೆ ಆ ವೈಸ್ ಛಾನ್ಸಲರನ್ನು. ಅವರು ಗೆಟ್ ಔಟ್ ಎನ್ನುವುದಂತೆ. ಏನು ಒಂದು ಅರ್ಥ ಬೇಡವೇ? ಸ್ವಲ್ಪ ದಯವಿಟ್ಟು ಅದನ್ನು ನೋಡಿ ವಿಚಾರಿಸಿ you pull them up so that these things are not repeated.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದು ಎಂದರೆ ಮೊನ್ನೆ 20-10-98ರಲ್ಲಿ ಒಂದು ಜಡ್ಜ್‌ಮೆಂಟೇ ಬಂದಿದೆ. ಈ ರೀತಿ ಅರುಣಾ ಎನ್ನುವವರ ನಂಬರು 150 ಎಂದು ಇತ್ತು. ಒಬ್ಬ ಮಂತ್ರಿಯವರ ಮಗನದ್ದು 153 ಎಂದು ಇದ್ದದ್ದನ್ನು 150 ಎಂದು ಈತನಿಗೆ ಮಾಡಿ ಕೊಟ್ಟಿರುವುದು ತಪ್ಪು ಎಂದು ಜಡ್ಜ್‌ಮೆಂಟ್ ಕೂಡ ಬಂದಿದೆ. ಇಂಥ ಸಂದರ್ಭದಲ್ಲೂ ಕೂಡ ಸಂಬಂಧಪಟ್ಟ ಮಂತ್ರಿಯವರ ಬಗ್ಗೆ ಕ್ರಮ

ತೆಗೆದುಕೊಳ್ಳುವುದಿಲ್ಲ ಎಂದರೆ ಹೇಗೆ? ದಾಖಲೆ ಸಮೇತ ಕೊಟ್ಟಾಗಲೂ ಕೂಡ ಈ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ, ಸಂಬಂಧಪಟ್ಟ ಮಂತ್ರಿಯವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದರೆ ಹಾಗಾದರೆ ಸರ್ಕಾರ ಇದೆ ಎಂದು ಯಾವ ಲೆಕ್ಕದಲ್ಲಿ ಹೇಳುವುದು? ಅದಕ್ಕೋಸ್ಕರ ನಾನು ಹೇಳಿದೆ. ಮಂತ್ರಿಗಳು ಏನು ಇದಕ್ಕೆ ಉತ್ತರ ಕೊಡುತ್ತಾರೋ ಕೊಡಲಿ. ತಾವು ದಾಖಲೆಗಳನ್ನು ನೋಡಿ. ದಾಖಲೆಗಳನ್ನು ನೋಡಿ ಜಡ್ಜ್‌ಮೆಂಟ್ ಬಂದಿರುವುದು ಸತ್ಯ ಎಂದು ತಮಗೆ ಖಾತ್ರಿಯಾದರೆ ಸಂಬಂಧಪಟ್ಟ ಮಂತ್ರಿಗಳ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳಿ. ಎರಡನೆಯದು, ವೈದ್ಯಕೀಯ ಶಿಕ್ಷಣ ಸಚಿವರೂ ಕೂಡ ಹೇಳಿದರು, ಒಂದು ಸೀಟು ಎಕ್ಸೆಸ್ ಆಗಿದೆ ಎನ್ನುವುದಾದರೆ ನಾನು ಮಂತ್ರಿಸ್ಥಾನದಲ್ಲಿ ಒಂದು ದಿನ ಮುಂದುವರಿಯುವುದಿಲ್ಲ ಎನ್ನುವ ಮಾತನ್ನು ಕೂಡ ಹೇಳಿದ್ದರು. ಹಾಗಾಗಿ ಈ ಎರಡೂ ಅಂಶವನ್ನು ಗಮನಿಸಬೇಕು. ಮಂತ್ರಿಯವರ ಮಗನಿಗೆ ಮಾನ್ಯ ನಂಜೇಗೌಡರು ಹೇಳಿದಂತೆ ಆ ಹೆಣ್ಣುಮಗಳ ಸ್ಥಾನವನ್ನು ಮಂತ್ರಿಮಗನಿಗೆ ಕೊಟ್ಟಿದ್ದು ಹೌದಾ? ಜಡ್ಜ್‌ಮೆಂಟ್ ಈ ರೀತಿ 20-10-98ಕ್ಕೆ ಬಂದಿರುವುದು ಹೌದಾ? 15 ದಿನಗಳ ಹಿಂದೆ ಬಂದಿರುವ ಜಡ್ಜ್‌ಮೆಂಟ್. ಮತ್ತೆ ವೈದ್ಯಕೀಯ ಶಿಕ್ಷಣ ಸಚಿವರು ಒಂದೂ ಕೂಡ ಅಕ್ರಮ ಸೀಟು ನಡೆದಿಲ್ಲ ಎನ್ನುವ ಮಾತನ್ನು ಹೇಳಿದರು. ಹಿಂದಿನ ಬಾರಿ 18 ಸೀಟು; ಅದನ್ನು ಈ ಬಾರಿ ಖಂಡಿತಾ ಕಡಿಮೆ ಮಾಡುತ್ತೇವೆ, ಬೇರೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಆ 18ಕ್ಕೆ ಈ ವರ್ಷ ಮತ್ತೆ 8 ಎಕ್ಸೆಸ್ ಸೀಟು ಕೊಟ್ಟರು. ಹಾಗಾಗಿ ಒಟ್ಟು 26 ಸೀಟು ಎಕ್ಸೆಸ್ ಆಗಿರುವುದನ್ನು ದಾಖಲೆ ಸಮೇತ ಕೊಟ್ಟರೂ ಕೂಡ ತಾವು ಮುಖ್ಯ ಮಂತ್ರಿಗಳಾಗಿ ಅದನ್ನು ತಾತ್ಸಾರ ಮಾಡಿದರೆ ಹೇಗೆ ಮತ್ತು ಆ ಸಂಬಂಧಪಟ್ಟ ಮಂತ್ರಿಗಳನ್ನು ತಾವು ಖಂಡಿತಾ ತಮ್ಮ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಳ್ಳಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೋ ಒಬ್ಬರು ಆದರೆ ತೆಗೆಯಬಹುದು. ನಾಲ್ಕೈದು ಜನ ಆದರೆ ಏನು ಮಾಡುವುದು? ನೀವು ಮೂರು ಜನ ಮಂತ್ರಿಗಳನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಅದಕ್ಕೆ ಒಟ್ಟಾಗಿ ರಾಜೀನಾಮೆ ಕೊಟ್ಟುಬಿಡಿ ಎಂದು ನಾನು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದು.

ಶ್ರೀ ಕೆ.ಎಸ್.ಪುಟ್ಟಣಯ್ಯ: ನೀವು ಹೇಳುತ್ತಿರುವುದು ಒಬ್ಬರನ್ನು ತೆಗೆಯಿರಿ ಇಬ್ಬರು ಮಾತ್ರ ಉಳಿದುಕೊಳ್ಳಿ ಎಂದರೆ ಏನು ಅರ್ಥ? ನೀವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೀರಿ, ಈಗ ನೀವು ಒಬ್ಬರನ್ನು ತೆಗೆಯಿರಿ, ಬಾಕಿಯವರೆಲ್ಲಾ ಇರಿ ಎಂದಂತಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೊನೆಯ ವಾಕ್ಯವನ್ನು ನೀವು ಕೇಳಿಸಿಕೊಳ್ಳಲಿಲ್ಲ. ಅದಕ್ಕಾಗಿಯೇ ಈ ಮಂತ್ರಿಮಂಡಲ ಪೂರ್ತಿಯಾಗಿ ರಾಜೀನಾಮೆ ಕೊಡಬೇಕು. ಅದಕ್ಕಾಗಿಯೇ ಈ ಅವಿಶ್ವಾಸನಿರ್ಣಯವನ್ನು ಮಂಡಿಸಿದ್ದು ಎಂದು ಹೇಳಿದೆ.

ಶ್ರೀ ಜೆ.ಹೆಚ್.ಪಟೇಲ್: ನಾಳೆ ಸಾಯಂಕಾಲದವರೆಗೂ ಕಾಯಿರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆಯವರೆಗೂ ಕಾಯುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾಳೆ ಸಾಯಂಕಾಲ ಕೊಡುತ್ತೀರಾ?

ಶ್ರೀ ಜೆ.ಹೆಚ್.ಪಟೇಲ್: ಉತ್ತರ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಕೇಳಿದರು, ಒಟ್ಟಿಗೆ ರಾಜೀನಾಮೆ ಕೊಟ್ಟುಹೋಗಿ ಎಂದ ಕೂಡಲೇ ತಾವು ಎದ್ದು ಸಾಯಂಕಾಲ ಕೊಡುತ್ತೇನೆ ಎಂದಿರಿ. ಅಂದರೆ ಸಾಯಂಕಾಲ ಕೊಡುವುದಕ್ಕೆ ತಯಾರಾಗಿದ್ದೀರಾ?

ಶ್ರೀ ಜೆ.ಹೆಚ್.ಪಟೇಲ್: ಉತ್ತರ ಕೊಡುವುದಕ್ಕೆ.

ಶ್ರೀ ಎ.ರಾಮದಾಸ್: ಇವತ್ತು ಯಾರೋ ಒಬ್ಬ ಸಾಮಾನ್ಯವ್ಯಕ್ತಿ ತನ್ನ ತಪ್ಪನ್ನು ಮುಚ್ಚುವುದಕ್ಕೋಸ್ಕರವಾಗಿ ಬೇರೆ ಏನಾದರೂ ಮಾಡಬಹುದು. ಆದರೆ ಒಬ್ಬರು ವೈಸ್ ಛಾನ್ಸಲರ್ ಆದಂಥವರು ಇಡೀ ವಿಶ್ವವಿದ್ಯಾನಿಲಯದ ಮೊದಲನೆಯ ಸ್ಥಾನದಲ್ಲಿರುವಂಥ ಒಬ್ಬರು ವ್ಯಕ್ತಿ ನ್ಯಾಯಾಲಯದ ಮುಂದೆ ಒಂದು ಫಾಲ್ಸ್ ಅಫಿಡವಿಟ್ ಅನ್ನು ಹಾಕುವ ಮುಖಾಂತರದಲ್ಲಿ ಇವತ್ತು ವಿಶ್ವವಿದ್ಯಾನಿಲಯದ ಗೌರವ ಘನತೆ ಎಲ್ಲಿಗೆ ಹೋಗಬೇಕಾದ ಒಂದು ಪರಿಸ್ಥಿತಿ ಬಂದಿದೆ. ದಾಖಲೆ ಪ್ರಕಾರವೇ ಅರುಣಾ ಎನ್ನುವವರು ಅವರೇ ಹೇಳುತ್ತಾರೆ. Dated 20.3.98: Stated that the admission of the Petitioner for the year 1997-98 in the 2nd Respondent College may be treated as certified. Accordingly, the admission of the Petition was approved on 28th Aug. 1998. ಅರುಣನ ಅಡ್ಮಿಷ್‌ನನ್ನು 28-8-98ರಲ್ಲಿ ಅಪ್ರೂವ್ ಮಾಡುತ್ತಾರೆ. ಆದರೆ ಯಾರು ಮಂತ್ರಿಗಳ ಮಗ ಇದ್ದಾನೆ, ಅವನ ಅಡ್ಮಿಷನನ್ನು 16-9-98ರಲ್ಲಿ ಎರಡನೇ ಲಿಸ್ಟನ್ನು ತರಿಸಿಕೊಂಡು ಅವರಿಗೆ ಅಪ್ರೂವಲ್‌ನ್ನು ಕೊಟ್ಟು ಯಾರು 28-8-98ರಲ್ಲಿ ಅಪ್ರೂವಲ್ ತೆಗೆದುಕೊಂಡಿರುತ್ತಾರೋ, ಅವರಿಗೆ ಎಂ.ಸಿ.ಐ ನಿಂದ ಪತ್ರ ಬಂದಿದೆಯೋ ಅದನ್ನು ಹರಿದುಹಾಕಿ ಫೇಕ್ ಸರ್ಟಿಫಿಕೇಟನ್ನು ರೆಡಿ ಮಾಡಿ ಕೊಡುವ ವ್ಯವಸ್ಥೆ ಇಲ್ಲಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಂದಲೇ ಆಗಿದೆ ಎನ್ನುವುದಾದರೆ ಇನ್ನು ಯಾರ್ಯಾರು ಯಾವ ಯಾವ ಅಲ್ಲಿರುವ ಅಧಿಕಾರಿಗಳು ಯಾವ ಯಾವ ಫೇಕ್ ಸರ್ಟಿಫಿಕೇಟ್ಸ್‌ನ್ನು ರಾಜ್ಯದಲ್ಲಿ ನಿರ್ಮಾಣ ಮಾಡಲಿಕ್ಕೆ ಸಾಧ್ಯ ಇದೆ ಎನ್ನುವುದನ್ನು ತೋರಿಸುತ್ತದೆ ಎನ್ನುವ ವಿಚಾರವನ್ನು ಹೇಳುತ್ತಾ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಚಾರವನ್ನು ಕೇಳುವುದು; ನಾವು ಸರ್ಕಾರ ಕೊನೆಯ ಹಂತದಲ್ಲಿದೆ ಎಂದು ಅಂದುಕೊಂಡಿದ್ದೇವೆ. ನಾಳೆ ಸಂಜೆ ಆ ವಿಚಾರ ಏನು ಎಂದು

ನೋಡಿ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಸರ್ಕಾರ ಹೋಗುವ ಸಂದರ್ಭ ಇಲ್ಲದೆ ತಾವು ಉಳಿದುಕೊಂಡಿದ್ದೇ ಆದರೆ ದಯಮಾಡಿ ನಿಮ್ಮ ಪಿರಿಯಡ್‌ನಲ್ಲಾದರೂ ಕೂಡ ಪಾರದರ್ಶಕವಾದಂಥ ಒಂದು ವ್ಯವಸ್ಥೆ ಇರುವ ದೃಷ್ಟಿಯಲ್ಲಿ ನಿಮ್ಮ ಪಿರಿಯಡ್‌ನಲ್ಲಿ ಆಗಿರುವುದು ಕೇವಲ 26 ಸೀಟುಗಳು ಮಾತ್ರ. ಬೇರೆ ಯಾರೋ ಮಾಡಿರುವ ಕರ್ಮವನ್ನು ನೀವ್ಯಾಕೆ ಹೊತ್ತುಕೊಳ್ಳುವುದಕ್ಕೆ ಹೋಗುತ್ತೀರಿ. ದಯವಿಟ್ಟು ಒಂದು ಸಿಬಿಐ ಎನ್‌ಕ್ವೈರಿಗೆ ಇದನ್ನು ಕೊಡಿ. 4120 ಸೀಟುಗಳಲ್ಲಿ ತಮ್ಮ ಕಡೆಯಿಂದ ಆಗಿರುವುದು ಕೇವಲ 26 ಸೀಟುಗಳು ಮಾತ್ರ; ಉಳಿಕೆ ಹಿಂದೆ ಯಾರು ಮಾಡಿದ್ದಾರೋ ತಮ್ಮ ಸರ್ಕಾರದಲ್ಲಿ ಅವರು ಮಾಡಿದ ತಪ್ಪುಗಳನ್ನು ತಾವು ತಲೆಯಮೇಲೆ ಹೊರಬೇಡಿ ಎನ್ನುವ ವಿಚಾರವನ್ನು ಹೇಳುತ್ತಾ ಆ ರೀತಿಯ ಒಂದು ಎನ್‌ಕ್ವೈರಿಯಾದರೂ ಕೂಡ ತಮ್ಮಿಂದ ಆಗುತ್ತದೆ ಎನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇನೆ. ತಾವು ಹೋಗುವ ಮೊದಲಾದರೂ ಕೂಡ ಇದನ್ನು ಮಾಡುತ್ತೀರಿ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಇವತ್ತು ರಾಜ್ಯದಲ್ಲಿ ಪ್ರಮುಖವಾಗಿ ಲಾ ಆಂಡ್ ಆರ್ಡರ್‌ನ ಪರಿಸ್ಥಿತಿ ಯಾವ ರೀತಿಯಲ್ಲಿ ಆಗಿದೆ ಎನ್ನುವುದನ್ನು ಹೇಳಬೇಕಾದ ಅವಶ್ಯಕತೆ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. 'ಆದರೂ ಕೂಡ ನಗರದಲ್ಲಿ ದಿನಬೆಳಗಾದರೆ ಕೊಲೆ, ಸುಲಿಗೆ ವರದಿಗಳು ಪತ್ರಿಕೆಯಲ್ಲಿ ಬರುತ್ತಿವೆ' ಜನರು ಪೋಲೀಸ್ ಇಲಾಖೆಯ ಅಸ್ತಿತ್ವವನ್ನೇ ಪ್ರಶ್ನಿಸುವಂತಾಗಿದೆ. ಈ ರೀತಿಯ ಬೆಳವಣಿಗೆಗಳು ಸರ್ಕಾರಕ್ಕೆ ಆಗಲಿ ಇಲಾಖೆಗೆ ಆಗಲೀ ಶೋಭೆ ತರುವಂಥದಲ್ಲ. ಅಧಿಕಾರಿಗಳು ಕೇವಲ ವರ್ಗಾವಣೆಯ ರಾಜಕೀಯದಲ್ಲಿ ಕಾಲ ಕಳೆಯುತ್ತಿರುವುದು ಇನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ಆಯಕಟ್ಟಿನ ಹುದ್ದೆಗಳಲ್ಲಿ ಹೋಗಲು ಬಯಸುವವರಿಗೆ ಸರಿಯಾಗಿ ಕೆಲಸ ಮಾಡಲು ಬರಬೇಕಾಗುತ್ತದೆ. ಇದನ್ನು ಯಾರೋ ವಿರೋಧಪಕ್ಷದವರು ಅಥವಾ ನಾನೇನಾದರೂ ಹೇಳಿದ್ದರೆ ಇದಕ್ಕೇನೂ ಅರ್ಥ ಬರುತ್ತಿರಲಿಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳು ಈ ರಾಜ್ಯವನ್ನು ಸುಭಕ್ಷವಾಗಿ ಆಳಬೇಕೆಂದು ಯಾರು ಹೇಳಿದ್ದಾರೆ, ಆ ಮುಖ್ಯಮಂತ್ರಿಗಳೇ ಅವರು ಜೂನ್ 22ನೇ ತಾರೀಖು ಅಧಿಕಾರಿಗಳ ಸಭೆಯಲ್ಲಿ ಹೇಳಿದಂಥ ಮಾತು ಇವತ್ತು ರಾಜ್ಯ ತಲ್ಲಣವಾಗುವ ಒಂದು ಪರಿಸ್ಥಿತಿ ಇದೆ. ಆದರೆ ಒಂದು ಸಂತೋಷ ನನಗಿದೆ. ಏನು ರಾಜ್ಯದಲ್ಲಿ ಸ್ಥಿತಿ ಇದೆ, ಅದನ್ನು ಪಾರದರ್ಶಕವಾಗಿ ಇರುವ ವಿಚಾರವನ್ನು ಇರುವ ಹಾಗೆ ಹೇಳುವ ಒಂದು ಧೈರ್ಯ ಇರುವ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರಲ್ಲಾ ಎನ್ನುವ ಸಂತೋಷ ಕೂಡ ನನಗಿದೆ. ಇದಕ್ಕೆ ಪೂರಕವಾಗಿ ನಿನ್ನೆಯಿಂದ ಇಲ್ಲಿ ಒಂದು ವಿಚಾರ ಬಂತು. ಶಾಸಕಾಂಗ ಮತ್ತು ನ್ಯಾಯಾಂಗ ಮಧ್ಯೆ ಚರ್ಚೆ ಬಂತು. ಇನ್ನೊಂದು ಪ್ರಮುಖವಾದ ವಿಚಾರವನ್ನು ನಾನು ಇಲ್ಲಿ ತರಲಿಕ್ಕೆ ಇಚ್ಛೆಪಡುತ್ತೇನೆ. ಶಾಸಕಾಂಗ ಮತ್ತು ಪೋಲೀಸ್ ಮಧ್ಯೆ ವಿಚಾರ ಹೇಳುವುದಕ್ಕೆ ಇಚ್ಛಪಡುತ್ತೇನೆ. ಅಂದರೆ ಕಳೆದ ಅಕ್ಟೋಬರ್ ಐದನೇ ತಾರೀಖಿನ ದಿವಸ ಶ್ರೀ ಪ್ರಕಾಶ್ ಸಿಂಗ್ ಎನ್ನುವಂತಹ ಒಬ್ಬ ನಿವೃತ್ತ ಡಿ.ಐ.ಜಿ. ಅವರು ಸುಪ್ರೀಂ ಕೋರ್ಟ್‌ನಲ್ಲಿ ಒಂದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಕೇಸ್ ಅನ್ನು ಪೋಲೀಸ್

ವ್ಯವಸ್ಥೆಗಳ ಬಗ್ಗೆ ಹಾಕಿದ್ದಾರೆ. ಹಾಗಾಗಿ ಎಲ್ಲಾ ರಾಜ್ಯಗಳಿಗೆ ಸಂಚಾರ ಮಾಡಿ ಪೋಲೀಸ್ ವ್ಯವಸ್ಥೆಯ ಬಗ್ಗೆ ಒಂದು ರಿಪೋರ್ಟ್ ಕೊಡುವುದಕ್ಕೋಸ್ಕರವಾಗಿ ಒಂದು ಸಿಂಗಲ್ ಮ್ಯಾನ್ ಕಮೀಷನ್ ಕಳುಹಿಸಿಕೊಟ್ಟಿದ್ದರು. ಅದನ್ನು ರೆಬೆರೋ ಎನ್ನುವಂತಹ ವ್ಯಕ್ತಿ ಇಲ್ಲಿಗೆ ಬಂದಂತಹ ಸಮಯದಲ್ಲಿ ನಮ್ಮ ರಾಜ್ಯದಲ್ಲಿರುವಂತಹ ಐಪಿಎಸ್ ಆಫೀಸರ್ಸ್ ಅವರ ಯಾವ ಅಸೋಸಿಯೇಷನ್ಸ್ ಇದೆ, ಅವರಲ್ಲೂ ಕೂಡ ರಾಜ್ಯದ ಪೋಲೀಸ್ ಇಲಾಖೆ ವ್ಯವಸ್ಥೆಯ ಬಗ್ಗೆ ವಿಚಾರವನ್ನು ಕೇಳಲಾಯಿತು. ಆಗ ಅವರು ಲಿಖಿತವಾಗಿ ಶ್ರೀ ರೆಬೆರೋ ಅವರು ಆ ಕಮೀಷನ್‌ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರದಲ್ಲಿ 1990ನೇ ಇಸವಿಯಿಂದ ಇಲ್ಲಿಯವರೆಗೆ ರಾಜ್ಯದಲ್ಲಿರುವಂತಹ ಎಲ್ಲಾ ಎಂಎಲ್‌ಎಗಳು, ಪೋಲೀಸ್ ಇನ್ಸ್‌ಪೆಕ್ಟರ್ಸ್, ಪೋಲೀಸ್ ಸಬ್ ಇನ್ಸ್‌ಪೆಕ್ಟರ್ಸ್ ಅವರ ವರ್ಗಾವಣೆಯಲ್ಲಿ ಸಂಪೂರ್ಣವಾದಂತಹ ಅವರದ್ದೇ ಆದಂತಹ ಕೈವಾಡವನ್ನು ಮಾಡುತ್ತಿದ್ದಾರೆ. ಅವರಿಗೆ ಬೇಕಾದಂತಹ ಅಧಿಕಾರಿಗಳನ್ನು ತಾವು ಹಾಕಿಸಿಕೊಂಡು ತಾವು ಮಾಡಬೇಕಾಗಿರುವಂತಹ ಕೆಲಸಕಾರ್ಯಗಳನ್ನು ಅವರಿಂದ ಮಾಡಿಸುತ್ತಿದ್ದಾರೆ. ಈ ದೃಷ್ಟಿಯಲ್ಲಿ ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಹಾಳಾಗಿದೆ. ಇದಕ್ಕೆಲ್ಲಾ ಮೂಲ ಕಾರಣ ಈ ರಾಜ್ಯದಲ್ಲಿರುವಂತಹ ಎಂಎಲ್‌ಎಗಳೇ ಎನ್ನುವಂತಹದನ್ನು ರಿಪೋರ್ಟ್‌ನಲ್ಲಿ ಇವತ್ತಿನ ದಿವಸ ರೆಬೆರೋ ಅವರಿಗೆ ಲಿಖಿತ ಮೂಲಕ ಕೊಟ್ಟಿರುವಂತಹದನ್ನು ನೋಡಿದರೆ ಶಾಸಕರು, ಯಾರು ಜನ ಪ್ರತಿನಿಧಿಗಳು, ಅವರ ವಿರುದ್ಧ ಪೋಲೀಸ್ ಇಲಾಖೆಯಲ್ಲಿರುವಂತಹ ಹಿರಿಯ ಅಧಿಕಾರಿಗಳು ಇವತ್ತು ಹೇಳುವಂತಹ ಒಂದು ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣ ಆಗಿದೆ ಎಂದು ಹೇಳುವಾಗ ನೋವಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅವರದ್ದೇ ಖಾತೆ ಇರುವುದರಿಂದ ಯಾರ್ಯಾರು ಶಾಸಕರುಗಳು, ಇವತ್ತು ಟ್ರಾನ್ಸ್‌ಫರ್‌ಗೋಸ್ಕರವಾಗಿ ಪತ್ರಗಳನ್ನು ಕೊಟ್ಟಿದ್ದಾರೆ, ಯಾರ್ಯಾರು ಆಡಳಿತ ಪಕ್ಷದಲ್ಲಿರುವಂತಹವರು ಟ್ರಾನ್ಸ್‌ಫರ್ ಹಾಕಿಸಿಕೊಂಡಿದ್ದಾರೆ ಎಂದು ಹೇಳಬೇಕು.

ಅಧ್ಯಕ್ಷರು: ಐಪಿಎಸ್ ಆಫೀಸರ್ಸ್ ರೈಟಿಂಗ್‌ನಲ್ಲಿ ಕೊಟ್ಟಿದ್ದಾರಾ? ಹಾಗಾದರೆ ಪ್ರಿವಿಲೇಜ್ ಮೂವ್ ಮಾಡಿ. ಐಪಿಎಸ್ ಆಫೀಸರ್ಸ್ ಅಸೋಸಿಯೇಷನ್‌ನಲ್ಲಿ ಯಾರು ಆಫೀಸ್ ಬೇರರ್ಸ್ ಇದ್ದಾರೆ, ಅವರ ಹೆಸರನ್ನು ತೆಗೆದುಕೊಂಡು ಆ ಕಾಪಿ ಎನ್‌ಕ್ಲೋಸ್ ಮಾಡಿ ಪ್ರಿವಿಲೇಜ್ ಮೂವ್ ಮಾಡಿ.

ಶ್ರೀ ಎ.ರಾಮದಾಸ್: ಇಂತಹ ಒಂದು ದುಸ್ಥಿತಿ ರಾಜ್ಯದಲ್ಲಿ ಬರಬಾರದಾಗಿತ್ತು ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ಪ್ರಮುಖವಾದಂತಹ ಒಂದು ವಿಚಾರದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಐಎಸ್‌ಐ ಆಕ್ಟಿವಿಟೀಸ್ ಇಡೀ ದೇಶದಲ್ಲಿ ಕಡಿಮೆ ಆಗುತ್ತಿರುವ ಸಮಯದಲ್ಲಿ ರಾಜ್ಯದಲ್ಲಿ ಜಾಸ್ತಿ ಆಗುವಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗಿದೆ. ಇದೇ ಚಿಕ್ಕಮಗಳೂರಿನಲ್ಲಿ ನವೆಂಬರ್ 7ನೇ ತಾರೀಖಿನ ದಿವಸ ಮೊನ್ನೆ, ಒಬ್ಬ ಪತ್ರಿಕೋದ್ಯಮಿ, 'ಶಿರೋರತ್ನ'

ಎನ್ನುವ ಪತ್ರಿಕೆಯ ಸಂಪಾದಕರು ಕೂಡ ಆಗಿರುವಂತಹ ಶ್ರೀ ಪ್ರಭುಲಿಂಗ ಶಾಸ್ತ್ರಿ ಎನ್ನುವಂತಹವರು ಅಲ್ಲಿಯ ಐಎಸ್ಐ ಆಕ್ಟಿವಿಟೀಸ್ ಬಗ್ಗೆ ಹಾಗೂ ಅಲ್ಲಿಯ ಚಿಕ್ಕಮಗಳೂರು ಕೆಮಿಕಲ್ಸ್ ಎನ್ನುವಂತಹ ಮೈಲುತುತ್ತವನ್ನು ಉತ್ಪಾದನೆ ಮಾಡುವಂತಹ ಕೈಗಾರಿಕೆಯ ಮಾಲೀಕರಾದ ಶ್ರೀ ಮುನೀರ್ ಸೈಯದ್ ಎನ್ನುವಂತಹ ಒಬ್ಬ ವ್ಯಕ್ತಿಯ ಬಗ್ಗೆ ಬರೆದರು. ಅವರಿಗೆ ಕಳೆದ ಎಂಟು ವರ್ಷಗಳ ಕಾಲದಿಂದ ಜಿ.ಕೆ.ಎಲ್.ಎಫ್ ಅವರ ಜೊತೆ ಸಂಬಂಧ ಇದೆ, ಹಣಕಾಸನ್ನು ಕೊಡುತ್ತಿರುವಂತಹ ದಾಖಲೆಗಳು ಸಿಕ್ಕಿವೆ. ಎಂಟು ವರ್ಷಗಳ ಕಾಲದಿಂದ ನಿರಂತರವಾಗಿ ಇಂತಹ ಆಕ್ಟಿವಿಟೀಸ್ ಅಲ್ಲಿದೆ ಎನ್ನುವಂತಹ ವಿಚಾರವನ್ನು ತಮ್ಮ ಪತ್ರಿಕೆಯಲ್ಲಿ ಅಲ್ಲದೆ ಬೇರೆ ಬೇರೆ ಪತ್ರಿಕೆಗಳಲ್ಲಿ ಕೂಡ ವರದಿ ಆಗುವಂತಹ ರೀತಿಯಲ್ಲಿ ವರದಿಯನ್ನು ಕೊಟ್ಟರು ಎಂದು, ಹಾಗೂ ಅದರ ಜೊತೆಯಲ್ಲಿ ವಾರದ ಪತ್ರಿಕೆ ಆಗಿರುವಂತಹ ''ಹಾಯ್ ಬೆಂಗಳೂರ್''ನಲ್ಲಿ ಕೂಡ ಇದರ ವರದಿ ಆಗಿದೆ. ಈ ವರದಿಯನ್ನು ಕೊಡಲಿಕ್ಕೋಸ್ಕರವಾಗಿ ನೀವೇ ಮೂಲ ಕಾರಣ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಮೊನ್ನೆ ಏಳನೇ ತಾರೀಖು ಶಾಸ್ತ್ರೀಗಳನ್ನು ಮನೆಗೆ ಕರೆಸಿದರು. ಮನೆಗೆ ಕರೆಸಿ ಬೇರೆ ಬೇರೆ ವಿಚಾರಗಳನ್ನು ಮಾತನಾಡುತ್ತಾ ಈ ವಿಚಾರದಲ್ಲಿ ನೀವು ಕೊಟ್ಟಿರುವಂತಹ ವರದಿ ಬಗ್ಗೆ ಇನ್ನೇನು ದಾಖಲಾತಿಗಳು ಇವೆ ಎಂದು ಕೇಳಿ, ನನ್ನಲ್ಲಿ ಇನ್ನೂ ದಾಖಲಾತಿಗಳು ಇವೆ ಎಂದು ಅವರು ಹೇಳಿದರು. ಹೇಳಿದಾಗ ಆ ಪತ್ರಕರ್ತರನ್ನು ಬಟ್ಟೆ ಬಿಚ್ಚಿ ಆತನಿಗೆ ಥಳಿಸಿದರು. ಯಾವ ಸ್ಥಳದಲ್ಲಿ ಕಾಲಿಟ್ಟರೆ ಮನುಷ್ಯ ಸಾಯುತ್ತಾನೋ, ಅಂತಹ ಒಂದು ಸ್ಥಳದಲ್ಲಿ ಕಾಲಿಟ್ಟು ಆತನನ್ನು ಸಾಯಿಸಲಿಕ್ಕೋಸ್ಕರವಾಗಿ ಪ್ರಯತ್ನ ಮಾಡಿದರು. ಆತನ ಕತ್ತನ್ನು ಹಿಸುಕಿದಂತಹ ಒಂದು ಪ್ರಕರಣ ಗೊತ್ತಾಗಿ ತಕ್ಷಣ ಅವರು ಕೂಗಿಕೊಂಡು ಹೊರಗೆ ಬಂದಿದ್ದಾರೆ. ಬಂದು ಪೋಲೀಸ್ ಸ್ಟೇಷನ್‌ನಲ್ಲಿ ಅಟೆಂಪ್ಟ್ ಟು ಮರ್ಡರ್ ಎಂದು ಕಂಪ್ಲೆಂಟನ್ನು ದಾಖಲಾತಿ ಮಾಡಿದರು. ಆದರೆ ಒಂದು ಆಶ್ಚರ್ಯ ಎಂದರೆ ಪೋಲೀಸ್ ಠಾಣೆಯಲ್ಲಿ ಇವತ್ತಿನವರೆಗೂ ಕೇಸನ್ನು ದಾಖಲಾತಿ ಮಾಡಿಕೊಂಡು ಅವರ ಬಗ್ಗೆ ವಿಚಾರಣೆ ಮಾಡುವುದಾಗಿರಲಿ, ಯಾರನ್ನಾದರೂ ಬಂಧನ ಮಾಡುವುದಾಗಿರಲಿ ಆಗಿಲ್ಲ. ಏಕೆ ಇದು? ಆ ವ್ಯಕ್ತಿ ಹೇಳುತ್ತಾನೆ.

ಶ್ರೀ ವಿ.ಸೋಮಣ್ಣ (ಬಂಧೀಖಾನೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದರು ಎಂದರೆ ಕೇಸ್ ದಾಖಲಾಗಿಲ್ಲ ಎಂದರು. ಕೇಸ್ ದಾಖಲಾಗಿ ಅವರು ಯಾರ ಬಗ್ಗೆ ಹೇಳುತ್ತಾರೆ, ಅವರನ್ನು ನಮ್ಮ ಜ್ಯುಡಿಷಿಯಲ್ ಕಸ್ಟಡಿಗೆ ಕೊಡಲಾಗಿದೆ. ನಮ್ಮ ಚಿಕ್ಕಮಗಳೂರು ಬಂಧೀಖಾನೆಯಲ್ಲಿ ಅವರು ಇದ್ದಾರೆ. ನಿನ್ನೆ ಸಂಜೆ 5.30ಕ್ಕೆ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇಡಲಾಗಿದೆ. ಅವರು ಚಿಕ್ಕಮಗಳೂರು ಜೈಲಿನಲ್ಲಿದ್ದಾರೆ. ದಾಖಲಾತಿ ಇಲ್ಲ ಎಂದು ಹೇಳಿದಿರಲ್ಲಾ ಅದಕ್ಕೇ ನಾನು ಹೇಳಿದ್ದು.

ಶ್ರೀ ಎ.ರಾಮದಾಸ್: ನಾನು ಅಲ್ಲಿಗೇ ಬರುತ್ತಿದ್ದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೆ. ಪೋಲೀಸ್‌ನವರೇ ಮುನೀರ್ ಸೈಯದ್ ಅವರನ್ನು ತಮ್ಮದೇ ಕಾರ್‌ನಲ್ಲಿ

ಕರೆದುಕೊಂಡು ಬಂದರು. ಸೈಯದ್ ಅವರ ಕಾರಿನಲ್ಲಿ ಕರೆದುಕೊಂಡು ಬಂದು ಅವರನ್ನು ಯಾವುದೇ ಬಂಧನಕ್ಕೆಒಳಪಡಿಸದೇ ನೇರವಾಗಿ ಕೋರ್ಟಿಗೆ ಬಿಟ್ಟು ಪೋಲಿಸ್ ಕಸ್ಟಡಿಗೆ ಬೇಕು ಎಂದೂ ಕೇಳದೇನೇ ಇವತ್ತು ಅವರು ಆಸ್ಪತ್ರೆಯಲ್ಲಿರುವಂತಹ ಒಂದು ಪರಿಸ್ಥಿತಿ ಇದೆ ಎಂಬುದು ನಮಗೆ ಗೊತ್ತು. ನಾನೇನು ಹೇಳುತ್ತಿದ್ದೇನೆಂದರೆ ಯಾರು ಇವರ ಜೊತೆಯಲ್ಲಿ ಅಸಾಲ್ಟ್ ಮಾಡಿದರು, ಆ ವಿಚಾರಗಳನ್ನು ಕೊಟ್ಟರು ಕೂಡ ಇನ್ನೂ ಅಸಾಲ್ಟ್ ಮಾಡಿದಂತಹ ವ್ಯಕ್ತಿಗಳನ್ನು ಪತ್ತೆ ಮಾಡುವಂತಹ ವ್ಯವಸ್ಥೆ ಆಗಿಲ್ಲ. ಇದು ನಡೆಯುತ್ತಿರುವಂತಹ ವ್ಯವಸ್ಥೆ. ಜೊತೆಗೆ ಸಾರ್ವಜನಿಕವಾಗಿ ನ್ಯಾಯಾಲಯದ ಆವರಣದಲ್ಲೇ ಎಲ್ಲರ ಸಮ್ಮುಖದಲ್ಲಿಯೇ, ಪತ್ರಕರ್ತರ ಸಮ್ಮುಖದಲ್ಲಿಯೇ ಆ ಮುನೀರ್ ಸೈಯದ್ ಎನ್ನುವವರು ಹೇಳುತ್ತಾರೆ. ನನಗೆ ಒಬ್ಬ ಶಾಸಕರ ಒಬ್ಬರು ಮಂತ್ರಿಗಳ ಕುಮ್ಮಕ್ಕು ಇರುವುದರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ವಿಚಾರ ಇವತ್ತು ಪತ್ರಿಕೆಗಳಲ್ಲಿ ಬಂದಿರುವುದರಿಂದ ಈ ಸಂದರ್ಭದಲ್ಲಿ ಯಾರ ಕುಮ್ಮಕ್ಕು ಇದೆ? ಯಾರ ವಿಚಾರದಿಂದ ಇದೆ? ಯಾರು ಅದಕ್ಕೆ ರಕ್ಷಣೆ ಕೊಡುತ್ತಿದ್ದಾರೆ ಎನ್ನುವಂತಹ ವಿಚಾರ ಕೂಡ ಇವತ್ತು ಸದನಕ್ಕೆ ಮತ್ತು ರಾಜ್ಯಕ್ಕೆ ಗೊತ್ತಾಗಬೇಕು. ಇಂತಹ ಅವ್ಯವಸ್ಥೆ ಈ ರಾಜ್ಯದಲ್ಲಿ ಆಗುತ್ತಿದೆ ಎನ್ನುವಂತಹದು ಶೋಚನೀಯವಾದ ವಿಚಾರ. ಇವತ್ತು ಗೃಹ ಇಲಾಖೆಯ ಬಗ್ಗೆ ಹೇಳಬೇಕಾದರೆ ತುಂಬ ವಿಚಾರಗಳು ಇವೆ. ಆದರೆ ಎರಡೇ ಎರಡು ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪ್ರಮುಖವಾಗಿ ಸನ್ಮಾನ್ಯ ಗೃಹ ಮಂತ್ರಿಗಳು ಸಾರ್ವಜನಿಕವಾಗಿ ಒಂದು ಕರೆಯನ್ನು ಕೊಟ್ಟರು. ಪ್ರಮುಖವಾಗಿ ಯಾರು ಅಧಿಕಾರಿಗಳು ಇದ್ದಾರೆ, ಅವರೇ. ಇವತ್ತು ಹೊಯ್ಸಳ ಇರಬಹುದು, ಪೋಲೀಸ್ ಠಾಣೆಯ ನಿರ್ಮಾಣವನ್ನು ಮಾಡಿಕೊಡುವುದರ ಬಗ್ಗೆ ಅವರು ಹೇಳಿರುವಂತಹ ವಿಚಾರ ಸದನದಲ್ಲಿ ಕೂಡ ಚರ್ಚೆ ಆಗಿದೆ. ಏಕೆ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ ಅಂದರೆ ದಾವಣಗೆರೆಯಲ್ಲಿ ನಡೆದಂತಹ ಘಟನೆ. ಸೆಪ್ಟೆಂಬರ್ 8ನೇ ತಾರೀಖು ಪುರಸಭೆಯ ಚುನಾವಣೆ ಇತ್ತು. ಚುನಾವಣೆ ಇದ್ದಂತಹ ಸಂದರ್ಭದಲ್ಲಿ ಸೆಪ್ಟೆಂಬರ್ 5ನೇ ತಾರೀಖು ಭಾರತೀಯ ಜನತಾ ಪಕ್ಷದ ಸದಸ್ಯ, ಹಿಂದಿನ ನಮ್ಮ ವಿಧಾನಸಭೆಗೆ ಅಭ್ಯರ್ಥಿ ಆಗಿದ್ದಂತಹ ಶ್ರೀ ಬಸವರಾಜ್ ಎನ್ನುವಂತಹವರನ್ನು ಹಾಡು ಹಗಲೇ ಕಿಡ್ನ್ಯಾಪ್ ಮಾಡಲಾಯಿತು. ಅನಂತರದಲ್ಲಿ ಅವರನ್ನು ಕರೆದುಕೊಂಡು ಹೋಗಿದ್ದು ಕಪ್ಪು ಕಾರಿನಲ್ಲಿ. ಅವರನ್ನು ಫಾಲೋ ಮಾಡುತ್ತಿದ್ದಂತಹ ಸ್ಕೂಟರನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು. ಆ ಸ್ಕೂಟರ್ ಸಿಕ್ಕಿದೆ. ಆ ಕಪ್ಪು ಕಾರಿನಲ್ಲಿ ನಾಲ್ಕು ಜನ ಯಾರು ಕರೆದುಕೊಂಡು ಹೋಗಿದ್ದರು ಎನ್ನುವಂತಹ ವಿಚಾರ ಕೂಡ ಎಲ್ಲಾ ಬಂತು. ಆದರೆ ಇವತ್ತಿನವರೆಗೆ ಕೂಡ ಯಾವುದೇ ಬಂಧನ ಆಗಿಲ್ಲ. ಯಾರದ್ದು ಕಾರು ಎಂಬ ತನಿಖೆ ಆಗಿಲ್ಲ. ಯಾರು ಹಿಂದೆ ಇದ್ದರು ಎನ್ನುವ ವಿಚಾರ ಬಂದಿಲ್ಲ. ಯಾವ ಪಕ್ಷದ ವ್ಯವಸ್ಥೆ ಇದರೊಳಗೆ ಇತ್ತು ಎನ್ನುವಂತಹ ವಿಚಾರ ಕೂಡ ಸಮಾಜದ ಮುಂದೆ ಇಲ್ಲ.

ಶ್ರೀ ಎಚ್.ಶಿವಪ್ಪ (ಬೃಹತ್ ಕೈಗಾರಿಕಾ ಸಚಿವರು): ಜ್ಯುಡಿಷಿಯಲ್ ಕಸ್ಟಡಿಗೆ ಕಳುಹಿಸಿದ್ದಾರೆ. ಮತ್ತು ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಇನ್‌ವೆಸ್ಟಿಗೇಷನ್ ಪ್ರಗತಿಯಲ್ಲಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸರಿಯಾಗಿದೆ.

ಶ್ರೀ ಎ.ರಾಮದಾಸ್: ಎರಡನೆಯ ವಿಚಾರ ನಮ್ಮ ಉಪ ಮುಖ್ಯಮಂತ್ರಿಯವರ ಜಿಲ್ಲೆಯಾದಂತಹ ನಂಜನಗೂಡಿನ ಪುರಸಭಾ ಚುನಾವಣೆಯ ವಿಚಾರ. ನಂಜನಗೂಡಿನ ಪುರಸಭಾ ಚುನಾವಣೆಯಲ್ಲಿ ಸೆಪ್ಟೆಂಬರ್ 10ನೇ ತಾರೀಖು ಚುನಾವಣೆ ಆಯಿತು. ಹತ್ತನೇ ತಾರೀಖಿನ ಚುನಾವಣೆಯಲ್ಲಿ ನಗರಸಭೆಯಲ್ಲಿ 29 ಜನ ಸದಸ್ಯರಿದ್ದಾರೆ. ಬಿಜೆಪಿಯ ಪರವಾಗಿ 15 ಜನ ಕೈ ಎತ್ತಿದಾಗ ಅಲ್ಲಿಯ ಸದಸ್ಯರು, ಈ ಕ್ಯಾಬಿನೆಟ್‌ನಲ್ಲಿ ಸಚಿವರಾಗಿರುವಂತಹವರು ಅಲ್ಲೂ ಮತದಾನಕ್ಕೋಸ್ಕರ ಬಂದಿದ್ದರು. ಪಕ್ಕದಲ್ಲಿ ಪ್ರಿಸೈಡಿಂಗ್ ಆಫೀಸರ್ ತಹಶೀಲ್ದಾರ್ ಅವರು ಯಾರು ಇದ್ದರು, ಅವರನ್ನು ಪಕ್ಕದಲ್ಲಿ ಕೂರಿಸಿಕೊಂಡು 15 ಜನ ಎಲ್ಲರ ಎದುರುಗಡೆ ಕೈ ಎತ್ತುತ್ತಿದ್ದಾರೆ, ಪತ್ರಿಕೆಯವರು ಇದ್ದಾರೆ. ಅವರೆಲ್ಲರ ಎದುರಗಡೆ ಹೇಳಿದರು, 12 ಎಂದು ಸಂಖ್ಯೆ ಬರೆಯಿರಿ ಎಂದರು. ಕಡೆಗೆ ಅಧಿಕಾರಿ ಹೇಳಿದರು ನಾನು 12 ಎಂದು ಸಂಖ್ಯೆ ಬರೆಯುವುದಕ್ಕೆ ಆಗುವುದಿಲ್ಲ ಎಂದರು. '12' ಬರೆಯಿರಿ ಎಂದು ಬಲವಂತವಾಗಿ ಅವರಿಂದ '12' ಎಂದು ಬರೆಸಿದರು. ಆಗ ಅಲ್ಲಿದ್ದಂಥ ಸದಸ್ಯರು ಪ್ರತಿಭಟಿಸುತ್ತಾ ನಾವು ಮುಂದಿನ ಪ್ರೊಸೀಡಿಂಗ್ಸ್ ನಡೆಸುವುದಕ್ಕೆ ಸಾಧ್ಯವಿಲ್ಲವೆಂದರು. ಪೋಲೀಸರು ಬಂದು ಮಧ್ಯೆ ಪ್ರವೇಶಿಸಿದರು. ಅನಂತರ ಕೊನೆಗೆ ಅರ್ಥಮಾಡಿಕೊಂಡಂಥ ಪ್ರಿಸೈಡಿಂಗ್ ಆಫೀಸರ್ '12' ಎಂದು ಬರೆದಿರುವುದನ್ನು ಬದಲಾಯಿಸಿ '15' ಎಂದು ಬರೆಯಲು ಹೊರಟರು. '12' ಎಂದು ಇರುವುದನ್ನು '15' ಎಂದು ಬದಲಾಯಿಸಿದ್ದೇ ಆದರೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆ' ಎಂದು ಆಗ ಹೇಳಿರುವುದೂ ಕೂಡ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಪದವನ್ನು ಸಚಿವರೇ ಸಭೆಯಲ್ಲಿ ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗಿ ಗಲಭೆಯಾದಾಗ ಜಿಲ್ಲಾಧಿಕಾರಿಗಳು ಮಧ್ಯೆ ಪ್ರವೇಶಿಸಬೇಕಾಯಿತು. ಇಡೀ ನಂಜನಗೂಡಿನ ವಾತಾವರಣ ಬಿಗುವಿನಿಂದ ಕೂಡಿದಾಗ ನಡೆಯಬೇಕಿದ್ದಂಥ ಚುನಾವಣೆಯನ್ನು ಮುಂದೂಡುವ ಪರಿಸ್ಥಿತಿ ನಿರ್ಮಾಣವಾಯಿತು. ಮಾನ್ಯ ಅಧ್ಯಕ್ಷರೆ, ನಾನು ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ, ಸರ್ಕಾರವನ್ನು ಪ್ರತಿನಿಧಿಸುವಂಥ ಒಬ್ಬ ಸಚಿವರು ಚುನಾವಣಾ ಸಮಯದಲ್ಲಿ ಒಬ್ಬ ಮತದಾರರಾಗಿ ಬಂದು ಪ್ರಿಸೈಡಿಂಗ್ ಆಫೀಸರ್ ಪಕ್ಕದಲ್ಲಿ ಕುಳಿತುಕೊಂಡು ಅವರ ಮೇಲೆ ಒತ್ತಾಯ ಹಾಕಿ '12' ಎಂದು ಹೇಳಿ ಬರೆಸಿರುವುದು ವಿಡಿಯೋ ರೆಕಾರ್ಡ್ ಆಗಿರುತ್ತದೆ. ಅಲ್ಲಿರುವ ಡಿ.ಸಿ.ಪಿ.ಯವರನ್ನು ಕರೆಸಲಾಗಿ ಅವರು ಎಲ್ಲರನ್ನೂ ಎಣಿಸಿದ್ದಾರೆ. '15 ಜನರು ಕೈ ಎತ್ತಿದ್ದಾರೆ' ಎಂದು ಡಿ.ಸಿ.ಪಿ.ಯವರು ವರದಿ

ಕೊಟ್ಟಿದ್ದಾರೆ. 42 ನಿಮಿಷಗಳ ಕಾಲ 15 ಜನರು ಕೈ ಎತ್ತಿ ಹಿಡಿದುಕೊಂಡಿದ್ದರೂ ಸಹ ಚುನಾವಣೆಯನ್ನು ಮುಂದೂಡಿದರು. ಅನಂತರ ಎಫ್.ಐ.ಆರ್. ಫೈಲ್ ಆಗಿದ್ದು 'ಸದಸ್ಯರು ದಾಖಲೆಗಳನ್ನು ಹರಿದು ಹಾಕಿದ್ದು, ಅಮೂಲ್ಯವಾದ ದಾಖಲೆಗಳನ್ನು ಕಿಟಕಿಯಿಂದ ಹೊರಗಡೆ ಬಿಸಾಡಿದ್ದಾರೆ' ಇದನ್ನು ನಾನು, ನಮ್ಮ ಸದಸ್ಯರು ಹೇಳುತ್ತಿಲ್ಲ. ಅಲ್ಲಿದ್ದಂಥ ಪ್ರಿಸೈಡಿಂಗ್ ಆಫೀಸರ್ ಅಲ್ಲಿನ ಎಸ್.ಪಿ.ಯವರಿಗೆ ಕಂಪ್ಲೆಂಟ್ ಅನ್ನು ಲಾಡ್ಜ್ ಮಾಡಿದ್ದರೂ ಇವೊತ್ತಿನವರೆವಿಗೂ ಕೂಡ ಯಾರನ್ನೂ ಬಂದಿಸಿರುವುದಿಲ್ಲ, ಯಾರ ಬಗ್ಗೆಯೂ ಎನ್‌ಕ್ವೈರಿ ಪ್ರಾರಂಭವಾಗಿಲ್ಲ. ಇದು ರಾಜ್ಯದ ವ್ಯವಸ್ಥೆ! ಕೊನೆಯದಾಗಿ, ಚಾಮರಾಜನಗರದ ಪುರಸಭಾ ಚುನಾವಣೆ ವಿಚಾರ ಹೇಳುತ್ತೇನೆ. ನಂಜನಗೂಡಿನ ಚುನಾವಣೆಯಾದ ತಕ್ಷಣದಿಂದಲೇ ಚಾಮರಾಜನಗರದ ಪುರಸಭಾ ಚುನಾವಣೆ ಸೆಪ್ಟೆಂಬರ್, 15ನೇ ತಾರೀಖಿನಂದು ನಡೆಯಿತು. ಚುನಾವಣಾ ಕಣದಲ್ಲಿ ವಾಟಾಳ್ ಪಕ್ಷ ಮತ್ತು ಇತರ ಪಕ್ಷಗಳ ಸಹಯೋಗದೊಡನೆ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ನಿಂತಾಗ, ಚುನಾವಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿ 18 ಮತಗಳನ್ನು ತೆಗೆದುಕೊಂಡರೆ, ಜನತಾ ದಳದ ಅಭ್ಯರ್ಥಿ ಕೇವಲ 11 ಮತಗಳನ್ನು ತೆಗೆದುಕೊಂಡರು. ಚುನಾವಣೆ ನಂತರದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರಾದ ಶಿವಮ್ಮನವರು ಒಂದು ಸಮಾಜದ ವ್ಯಕ್ತಿಯಾಗಿದ್ದು ಇವರು ತಮ್ಮ ಪಕ್ಷದ ಅಭ್ಯರ್ಥಿಗೆ ಮತ ಹಾಕಲಿಲ್ಲವೆಂದು, ಅವರದೇ ಸಮಾಜದ ಹಿಂದಿನ ಪುರಸಭಾ ಅಧ್ಯಕ್ಷರು ಹಾಗೂ ಜನತಾ ದಳದ ಸದಸ್ಯರೆಲ್ಲರೂ ಸೇರಿಕೊಂಡು ಅವರ ಸಮಾಜದ ವ್ಯಕ್ತಿಗಳೆಲ್ಲರನ್ನೂ ಒಗ್ಗೂಡಿಸಿಕೊಂಡು ಅವರುಗಳನ್ನುದ್ದೇಶಿಸಿ 'ಅಕಾಸ್ಮಾತ್ ನಮ್ಮ ಸಮಾಜದ ಒಬ್ಬ ವ್ಯಕ್ತಿ ಚುನಾವಣಾ ಕಣದಲ್ಲಿ ನಿಂತಿರುವಂಥ ಸಮಯದಲ್ಲಿ ಪಕ್ಷಭೇದ ಮರೆತು ಅವರಿಗೆ ಮತ ಹಾಕಬೇಕಾಗಿತ್ತು, ಯಾರು ನಮ್ಮ ಸಮಾಜದ ಅಭ್ಯರ್ಥಿಗೆ ಮತ ಹಾಕಿಲ್ಲವೋ ಅಂತಹವರನ್ನು ಇಡೀ ಸಮಾಜದಿಂದ ಬಹಿಷ್ಕರಿಸುತ್ತೇವೆ' ಎಂದು ಹೇಳಿ ಆ ಮಹಿಳೆಯನ್ನು ಬಹಿಷ್ಕರಿಸುವುದರ ಜೊತೆಗೆ 16ನೇ ತಾರೀಖು ಮಧ್ಯರಾತ್ರಿ 1.30ರ ಹೊತ್ತಿಗೆ ಅವರ ಮನೆಗೆ ಬೆಂಕಿ ಹಾಕುತ್ತಾರೆ. ಇದು ಪೊಲೀಸ್ ದಾಖಲೆಯಲ್ಲಿದೆ. ಫೈರ್ ಇಂಜಿನ್ ಹೋಗಿ ಮನೆಗೆ ಹಾಕಿರುವ ಬೆಂಕಿಯನ್ನು ಆರಿಸುತ್ತಾರೆ. ಅಲ್ಲಿನ ಹಿಂದಿನ ಅಧ್ಯಕ್ಷರಾಗಿದ್ದಂಥ ಶಿವನಂಜಯ್ಯ, ಶಿವಣ್ಣ, ಇವರುಗಳ ಬಗ್ಗೆ ಎಫ್.ಐ.ಆರ್. ಫೈಲ್ ಹಾಕಿದ್ದು ಇವೊತ್ತಿನವರೆವಿಗೂ ಅದು ಹಾಗೆಯೇ ಇದೆಯೇ ವಿನಾ ಅವರನ್ನು ಬಂಧಿಸುವುದಾಗಲಿ, ಕರೆದು ವಿಚಾರಣೆ ಮಾಡುವುದಿರಲಿ ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪರಿಸ್ಥಿತಿಯೂ ಬಂದಿಲ್ಲ. ಜೊತೆಗೆ ಆ ಮಹಿಳೆಗೆ ಇವೊತ್ತಿಗೂ ಕೂಡ ಅಲ್ಲಿ ರಕ್ಷಣೆ ಸಿಕ್ಕಿಲ್ಲ. ಇಂತಹ ಧಾರುಣ ಸ್ಥಿತಿ ಮನುಷ್ಯನಿಗೆ ಒದಗಿರಬೇಕಾದರೆ ಈ ರಾಜ್ಯದಲ್ಲಿ ಪ್ರಾಣಿಗಳು ಯಾವ ರೀತಿಯಲ್ಲಿದೆಯೆಂಬುದನ್ನು ಹೇಳುತ್ತಿದ್ದೇನೆ. ರಾಜ್ಯದಲ್ಲಿ ಮೈಸೂರು ಪ್ರಾಣಿ ಸಂಗ್ರಹಾಲಯ, ಶಿವಮೊಗ್ಗದಲ್ಲಿರುವ ಪ್ರಾಣಿ ಸಂಗ್ರಹಾಲಯ ಹಾಗೂ ಧಾರವಾಡದಲ್ಲಿರುವ ಪ್ರಾಣಿ ಸಂಗ್ರಹಾಲಯಗಳ ಬೆಳವಣಿಗೆ ಏನಾಗಿದೆ? ತಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ಪ್ರಾಣಿಗಳಿಗೆ ಯಾವುದೇ ರೀತಿಯ

ರಕ್ಷಣೆಯಿಲ್ಲ. ಧಾರವಾಡದಲ್ಲಿರುವ ಪ್ರಾಣಿ ಸಂಗ್ರಹಾಲಯಕ್ಕೆ ಮಾರ್ಚ್, 28ರಂದು ಹಾಡುಹಗಲೇ ತಮ್ಮ ಪಕ್ಷದ ಕಾರ್ಯಕರ್ತರೊಬ್ಬರು ನುಗ್ಗಿ ಜಿಂಕೆ ಮತ್ತು ನವಿಲುಗಳನ್ನು ಅಪಹರಿಸಿ ತೆಗೆದುಕೊಂಡು ಹೋದ ಬಗ್ಗೆ ಜಿಲ್ಲಾಧಿಕಾರಿಗಳು ಒಂದು ಎನ್‌ಕ್ವೈರಿ ಕಮೀಷನ್ ಅನ್ನು ನೇಮಕ ಮಾಡಿದ್ದರೂ ಇವೊತ್ತಿನವರೆವಿಗೂ ಸದರಿ ಸಮಿತಿಯ ವರದಿ ಬಂದಿಲ್ಲ. ಅಪಹರಿಸಿಕೊಂಡು ಹೋದ ಆ ಪ್ರಾಣಿಗಳ ಗತಿ ಏನಾಯಿತೆಂಬುದು ಗೊತ್ತಿಲ್ಲ, ಯಾವ ತೋಟದ ಮನೆಗೆ ತೆಗೆದುಕೊಂಡು ಹೋದರೋ? ಆ ತೋಟ ಯಾರದು? ಇದರ ಬಗ್ಗೆಯೂ ಕೂಡ ಗೊತ್ತಿಲ್ಲ. ಇನ್ನು ಇತಿಹಾಸ ಪ್ರಸಿದ್ಧವಾಗಿರುವ ಮೈಸೂರು ಪ್ರಾಣಿ ಸಂಗ್ರಹಾಲಯದ ಬಗ್ಗೆ ಹೇಳಿದರೆ, ಇವೊತ್ತು ಅಲ್ಲಿರುವ ಪ್ರಾಣಿ, ಪಕ್ಷಿಗಳಿಗೆ ರಕ್ಷಣೆಯಿರಲಿ, ಸಂಗ್ರಹಾಲಯದ ಬೆಳವಣಿಗೆಗೆ ಬೇಕಾದಂಥ ವ್ಯವಸ್ಥೆಯನ್ನು ಮಾಡುತ್ತಾರೆಂದು ನಾವು ಸನ್ಮಾನ್ಯ ಅರ್ಥ ಸಚಿವರಿಂದ ಬಹಳಷ್ಟು ನಿರೀಕ್ಷಿಸಿದ್ದೆವು. ಆದರೆ, ಯಾವುದೇ ರೀತಿಯಾದಂಥ ಬೆಳವಣಿಗೆಗೂ ಅವಕಾಶ ಮಾಡಿಕೊಟ್ಟಿಲ್ಲ. ಅಲ್ಲಿನ ಸುಮಾರು 60 ಎಕರೆಗಳಷ್ಟು ಭೂಮಿ ಕೂಡ ಇವೊತ್ತು ಬರಡಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕೊನೆಯದಾಗಿ, ನಾನು ದೇವಾಲಯದ ಬಗ್ಗೆ ಹೇಳುವುದಾದರೆ, ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಸೇರಿರುವ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ದೇವಸ್ಥಾನದಲ್ಲಿ ಆಗುತ್ತಿರುವಂಥ ಅವ್ಯವಹಾರಗಳ ಬಗ್ಗೆ ನಾನು ಪ್ರಶ್ನೆ ಕೇಳಿದ್ದು, ಅದಕ್ಕೆ ಸಂಬಂಧಿಸಿದ ಉತ್ತರ ಕೂಡ ಬಂದಿದೆ. ದೇವಾಲಯದಲ್ಲಿನ ಹುಂಡಿಯನ್ನು ಒಡೆಯುವಂಥ ಸಮಯದಲ್ಲಿ ಅಲ್ಲಿನ ಅಧಿಕಾರಿಗಳು ಇತರ ಎಲ್ಲಾ ಅಧಿಕಾರಿಗಳನ್ನು, ಸಬಾರ್ಡಿನೇಟ್‌ಗಳನ್ನು ಕೂರಿಸಿಕೊಂಡು ಸ್ವತಃ ಅವರೆದುರಿಗೆ ಹುಂಡಿಯನ್ನು ಒಡೆದು ಅದರಲ್ಲಿದ್ದ ಡೈಮಂಡ್ ರಿಂಗ್ ಅನ್ನು ತೆಗೆದಿಟ್ಟುಕೊಳ್ಳುತ್ತಾರೆ. ಇದರ ಬಗ್ಗೆ ಕಂಪ್ಲೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ, ಹುಂಡಿಯ ಬೀಗ ತೆಗೆಯದೆಯೇ ಹುಂಡಿಯ ಒಳಗಡೆಯಿರುವ ಹಣವನ್ನು ಯಾವ ರೀತಿ ತೆಗೆದುಕೊಳ್ಳುತ್ತಾರೆಂಬುದಕ್ಕೆ ಉದಾಹರಣೆ ಕೊಡುವುದಾದರೆ, ಒಂದು ಸಣ್ಣ ಕಡ್ಡಿಯ ತುದಿಗೆ ಫೆವಿಕಾಲ್ ಹಾಕಿ ಕಡ್ಡಿಯನ್ನು ಹುಂಡಿಯ ರಂಧ್ರದಿಂದ ಒಳಗಡೆ ತೂರಿಸಿ ರೂಪಾಯಿಯ ನೋಟುಗಳು ಮಾತ್ರ ಮೇಲೆ ಬರುವಂಥ ವ್ಯವಸ್ಥೆ ಎಲ್ಲಾದರೂ ಇದ್ದರೆ ಅದು ಈ ಸರ್ಕಾರದಲ್ಲಿದೆಯೆಂದು ತಿಳಿದಿದ್ದೇನೆ. ಅಂದರೆ ಇದರರ್ಥ ಇವೊತ್ತು ದೇವಸ್ಥಾನದ ಹುಂಡಿಯಲ್ಲಿರುವ ದುಡ್ಡನ್ನೂ ಸಹ ಲೂಟಿ ಮಾಡುವಂಥ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಮುಜರಾಯಿ ಸಚಿವರು ಸದನದಲ್ಲಿದ್ದು ಅವರು ಮೈಸೂರು ನಗರಕ್ಕೆ ಬಂದಿದ್ದಾಗ ಹೇಳಿರುತ್ತೇನೆ. ಅದನ್ನು ಮತ್ತೊಮ್ಮೆ ಇಲ್ಲಿ ಪ್ರಸ್ತಾಪಿಸಬೇಕಾದಂಥ ಅವಶ್ಯಕತೆಯಿರಲಿಲ್ಲ. 'ದೇವಸ್ಥಾನದಲ್ಲಿ ಇಂತಹ ಹಗರಣ ನಡೆದಿರುವುದರಿಂದ ತಾವು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ. ಅಷ್ಟು ಮಾತ್ರವಲ್ಲ, 'ಅಲ್ಲಿ ಯಾವ ಅಧಿಕಾರಿಯಿದ್ದಾರೆ, ಅವರನ್ನು ಇಂತಹ ಅಕ್ರಮಗಳು ನಡೆಯುತ್ತಿದೆಯೆಲ್ಲಾ ಎಂದು ಅವರ ಗಮನಕ್ಕೆ ತಂದಾಗ' ನಾನು ಇಲ್ಲಿಗೆ ವರ್ಗಾವಣೆಯಾಗಿ ಬರಲು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದಿದ್ದೇನೆ'

ಎಂದರು. ಇದನ್ನೂ ಕೂಡ ಸಚಿವರಿಗೆ ಹೇಳಿದೆ. 'ಅಧಿಕಾರಿಯಿಂದಲೇ ಇಂತಹ ಮಾತುಗಳು ಬರುತ್ತಿದೆ, ಇಂತಹ ವ್ಯವಸ್ಥೆ ಉಂಟೇ? ಅಧಿಕಾರಿಗಳನ್ನು ಕರೆದು ಕೇಳಿ' ಎಂದರೂ ಇವೊತ್ತಿನವರೆವಿಗೂ ಅದರ ಬಗ್ಗೆ ಉತ್ತರ ಬಂದಿಲ್ಲ. ದೇವಸ್ಥಾನದಲ್ಲಿ ಕಳೆದ ತಿಂಗಳಿನಿಂದ ವಿಡಿಯೋ ಹಾಕಲು ಶುರು ಮಾಡಿದರು.

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮದಾಸರ್‌ರವರು ದೇವಸ್ಥಾನದ ಬಗ್ಗೆ ಏನು ಹೇಳುತ್ತಿದ್ದಾರೆ, ರಾಜ್ಯದಲ್ಲಿರುವ ಯಾವ್ಯಾವ ದೇವಸ್ಥಾನಗಳಿಂದ ಎಷ್ಟೆಷ್ಟು ಆದಾಯ ಬರುತ್ತಿದೆ ಎಂಬ ಬಗ್ಗೆ ಪಟ್ಟಿಯನ್ನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಎ.ರಾಮದಾಸ್: ನಾನು ಏನು ಹೇಳುತ್ತಿದ್ದೇನೆಂದರೆ, ದೇವಸ್ಥಾನದಲ್ಲಿ ಹುಂಡಿ ಒಡೆಯುವ ಸಮಯದಲ್ಲಿ ವಿಡಿಯೋ ಇಡಿ, ವಿಡಿಯೋದಲ್ಲಿ ರೆಕಾರ್ಡ್ ಆದರೆ ಕಳ್ಳತನವಾಗುವುದು ತಪ್ಪುತ್ತದೆಂದು ಹೇಳಿದ್ದೆ. ಇದು ಅಕ್ಷರಶಃ ಸತ್ಯವಾಗಿದ್ದು, ವಿಡಿಯೋ ಕ್ಯಾಮೆರಾ ಅಳವಡಿಸಿದ ಮೂರು ತಿಂಗಳ ನಂತರ ನಾಲ್ಕು ಲಕ್ಷ ರೂಪಾಯಿಗಳಿದ್ದ ದೇವಸ್ಥಾನದ ಆದಾಯ ಏಳು ಲಕ್ಷ ರೂಪಾಯಿಗಳಿಗೇರಿದೆ. ಆದರೆ, ವಿಡಿಯೋ ಕ್ಯಾಮೆರಾ ಅಳವಡಿಸುವ ಮೂರು ತಿಂಗಳ ಹಿಂದೆ ನಡೆದಿರುವ ಅವ್ಯವಹಾರದ ಬಗ್ಗೆ ಸರ್ಕಾರ ಏನು ಹೇಳುತ್ತದೆ? ಆದುದರಿಂದ, ರಾಜ್ಯದಲ್ಲಿ ಮನುಷ್ಯ, ಪ್ರಾಣಿ ಹಾಗೂ ದೇವಾಲಯದ ವ್ಯವಸ್ಥೆ ಏನಾಗಿದೆಯೆಂದು ಸರ್ಕಾರ ತಿಳಿದುಕೊಂಡು ನಾಳೆ ಸಂಜೆ ರಾಜೀನಾಮೆ ಕೊಟ್ಟು ಮುಂದೆ ಜನರ ಆಣತಿಗೆ ಹೋಗುತ್ತೀರೆಂದು ಭಾವಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B.I.PATIL (Uchagaon):- Mr.Speaker Sir, both the major Opposition Parties have rightly moved this No Confidence Motion against the Government on various grounds of administrative failure, collapse of law and order situation, intensive dissident activites within the ruling Party. We the MLAs of M.E.S. support this No Confidence Motion on the sole ground that this Government has utterly failed in solving the long pending karnataka - Maharashtra Boundary dispute. Inspite of giving an assurance on the floor of this August House that he would solve this dispute through negotiations with his Maharashtra counterpart by 15th

August, 1998, nothing has been done so far in that direction. He has not even initiated a dialogue with his counterpart. I would like to mention that this Government has totally failed in giving protection to the Linguistic Minorities in the State and especially to the Marathi speaking people in the border areas of Belgaum. It is mercilessly killing the farmers. The Constitution has guaranteed the special protection to the linguistic minorities. Our Governmnet has passed Karnataka Official Languages Act but its provisions are being violated every now and then causing injustice to the minorities. The Government is imposing Kannada language on the Marathi speaking people in all walks of life. The Officers are issuing orders contrary to the provisions of the Constitution and the Karnataka Official Languages Act. The Government is trying to change all the revenue records including the Record of Rights of Lands in Kannada language. I respectfully submit that the Record of Rights are for the use of people and the people from border area do not know any other language other than Marathi. Sir, all the village panchayat Committees and other institutions in border areas have passed unanimous resolutions to maintain the records in Marathi language which can be easily understood by the people living in border areas. If the records are kept in kannada, it will be of no use to the people. Further the worst part of it is, that the institutions which are run by the linguistic minorities and which are protected under the Karnataka Official Languages Act are being threatened by the administrative authorities to maintain their records in kannada alone and make the correspondence in kannada only. The local administration is rejecting the correspondence made in

Marathi. Then Sir, the Sub-Registrar of Co-operative Socities has issued Notices to all the co-operative societies and Banks to keep thier records in kannada and to publish the annual reports only in kannada. Sir, 99% of the shareholders of these Banks and Societies do not know any other language than Marathi. Sir, recently there was incident of Lathi charge during the course of Rajyotsava Procession where anti-social elements and the processionists pelted stones and removed Marathis sign boards on shops and other establishments as will as Houses in Belgaum. The harassment at all levels to Marathi speaking people and other people belonging to Minorities is continuously going on. The Government has stopped salary grants of aided educationsl institutions managed by minorities. Why should the Government and the local administration bother about the Marathi, Urdu and English sign-boards? Though 90% of the people at Belgaum and other border areas belong to Marathi speaking minorities, on the protection of local police, the Kannadigas in the Rajyotsava procession pelted stones and removed Marathi sign boards on shops, houses and other establishments it is only because of the timely arrival of S.P., the situtation was brought under control and the culprits were arrested. This harassment of Marathi speaking people in Belgaum Border are is intolerable. This Govenment has no moral right to stay in office. I, therefore, support this No Confidence Motion. Thank you Sir.

SIR NARAYANA RAO GOVIND RAO TARALE (BELGAUM): Sir, I want to present a document which the Government already issued by way of a Press Note. I want to submit the truth and also facts and figures. I

want to hand over this document to the Hon'ble Speaker.

MR.SPEAKER: Alright It is taken on record.